**“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”**

**ಕರ್ನಾಟಕ ವಿಧಾನ ಪರಿಷತ್ತು**

07ನೇ ಡಿಸೆಂಬರ್ 2020
ಸೋಮವಾರ

**ವಿಷಯಾನುಕ್ರಮಣಿಕೆ**

**1. ಸಂತಾಪ ಸೂಚನೆಗಳು**

“ಹಾಲಿ ಕೇಂದ್ರ ಸಚಿವರಾಗಿದ್ದ ರಾಮವಿಲಾಸ್ ಪಾಸ್ವಾನ್, ವಿಧಾನ ಪರಿಷತ್ತಿನ ಮಾಜಿ ಸದಸ್ಯರುಗಳಾಗಿದ್ದ ಜೆ.ಶ್ರೀನಿವಾಸ ರೆಡ್ಡಿ ಮತ್ತು ಕೆ.ಮಲ್ಲಪ್ಪ, ಮಾಜಿ ಸಚಿವಾರಾಗಿದ್ದ ಡಾ. ವೈ.ನಾಗಪ್ಪ, ಮಾಜಿ ಕೇಂದ್ರ ಸಚಿವರಾಗಿದ್ದ ಜಸ್ವಂತ್ ಸಿಂಗ್, ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಎಂ.ಡಿ.ಶ್ಯಾಮರಾವ್, ಹಿರಿಯ ರಂಗಕಲಾವಿದರಾದ ಕೊಡಗನೂರು ಜಯಕುಮಾರ್, ಚಲನಚಿತ್ರ ಸಂಗೀತ ನಿರ್ದೇಶಕರಾದ ರಾಜನ್, ಶಿರಸಿ ಅರ್ಬನ್ ಬ್ಯಾಂಕಿನ ಮಾಜಿ ಅಧ್ಯಕ್ಷರಾದ ವಿ.ಎಸ್.ಸೋಂದೆ, ಹಿರಿಯ ಚಿತ್ರಕಲಾವಿದರಾದ ಯಶವಂತ ಹಿಬಾರಿ, ಹಿರಿಯ ಪತ್ರಕರ್ತರಾದ ಶ್ಯಾಮಸುಂದರ್, ಖ್ಯಾತ ವಯಲಿನ್ ವಾದಕರಾದ ಟಿ.ಎನ್.ಕೃಷ್ಣನ್ ಮತ್ತು ಖ್ಯಾತ ಪತ್ರಕರ್ತರಾಗಿದ್ದ ರವಿ ಬೆಳಗೆರೆ ಅವರುಗಳ ನಿಧನದ ಬಗ್ಗೆ.”

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

**2. ಪ್ರಕಟಣೆಗಳು**
**3. ನೂತನ ಸದಸ್ಯರ ಪರಿಚಯ**
**4. ಸಭೆಯ ಮುಂದಿಡಲಾದ ಕಾಗದಪತ್ರಗಳು**
**5. ಕಾರ್ಯದರ್ಶಿಯವರ ವರದಿ**

**6. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ.**

**“ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದಂತಹ ಅತಿವೃಷ್ಟಿಯಿಂದ ಸುಮಾರು 55 ಲಕ್ಷ ಎಕರೆ ಪ್ರದೇಶದಲ್ಲಿ ರೈತರು ಬೆಳೆದಿದ್ದ ಬೆಳೆ ನಾಶವಾಗಿರುವ ಬಗ್ಗೆ.”**

– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
– ಶ್ರೀ ಎನ್.ರವಿಕುಮಾರ್

**(ನಿಯಮ 68ಕ್ಕೆ ಪರಿವರ್ತಿಸಲಾಯಿತು)**

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

7. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

67- ಕೋವಿಡ್-19ರ ಹಿನ್ನೆಲೆಯಲ್ಲಿ ರಾಜ್ಯದ ಸಾರ್ವಜನಿಕ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇರುವ ಬಗ್ಗೆ.
- ಶ್ರೀ ಆರ್.ಪ್ರಸನ್ನ ಕುಮಾರ್
- ಡಾ॥ ಕೆ.ಸುಧಾಕರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು)

90- ಗಂಗಾ ಕಲ್ಯಾಣ ಯೋಜನೆ ಅನುಷ್ಠಾನದ ಬಗ್ಗೆ.
- ಡಾ॥ ವೈ.ಎ.ನಾರಾಯಣಸ್ವಾಮಿ
- ಶ್ರೀ ಬಿ.ಶ್ರೀರಾಮುಲು (ಸಮಾಜ ಕಲ್ಯಾಣ ಸಚಿವರು)

172- 2019-20ನೇ ಸಾಲಿನಲ್ಲಿ ಪ್ರೌಢ ಶಿಕ್ಷಣ ಮಂಡಳಿ ನಡೆಸಿದ ಮೌಲ್ಯಮಾಪನ ಕುರಿತು.
- ಶ್ರೀ ಕೆ.ಹರೀಶ್ ಕುಮಾರ್
- ಶ್ರೀ ಎಸ್.ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

08- ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ಬಗ್ಗೆ.
- ಶ್ರೀ ಎಂ.ಎ.ಗೋಪಾಲಸ್ವಾಮಿ
- ಡಾ॥ ಕೆ.ಸುಧಾಕರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು)

06- ಚಿಕ್ಕಮಗಳೂರು ಜಿಲ್ಲೆಯ COVID-19 ಪ್ರಕರಣಗಳ ಕುರಿತು.
- ಶ್ರೀ ಎಂ.ಕೆ. ಪ್ರಾಣೇಶ್
- ಡಾ॥ ಕೆ.ಸುಧಾಕರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು)

178+208 – ಮಹಾರಾಣಿ Cluster ವಿಶ್ವವಿದ್ಯಾನಿಲಯಗಳ ನೌಕರರಿಗೆ ವೇತನ ನೀಡುವ ಬಗ್ಗೆ.
- ಶ್ರೀ ಐ.ಎನ್.ಅಪ್ಪಾಜಿಗೌಡ (ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಹಾಗೂ ಶ್ರೀ ಕಾಂತರಾಜ್ (ಬಿಎಂಎಲ್) ರವರ ಪರವಾಗಿ)
- ಡಾ॥ ಸಿ.ಎನ್.ಅಶ್ವತ್ಥನಾರಾಯಣ (ಉಪ ಮುಖ್ಯಮಂತ್ರಿಗಳು,ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)

60+62 – ಕೇಂದ್ರ ಸರ್ಕಾರ ಘೋಷಿಸಿದ "ರಾಷ್ಟ್ರೀಯ ಶಿಕ್ಷಣ ನೀತಿ" ಬಗ್ಗೆ.
- ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ
- ಡಾ॥ಸಿ.ಎನ್. ಅಶ್ವತ್ಥನಾರಾಯಣ (ಉಪ ಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

37 – ಕೋವಿಡ್-19 ಹಿನ್ನೆಲೆಯಲ್ಲಿ ಖಾಸಗಿ ಶಾಲೆಗಳ ಆರ್ಥಿಕ ಪರಿಸ್ಥಿತಿ ಕುರಿತು.
- ಶ್ರೀ ಹೆಚ್.ಎಂ.ರಮೇಶ್ ಗೌಡ
- ಶ್ರೀ ಎಸ್.ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

55– ಕೋವಿಡ್-19 ಸೋಂಕಿತರ ಮಾಹಿತಿ ಬಗ್ಗೆ.
- ಶ್ರೀ ಎಂ.ನಾರಾಯಣಸ್ವಾಮಿ
- ಡಾ॥ ಕೆ.ಸುಧಾಕರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು)

84– ಬೀದರ್ ಜಿಲ್ಲೆಯಲ್ಲಿ ಮೂಲ ಸೌಕರ್ಯಗಳಿಲ್ಲದ ಶಾಲೆಗಳ ಬಗ್ಗೆ.
- ಶ್ರೀ ಅರವಿಂದ ಕುಮಾರ್ ಅರಳಿ
- ಶ್ರೀ ಎಸ್.ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

42– ಅರಣ್ಯ ಇಲಾಖೆಯ ವಿವಿಧ ವೃಂದಗಳ ಜೇಷ್ಠತಾ ಪಟ್ಟಿಯ ಬಗ್ಗೆ.
- ಶ್ರೀ ಎನ್.ಅಪ್ಪಾಜಿಗೌಡ
- ಶ್ರೀ ಅನಂದ್‌ಸಿಂಗ್(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

77– ರಾಜ್ಯದಲ್ಲಿರುವ ಸರ್ಕಾರಿ ಪ್ರೌಢಶಾಲೆ/ಪದವಿ ಪೂರ್ವ ಕಾಲೇಜುಗಳಲ್ಲಿರುವ ಅತಿಥಿ ಶಿಕ್ಷಕರು/ಉಪನ್ಯಾಸಕರ ಮಾಹಿತಿ ಬಗ್ಗೆ.
- ಶ್ರೀ ಶಶೀಲ್ ಜಿ.ನಮೋಶಿ
- ಶ್ರೀ ಎಸ್.ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

50 – ಕೋವಿಡ್-19 ರೋಗಿಗಳ ಚಿಕಿತ್ಸೆ ಬಗ್ಗೆ.
- ಶ್ರೀ ಪಿ.ಆರ್.ರಮೇಶ್
- ಡಾ॥ ಕೆ.ಸುಧಾಕರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು)

167– ಗೌರವ ಡಾಕ್ಟರೇಟ್ ನೀಡಿಕೆಯಲ್ಲಿ ದುರ್ಬಳಕೆ ಮಾರಾಟ ಜಾಲದ ಬಗ್ಗೆ.
- ಡಾ॥ ತೇಜಸ್ವಿನಿ ಗೌಡ
- ಡಾ॥ ಅಶ್ವತ್ಥನಾರಾಯಣ ಸಿ.ಎನ್. ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**8. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ಶಿಕ್ಷಕರ ಮತ್ತು ಶಿಕ್ಷಣ ಕ್ಷೇತ್ರದ ಜ್ವಲಂತ ಸಮಸ್ಯೆಗಳ ಬಗ್ಗೆ ಧಾರವಾಡ ಜಿಲ್ಲಾಧಿಕಾರಿಗಳ ಕಛೇರಿ ಎದುರು ಉಪವಾಸ ಸತ್ಯಾಗ್ರಹ ಪ್ರಾರಂಭಿಸಿರುವ ಬಗ್ಗೆ.**
- **ಶ್ರೀ ಎಸ್.ವ್ಹಿ.ಸಂಕನೂರ**
- **ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆ) ಮೂಡುಬಿದರೆಯ ಶಿರ್ತಾಡಿಕ್ಕಿ ಜವಾಹರಲಾಲ್ ನೆಹರು ಅನುದಾನಿತ ಪ್ರೌಢ ಶಾಲಾ ಶಿಕ್ಷಕಿ ಪದ್ಮಾಕ್ಷಿ ಎನ್. ಇವರು ಕೊರೋನಾಗೆ ತುತ್ತಾಗಿ ಮೃತರಾಗಿದ್ದು, ಪರಿಹಾರ ನೀಡದಿರುವ ಬಗ್ಗೆ.

– ಶ್ರೀ ಎಸ್.ಎಲ್.ಭೋಜೇಗೌಡ

ಇ) ಅಧಿವೇಶನ ನಡೆಯುತ್ತಿರುವ ಹಿನ್ನೆಲೆಯಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗ ಹರಡುವ ಭೀತಿಯಲ್ಲಿ ಇರುವುದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ಅಗತ್ಯ ಕ್ರಮ ಕೈಗೊಳ್ಳುವ ಬಗ್ಗೆ.

– ಶ್ರೀ ಪ್ರಕಾಶ್ ಕೆ.ರಾಥೋಡ್

– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**9. ಕರ್ನಾಟಕ ಭೂ ಸುಧಾರಣೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2020**

– ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

– ಶ್ರೀ ಪಿ.ಆರ್.ರಮೇಶ್

– ಶ್ರೀ ಪ್ರಕಾಶ್ ಕೆ.ರಾಥೋಡ್

– ಶ್ರೀ ಎಸ್.ಎಲ್.ಭೋಜೇಗೌಡ

– ಶ್ರೀ ಬಸವರಾಜ ಪಾಟೀಲ್ ಇಟಗಿ

– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

(ಚರ್ಚೆ ಮುಂದುವರೆದಿತ್ತು)

~*~*~*~*~*~

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

(959)07.12.2020/11.30/ಎಸ್‌ಕೆ-ಎಕೆ

# *ಕರ್ನಾಟಕ ವಿಧಾನ ಪರಿಷತ್ತು*

**ಸೋಮವಾರ, 7ನೇ ಡಿಸೆಂಬರ್ 2020**

ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ **11** ಗಂಟೆ **33** ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿ (**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ**) ಅವರು ಪೀಠವನ್ನು ಅಲಂಕರಿಸಿದರು.

**(ಸದನವು “ವಂದೇ ಮಾತರಂ” ಗೀತೆಯೊಂದಿಗೆ ಪ್ರಾರಂಭಗೊಂಡಿತು)**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

## *01. ಸಂತಾಪ ಸೂಚನೆ*

**ವಿಷಯ:-** ಹಾಲಿ ಕೇಂದ್ರ ಸಚಿವರಾಗಿದ್ದ ಶ್ರೀ ರಾಮವಿಲಾಸ್ ಪಾಸ್ವಾನ್, ವಿಧಾನ ಪರಿಷತ್ತಿನ ಮಾಜಿ ಸದಸ್ಯರುಗಳಾಗಿದ್ದ ಶ್ರೀ ಜೆ.ಶ್ರೀನಿವಾಸ ರೆಡ್ಡಿ ಮತ್ತು ಶ್ರೀ ಕೆ.ಮಲ್ಲಪ್ಪ, ಮಾಜಿ ಸಚಿವಾರಾಗಿದ್ದ ಡಾ: ವೈ.ನಾಗಪ್ಪ, ಮಾಜಿ ಕೇಂದ್ರ ಸಚಿವರಾಗಿದ್ದ ಶ್ರೀ ಜಸ್ವಂತ್ ಸಿಂಗ್, ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಶ್ರೀ ಎಂ.ಡಿ. ಶ್ಯಾಮರಾವ್, ಹಿರಿಯ ರಂಗಕಲಾವಿದರಾದ ಶ್ರೀ ಕೊಡಗನೂರು ಜಯಕುಮಾರ್, ಚಲನಚಿತ್ರ ಸಂಗೀತ ನಿರ್ದೇಶಕರಾದ ಶ್ರೀ ರಾಜನ್, ಶಿರಸಿ ಅರ್ಬನ್ ಬ್ಯಾಂಕಿನ ಮಾಜಿ ಅಧ್ಯಕ್ಷರಾದ ಶ್ರೀ ವಿ.ಎಸ್.ಸೋಂದೆ, ಹಿರಿಯ ಚಿತ್ರಕಲಾವಿದರಾದ ಶ್ರೀ ಯಶವಂತ ಹಿಬಾರಿ, ಹಿರಿಯ ಪತ್ರಕರ್ತರಾದ ಶ್ರೀ ಶ್ಯಾಮಸುಂದರ್, ಖ್ಯಾತ ವಯಲಿನ್ ವಾದಕರಾದ ಶ್ರೀ ಟಿ.ಎನ್. ಕೃಷ್ಣನ್ ಮತ್ತು ಖ್ಯಾತ ಪತ್ರಕರ್ತರಾಗಿದ್ದ ಶ್ರೀ ರವಿ ಬೆಳಗೆರೆ ಅವರುಗಳ ನಿಧನದ ಬಗ್ಗೆ.

----

**ಸಭಾಪತಿಯವರು:–** ಹಾಲಿ ಕೇಂದ್ರ ಸಚಿವರಾಗಿದ್ದ ರಾಮವಿಲಾಸ್ ಪಾಸ್ವಾನ್, ವಿಧಾನ ಪರಿಷತ್ತಿನ ಮಾಜಿ ಸದಸ್ಯರುಗಳಾಗಿದ್ದ ಶ್ರೀ ಜೆ. ಶ್ರೀನಿವಾಸ ರೆಡ್ಡಿ ಮತ್ತು ಶ್ರೀ ಕೆ.ಮಲ್ಲಪ್ಪ, ಮಾಜಿ ಸಚಿವಾರಾಗಿದ್ದ ಡಾ. ವೈ.ನಾಗಪ್ಪ, ಮಾಜಿ ಕೇಂದ್ರ ಸಚಿವರಾಗಿದ್ದ ಶ್ರೀ ಜಸ್ವಂತ್ ಸಿಂಗ್, ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಶ್ರೀ ಎಂ.ಡಿ.ಶ್ಯಾಮರಾವ್, ಹಿರಿಯ ರಂಗಕಲಾವಿದರಾದ ಶ್ರೀ ಕೊಡಗನೂರು ಜಯಕುಮಾರ್, ಚಲನಚಿತ್ರ ಸಂಗೀತ ನಿರ್ದೇಶಕರಾದ ರಾಜನ್, ಶಿರಸಿ ಅರ್ಬನ್ ಬ್ಯಾಂಕಿನ ಮಾಜಿ ಅಧ್ಯಕ್ಷರಾದ ವಿ.ಎಸ್. ಸೋಂದೆ, ಹಿರಿಯ ಚಿತ್ರಕಲಾವಿದರಾದ ಶ್ರೀ ಯಶವಂತ ಹಿಬಾರಿ, ಹಿರಿಯ ಪತ್ರಕರ್ತರಾದ ಶ್ರೀ ಶ್ಯಾಮಸುಂದರ್, ಖ್ಯಾತ ವಯಲಿನ್ ವಾದಕರಾದ ಶ್ರೀ ಟಿ.ಎನ್.ಕೃಷ್ಣನ್ ಮತ್ತು ಖ್ಯಾತ ಪತ್ರಕರ್ತರಾಗಿದ್ದ ಶ್ರೀ ರವಿ ಬೆಳಗೆರೆ ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.

### 01. ರಾಮ್ ವಿಲಾಸ್ ಪಾಸ್ವಾನ್

ಹಾಲಿ ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವರಾಗಿದ್ದ ಶ್ರೀ ರಾಮ ವಿಲಾಸ್ ಪಾಸ್ವಾನ್ ಅವರು ದಿನಾಂಕ:08.10.2020ರಂದು ನಿಧನ ಹೊಂದಿರುತ್ತಾರೆ.

1946ರ ಜುಲೈ 05ರಂದು ಬಿಹಾರದ ಖಗಾರಿಯಾ ಜಿಲ್ಲೆಯ ಶಹರ್ಬಾನಿ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಕಾನೂನು ಮತ್ತು ಸ್ನಾತಕೋತ್ತರ ಪದವೀಧರರಾಗಿದ್ದು, 1969ರಲ್ಲಿ ಡಿಎಸ್‌ಪಿ., ಹುದ್ದೆಗೆ ಆಯ್ಕೆಯಾಗಿದ್ದರು. ಆದರೆ ರಾಜಕೀಯ ಕ್ಷೇತ್ರದಲ್ಲಿ ಆಸಕ್ತಿ ಹೊಂದಿದ್ದ ಶ್ರೀಯುತರು ಸಂಯುಕ್ತ ಸೋಶಿಯಲಿಸ್ಟ್ ಪಾರ್ಟಿಯಿಂದ ಮೊದಲ ಬಾರಿ ಬಿಹಾರ ವಿಧಾನಸಭೆಯ ಶಾಸಕರಾಗಿ 1969ರಲ್ಲಿ ಆಯ್ಕೆಯಾಗುವ ಮೂಲಕ ತಮ್ಮ ರಾಜಕೀಯ ಜೀವನ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪ್ರಾರಂಭಿಸಿದರು. ಲೋಕಜನ ಶಕ್ತಿ ಪಕ್ಷದ ಸಂಸ್ಥಾಪಕರಾಗಿದ್ದರು. ಶೋಷಿತರ ಪರ ಬದ್ಧತೆಯುಳ್ಳ ನಾಯಕರಾದ ಅವರು ಐದು ದಶಕಗಳ ಕಾಲ ರಾಷ್ಟ್ರ ರಾಜಕಾರಣದಲ್ಲಿ ಪ್ರಬಲ ದಲಿತ ನಾಯಕರಾಗಿದ್ದರು. ಶ್ರೀಯುತರು 1977ರಲ್ಲಿ ಹಾಜಿಪುರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಅತೀ ಹೆಚ್ಚು ಮತಗಳ ಅಂತರದಿಂದ ಗೆಲುವು ಸಾಧಿಸುವ ಮೂಲಕ ಗಿನ್ನಿಸ್ ದಾಖಲೆಗೆ ಪಾತ್ರರಾಗಿದ್ದರು. ಮಾನ್ಯರು ಕೇಂದ್ರ ಸರ್ಕಾರದ ವಿವಿಧ ಖಾತೆಗಳ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ.

9 ಬಾರಿ ಲೋಕಸಭಾ ಸದಸ್ಯರಾಗಿ ಎರಡು ಬಾರಿ ರಾಜ್ಯಸಭಾ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿದ್ದ ಶ್ರೀಯುತರು ಪರಿಶಿಷ್ಟ ಜಾತಿ, ಪಂಗಡಗಳ ಹಾಗೂ ಹಿಂದುಳಿದ ವರ್ಗಗಳ ನಾಯಕರಾಗಿ, ಶೋಷಿತ ವರ್ಗಗಳ ಏಳಿಗೆಗಾಗಿ ಅವಿರತವಾಗಿ ಶ್ರಮಿಸಿದ್ದರು.

ಶ್ರೀಯುತರ ನಿಧನದಿಂದಾಗಿ ದೇಶವು ಒಬ್ಬ ಹಿರಿಯ ರಾಜಕೀಯ ಮುತ್ಸದ್ಧಿಯನ್ನು ಕಳೆದುಕೊಂಡಂತಾಗಿದೆ.

(ಮುಂದು)

(960) 07.12.2020 11.40 ಟಿಸಿಹೆಚ್-ವಿಕೆ

**02. ಶ್ರೀ ಜೆ. ಶ್ರೀನಿವಾಸ ರೆಡ್ಡಿ**

ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಮಾಜಿ ಶಾಸಕರಾದ ಜೆ. ಶ್ರೀನಿವಾಸ ರೆಡ್ಡಿ ರವರು ದಿನಾಂಕ:20.09.2020ರಂದು ನಿಧನ ಹೊಂದಿರುತ್ತಾರೆ.

1931ರ ಆಗಸ್ಟ್, 30ರಂದು ಬೆಂಗಳೂರಿನಲ್ಲಿ ಜನಿಸಿದ್ದ ಶ್ರೀಯುತರು ವೃತ್ತಿಯಲ್ಲಿ ಕೃಷಿಕರಾಗಿದ್ದರು. 1959ರಲ್ಲಿ ಬೆಂಗಳೂರು ದಕ್ಷಿಣ ಕ್ಷೇತ್ರದ ತಾಲ್ಲೂಕು ಬೋರ್ಡಿನ ಸದಸ್ಯರಾಗುವ ಮೂಲಕ ತಮ್ಮ ಸಾರ್ವಜನಿಕ ಜೀವನವನ್ನು ಪ್ರಾರಂಭಿಸಿದ್ದ ಶ್ರೀಯುತರು 1962ರಲ್ಲಿ ಮೊದಲ ಬಾರಿ ಸ್ವತಂತ್ರ ಅಭ್ಯರ್ಥಿಯಾಗಿ ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರದಿಂದ 3ನೇ ವಿಧಾನಸಭೆಗೆ ಸದಸ್ಯರಾಗಿ ಚುನಾಯಿತರಾಗಿದ್ದರು. ತದನಂತರ 1974 ರಿಂದ 1980 ಹಾಗೂ 1988 ರಿಂದ 1994ರ ಅವಧಿಯಲ್ಲಿ ಎರಡು ಬಾರಿ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಅವರು ಮಾಡಲ್ ಎಜ್ಯುಕೇಷನ್ ಸೊಸೈಟಿ ವಿದ್ಯಾಸಂಸ್ಥೆಯ ಸಂಸ್ಥಾಪಕ ಸದಸ್ಯರಾಗಿ, ಮುನಿಸ್ವಾಮಪ್ಪ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾಗಿಯು ಕಾರ್ಯನಿರ್ವಹಿಸಿರುತ್ತಾರೆ.

ಶ್ರೀಯುತರು ಸಹಕಾರ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತಗೊಳಿಸುವಲ್ಲಿ ಕ್ರಿಯಾಶೀಲರಾಗಿದ್ದರಲ್ಲದೆ, ಸಮಾಜದ ದುರ್ಬಲ ವರ್ಗದವರ ಏಳಿಗೆಗಾಗಿ ಅವಿರತವಾಗಿ ಶ್ರಮಿಸಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

### 03. ಶ್ರೀ ಕೆ. ಮಲ್ಲಪ್ಪ

ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಮಾಜಿ ಶಾಸಕರಾಗಿದ್ದ ಕೆ.ಮಲ್ಲಪ್ಪನವರು ದಿನಾಂಕ:12.10.2020ರಂದು ನಿಧನ ಹೊಂದಿರುತ್ತಾರೆ.

1931ರಲ್ಲಿ ದಾವಣಗೆರೆ ಜಿಲ್ಲೆಯ ನಂದಿಗಾವಿಯಲ್ಲಿ ಜನಿಸಿದ್ದ ಶ್ರೀಯುತರು ಎಸ್.ಎಸ್.ಎಲ್.ಸಿ.,ವರೆಗೆ ವ್ಯಾಸಂಗ ಮಾಡಿದ್ದು, ವೃತ್ತಿಯಲ್ಲಿ ಕೃಷಿಕರು ಮತ್ತು ವಾಣಿಜ್ಯೋದ್ಯಮಿಯಾಗಿದ್ದರು. 1983ರಲ್ಲಿ ಹರಿಹರ ಕ್ಷೇತ್ರದಿಂದ ಮತ್ತು 1985ರಲ್ಲಿ ಮಾಯಕೊಂಡ ಕ್ಷೇತ್ರದಿಂದ ವಿಧಾನಸಭೆ ಸದಸ್ಯರಾಗಿ ಹಾಗೂ 1998ರಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿ ಆಯ್ಕೆಯಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ದೇವರಾಜ ಅರಸು ಅಭಿವೃದ್ಧಿ ನಿಗಮ ಹಾಗೂ ಬಯಲು ಸೀಮೆ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ, ಎರಡು ಬಾರಿ ನಿಯಂತ್ರಿತ ಮಾರುಕಟ್ಟೆಯ ಸದಸ್ಯರಾಗಿ ಹಾಗೂ ದಾವಣಗೆರೆ ಮುನ್ಸಿಪಲ್‌ನ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ಸ್ವಾತಂತ್ರ್ಯ ಚಳುವಳಿ ಹಾಗೂ ಗೋವಾ ವಿಮೋಚನಾ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಕ್ರೀಡೆಯಲ್ಲಿ ಅಪಾರ ಆಸಕ್ತಿ ಹೊಂದಿದ್ದ ಶ್ರೀಯುತರು ವೀರೇಶ್ವರ ವ್ಯಾಯಾಮ ಶಾಲೆಯ ಸಂಸ್ಥಾಪಕ ಅಧ್ಯಕ್ಷರಾಗಿ ಕುಸ್ತಿ ಸ್ಪರ್ಧೆಗಳನ್ನು ಏರ್ಪಡಿಸಿ ಪೈಲ್ವಾನ್ ಮಲ್ಲಪ್ಪ ಎಂದೇ ಜನಜನಿತರಾಗಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ರಾಜಕೀಯ ಮುತ್ಸದ್ಧಿಯೊಬ್ಬರನ್ನು ಕಳೆದುಕೊಂಡಂತಾಗಿದೆ.**

### 04. ಡಾ. ವೈ. ನಾಗಪ್ಪ

ಮಾಜಿ ಸಚಿವರಾಗಿದ್ದ ಡಾ.ವೈ.ನಾಗಪ್ಪನವರು ದಿನಾಂಕ27.10.2020ರಂದು ನಿಧನ ಹೊಂದಿರುತ್ತಾರೆ.

1934ರ ಆಗಸ್ಟ್ 25 ರಂದು ಹರಿಹರದಲ್ಲಿ ಜನಿಸಿದ್ದ ಶ್ರೀಯುತರು ವೈದ್ಯಕೀಯ ಪದವೀಧರರಾಗಿದ್ದು, 1976 ರಿಂದ 1979 ರವರೆಗೆ ದಾವಣಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಹೃದ್ರೋಗ ತಜ್ಞರಾಗಿ ಕಾರ್ಯನಿರ್ವಹಿಸಿದ್ದರು. ಶ್ರೀಯುತರು 1989, 1999 ಹಾಗೂ 2004ರಲ್ಲಿ ಹರಿಹರ ಕ್ಷೇತ್ರದಿಂದ 3 ಬಾರಿ ವಿಧಾನಸಭಾ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

2004ರಲ್ಲಿ ದಿವಂಗತ ಧರ್ಮಸಿಂಗ್‌ರವರ ಸಮ್ಮಿಶ್ರ ಸರ್ಕಾರದ ಸಚಿವ ಸಂಪುಟದಲ್ಲಿ ಅವರು ಸಮಾಜ ಕಲ್ಯಾಣ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ಅಲ್ಲದೆ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ಹಾಗೂ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿಯೂ ಕೂಡ ಕಾರ್ಯನಿರ್ವಹಿಸಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಒಬ್ಬ ಹಿರಿಯ ಸರಳ ಸಜ್ಜನ ರಾಜಕಾರಣಿಯನ್ನು ಕಳೆದು ಕೊಂಡಂತಾಗಿದೆ.**

**05. ಶ್ರೀ ಜಸ್ವಂತ್ ಸಿಂಗ್**

ಮಾಜಿ ಕೇಂದ್ರ ಸಚಿವರಾದ ಶ್ರೀ ಜಸವಂತ್ ಸಿಂಗ್‌ರವರು ದಿನಾಂಕ:27.09.2020ರಂದು ನಿಧನ ಹೊಂದಿರುತ್ತಾರೆ.

1938ರ ಜನವರಿ, 3ರಂದು ರಾಜಸ್ಥಾನದ ಬಾರ್ಮರ್ ಜಿಲ್ಲೆಯ ಜಸೋಲ್ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಬಿ.ಎ., ಹಾಗೂ ಬಿಎಸ್ಸಿ, ಪದವೀಧರರಾಗಿದ್ದರು. ಭಾರತೀಯ ಜನತಾ ಪಾರ್ಟಿಯ ಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿದ್ದ ಶ್ರೀಯುತರು 5 ಬಾರಿ ರಾಜ್ಯಸಭಾ ಸದಸ್ಯರಾಗಿ ಹಾಗೂ 4 ಬಾರಿ ಲೋಕಸಭಾ ಸದಸ್ಯರಾಗಿ ಆಯ್ಕೆಯಾಗಿ, ಕೇಂದ್ರದಲ್ಲಿ ರಕ್ಷಣೆ, ಹಣಕಾಸು ಹಾಗೂ ವಿದೇಶಾಂಗ ವ್ಯವಹಾರಗಳ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ಶ್ರೀಯುತರು ಲೇಖಕರಾಗಿ 12ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದು, ಕ್ರೀಡಾ ಕ್ಷೇತ್ರದಲ್ಲಿ ಅಪಾರ ಆಸಕ್ತಿಯನ್ನು ಹೊಂದಿದ್ದರು.

ಭಾರತ ಮತ್ತು ಪಾಕಿಸ್ತಾನ ನಡುವಿನ ಕಾರ್ಗಿಲ್ ಯುದ್ಧದ ಪರಿಸ್ಥಿತಿ, ಪಾರ್ಲಿಮೆಂಟ್ ಮೇಲೆ ನಡೆದ ಉಗ್ರರ ದಾಳಿ ಹಾಗೂ 1998ರಲ್ಲಿ ಪೋಕ್ರಾನ್‌ನಲ್ಲಿ ನಡೆಸಿದ ಅಣ್ವಸ್ತ್ರ ಪ್ರಯೋಗವನ್ನು ಯಶಸ್ವಿಯಾಗಿ ನಿಭಾಯಿಸಿದ ಕೀರ್ತಿಗೆ ಭಾಜನರಾಗಿರುತ್ತಾರೆ.

ಇವರ ನಿಧನದಿಂದಾಗಿ ದೇಶವು ಒಬ್ಬ ಅತ್ಯುತ್ತಮ ಸಂಸದೀಯ ಪಟು, ರಾಜತಾಂತ್ರಿಕ ಪಟು ಹಾಗೂ ಉತ್ತಮ ಆಡಳಿತಗಾರರೊಬ್ಬರನ್ನು ಕಳೆದುಕೊಂಡಂತಾಗಿದೆ.

**06. ಶ್ರೀ ಎಂ.ಡಿ. ಶ್ಯಾಮರಾವ್**

ಹಿರಿಯ ಸ್ವಾತಂತ್ರ್ಯ ಹೋರಟಗಾರರಾಗಿದ್ದ ಶ್ರೀ ಎಂ.ಡಿ.ಶ್ಯಾಮರಾವ್‌ರವರು ದಿನಾಂಕ: 03.11.2020ರಂದು ನಿಧನ ಹೊಂದಿರುತ್ತಾರೆ.

1923ರಲ್ಲಿ ಬಂಟ್ವಾಳ ತಾಲ್ಲೂಕಿನ ಬಿ.ಮೂಡ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ವಿದ್ಯಾರ್ಥಿ ದಿಸೆಯಿಂದಲೇ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದು, ತಮ್ಮ ಕ್ರಾಂತಿಕಾರಿ ಚಟುವಟಿಕೆಗೆ ಹೆಸರುವಾಸಿಯಾಗಿದ್ದರು. ಶ್ರೀಯುತರು ಕನ್ನಡ, ತಮಿಳು, ಹಿಂದಿ, ಇಂಗ್ಲಿಷ್ ಹಾಗೂ ತೆಲುಗು ಭಾಷೆಯನ್ನು ಬಲ್ಲವರಾಗಿದ್ದು, ಬ್ರಿಟೀಷರ ದೂರವಾಣಿ ಸಂಪರ್ಕ ಕಡಿತಗೊಳಿಸಿ, ಸ್ವಾತಂತ್ರ್ಯ ಚಳುವಳಿಗಾರರಿಗೆ ಗುಪ್ತ ಮಾಹಿತಿ ನೀಡುತ್ತಿದ್ದು, ತಮ್ಮ ಹೋರಾಟದಲ್ಲಿ ಜೈಲು ಶಿಕ್ಷೆಯನ್ನು ಅನುಭವಿಸಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಒಬ್ಬ ಹಿರಿಯ ಸ್ವಾತಂತ್ರ್ಯ ಹೋರಾಟಗಾರರೊಬ್ಬರನ್ನು ಕಳೆದುಕೊಂಡಂತಾಗಿದೆ.**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**07. ಶ್ರೀ ಕೊಡಗನೂರು ಜಯಕುಮಾರ್**

ಹಿರಿಯ ರಂಗಕಲಾವಿದ ಶ್ರೀ ಕೊಡಗನೂರು ಜಯಕುಮಾರ್‌ರವರು ದಿನಾಂಕ:06.10.2020ರಂದು ನಿಧನ ಹೊಂದಿರುತ್ತಾರೆ.

1948ರ ಸೆಪ್ಟೆಂಬರ್ 13ರಂದು ದಾವಣಗೆರೆಯ ಕೊಡಗನೂರು ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ತಮ್ಮ ಅಮೋಘ ಅಭಿನಯದ ಮೂಲಕ ವೃತ್ತಿರಂಗ ಭೂಮಿಯ ರಾಜ್‌ಕುಮಾರ್ ಎಂದೇ ಖ್ಯಾತರಾಗಿದ್ದರು. ಶ್ರೀಯುತರು ಬಾಲ್ಯದಲ್ಲಿಯೇ ಬಣ್ಣ ಹಚ್ಚಿ ಆರು ದಶಕಗಳ ಕಾಲ ರಂಗಭೂಮಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಗುಬ್ಬಿ ವೀರಣ್ಣ ಕಂಪನಿ, ಚಿತ್ರದುರ್ಗದ ಗುಡಗೇರಿ ಕುಮಾರಸ್ವಾಮಿ ಕಂಪನಿ ಸೇರಿದಂತೆ 20ಕ್ಕೂ ಹೆಚ್ಚು ನಾಟಕ ಕಂಪನಿಗಳಲ್ಲಿ ರಂಗಕಲಾವಿದರಾಗಿ ಸೇವೆ ಸಲ್ಲಿಸಿದ್ದರಲ್ಲದೆ 50ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ಅಭಿನಯಿಸಿದ್ದ ಶ್ರೀಯುತರು ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಸಜ್ಜನ, ಪ್ರತಿಭಾಶಾಲಿ ಅಭಿಜಾತ ಕಲಾವಿದರೊಬ್ಬರನ್ನು ಕಳೆದುಕೊಂಡಂತಾಗಿದೆ.

**08. ಶ್ರೀ ರಾಜನ್**

ಖ್ಯಾತ ಸಂಗೀತ ನಿರ್ದೇಶಕ ಹಾಗೂ ರಾಜ್ಯ ಪ್ರಶಸ್ತಿ ಪುರಸ್ಕೃತ ಶ್ರೀ ರಾಜನ್‌ರವರು ದಿನಾಂಕ: 11.10.2020ರಂದು ನಿಧನ ಹೊಂದಿರುತ್ತಾರೆ.

1933 ರಂದು ಮೈಸೂರಿನಲ್ಲಿ ಜನಿಸಿದ್ದ ಶ್ರೀಯುತರು ಕನ್ನಡ ಚಿತ್ರರಂಗವಲ್ಲದೆ ತಮಿಳು, ತೆಲುಗು, ಮಲಯಾಳಂ, ಹಿಂದಿ, ತುಳು ಹಾಗೂ ಶ್ರೀಲಂಕಾದ ಸಿಂಹಳಿ ಭಾಷೆ ಸೇರಿದಂತೆ ಒಟ್ಟು 375ಕ್ಕೂ ಹೆಚ್ಚು ಸಿನಿಮಾಗಳಿಗೆ ಸಂಗೀತ ನಿರ್ದೇಶನ ನೀಡಿದ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಶ್ರೀಯುತರು ಕಡಿಮೆ ವಾದ್ಯಗಳನ್ನು ಬಳಸಿ ಸುಮಧುರ ಗೀತೆಗಳನ್ನು ಸೃಷ್ಟಿಸುತ್ತಿದ್ದರು. 'ಮಾಧುರ್ಯ' ಎಂಬ ಮಾತಿಗೊಂದು ಅರ್ಥ ನೀಡಿ ಆ ಮೂಲಕ ಚಿತ್ರರಂಗವನ್ನು ಶ್ರೀಮಂತಗೊಳಿಸಿದ ಕೀರ್ತಿಗೆ ಭಾಜನರಾಗಿದ್ದ ಇವರು 'ಎರಡು ಕನಸು' 'ಪರಸಂಗದ ಗೆಂಡೆತಿಮ್ಮ' ಹಾಗೂ 'ಪಂತುಲಮ್ಮ' ಚಿತ್ರಗಳ ಸಂಗೀತ ನಿರ್ದೇಶನಕ್ಕೆ ರಾಜ್ಯ ಪ್ರಶಸ್ತಿಗೆ ಪುರಸ್ಕೃತರಾಗಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಪ್ರತಿಭಾವಂತ ಸಂಗೀತ ನಿರ್ದೇಶಕ ಮತ್ತು ಗೀತ ಸಂಯೋಜಕರೊಬ್ಬರನ್ನು ಕಳೆದುಕೊಂಡಂತಾಗಿದೆ.**

**09. ಡಾ. ವೈಕುಂಠರಾವ್ ಶೇಷಗಿರಿರಾವ್ ಸೋಂದೆ**

ಉತ್ತರ ಕನ್ನಡ ಜಿಲ್ಲೆಯ ಅರ್ಬನ್ ಬ್ಯಾಂಕಿನ ಮಾಜಿ ಅಧ್ಯಕ್ಷರಾದ ಡಾ: ವೈಕುಂಠರಾವ್ ಶೇಷಗಿರಿರಾವ್ ಸೋಂದೆರವರು ದಿನಾಂಕ11.10.2020ರಂದು ನಿಧನ ಹೊಂದಿರುತ್ತಾರೆ.

ನೆನಪಿನ ಖಜಾನೆ ಎಂದೇ ಪ್ರಖ್ಯಾತರಾದ ಶ್ರೀಯುತರು ಉತ್ತರ ಕನ್ನಡ ಜಿಲ್ಲೆಯ ಹಲವು ದಶಕಗಳ ಘಟನೆಗಳ ಕುರಿತಂತೆ ಅವರ ಸ್ಮರಣಶಕ್ತಿಯಲ್ಲಿ ಸದಾ ಜಾಗೃತವಾಗುತ್ತಿತ್ತು. ಜಿಲ್ಲೆಯಲ್ಲಿ ನಡೆದ ಘಟನೆಗಳು, ಇಸವಿ ಅಂದಿನ ಸ್ಥಿತಿ ಎಲ್ಲವನ್ನೂ ಕರಾರುವಾಕ್ಕಾಗಿ ಹೇಳುತ್ತಿದ್ದರು. ಅವರ ಅಸಾಧಾರಣ ಸ್ಮರಣಶಕ್ತಿಯ ಪ್ರತಿಭೆಯಿಂದಾಗಿ ರಾಜ್ಯೋತ್ಸವ ಪ್ರಶಸ್ತಿಗೆ ಶ್ರೀಯುತರು ಭಾಜನರಾಗಿದ್ದರು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀಯುತರ ನಿಧನದಿಂದಾಗಿ ಅಸಾಧಾರಣ ಪ್ರತಿಭೆ ಹೊಂದಿದ್ದ ಮೇರು ವ್ಯಕ್ತಿಯನ್ನು ಕಳೆದುಕೊಂಡಂತಾಗಿದೆ.**

**10. ಶ್ರೀ ಯಶವಂತ ಹಿಬಾರಿ**

ಹಿರಿಯ ಚಿತ್ರಕಲಾವಿದರಾದ ಶ್ರೀ ಯಶವಂತ ಹಿಬಾರಿರವರು ದಿನಾಂಕ: 19.10.2020ರಂದು ನಿಧನ ಹೊಂದಿರುತ್ತಾರೆ.

ಮಹಂತರ ಮಠದ ವಿದ್ಯಾರ್ಥಿಯಾಗಿದ್ದ ಶ್ರೀಯುತರು ರಂಭಾಪುರಿ ಮಠದಲ್ಲಿ 50 ವರ್ಷಕ್ಕೂ ಹೆಚ್ಚಿನ ಕಾಲ ಸೇವೆಯನ್ನು ಸಲ್ಲಿಸಿದ್ದರು. ಅಂತರರಾಷ್ಟ್ರೀಯ ಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿ ತಮ್ಮ ಕಲೆಯ ಛಾಪನ್ನು ಮೂಡಿಸಿದ್ದರು. ಶ್ರೀಯುತರು ಚಿತ್ರಕಲಾ ಕ್ಷೇತ್ರಕ್ಕೆ ನೀಡಿರುವ ಅನನ್ಯ ಕೊಡುಗೆಯನ್ನು ಪರಿಗಣಿಸಿ ಅವರಿಗೆ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಲಾಗಿದೆ.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಪ್ರತಿಭಾವಂತ ಚಿತ್ರಕಲಾವಿದರೊಬ್ಬರನ್ನು ಕಳೆದುಕೊಂಡಂತಾಗಿದೆ.**

**11. ಶ್ರೀ ಶ್ಯಾಮಸುಂದರ್**

ಹಿರಿಯ ಪತ್ರಕರ್ತರಾಗಿದ್ದ ಶ್ರೀ ಶ್ಯಾಮಸುಂದರ್‌ರವರು ದಿನಾಂಕ20.10.2020 ರಂದು ನಿಧನ ಹೊಂದಿರುತ್ತಾರೆ.

ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿಯವರಾಗಿದ್ದ ಶ್ರೀಯುತರು ಬೆಳಗಾವಿಯಲ್ಲಿ ಹೋಮಿಯೋಪತಿ ವೈದ್ಯರಾಗಿ ಕಾರ್ಯನಿರ್ವಹಿಸಿದ್ದರು. 2007ರಲ್ಲಿ 'ದಿ ಹಿಂದು' ಪತ್ರಿಕೆಯ ಹಾಸನ ಜಿಲ್ಲಾ ವರದಿಗಾರರಾಗಿ ಸೇವೆಯನ್ನು ಸಲ್ಲಿಸಿದ್ದರಲ್ಲದೆ 'ಇಂಡಿಯನ್ ಎಕ್ಸ್‌ಪ್ರೆಸ್' ಹಾಗೂ 'ಕನ್ನಡಪ್ರಭ' ದಿನ ಪತ್ರಿಕೆಯಲ್ಲಿಯೂ ಸುದೀರ್ಘ ಕಾಲ ಸೇವೆಯನ್ನು ಸಲ್ಲಿಸಿದ್ದರು. ಶ್ರೀಯುತರು ರಾಜ್ಯೋತ್ಸವ ಪ್ರಶಸ್ತಿ, ಮಾಧ್ಯಮ ಅಕಾಡೆಮಿ ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಪತ್ರಕರ್ತರೊಬ್ಬರನ್ನು ಕಳೆದುಕೊಂಡಂತಾಗಿದೆ.**

**12. ಶ್ರೀ ಟಿ.ಎನ್.ಕೃಷ್ಣನ್**

ಖ್ಯಾತ ವಯಲಿನ್ ವಾದಕರಾಗಿದ್ದ ಶ್ರೀ ಟಿ.ಎನ್.ಕೃಷ್ಣನ್‌ರವರು ದಿನಾಂಕ:02.11.2020ರಂದು ನಿಧನ ಹೊಂದಿರುತ್ತಾರೆ.

1928ರ ಅಕ್ಟೋಬರ್, 06ರಂದು ಕೇರಳದ ಕೊಚ್ಚಿನ್‌ನಲ್ಲಿ ಜನಿಸಿದ್ದ ಶ್ರೀಯುತರು ತಮ್ಮ ಹನ್ನೊಂದನೆ ವಯಸ್ಸಿನಲ್ಲಿಯೇ ವಯಲಿನ್ ಪ್ರದರ್ಶನವನ್ನು ನೀಡಿದ್ದರು. ಮದ್ರಾಸ್ ಸಂಗೀತ ಅಕಾಡೆಮಿಯಲ್ಲಿ ವಾರ್ಷಿಕ ಮೊಗಾರ್ಜಿ ಮ್ಯೂಸಿಕ್ ಸೀಸನ್‌ನಲ್ಲಿ ತಮ್ಮ ಸಂಗೀತವನ್ನು ಪ್ರದರ್ಶಿಸುತ್ತಿದ್ದರು. ಚೆನ್ನೈ ಮ್ಯೂಸಿಕ್ ಕಾಲೇಜಿನಲ್ಲಿ ಮ್ಯೂಸಿಕ್ ಪ್ರಾಧ್ಯಾಪಕರಾಗಿ ನಂತರ ಪ್ರಾಂಶುಪಾಲರಾಗಿ ಸಹ ಅವರು ಕಾರ್ಯನಿರ್ವಹಿಸಿರುತ್ತಾರೆ. ದೆಹಲಿ ವಿಶ್ವವಿದ್ಯಾಲಯದಲ್ಲಿ ಸಂಗೀತ ಮತ್ತು ಕಲೆಗಳ ಶಾಲೆಯ ಡೀನ್ ಆಗಿ ಕಾರ್ಯನಿರ್ವಹಿಸಿದ್ದು, ನಂತರ 1991-93ರವರೆಗೆ ಸಂಗೀತ ನಾಟಕ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಕಾಡೆಮಿಯ ಉಪಾಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಶ್ರೀಯುತರು ಪದ್ಮಭೂಷಣ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ, ಸಂಗೀತ ಅಕಾಡೆಮಿಯ ಸಂಗೀತ ಕಲಾನಿಧಿ ಪ್ರಶಸ್ತಿ ಅಲ್ಲದೆ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿರುತ್ತಾರೆ.

**ಶ್ರೀಯುತರ ನಿಧನದಿಂದಾಗಿ ದೇಶವು ಸಂಗೀತ ಲೋಕದ ಮಾಂತ್ರಿಕರೊಬ್ಬರನ್ನು ಕಳೆದುಕೊಂಡಂತಾಗಿದೆ.**

(ಮುಂದು...)

(961)7.12.2020/11.50/ಎಂ.ಎಂ–ವಿ.ಕೆ

### 13. ಶ್ರೀ **ರವಿ ಬೆಳಗೆರೆ**

ಹಿರಿಯ ಪತ್ರಕರ್ತ ಶ್ರೀ ರವಿ ಬೆಳಗೆರೆ ಅವರು ದಿನಾಂಕ: 13.11.2020ರಂದು ನಿಧನ ಹೊಂದಿರುತ್ತಾರೆ.

1958ರ ಮಾರ್ಚ್, 15ರಂದು ಬಳ್ಳಾರಿಯಲ್ಲಿ ಜನಿಸಿದ್ದ ಶ್ರೀಯುತರು ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು ಪ್ರಾಧ್ಯಾಪಕರಾಗಿ ವೃತ್ತಿ ಆರಂಭಿಸಿ ನಂತರ ಕನ್ನಡಪ್ರಭ, ಸಂಯುಕ್ತ ಕರ್ನಾಟಕ ಸೇರಿದಂತೆ ಹಲವು ಪತ್ರಿಕೆಗಳಲ್ಲಿ ಕಾರ್ಯನಿರ್ವಹಿಸಿರುತ್ತಾರೆ. ತಮ್ಮ ಆಕರ್ಷಕ ಶೈಲಿಯ ಬರಹಗಳಿಂದ, ನಿರ್ಭಿಡೆಯ ಮಾತುಗಳಿಂದ ಅಸಂಖ್ಯಾತ ಅಭಿಮಾನಿಗಳನ್ನು ಸೃಷ್ಟಿಸಿಕೊಂಡಿದ್ದರು. ಮಾನಸಿಕ ಸೂಕ್ಷ್ಮತೆಯ ಹಲವು ಲೇಖನಗಳನ್ನು ಬರೆಯುವುದರ ಮೂಲಕ ಜನಪ್ರಿಯರಾಗಿದ್ದರು. 1995ರಲ್ಲಿ 'ಹಾಯ್ ಬೆಂಗಳೂರು' ಪತ್ರಿಕೆಯನ್ನು ಆರಂಭಿಸಿ ಪತ್ರಿಕೆಯ ಸಂಪಾದಕರಾಗಿದ್ದರು. ಶಿಕ್ಷಣ ಕ್ಷೇತ್ರದಲ್ಲಿಯೂ 'ಪ್ರಾರ್ಥನಾ' ಶಾಲೆಯನ್ನು ಪ್ರಾರಂಭಿಸುವ ಮೂಲಕ ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ನೀಡಿರುತ್ತಾರೆ. ಸಾಹಿತ್ಯ ಕ್ಷೇತ್ರದಲ್ಲಿ ಆಸಕ್ತಿ ಹೊಂದಿದ್ದ ಶ್ರೀಯುತರು ಕಾದಂಬರಿ, ಕಥಾ ಸಂಕಲನ, ಜೀವನ ಕಥನ ಒಳಗೊಂಡಂತೆ 70ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿರುತ್ತಾರೆ. ಅಲ್ಲದೆ ಇವರು ಕನ್ನಡ ಚಿತ್ರರಂಗದಲ್ಲಿ ಸಂಭಾಷಣೆಕಾರರಾಗಿ ಹಾಗೂ 'ಕ್ರೈಂ ಸ್ಟೋರಿ' ಕಿರುತೆರೆ ಕಾರ್ಯಕ್ರಮಗಳಿಗೆ ನಿರೂಪಕರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

ಪತ್ರಿಕೋದ್ಯಮ ಕ್ಷೇತ್ರದಲ್ಲಿ ಸಲ್ಲಿಸಿದ ಅಸಾಧಾರಣ ಸೇವೆಗಾಗಿ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಮಾಧ್ಯಮ ಅಕಾಡೆಮಿಯ ಜೀವಮಾನದ ಸಾಧನೆ ಪ್ರಶಸ್ತಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗಳಲ್ಲದೆ ಇತರೆ ಹಲವು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿರುತ್ತಾರೆ.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಬಹುಮುಖ ಪ್ರತಿಭೆಯ ಪತ್ರಕರ್ತರೊಬ್ಬರನ್ನು ಕಳೆದುಕೊಂಡಂತಾಗಿದೆ.**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇವತ್ತು ಕೇಂದ್ರದ ಸಚಿವರಾಗಿದ್ದ ಶ್ರೀ ರಾಮ್ ವಿಲಾಸ್ ಪಾಸ್ವಾನ್ ಮತ್ತು ಶ್ರೀ ರವಿ ಬೆಳಗೆರೆ ಸಹಿತ 13 ಜನ ಹಿರಿಯರಿಗೆ ತಾವು ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ. ಅದಕ್ಕೆ ಸಹಮತ ಕೋರುತ್ತಾ ಕೇಂದ್ರ ಸಚಿವರಾಗಿದ್ದಂತಹ ಶ್ರೀ ರಾಮ್ ವಿಲಾಸ್ ಪಾಸ್ವಾನ್‌ರವರು ಈ ಸಮಾಜದ ಶೋಷಿತ ಸಮಾಜದ ಮತ್ತು ದಲಿತರ, ಹಿಂದುಳಿದ ವರ್ಗಗಳ ಧ್ವನಿಯಾಗಿ ಸುದೀರ್ಘವಾದ ರಾಜಕಾರಣವನ್ನು ಕಂಡವರು. ತಮ್ಮ ರಾಜಕಾರಣ ಜೀವನದಲ್ಲಿ ಧ್ವನಿ ಇಲ್ಲದವರಿಗೆ ಧ್ವನಿ ಕೊಡುವಂತಹ ಕೆಲಸಗಳಲ್ಲಿ ನಿರತರಾಗಿ ಅದರಲ್ಲಿ ಯಶಸ್ವಿಯಾದರು. ಅವರಲ್ಲಿದ್ದಂತಹ ವಿಶೇಷತೆ ಎಂದರೆ ಕೇಂದ್ರದಲ್ಲಿ ಯಾವುದೇ ಸರ್ಕಾರ ಬರಲಿ 'ಪಾಸ್ವಾನ್' ಅದರಲ್ಲಿ ಮಂತ್ರಿಯಾಗುವಂತಹ ಅದೃಷ್ಟವಂತ ರಾಜಕಾರಣಿ ಎಂಬ ಪ್ರಶಂಸೆಯ ಮಾತುಗಳು ಇತ್ತು. ಅವರು ಪೊಲೀಸ್ ಅಧಿಕಾರಿಯಾಗಿ ಇರಬೇಕಾಗಿತ್ತು, ರಾಜಕಾರಣಿಯಾಗಿದ್ದರು ಎಂದು ತಾವು ಉಲ್ಲೇಖ ಮಾಡಿದಿರಿ. ಒಂದು ಘಟನೆಯಲ್ಲಿ ಅವರು ಪೊಲೀಸ್ ಅಧಿಕಾರಿಯಾಗಿದ್ದಂತಹ ಸಂದರ್ಭದಲ್ಲಿ ಅವರು ಅವರ ಊರಿಗೆ ಬಿಹಾರದ 'ಖಗಾರಿಯ' ಜಿಲ್ಲೆಯ ಶಹರ್ಬಾನಿ ಗ್ರಾಮಕ್ಕೆ ಹೋಗಿರುತ್ತಾರೆ. ಯಾರೋ ಒಬ್ಬ ಬಡವನು 150 ರೂಪಾಯಿ ಸಾಲ ಪಡೆದು ಅದನ್ನು ವಾಪಸ್ ಕೊಡಲಿಲ್ಲ ಎನ್ನುವ ಕಾರಣಕ್ಕೆ ಆ ಊರಿನಲ್ಲಿದ್ದಂತಹ ಬಲಾಢ್ಯರು ಅವನನ್ನು ಪಂಚಾಯ್ತಿ ಕಟ್ಟೆಗೆ ಕರೆಯುತ್ತಾರೆ. ಹಣವನ್ನು ಸಕಾಲದಲ್ಲಿ ಪಾವತಿ ಮಾಡದ ಆ ವ್ಯಕ್ತಿಯನ್ನು ಮರಕ್ಕೆ ಕಟ್ಟಿ ಹಾಕಿ ಶಿಕ್ಷೆ ಕೊಡುವಂತಹ ಕೆಲಸವಾಗುತ್ತದೆ. ಆ ಸಂದರ್ಭದಲ್ಲಿ ಅವರು ಮಧ್ಯಪ್ರವೇಶ ಮಾಡಿ ಅವನನ್ನು ಬಿಡಿಸುತ್ತಾರೆ. ಅವರ ಜೊತೆ ಬಡಿದಾಡುತ್ತಾರೆ, ಯಾವುದೋ ಒಪ್ಪಂದ ಪತ್ರವನ್ನು ಹರಿದು ಹಾಕುತ್ತಾರೆ. ದಲಿತರಾಗಿದ್ದವರನ್ನು ಸಾಲದ ಶೂಲಕ್ಕೆ ಈಡಾಗುತ್ತಿದ್ದ ಸಂದರ್ಭದಲ್ಲಿ ಅವನನ್ನು ಬಿಡಿಸಿದ್ದಾರೆ ಎನ್ನುವ ಕಾರಣಕ್ಕೆ ಇಡೀ ಗ್ರಾಮ ಮತ್ತು ಇಡೀ ಜಿಲ್ಲೆಯ ಸಮಾಜದಾದ್ಯಂತ ಜನಪ್ರಿಯರಾಗುತ್ತಾರೆ. ಅವರು ನೊಂದವರ ಪರವಾಗಿದ್ದಾರೆ ಎನ್ನುವಂತಹ ಮಾತುಗಳು ಅವರ ಪರವಾಗಿ ಬರುತ್ತದೆ. ಅವರ ತಂದೆಗೆ ಅವರು ಪೊಲೀಸ್ ಅಧಿಕಾರಿಯಾಗಿ ಮುಂದುವರೆಯಬೇಕೆಂದು ಇಷ್ಟವಿದ್ದರೂ ಕೂಡ; ಅವರ ಸ್ನೇಹಿತರೊಬ್ಬರು ಹೇಳಿದರಂತೆ, 'ನೀನು ಸರ್ಕಾರ ಆಗಬೇಕು ಎನ್ನುವುದಾದರೆ ಶಾಸಕನಾಗು, ಸರ್ಕಾರದ ಸೇವಕನಾಗಬೇಕೆಂದಿದ್ದರೆ, ಪೊಲೀಸ್ ಅಧಿಕಾರಿಯಾಗು' ಎಂದು ಹೇಳಿದರು. ಇವರು ಮೊದಲನೆಯದನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಸಾರ್ವಜನಿಕ ಜೀವನಕ್ಕೆ ಧುಮುಕುತ್ತಾರೆ. ವಾಪಸ್ ತಿರುಗಿ ನೋಡದೇ ಬಹಳ ಎತ್ತರಕ್ಕೆ ಬೆಳೆದು ಬಿಡುತ್ತಾರೆ. ಆದ್ದರಿಂದ ಅವರ ಮೇಲೆ ಸಮಾಜಕ್ಕೆ ವಿಶೇಷವಾದಂತಹ ಗೌರವವಿತ್ತು. 1977ನೇ ಇಸವಿಯಲ್ಲಿ ತುರ್ತು ಪರಿಸ್ಥಿತಿಯನ್ನು ವಿರೋಧಿಸಿ ಅವರು ಜೈಲು ಸೇರಿದರು. ಜೈಲಿನಿಂದ ಹೊರಗೆ ಬಂದಾಗ ಹಾಜಿಪುರದಲ್ಲಿ ಅವರು ಚುನಾವಣೆಗೆ ನಿಲ್ಲುತ್ತಾರೆ. 04 ಲಕ್ಷದ 24 ಸಾವಿರ ಮತಗಳ ಅಂತರದಲ್ಲಿ ಅವರು ಗೆಲುವನ್ನು ಸಾಧಿಸುತ್ತಾರೆ. ಒಟ್ಟಾರೆ ರಾಮ್ ವಿಲಾಸ್ ಪಾಸ್ವಾನ್ ಎನ್ನುವಂತಹ ವ್ಯಕ್ತಿ ಅದು ಉತ್ತರ ಪ್ರದೇಶವಾಗಿರಲಿ, ಭಾರತವಾಗಿರಲಿ ಯಾವುದೇ ರಾಜಕೀಯ ಪಕ್ಷವಾಗಿರಲಿ ತನ್ನದೇ ಆದಂತಹ ಶಕ್ತಿಯನ್ನು ಕಟ್ಟಿ ಬೆಳೆಸಿ ಬಹುತೇಕ ಸುದೀರ್ಘವಾದ ಅಧಿಕಾರ ಸೂತ್ರವನ್ನು ಹಿಡಿದಿರುತ್ತಾರೆ ಮತ್ತು ತಮ್ಮ ಅವಧಿಯಲ್ಲಿ ಸಮಾಜದ ಕಟ್ಟಕಡೆಯ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ವ್ಯಕ್ತಿಗೆ ಸಾಮಾಜಿಕ ನ್ಯಾಯ ಕೊಡುವುದಕ್ಕೆ, ದಲಿತರು, ಹಿಂದುಳಿದ ವರ್ಗದವರು ಮತ್ತು ನೊಂದವರ ಪರ ಧ್ವನಿ ಎತ್ತಲಿಕ್ಕೆ ಅವರಿಗೆ ಮುಂದಾಳತ್ವ ಕೊಡಲಿಕ್ಕೆ ಬಹುದೊಡ್ಡ ರಾಜಕಾರಣಿಯಾಗಿ ಕೆಲಸ ಮಾಡಿದ್ದನ್ನು ನಾವೆಲ್ಲಾ ನೋಡಿದ್ದೇವೆ. ಅಂತಹ ಹಿರಿಯರೊಬ್ಬರು ಸುದೀರ್ಘ ಬದುಕಿನಲ್ಲಿ ಬಹಳ ವರ್ಷಗಳ ಕಾಲ ರಾಜಕಾರಣ ಮಾಡಿದವರು ಹಲವು ಬಾರಿ ಸಂಸತ್ತಿಗೆ, ರಾಜ್ಯಸಭೆಗೆ ಆಯ್ಕೆಯಾದವರು ಅಂತಹ ಹಿರಿಯರನ್ನು ಕಳೆದುಕೊಂಡಿರುವುದು ಸಮಾಜಕ್ಕೆ ಒಂದು ನಷ್ಟ ಎಂದೆನಿಸುತ್ತದೆ. ಆ ಹಿನ್ನೆಲೆಯಲ್ಲಿ ಸಂತಾಪ ಸೂಚನೆಗೆ ನಿಮ್ಮ ಸಹಮತವನ್ನು ಕೋರುತ್ತೇನೆ.

ಎರಡನೆಯದಾಗಿ, ತಾವು ಜೆ. ಶ್ರೀನಿವಾಸರೆಡ್ಡಿಯವರ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಮಾಜಿ ಶಾಸಕರಾಗಿದ್ದಂತಹ ಶ್ರೀ ಶ್ರೀನಿವಾಸ ರೆಡ್ಡಿಯವರು ನಿಧನ ಹೊಂದಿದ್ದಾರೆ. 1962ರಲ್ಲಿ ಮೊದಲ ಬಾರಿಗೆ ಸ್ವತಂತ್ರ ಅಭ್ಯರ್ಥಿಯಾಗಿ ಅವರು ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರದಿಂದ 3ನೇ ವಿಧಾನಸಭೆಗೆ ಆಯ್ಕೆಯಾಗಿದ್ದರು. ಅನಂತರ ವಿಧಾನ ಪರಿಷತ್ತಿಗೆ ಆಯ್ಕೆಯಾಗಿದ್ದನ್ನು ತಾವು ಉಲ್ಲೇಖ ಮಾಡಿದ್ದೀರಿ. 3 ಬಾರಿ ಶಾಸಕರಾಗಿ ಸಹಕಾರ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಅಪಾರವಾಗಿ ಕೆಲಸಗಳನ್ನು ಮಾಡಿರುವಂತಹ ಶ್ರೀನಿವಾಸ ರೆಡ್ಡಿಯವರು ನಮ್ಮನ್ನು ಅಗಲಿದ್ದಾರೆ. ಅವರಿಗೂ ಸಹ ಸಂತಾಪವನ್ನು ಸೂಚಿಸುತ್ತೇನೆ.

ಶ್ರೀ ಕೆ. ಮಲ್ಲಪ್ಪ ರವರ ಬಗ್ಗೆ ತಾವು ಉಲ್ಲೇಖ ಮಾಡಿದ್ದೀರಿ. ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಶಾಸಕರಾಗಿ ಮಲ್ಲಪ್ಪನವರು ಸುದೀರ್ಘವಾಗಿ ಕೆಲಸವನ್ನು ಮಾಡಿದವರು. ಅವರು ಸಾರ್ವಜನಿಕ ಜೀವನದಲ್ಲಿ ಸಮರ್ಪಣಾ ಮನೋಭಾವದಿಂದ ದುಡಿದಿದ್ದಾರೆ ಎನ್ನುವ ಗೌರವಕ್ಕೆ ಪಾತ್ರರಾಗಿದ್ದಾರೆ. 1983ರಲ್ಲಿ ಹರಿಹರ ಕ್ಷೇತ್ರದಿಂದ ಮತ್ತು 1985ರಲ್ಲಿ ಮಾಯಕೊಂಡ ವಿಧಾನಸಭೆ ಕ್ಷೇತ್ರದಿಂದ ವಿಧಾನಸಭೆ ಸದಸ್ಯರಾಗಿ ಆಯ್ಕೆಯಾಗಿ ಹಿಂದುಳಿದವರ ಮತ್ತು ಧ್ವನಿ ಇಲ್ಲದವರ ಪರವಾಗಿ ಕೆಲಸಗಳನ್ನು ಮಾಡಿದ್ದಾರೆ ಎನ್ನುವ ಗೌರವಕ್ಕೆ ಅವರು ಪಾತ್ರರಾಗಿದ್ದರು. ಕ್ರೀಡಾ ಕ್ಷೇತ್ರದಲ್ಲಿ ಅಪಾರವಾದ ಕೆಲಸಗಳನ್ನು ಮಾಡಿದ್ದಾರೆ. ಅವರಿಗೆ 'ಪೈಲ್ವಾನ್ ಮಲ್ಲಪ್ಪ' ಎಂಬ ಬಿರುದಿದೆ. ಅತ್ಯಂತ ಹಿರಿಯ ರಾಜಕೀಯ ಮುತ್ಸದ್ಧಿಯನ್ನು ಕಳೆದುಕೊಂಡಂತಹ ಅನುಭವ ನಮಗಾಗಿದೆ.

ಡಾ: ವೈ.ನಾಗಪ್ಪನವರ ಬಗ್ಗೆ ತಾವು ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ. ಮೂರು ಬಾರಿ ವಿಧಾನಸಭೆ ಸದಸ್ಯರಾಗಿ ಸೇವೆ ಮಾಡಿರುವಂತಹ ಗೌರವ, ಮತ್ತು ದಿವಂಗತ ಶ್ರೀ ಧರ್ಮಸಿಂಗ್‌ರವರ ಸಮ್ಮಿಶ್ರ ಸರ್ಕಾರದ ಸಚಿವ ಸಂಪುಟದಲ್ಲಿ ಸಮಾಜ ಕಲ್ಯಾಣ ಸಚಿವರಾಗಿ ಮತ್ತು ಕೈಗಾರಿಕಾ ಮಂತ್ರಿಯಾಗಿ ಅವರು ಮಾಡಿರುವಂತಹ ಕೆಲಸಗಳು, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಕ್ಕೆ ಅವರು ಕೊಟ್ಟಿರುವಂತಹ ಮುಂದಾಳತ್ವ ಒಬ್ಬ ಸಜ್ಜನ ರಾಜಕಾರಣಿಯಾಗಿದ್ದ ಸನ್ಮಾನ್ಯ ಡಾ: ವೈ.ನಾಗಪ್ಪ ಅವರನ್ನು ಕಳೆದುಕೊಂಡಿದ್ದೇವೆ ಎಂದೆನಿಸುತ್ತದೆ.

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಜಿ ಕೇಂದ್ರ ಸಚಿವರಾಗಿದ್ದಂತಹ ಶ್ರೀ ಜಸ್ವಂತ್ ಸಿಂಗ್‌ರವರ ನಿಧನವನ್ನು ಉಲ್ಲೇಖ ಮಾಡಿದ್ದೀರಿ. ಕೇಂದ್ರ ರಕ್ಷಣಾ ಮಂತ್ರಿಯಾಗಿ, ಹಣಕಾಸು ಮಂತ್ರಿ, ವಿದೇಶಾಂಗ ಮಂತ್ರಿಯಾಗಿ 12ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಂತಹ ಅತ್ಯಂತ ಶ್ರೇಷ್ಠ ಲೇಖಕರಾಗಿ ಶ್ರೀ ಜಸ್ವಂತ್ ಸಿಂಗ್‌ರವರು ಕಂಡು ಬರುತ್ತಾರೆ. ಕಾರ್ಗಿಲ್ ಯುದ್ಧವೂ ಸೇರಿದಂತೆ ಅನೇಕ ಕಠಿಣ ಸಂದರ್ಭದಲ್ಲಿ ಭಾರತ ದೇಶವನ್ನು ಮುನ್ನಡೆಸಿದಂತಹ ಗೌರವಕ್ಕೆ ಅವರು ಪಾತ್ರರಾಗಿದ್ದಾರೆ. ಅತ್ಯಂತ ಶ್ರೇಷ್ಠ ಸಂಸದೀಯಪಟು, ರಾಜತಾಂತ್ರಿಕವಾಗಿ ಅನುಭವವುಳ್ಳಂತಹ ಹಿರಿಯ, ಒಬ್ಬ ದಕ್ಷ ಆಡಳಿತಗಾರರಾಗಿದ್ದಂತಹ ಶ್ರೀ ಜಸ್ವಂತ್ ಸಿಂಗ್‌ರವರನ್ನು ಕಳೆದುಕೊಂಡಿರುವುದು ಇಡೀ ರಾಷ್ಟ್ರಕ್ಕಾದಂತಹ ನಷ್ಟವೆಂದು ಭಾವಿಸಿದ್ದೇನೆ.

ಶ್ರೀ ಎಂ.ಡಿ.ಶ್ಯಾಮರಾವ್‌ರವರ ನಿಧನದ ಬಗ್ಗೆ ತಮ್ಮ ಸಂತಾಪ ಇದೆ. ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದಂತಹ, ಬಂಟ್ವಾಳ ತಾಲ್ಲೂಕಿನ ಮೂಡ ಗ್ರಾಮದಲ್ಲಿ ಜನಿಸಿದ್ದಂತಹ ಅವರು ವಿದ್ಯಾರ್ಥಿ ಜೀವನದ ದಿಸೆಯಿಂದಲೇ ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದಂತಹ ಎಂ.ಡಿ. ಶ್ಯಾಮರಾವ್‌ರವರು ನಮ್ಮ ಮುಂದೆ ಬಹಳ ಹಿರಿಯರು. ಸ್ವಾತಂತ್ರ್ಯ ಚಳುವಳಿಯಲ್ಲಿ ಅವರ ಬಂಧನವಾಗುವುದಕ್ಕಿಂತ ಮುಂಚೆ ಅವರು ಸಮಾಜದ ಮಧ್ಯೆ ಬಹಳ ಗುಪ್ತವಾಗಿದ್ದುಕೊಂಡು ಬ್ರಿಟಿಷರ ವಿರುದ್ಧ ಹೋರಾಟ ಮಾಡಿದಂತಹ ಗೌರವಕ್ಕೆ ಪಾತ್ರರಾಗಿದ್ದರು. ತಮ್ಮ ಹೋರಾಟದಲ್ಲಿ ಜೈಲು ಶಿಕ್ಷೆಯನ್ನು ಅನುಭವಿಸಿದ್ದರೆಂದು ತಾವು ಹೇಳಿದಿರಿ. ಬಹುತೇಕ ಸ್ವಾತಂತ್ರ್ಯ ಹೋರಾಟಗಾರರ ಕೊನೆಯ ಕೊಂಡಿಯಲ್ಲಿ ಒಬ್ಬರಾಗಿದ್ದಂತಹ ಶ್ರೀ ಎಂ.ಡಿ. ಶ್ಯಾಮರಾವ್‌ರವರನ್ನು ಕಳೆದುಕೊಂಡಿದ್ದು ದೇಶಕ್ಕಾದ ನಷ್ಟವೆಂದು ತಮಗೆ ಸಹಮತವನ್ನು ನೀಡುತ್ತೇನೆ.

ಶ್ರೀ ಕೊಡಗನೂರು ಜಯಕುಮಾರ್‌ರವರು ಹಿರಿಯ ರಂಗ ಕಲಾವಿದರು. ತಮ್ಮ ಅಮೋಘ ಅಭಿನಯದ ಮೂಲಕ ವೃತ್ತಿ ರಂಗಭೂಮಿಗೆ ಮತ್ತೊಬ್ಬ ‘ರಾಜ್‌ಕುಮಾರ್’ ಎಂಬ ಗೌರವಕ್ಕೆ ಪಾತ್ರರಾಗಿದ್ದರು ಎಂದು ಹೇಳಲಾಗಿದೆ. ಒಬ್ಬ ಹಿರಿಯ ನಟನನ್ನು, ಶ್ರೇಷ್ಠ ಕಲಾವಿದನನ್ನು ಕಳೆದುಕೊಂಡಂತಾಗಿದೆ ಎಂದು ಭಾವಿಸುತ್ತೇನೆ.

ಖ್ಯಾತ ಸಂಗೀತ ನಿರ್ದೇಶಕರಾಗಿದ್ದ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾಗಿದ್ದ ರಾಜನ್ ರವರು ನಿಧನರಾಗಿದ್ದಾರೆ. ಒಟ್ಟು 375ಕ್ಕೂ ಹೆಚ್ಚು ಸಿನಿಮಾಗಳಿಗೆ ಸಂಗೀತ ನಿರ್ದೇಶನ ಮಾಡಿದಂತಹ ಕೀರ್ತಿಗೆ ಅವರು ಪಾತ್ರರಾಗಿದ್ದರು. ವಿಶೇಷವಾಗಿ ಅವರು ‘ಪರಸಂಗದ ಗೆಂಡೆತಿಮ್ಮ’ ಸಿನಿಮಾದಲ್ಲಿ ಗ್ರಾಮೀಣ ಬದುಕನ್ನು ಬಿಂಬಿಸುವಂತಹ ಹಾಡನ್ನು ರಚನೆ ಮಾಡಿದ್ದಕ್ಕೋಸ್ಕರ ಅವರಿಗೆ ಅನೇಕ ಪ್ರಶಸ್ತಿಗಳು, ಗೌರವಗಳು ಮತ್ತು ಸನ್ಮಾನಗಳು ಸಿಕ್ಕಿವೆ. ಅವರ ಸಂಗೀತ ನಿರ್ದೇಶನಕ್ಕೆ ಅವರು ರಾಜ್ಯ ಪ್ರಶಸ್ತಿ ಪುರಸ್ಕೃತರಾಗಿದ್ದರು. ಒಬ್ಬ ಶ್ರೇಷ್ಠ ಸಂಗೀತ ನಿರ್ದೇಶಕರೊಬ್ಬರನ್ನು ಕಳೆದುಕೊಂಡಂತಾಗಿದೆ ಎಂದು ಭಾವಿಸುತ್ತೇನೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಡಾ:ವೈಕುಂಠರಾವ್ ಶೇಷಗಿರಿರಾವ್ ಸೋಂದೆ ಉತ್ತರ ಕನ್ನಡ ಜಿಲ್ಲೆಯ ಅರ್ಬನ್ ಬ್ಯಾಂಕಿನ ಮಾಜಿ ಅಧ್ಯಕ್ಷರಾಗಿದ್ದ ಅವರು ಅತ್ಯಂತ ಶ್ರೇಷ್ಠ ಸಹಕಾರಿಯಾಗಿ ಕೆಲಸಗಳನ್ನು ಮಾಡಿದವರು.

(ಮುಂದು)

**(962) 07–12–2020/ 12–00/ ಕೆಹೆಚ್–ಬಿಎನ್ಎಸ್**
**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದುವರೆದುದು)**

ಇವರಲ್ಲಿರುವಂತಹ ವಿಶೇಷತೆಯೇನೆಂದರೆ, ತಮ್ಮ ಇಳಿವಯಸ್ಸಿನಲ್ಲಿಯೂ ಕೂಡ ಅದ್ಭುತವಾದಂತಹ ಸ್ಮರಣಶಕ್ತಿ ಇವರಿಗೆ ಇದ್ದು, ಇವರನ್ನು ಅಸಾಧಾರಣ ಸ್ಮರಣಶಕ್ತಿಯ ಗುಡಾಣ ಎಂದು ಕರೆಯುತ್ತಿದ್ದರು. ಡಾ॥ ವೈಕುಂಠರಾವ್ ಶೇಷಗಿರಿರಾವ್ ಸೋಂದೆರವರು ರಾಜ್ಯೋತ್ಸವ ಪ್ರಶಸ್ತಿಗೂ ಪಾತ್ರರಾಗಿರುವಂತಹ ಹಿರಿಯರ ಬಗ್ಗೆ ತಾವು ಉಲ್ಲೇಖ ಮಾಡಿದ್ದೀರಿ. ಇವರ ಸಂತಾಪ ಸೂಚನೆಗೆ ನಮ್ಮೆಲ್ಲರ ಸಹಮತ ಇದೆ.

ಮಾನ್ಯ ಸಭಾಪತಿಯವರೇ, ಹಿರಿಯ ಚಿತ್ರಕಲಾವಿದರಾದ ಶ್ರೀ ಯಶವಂತ ಹಿಬಾರಿಯವರು ರಂಭಾಪುರಿ ಪೀಠದಲ್ಲಿ 50 ವರ್ಷಕ್ಕೂ ಹೆಚ್ಚಿನ ಕಾಲ ಸೇವೆಯನ್ನು ಸಲ್ಲಿಸಿದಂತಹ ಕೀರ್ತಿಗೆ ಪಾತ್ರರಾಗಿದ್ದರು ಮತ್ತು ಇವರಿಗೆ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿತ್ತು. ಇಂತಹ ಅತ್ಯಂತ ಶ್ರೇಷ್ಠ ಕಲಾವಿದರನ್ನು ಕಳೆದುಕೊಂಡಿದ್ದೇವೆ ಎಂದು ನನಗನಿಸುತ್ತದೆ.

ಮಾನ್ಯ ಸಭಾಪತಿಯವರೇ, ಮಾನ್ಯ ಶ್ಯಾಮಸುಂದರ್‌ರವರ ಬಗ್ಗೆ ಸಂತಾಪ ಸೂಚನೆಯಲ್ಲಿ ಉಲ್ಲೇಖ ಮಾಡಿದ್ದೀರಿ. ಹಿರಿಯ ಪತ್ರಕರ್ತರಾಗಿದ್ದಂತಹ ಶ್ಯಾಮಸುಂದರ್ ಅವರು 'ಕನ್ನಡಪ್ರಭ' ಮತ್ತು 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಗಳು ಸೇರಿದಂತೆ ಇನ್ನೂ ಅನೇಕ ಮಾಧ್ಯಮಗಳಲ್ಲಿ ದುಡಿದು, ಅನೇಕ ಗೌರವಗಳಿಗೆ ಪಾತ್ರರಾಗಿದ್ದಾರೆ. ರಾಜ್ಯವು ಹಿರಿಯ ಪತ್ರಕರ್ತರೊಬ್ಬರನ್ನು ಕಳೆದುಕೊಂಡಿದೆ ಎನ್ನುವ ಸಂತಾಪ ಸೂಚನೆಗೆ ನನ್ನ ಸಹಮತ ಇದೆ.

ಮಾನ್ಯ ಸಭಾಪತಿಯವರೇ, ಖ್ಯಾತ ವಯಲಿನ್ ವಾದಕರಾಗಿದ್ದ ಶ್ರೀ ಟಿ.ಎನ್.ಕೃಷ್ಣನ್‌ರವರ ಬಗ್ಗೆ ತಾವು ಉಲ್ಲೇಖ ಮಾಡಿದ್ದೀರಿ. ಅತ್ಯಂತ ಶ್ರೇಷ್ಠ ಕಲಾವಿದರಾಗಿದ್ದ ಇವರು ಮದ್ರಾಸ್ ಸಂಗೀತ ಅಕಾಡೆಮಿಯಲ್ಲಿ ವಾರ್ಷಿಕ ಮೊಗಾರ್ಜಿ ಮ್ಯೂಸಿಕ್ ಸೀಸನ್‌ನಲ್ಲಿ ತಮ್ಮ ಸಂಗೀತವನ್ನು ಪ್ರದರ್ಶಿಸಿರುವ ಕೀರ್ತಿಗೆ ಪಾತ್ರರಾಗಿದ್ದಾರೆ. ಇವರಿಗೂ ಕೂಡ ಸಂತಾಪ ಸೂಚನೆಯಲ್ಲಿ ಸಹಭಾಗಿಯಾಗಿ ಈ ಮಾತುಗಳನ್ನು ಹೇಳಬೇಕಾಗಿದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾನ್ಯ ಸಭಾಪತಿಯವರೇ, ಸಂತಾಪ ಸೂಚನೆಯಲ್ಲಿ ಮಾನ್ಯ ರವಿ ಬೆಳೆಗೆರೆಯವರ ಬಗ್ಗೆ ಉಲ್ಲೇಖ ಮಾಡಿದ್ದೀರಿ. 'ಹಾಯ್ ಬೆಂಗಳೂರು' ಪತ್ರಿಕೆ ಬರುವುದಕ್ಕಿಂತ ಮುಂಚೆ ಲಂಕೇಶ್ ಮೇಷ್ಟ್ರು 'ಲಂಕೇಶ್ ಪತ್ರಿಕೆ' ಎಂದು ಒಂದು ಪತ್ರಿಕೆಯನ್ನು ನಡೆಸುತ್ತಿದ್ದರು. ಈ ಪತ್ರಿಕೆಯನ್ನು ಜಾಣ–ಜಾಣೆಯರ ಪತ್ರಿಕೆ ಎಂದು ಕರೆಯುತ್ತಿದ್ದರು. ಸಮಾಜದಲ್ಲಿ ಪ್ರವಾಹದ ವಿರುದ್ಧ ಈಜಬಲ್ಲಂತಹ ಮಾಧ್ಯಮಗಳು ಬಹಳ ಕಡಿಮೆ. ಲಂಕೇಶ್ ಪತ್ರಿಕೆಯಲ್ಲಿ ಅನೇಕ ವಿಷಯಗಳ ಬಗ್ಗೆ ಬಹಳ ಕಠಿಣವಾಗಿ ಮಾತನಾಡುತ್ತಿದ್ದರು ಎನ್ನುವಂತಹ ಮಾತುಗಳು ಕೇಳಿ ಬರುತ್ತಿದ್ದವು. ಮಾನ್ಯ ರಾಮಕೃಷ್ಣ ಹೆಗಡೆಯವರು ಮಾನ್ಯ ಮುಖ್ಯಮಂತ್ರಿಯಾಗಿದ್ದಾಗ 'ಲಂಕೇಶ್ ಪತ್ರಿಕೆ'ಯಲ್ಲಿ ಹೇಳಿರುವಂತಹ ವಿಚಾರಗಳ ಬಗ್ಗೆ ಹೆಚ್ಚು ಚರ್ಚೆಗೆ ಬರುತ್ತಿದ್ದವು. ಅಂತಹ 'ಲಂಕೇಶ್ ಪತ್ರಿಕೆ'ಗೆ ಸರಿಗಟ್ಟುವುದಕ್ಕೆ 'ಹಾಯ್ ಬೆಂಗಳೂರು' ಎನ್ನುವಂತಹ ಮತ್ತೊಂದು ಪತ್ರಿಕೆ ಬಂದಿತು. 'ಹಾಯ್ ಬೆಂಗಳೂರು' ಪತ್ರಿಕೆಯ ಸಂಪಾದಕರಾದ ಮಾನ್ಯ ರವಿ ಬೆಳೆಗೆರೆಯವರನ್ನು ನಾವು ಒಪ್ಪಬಹುದು ಅಥವಾ ಒಪ್ಪದೇ ಇರಬಹುದು. ಆದರೆ ಅವರ ಬರಹ ಅತ್ಯಂತ ಹುಸಿರಿ ಕೆಲಸದ ಬರಹವಾಗಿತ್ತು. ಮೇಜರ್ ದಳ್ವಿಯವರು ಬರೆದಿರುವಂತಹ ಹಿಮಾಲಯನ್ ಬ್ಲಂಡರ್ ಅನ್ನು ಮಾನ್ಯ ರವಿ ಬೆಳೆಗೆರೆಯವರು ಕನ್ನಡಕ್ಕೆ ತರ್ಜುಮೆ ಮಾಡಿದ್ದಾರೆ. ಅದು ಇವತ್ತಿಗೂ ಕೂಡ ಮನೆ ಮಾತಾಗಿರುವಂತಹ ಪುಸ್ತಕವಾಗಿದೆ. ಚೀನಾ ಗಡಿಯಲ್ಲಿ ಭಾರತ ಯುದ್ಧ ಮಾಡುವಂತಹ ಸಂದರ್ಭದಲ್ಲಿ ದಳ್ವಿ ಎನ್ನುವಂತಹ ಒಬ್ಬ ಮೇಜರ್ ಬರೆದಿರುವಂತಹ ತನ್ನ ಅನುಭವಗಳನ್ನು ಮತ್ತು ಕಥನಗಳನ್ನು ಬಿಚ್ಚಿಕೊಳ್ಳುತ್ತಾ ಆತ ಹೇಳಿರುವಂತಹ ಮಾತುಗಳನ್ನು ಕನ್ನಡದಲ್ಲಿ ಭಾಷಾಂತರಗೊಳಿಸಿ ಒಂದು ಪುಸ್ತಕವನ್ನು ಮಾಡಿದ್ದು, ಈ ಪುಸ್ತಕ ಇವತ್ತಿಗೂ ಕೂಡ ಎಲ್ಲರೂ ಓದುವಂತಹ ಪುಸ್ತಕ ಎಂದು ನಾವು ಅಂದುಕೊಂಡಿದ್ದೇವೆ. ಹಾಗಾಗಿ ಅವರ ಬಗ್ಗೆ ಟೀಕೆ ಮಾಡುವುದು, ಟಿಪ್ಪಣಿ ಮಾಡುವುದು ಸಮರ್ಥನೆ ಮಾಡುವುದು ಮತ್ತು ಪ್ರತಿಪಾದನೆ ಮಾಡುವುದು ಇರಬಹುದು. ಆದರೆ ಬಹುತೇಕ ಸಮಾಜದಲ್ಲಿ ಮಾನ್ಯ ರವಿ ಬೆಳೆಗೆರೆಯವರನ್ನು ಒಪ್ಪಬಹುದು, ಒಪ್ಪದೇ ಇರಬಹುದು. ಅವರು ಒಬ್ಬ ಶ್ರೇಷ್ಠ ಬರಹಗಾರ ಎನ್ನುವಂತಹ ಮಾತಿಗೆ ಎರಡು ಮಾತಿಲ್ಲ ಎಂದು ನನಗನಿಸುತ್ತದೆ.

ಈ ಸಂದರ್ಭದಲ್ಲಿ ಒಂದು ಮಾತನ್ನು ಉಲ್ಲೇಖ ಮಾಡಬೇಕೆಂದು ನನಗನಿಸುತ್ತಿದೆ. ಪತ್ರಕರ್ತನೊಬ್ಬ ಎಷ್ಟು ಯಶಸ್ವಿಯಾಗಬಲ್ಲ ಎಂದು ಹೇಳಿದರೆ ಕಾರ್ಗಿಲ್ ಯುದ್ಧದ ನೆಲಕ್ಕೆ ಹೋಗಿ ವರದಿಯನ್ನು ಮಾಡುತ್ತಾರೆ. ಗುಜರಾತ್‌ನ ಭೂಕಂಪದ ಸ್ಥಳಕ್ಕೆ ಹೋಗಿ ವರದಿಯನ್ನು ಮಾಡುತ್ತಾರೆ. ಆಫ್ಘಾನಿಸ್ಥಾನದ ಯುದ್ಧ ಭೂಮಿಯನ್ನು ಸಂದರ್ಶನ ಮಾಡುತ್ತಾರೆ. ಪುಲ್ವಾಮಾಕ್ಕೆ ಭೇಟಿ ಕೊಡುತ್ತೇನೆ ಎಂದು ಹೇಳುತ್ತಾರೆ. ರವಿ ಬೆಳೆಗೆರೆಯವರಿಗೆ ವಸ್ತುನಿಷ್ಠ ವರದಿಯನ್ನು ಪ್ರಕಟಿಸುವಂತಹ ಒಂದು ಧೈರ್ಯ ಅವರಲ್ಲಿತ್ತು ಎಂದು ನನಗನಿಸುತ್ತದೆ. ಈ 13 ಜನ ಸಮಾಜದ ಗಣ್ಯರ ಬಗ್ಗೆ, ಶ್ರೇಷ್ಠ ರಾಜಕಾರಣಿಗಳು, ಜನಪ್ರತಿನಿಧಿಗಳು, ಸ್ವಾತಂತ್ರ ಹೋರಾಟಗಾರರು, ಕಲಾವಿದರು ಮತ್ತು ಲೇಖಕರ ಬಗ್ಗೆ ಇವತ್ತಿನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ. ಇದಕ್ಕೆ ಸರ್ಕಾರದ ಪರವಾಗಿ ಈ ಸಂತಾಪ ಸೂಚನೆಗೆ ಸಹಮತವನ್ನು ಸೂಚಿಸುತ್ತಾ, ಮೃತರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ಕರುಣಿಸಲಿ ಎಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ಮಂಡಿಸಿರುವಂತಹ ಸಂತಾಪ ಸೂಚನೆಯ ಗೊತ್ತುವಳಿಗೆ ಬೆಂಬಲಿಸಿ ಕೆಲವೊಂದು ಮಾತುಗಳನ್ನು ತಮ್ಮ ಮಾತುಗಳ ಜೊತೆ ಜೋಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಹಾಲಿ ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವರಾಗಿದ್ದಂತಹ ರಾಮ್ ವಿಲಾಸ್ ಪಾಸ್ವಾನ್‌ರವರು ನಮ್ಮೆಲ್ಲರನ್ನೂ ಅಗಲಿದ್ದು, ರಾಷ್ಟ್ರದ ಸಾರ್ವಜನಿಕರ ಬದುಕು ಬರಡಾಗಿದೆ ಎಂದು ಹೇಳಬಹುದು ಅಥವಾ ಶೋಷಿತ ವರ್ಗದ ಧ್ವನಿ ಅಡಗಿದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ವ್ಯಕ್ತಮಾಡುವುದಕ್ಕೆ ಬಯಸುತ್ತೇನೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಎಂಬ ಮೂರು ಅಂಗಗಳಿದ್ದು, ಇದರಲ್ಲಿ ಕಾರ್ಯಾಂಗಕ್ಕಿಂತ ಹೆಚ್ಚು ಶಾಸಕಾಂಗವನ್ನು ಇವರು ಇಷ್ಟಪಟ್ಟು, ಡಿವೈ.ಎಸ್.ಪಿ., ಹುದ್ದೆಗೆ ಆಯ್ಕೆಯಾಗಿದ್ದರೂ, ಸರ್ಕಾರಿ ಸೇವೆಯಲ್ಲಿ ಇರಲಾರದೇ ಸಾರ್ವಜನಿಕ ಬದುಕನ್ನು ಪ್ರವೇಶ ಮಾಡಿ, ಸಾರ್ವಜನಿಕ ಬದುಕಿನಲ್ಲಿ ಅದ್ಭುತವಾದ ಸಾಧನೆಯನ್ನು ಮಾಡಿದಂತಹವರು. ಇವರು ಅಂದಾಜು 50 ವರ್ಷಕ್ಕಿಂತ ಹೆಚ್ಚು ಕಾಲ ಸಾರ್ವಜನಿಕ ಬದುಕಿನಲ್ಲಿ ಇದ್ದು, ಕೇವಲ ರಾಜ್ಯ ಅಷ್ಟೇ ಅಲ್ಲದೇ, ಇಡೀ ರಾಷ್ಟ್ರದ ಗಮನವನ್ನು ಸೆಳೆದಂತಹ ಅತ್ಯಂತ ಶ್ರೇಷ್ಠ ನಾಯಕರಾಗಿದ್ದಾರೆ. ನಿನ್ನೆ ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ರವರನ್ನು ರಾಷ್ಟ್ರದ ಉದ್ದಗಲ್ಲಕ್ಕೂ ನಾವೆಲ್ಲರೂ ನೆನಪಿಸಿಕೊಳ್ಳುತ್ತಿದ್ದೇವೆ. ಅವರು ಹಾಕಿಕೊಟ್ಟಿರುವಂತಹ ಮಾರ್ಗದಲ್ಲಿ ಇವರು ಮುನ್ನಡೆದು ಧ್ವನಿ ಇಲ್ಲದವರಿಗೆ ಧ್ವನಿ ಕೊಟ್ಟಂತಹ ಕೀರ್ತಿಗೆ ಭಾಜನರಾದವರು ಎಂದು ಹೇಳುವುದಕ್ಕೆ ನಾನು ಬಯಸುತ್ತೇನೆ. ಅನೇಕ ಪ್ರಧಾನ ಮಂತ್ರಿಗಳ ಕೆಳಗೆ ಇವರು ಬಹಳಷ್ಟು ಪ್ರಮುಖ ಖಾತೆಗಳನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸಿದ್ದಾರೆ. ಇವರು 9 ಬಾರಿ ಲೋಕಸಭಾ ಸದಸ್ಯರಾಗಿ, 2 ಬಾರಿ ರಾಜ್ಯಸಭಾ ಸದಸ್ಯರಾಗಿ ಸೇವೆ ಸಲ್ಲಿಸುವುದರ ಜೊತೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದವರು, ಹಾಗೆಯೇ ಶತ ಶತಮಾನಗಳಿಂದ ತುಳಿತಕ್ಕೆ ಒಳಗಾದಂತಹ ಜನಾಂಗದ ಅಭ್ಯುದಯಕ್ಕಾಗಿ, ಏಳಿಗೆಗಾಗಿ, ಶ್ರೇಯೋಭಿವೃದ್ಧಿಗಾಗಿ ಬಹಳಷ್ಟು ಪ್ರಾಮಾಣಿಕವಾದಂತಹ ಸೇವೆ ಸಲ್ಲಿಸಿದ್ದಾರೆ. ಅಷ್ಟೇ ಅಲ್ಲದೇ ಇವರು ಈಗಾಗಲೇ ನಮ್ಮ ಮಾನ್ಯ ಸಭಾನಾಯಕರು ಹೇಳಿದ ಹಾಗೆ ಪ್ರಥಮ ಬಾರಿಗೆ ದೇಶದಲ್ಲಿ ಕಾಂಗ್ರೆಸ್‌ಯೇತರ ಸರ್ಕಾರ ಬಂದಾಗ ಅತ್ಯಧಿಕ ಮತಗಳ ಅಂತರದಿಂದ ಇವರು ಜಯಶಾಲಿಗಳಾಗಿದ್ದನ್ನು ಕೂಡ ನೆನಪಿಸಿಕೊಳ್ಳುವುದಕ್ಕೆ ನಾನು ಬಯಸುತ್ತೇನೆ. ಇಂತಹ ಒಬ್ಬ ಮಹಾನಾಯಕನ ಕಣ್ಮರೆ ಬಹುತರವಾಗಿ ಶೋಷಿತ ವರ್ಗದ,

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಧ್ವನಿ ಇಲ್ಲದ ವರ್ಗದ ಒಬ್ಬ ಶ್ರೇಷ್ಠ ನಾಯಕನನ್ನು ಕಳೆದುಕೊಂಡಂತಾಗಿದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುವುದಕ್ಕೆ ಬಯಸುತ್ತೇನೆ.

ಶ್ರೀ ಜೆ.ಶ್ರೀನಿವಾಸ ರೆಡ್ಡಿರವರ ಬಗ್ಗೆ ಸಂತಾಪ ಸೂಚನೆಯಲ್ಲಿ ತಾವು ಪ್ರಸ್ತಾಪ ಮಾಡಿದ್ದೀರಿ. ಇವರು ಒಂದು ಬಾರಿ ಕೆಳಮನೆ ಸದಸ್ಯರಾಗಿ, ಎರಡು ಬಾರಿ ಮೇಲ್ಮನೆ ಸದಸ್ಯರಾಗಿ ಬಹಳ ಅತ್ಯುತ್ತಮವಾದಂತಹ ಸೇವೆ ಸಲ್ಲಿಸಿರುವುದಷ್ಟೇ ಅಲ್ಲದೇ, ಇವರು ಮಾಡಲ್ ಎಜ್ಯುಕೇಷನ್ ಸೊಸೈಟಿ ವಿದ್ಯಾಸಂಸ್ಥೆಯ ಸಂಸ್ಥಾಪಕ ಸದಸ್ಯರಾಗಿ, ಶಿಕ್ಷಣ ಪ್ರೇಮಿಯಾಗಿ, ಮುನಿಸ್ವಾಮಪ್ಪ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾಗಿ ಬಹಳ ಅತ್ಯುತ್ತಮವಾದಂತಹ ಕೆಲಸವನ್ನು ಮಾಡಿದ್ದಾರೆ. ಶ್ರೀಯುತರು ಸಹಕಾರ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಉನ್ನತಿಗಾಗಿ ಬಹಳ ಶ್ರೇಷ್ಠವಾದಂತಹ ಕೆಲಸ ಮಾಡಿದ್ದಾರೆ. ಇಂತಹ ಒಬ್ಬ ಹಿರಿಯ ರಾಜಕಾರಣಿಯನ್ನು ನಮ್ಮ ನಾಡು ಕಳೆದುಕೊಂಡಿದೆ ಎನ್ನುವ ಮಾತನ್ನು ವ್ಯಕ್ತಪಡಿಸುವುದಕ್ಕೆ ಬಯಸುತ್ತೇನೆ.

ಶ್ರೀ ಕೆ.ಮಲ್ಲಪ್ಪರವರು ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ಸದಸ್ಯರಾಗಿದ್ದು, ಇವರು ಎರಡು ಬಾರಿ ಕೆಳಮನೆಯ ಸದಸ್ಯರಾಗಿದ್ದು, ಮೊನ್ನೆ ಈ ಸದನದ ಸದಸ್ಯರಾಗಿದ್ದರು ಎಂದು ಹೇಳುವುದಕ್ಕೆ ಬಯಸುತ್ತೇನೆ. ಇವರು ಬಯಲು ಸೀಮೆಯ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ, ಹಿರಿಯ ಸ್ವಾತಂತ್ರ್ಯ ಚಳುವಳಿ ಹಾಗೂ ಗೋವಾ ವಿಮೋಚನಾ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದಂತಹವರು. ಕ್ರೀಡೆಯಲ್ಲಿ ಅಪಾರ ಆಸಕ್ತಿ ಹೊಂದಿರುವಂತಹವರು. ಇವರ ನಿಧನ ಒಬ್ಬ ಶ್ರೇಷ್ಠ ರಾಜಕಾರಣಿ, ಕ್ರೀಡಾಪಟುವನ್ನು ಕಳೆದುಕೊಂಡಂತಾಗಿದೆ ಎನ್ನುವ ಮಾತನ್ನು ವ್ಯಕ್ತಪಡಿಸುವುದಕ್ಕೆ ಬಯಸುತ್ತೇನೆ.

ಡಾ॥ ವೈ.ನಾಗಪ್ಪ ಇವರು ವೃತ್ತಿಯಿಂದ ವೈದ್ಯರಾಗಿದ್ದು, ಪ್ರವೃತ್ತಿಯಿಂದ ರಾಜಕಾರಣಿಗಳು ಆಗಿದ್ದರು. ದಾವಣಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಹೃದ್ರೋಗ ತಜ್ಞರಾಗಿ ಕೆಲಸ ಮಾಡುತ್ತಿದ್ದರು. ಇವರು ವೈದ್ಯಕೀಯ ವೃತ್ತಿಯಿಂದ ರಾಜಕಾರಣದ ಕಡೆಗೆ ಮನಸ್ಸು ಮಾಡಿ, ಇವರು ಅತ್ಯುತ್ತಮ ಶಾಸಕರಾಗಿ, ದಿವಂಗತ ಧರ್ಮಸಿಂಗ್‌ರವರ ಸಮ್ಮಿಶ್ರ ಸರ್ಕಾರದಲ್ಲಿ ಸಚಿವರಾಗಿ ಬಹಳಷ್ಟು ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಈ ಸಂದರ್ಭದಲ್ಲಿ ಒಬ್ಬ ಶ್ರೇಷ್ಠ ವೈದ್ಯ ರಾಜಕಾರಣಿಯನ್ನು ಕಳೆದುಕೊಂಡಂತಹ ಭಾವನೆ ನಮಗಾಗಿದೆ.

ಮಾಜಿ ಕೇಂದ್ರ ಸಚಿವರಾದ ಜಸ್ವಂತ್ ಸಿಂಗ್‌ರವರ ನಿಧನ ಇಡೀ ರಾಷ್ಟ್ರಕ್ಕೆ ಆಘಾತವಾಗುವಂತಹ ನಿಧನ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. 5 ಬಾರಿ ರಾಜ್ಯಸಭಾ ಸದಸ್ಯರಾಗಿ, 4 ಬಾರಿ ಲೋಕಸಭಾ ಸದಸ್ಯರಾಗಿ ಅತ್ಯುತ್ತಮ ಕೆಲಸ ಮಾಡಿದ್ದಾರೆ. ರಕ್ಷಣೆ, ಹಣಕಾಸು ಹಾಗೂ ವಿದೇಶಾಂಗ ವ್ಯವಹಾರಗಳ ಸಚಿವರಾಗಿ ಅತ್ಯಂತ ಮಹತ್ವದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖಾತೆಗಳನ್ನು ಅತ್ಯಂತ ಸಮರ್ಪಕವಾಗಿ, ಲೀಲಾಜಾಲವಾಗಿ ನಿರ್ವಹಿಸಿದ್ದಾರೆ. ಕೊನೆ ಕೊನೆಯಲ್ಲಿ ಅವರ ಬಗ್ಗೆ ಬಹಳಷ್ಟು ನೋಡಿದ್ದೆ. ಕೊನೆ ಕೊನೆಗೆ ಅವರು ನಿರೀಕ್ಷಿಸಿದಷ್ಟು ಬೆಂಬಲ ದೊರೆಯಲಿಲ್ಲ ಎನ್ನುವ ಭಾವನೆ ವೈಯಕ್ತಿಕವಾಗಿ ನನಗನಿಸುತ್ತಿದೆ. ಇವರು ಭಾರತ–ಪಾಕಿಸ್ಥಾನ ನಡುವಿನ ಕಾರ್ಗಿಲ್ ಯುದ್ಧದಲ್ಲಿ ಬಹಳ ಪರಿಣಾಮಕಾರಿಯಾಗಿ ಭಾಗವಹಿಸಿದಂತಹವರು. Bofors Gun ಮುಖಾಂತರ ಭಾರತ ಕಾರ್ಗಿಲ್ ಯುದ್ಧದಲ್ಲಿ ಜಯಶಾಲಿಯಾಗುವುದಕ್ಕೆ ಇವರ ಪಾತ್ರ ಇದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ವ್ಯಕ್ತ ಮಾಡುತ್ತೇನೆ.

(ಮುಂದು)

**(963) 07.12.2020 ಎಸ್‌ಪಿಆರ್/ಬಿಎನ್‌ಎಸ್ 12.10**
**ಶ್ರೀ ಎಸ್.ಆರ್.ಪಾಟೀಲ್**(ಮುಂದುವರೆದುದು)

ಈ ದೇಶದ ಅತ್ಯುನ್ನತ ಶಕ್ತಿ ಸ್ಥಳವಾದ ಸಂಸತ್ತಿನ ಮೇಲೆ ನಡೆದ ಉಗ್ರರ ದಾಳಿ ಹಾಗೂ ನಮ್ಮ ರಾಷ್ಟ್ರವನ್ನು ಅಣ್ವಸ್ತ್ರ ರಾಷ್ಟ್ರವನ್ನಾಗಿ ಪರಿವರ್ತನೆ ಮಾಡುವಂತಹ ಅತ್ಯಂತ ಮಹತ್ವವಾದ ಪೋಕ್ರಾನ್‌ನಲ್ಲಿ ನಡೆಸಿದ ಅಣ್ವಸ್ತ್ರ ಪ್ರಯೋಗವನ್ನು ಯಶಸ್ವಿಯಾಗಿ ನಿಭಾಯಿಸಲು ದಿವಂಗತರು ಸಹಕರಿಸಿದ್ದಾರೆ. ಇಂತಹ ಒಳ್ಳೆಯ ಸಂಸದೀಯ ಪಟು, ರಾಷ್ಟ್ರಪ್ರೇಮಿಯನ್ನು ನಾವು ಕಳೆದು ಕೊಂಡಂತಹ ಅನಾಥ ಪ್ರಜ್ಞೆಯು ನಮ್ಮನ್ನು ಕಾಡುತ್ತಿದೆ.

ದಿವಂಗತ ಎಂ.ಡಿ.ಶ್ಯಾಮರಾವ್‌ರವರು ಅತ್ಯಂತ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಅವರ ನಿಧನದಿಂದಾಗಿ ರಾಷ್ಟ್ರಪಿತ ಮಹಾತ್ಮಾ ಗಾಂಧೀಯವರ ಕೊನೆಯ ಕೊಂಡಿ ಕಳಚಿದೆ ಎನ್ನುವ ಭಾವನೆ ನಮಗಾಗುತ್ತಿದೆ. ಶ್ರೀಯುತರು ಚಿಕ್ಕವರಾಗಿದ್ದಾಗಲೇ ರಾಷ್ಟ್ರಪಿತರವರಿಂದ ಆಕರ್ಷಿತರಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸುವುದರ ಜೊತೆಗೆ ‘ಗೆರಿಲ್ಲಾ’ ಮಾದರಿ ಯುದ್ಧದ ಅಂತಹರೆ ಗುಪ್ತವಾಗಿದ್ದುಕೊಂಡು ಬ್ರಿಟಿಷರ ದೂರವಾಣಿ ಸಂಪರ್ಕ ಕಡಿತಗೊಳಿಸಿ, ಭೂಗತವಾಗಿದ್ದ ಸ್ವಾತಂತ್ರ್ಯ ಚಳುವಳಿಗಾರರಿಗೆ ಗುಪ್ತ ಮಾಹಿತಿ ನೀಡುವಂತಹ ಅತ್ಯಂತ ಕಷ್ಟದ ಕೆಲಸದಲ್ಲಿ ಯಶಸ್ವಿಯಾಗಿದ್ದರು ಹಾಗೂ ಆ ಮೂಲಕ ಬ್ರಿಟಿಷರಿಗೆ ಚಳ್ಳೆಹಣ್ಣನ್ನು ತಿನ್ನಿಸಿದ್ದರು. ಅಂತಹ ಸ್ವಾತಂತ್ರ ಹೋರಾಟದಲ್ಲಿ ಜೈಲು ಶಿಕ್ಷೆಯನ್ನೂ ಸಹ ಅನುಭವಿಸಿದ್ದರು. ಇವರ ನಿಧನದಿಂದಾಗಿ ದೇಶವು ಒಬ್ಬ ಹಿರಿಯ ಸ್ವಾತಂತ್ರ ಹೋರಾಟಗಾರರನ್ನು ಕಳೆದುಕೊಂಡು ಅನಾಥವಾಗಿದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ದಿವಂಗತ ಕೊಡಗನೂರು ಜಯಕುಮಾರ್‌ರವರು ಹಿರಿಯ, ಅತ್ಯಂತ ಶ್ರೇಷ್ಠ ರಂಗಕಲಾವಿದರಾಗಿದ್ದರು. ಶ್ರೀಯುತರು ವೃತ್ತಿರಂಗಭೂಮಿಯಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸುವ ಮೂಲಕ ವೃತ್ತಿರಂಗ ಭೂಮಿಯ ರಾಜ್‌ಕುಮಾರ್ ಎಂದೇ ಪ್ರಸಿದ್ಧರಾಗಿದ್ದರು. ಇವರು 50ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ಅಭಿನಯಿಸಿ, ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದರು. ಇವರ ನಿಧನದಿಂದಾಗಿ ಒಬ್ಬ ಶ್ರೇಷ್ಠ ವೃತ್ತಿರಂಗಭೂಮಿ ಕಲಾವಿದರನ್ನು ಕಳೆದುಕೊಂಡ ಅನುಭವ ನಮಗಾಗಿದೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ದಿವಂಗತ ರಾಜನ್‌ರವರ ಬಗ್ಗೆ ಸಂತಾಪ ಸೂಚನೆಯಲ್ಲಿ ಪ್ರಸ್ತಾಪಿಸಲಾಗಿದೆ. ಇವರು ಖ್ಯಾತ ಸಂಗೀತ ನಿರ್ದೇಶಕರಾಗಿದ್ದರು. ಶ್ರೀಯುತರು ಕೇವಲ ಕನ್ನಡ ಚಿತ್ರರಂಗ ಮಾತ್ರವಲ್ಲದೇ ತಮಿಳು, ತೆಲುಗು, ಮಲಯಾಳಂ, ಹಿಂದಿ, ತುಳು ಹಾಗೂ ಶ್ರೀಲಂಕಾದ ಸಿಂಹಳಿ ಭಾಷೆ ಸೇರಿದಂತೆ ಒಟ್ಟು 375ಕ್ಕೂ ಹೆಚ್ಚು ಸಿನಿಮಾಗಳಿಗೆ ಸಂಗೀತ ನಿರ್ದೇಶನ ನೀಡಿದ ಕೀರ್ತಿಗೆ ಭಾಜನರಾಗಿದ್ದಾರೆ. ಇವರ ನಿಧನದಿಂದ ರಾಜ್ಯವು ಅತ್ಯಂತ ಪ್ರತಿಭಾವಂತ, ಶ್ರೇಷ್ಠ ಸಂಗೀತ ನಿರ್ದೇಶಕರನ್ನು ಕಳೆದುಕೊಂಡ ಅನುಭವ ನಮಗಾಗಿದೆ.

ಡಾ॥ ವೈಕುಂಠರಾವ್ ಶೇಷಗಿರಿರಾವ್ ಸೋಂದೆರವರು ಉತ್ತರ ಕನ್ನಡ ಜಿಲ್ಲೆಯ ಪಟ್ಟಣ ಬ್ಯಾಂಕಿನ ಮಾಜಿ ಅಧ್ಯಕ್ಷರಾಗಿ, ಸಹಕಾರಿ ಕ್ಷೇತ್ರದಲ್ಲಿ ಬಹಳ ಅತ್ಯುತ್ತಮ ಕೆಲಸ ನಿರ್ವಹಿಸಿದ್ದಾರೆ. ಇವರು ಅಘಾದವಾದ ಸ್ಮರಣ ಶಕ್ತಿಯನ್ನು ಹೊಂದಿದ್ದರು, ಇದು ಇವರಲ್ಲಿದ್ದ ವಿಶೇಷತೆಯಾಗಿತ್ತು. ಇದು ಎಲ್ಲರಲ್ಲಿ ಇರುವುದಿಲ್ಲ. ಯಾರನ್ನೇ ಆಗಲಿ ಒಂದು ಬಾರಿ ನೋಡಿದರೆ, ಅವರನ್ನು ತಕ್ಷಣ ಗುರ್ತಿಸುತ್ತಿದ್ದರು. ಶ್ರೀಯುತರು ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ಧರ್ಮಸಿಂಗ್‌ರವರ ಅಧಿಕಾರಾವಧಿಯಲ್ಲಿ ಅವರಿಗೆ ಆಡಳಿತದಲ್ಲಿ ಸಹಾಯ ಮಾಡಿದ್ದರು. ಹೀಗಾಗಿ ಈ ಸಂದರ್ಭದಲ್ಲಿ ನನಗೆ ರಾಜ್ಯದ ಮಾಜಿ ಮುಖ್ಯಮಂತ್ರಿಗಳು ದಿವಂಗತ ಧರ್ಮಸಿಂಗ್‌ರವರು ನೆನಪಿಗೆ ಬರುತ್ತಾರೆ. ದಿವಂಗತರು ತಮ್ಮ ಹುಟ್ಟೂರು ನೆಲೋಗಿ ಗ್ರಾಮದಿಂದ ಹಿಡಿದು ರಾಷ್ಟ್ರ ರಾಜಧಾನಿ ದಿಲ್ಲಿಯವರೆಗೆ ಅವರ ಸಂಪರ್ಕಕ್ಕೆ ಬಂದಿದ್ದ ಆಪ್ತ ಸಹಾಯಕ, ಆಪ್ತ ಕಾರ್ಯದರ್ಶಿ ಇವರುಗಳೆಲ್ಲರ ಮೊಬೈಲ್ ದೂರವಾಣಿ ಸಂಪರ್ಕ ಸಂಖ್ಯೆಯನ್ನು ಸ್ವತಃ ಇವರೇ ನೆನಪಿನಲ್ಲಿಟ್ಟುಕೊಂಡು ಹೇಳುತ್ತಿದ್ದರು. ನನಗೆ ತಿಳಿದಂತೆ ಶ್ರೀಯುತರು ಅಂದಾಜು ಹತ್ತು ಸಾವಿರ ಮೊಬೈಲ್ ಸಂಪರ್ಕ ಸಂಖ್ಯೆಗಳನ್ನು ನೆನಪಿನಲ್ಲಿಟ್ಟುಕೊಳ್ಳುವಂತಹ ಅಘಾದವಾದ ಸ್ಮರಣ ಶಕ್ತಿಯನ್ನು ಹೊಂದಿದ್ದು, ನಮ್ಮಗಳ ಮಧ್ಯದಲ್ಲಿಯೇ ಇದ್ದರು. ಇಂತಹ ಅಘಾದವಾದ ಸ್ಮರಣ ಶಕ್ತಿ ಶ್ರೀಯುತರಿಗೆ ಇತ್ತು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಯಸುತ್ತೇನೆ. ಅವರ ಅಸಾಧಾರಣ ಸ್ಮರಣಶಕ್ತಿಯ ಪ್ರತಿಭೆಯಿಂದಾಗಿ ರಾಜ್ಯೋತ್ಸವ ಪ್ರಶಸ್ತಿಗೆ ಇವರು ಭಾಜನರಾಗಿದ್ದರು. ಬಹಳಷ್ಟು ಜನರಿಗೆ ನೆನಪಿನ ಶಕ್ತಿ ಇರುವುದಿಲ್ಲ. ಸಾರ್ವಜನಿಕ ಬದುಕಿನಲ್ಲಿರುವ ನಾವು ಒಬ್ಬ ವ್ಯಕ್ತಿಯನ್ನು ಒಂದು ನೂರು ಬಾರಿ ಭೇಟಿಯಾದರೂ ಸಹ ಅವರನ್ನು 'ನೀವು ಯಾರು' ಎಂದು ಕೇಳುವ ಪರಿಸ್ಥಿತಿ ಇರುತ್ತದೆ. ಆದರೆ ಶ್ರೀಯುತರು ಯಾವುದೇ ವ್ಯಕ್ತಿಯನ್ನು ಒಂದು ಬಾರಿ ನೋಡಿದರೆ, ಅವರನ್ನು ಹೆಸರಿನಿಂದಲೇ ಸಂಬೋಧಿಸುತ್ತಿದ್ದರು. ಆದರೆ ನಮ್ಮನ್ನು ಯಾರು ಭೇಟಿ ಮಾಡುತ್ತಾರೋ ಅವರೇ ನಮ್ಮನ್ನು ಹಲವಾರು ಭೇಟಿ ಮಾಡಿದರೂ ಸಹ ನಾವು ಅವರ ಹೆಸರನ್ನು ಕೇಳುತ್ತೇವೆ. ಇದರಿಂದಾಗಿ ನಮ್ಮನ್ನು ಭೇಟಿ ಮಾಡಿದವರು 'ನಾವು ಇವರನ್ನು ಎಷ್ಟು ಸಲ ಭೇಟಿ ಮಾಡಿ, ನಮ್ಮ ಪರಿಚಯವನ್ನು ಮಾಡಿಕೊಂಡಿದ್ದೇವೆ; ಆದರೂ ಸಹ ನಮ್ಮ ಹೆಸರನ್ನು ಮತ್ತೊಮ್ಮೆ ಕೇಳುತ್ತಾರೆ' ಎನ್ನುವ ಮಾತುಗಳನ್ನು ನಾವು ನಮ್ಮ ವೃತ್ತಿ ಬದುಕಿನಲ್ಲಿ ಕೇಳಿದ್ದೇವೆ. ಅತೀ ಹೆಚ್ಚು ಜನಪ್ರಿಯ ರಾಜಕಾರಣಿಗಳಾದ ಇವರು ಒಮ್ಮೆ ನೋಡಿದರೆ ಸಾಕು ಅವರನ್ನು ನೆನಪಿನಲ್ಲಿಟ್ಟುಕೊಳ್ಳುವಂತಹ ಅಸಾಧಾರಣ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಮರಣಶಕ್ತಿಯನ್ನು ಹೊಂದಿದ್ದರು. ಅವರ ಅಗಲಿಕೆಯಿಂದಾಗಿ ಒಬ್ಬ ವಿಶೇಷ ಪ್ರತಿಭಾನ್ವಿತ ವ್ಯಕ್ತಿಯನ್ನು ಕಳೆದುಕೊಂಡ ಭಾವನೆ ನಮಗಾಗಿದೆ.

ಶ್ರೀಯುತ ಯಶವಂತ ಹಿಬಾರಿಯವರು ಹಿರಿಯ ಚಿತ್ರಕಲಾವಿದರಾಗಿದ್ದರು. ಮಹಂತರ ಮಠದ ವಿದ್ಯಾರ್ಥಿಯಾಗಿದ್ದ ಶ್ರೀಯುತರು ರಂಭಾಪುರಿ ಪೀಠದಲ್ಲಿ ಐದು ದಶಕಗಳ ಕಾಲಕ್ಕೂ ಹೆಚ್ಚಿನ ಸೇವೆ ಸಲ್ಲಿಸಿದ್ದರು. ಇವರು ಅಂತರರಾಷ್ಟ್ರೀಯ ಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿ, ಚಿತ್ರಕಲಾ ಕ್ಷೇತ್ರಕ್ಕೆ ತಮ್ಮ ಅಭೂತಪೂರ್ವವಾದ ಕೊಡುಗೆ ನೀಡಿದ್ದನ್ನು ಪರಿಗಣಿಸಿ, ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಲಾಗಿದೆ. ಇಂತಹ ಪ್ರತಿಭಾವಂತ ಹಾಗೂ ಪ್ರಶ್ನಾತೀತ ಚಿತ್ರಕಲಾವಿದರೊಬ್ಬರನ್ನು ನಾವು ಕಳೆದುಕೊಂಡಂತಾಗಿದೆ ಹಾಗೂ ಚಿತ್ರಕಲಾ ರಂಗ ಇವತ್ತಿನ ದಿವಸ ಅನಾಥವಾಗಿದೆ ಎಂದು ಹೇಳಲು ಬಯಸುತ್ತೇನೆ.

ದಿವಂಗತ ಶ್ಯಾಮಸುಂದರ್‌ರವರು ಹಿರಿಯ ಪತ್ರಕರ್ತರಾಗಿದ್ದರು. 'ದಿ ಹಿಂದು' ಪತ್ರಿಕೆಯ ಹಾಸನ ಜಿಲ್ಲಾ ವರದಿಗಾರರಾಗಿ ಸೇವೆ ಸಲ್ಲಿಸಿದ್ದರಲ್ಲದೇ, ಅತ್ಯಂತ ಪ್ರಮುಖ ಹಾಗೂ ಹೆಚ್ಚು ವಿತರಣೆಕೆಯಲ್ಲಿರುವ 'ಇಂಡಿಯನ್ ಎಕ್ಸ್‌ಪ್ರೆಸ್' ಮತ್ತು 'ಕನ್ನಡ ಪ್ರಭ' ದಿನಪತ್ರಿಕೆಗಳಲ್ಲಿಯೂ ಸಹ ಸುದೀರ್ಘ ಕಾಲದವರೆಗೆ ಸೇವೆಯನ್ನು ಸಲ್ಲಿಸಿದ್ದಾರೆ. ಶ್ರೀಯುತರು ರಾಜ್ಯೋತ್ಸವ ಹಾಗೂ ಮಾಧ್ಯಮ ಅಕಾಡೆಮಿ ಪ್ರಶಸ್ತಿಗಳಿಗೆ ಭಾಜನರಾಗಿದ್ದರು. ಮುಂದುವರೆದು ಶ್ರೀಯುತರು ಪತ್ರಿಕೋದ್ಯಮದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದರು. ಶ್ರೀಯುತರ ನಿಧನದಿಂದಾಗಿ ನಮ್ಮ ರಾಜ್ಯವು ಹಿರಿಯ ಹಾಗೂ ಶ್ರೇಷ್ಠ ಪತ್ರಕರ್ತರೊಬ್ಬರನ್ನು ಕಳೆದುಕೊಂಡಂತಾಗಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ವ್ಯಕ್ತಪಡಿಸಬಯಸುತ್ತೇನೆ.

ಶೀಯುತ ಟಿ.ಎನ್.ಕೃಷ್ಣನ್‌ರವರು ಖ್ಯಾತ ವಯಲಿನ್ ವಾದಕರಾಗಿದ್ದರು. ಇವರ ನಿಧನದಿಂದಾಗಿ ಸಂಗೀತ ಲೋಕದ ಧ್ವನಿ ನಿಂತಿರುವಂತೆ ನಮಗೆ ಅನುಭವವಾಗಿದೆ. ಇವರು ಸಂಗೀತ ಕ್ಷೇತ್ರದಲ್ಲಿ ಬಹಳಷ್ಟು ಎತ್ತರಕ್ಕೆ ಬೆಳೆಯುವ ಮೂಲಕ ಪದ್ಮಭೂಷಣ, ಪದ್ಮಶ್ರೀ, ಸಂಗೀತ ಅಕಾಡೆಮಿಯ ಸಂಗೀತ ಕಲಾನಿಧಿ ಮತ್ತಿತರೆ ಹಲವಾರು ಪ್ರತಿಷ್ಠಿತ ಪ್ರಶಸ್ತಿ ಹಾಗೂ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಇವರ ನಿಧನದಿಂದಾಗಿ ನಮ್ಮ ಭಾರತ ದೇಶವು ಸಂಗೀತ ಲೋಕದ ಶ್ರೇಷ್ಠ ಸಂಗೀತ ಮಾಂತ್ರಿಕರೊಬ್ಬರನ್ನು ಕಳೆದುಕೊಂಡ ಅನುಭವವಾಗಿದೆ.

ನನ್ನ ದೃಷ್ಟಿಯಲ್ಲಿ ದಿವಂಗತ ರವಿ ಬೆಳೆಗೆರೆರವರು 'ಅಕ್ಷರ ಗಾರುಡಿಗ'ರಾಗಿದ್ದರು. ಇವರು ಖ್ಯಾತ ಪರ್ತಕತ್ರರಾಗಿದ್ದರು. ಸಭಾನಾಯಕರು ಈಗಾಗಲೇ ಇವರ ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸಿದ್ದಾರೆ. 'ಲಂಕೇಶ ಪತ್ರಿಕೆ'ಯ ನಂತರ, ಬಹಳಷ್ಟು ಜನರು 'ಹಾಯ್ ಬೆಂಗಳೂರು' ಪತ್ರಿಕೆ ಯಾವಾಗ ಬರುತ್ತದೆಯೋ ಎಂದು ದಾರಿ ಕಾಯುತ್ತಿದ್ದರು. ಇವರು ಅತ್ಯಂತ ನಿರ್ಭಿಡೆಯಿಂದ, ಯಾರದೇ ಮರ್ಜಿ, ಬಿಡೆ ಮತ್ತು ಮುಲಾಜುಗಳಿಗೆ ಒಳಗಾಗದೇ, ಮುಂದುವರೆದು,

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯಾವುದೇ ವ್ಯಕ್ತಿಯ, ಜನಾಂಗ, ಪಕ್ಷದ ತುತ್ತೂರಿಯಾಗಿರದೇ ನಿರ್ಭೀತಿ ಹಾಗೂ ನಿರ್ಭಯಗಳಿಂದ ಇದ್ದದ್ದನ್ನು ಇದ್ದ ಹಾಗೆ ವರದಿ ಮಾಡುತ್ತಿದ್ದರು. ಶ್ರೀಯುತರು ವಸ್ತುನಿಷ್ಠರಾಗಿದ್ದರು ಎಂಬುದಾಗಿ ಸಭಾನಾಯಕರು ಉಲ್ಲೇಖಿಸಿದ್ದಾರೆ. ಎಷ್ಟೇ ಅಪಾಯಕಾರಿ ಸ್ಥಳಗಳಿಗೆ ಶ್ರೀಯುತರು ಸ್ವತಃ ಹೋಗಿ, ಸಂಗತಿಗಳನ್ನು ಮನವರಿಕೆ ಮಾಡಿಕೊಂಡು ಪತ್ರಿಕೆಗಳಲ್ಲಿ ಬರೆಯುತ್ತಿದ್ದರು. ಶ್ರೀಯುತರು ಬಳ್ಳಾರಿಯಲ್ಲಿ ಜನಿಸಿದ್ದು, ಬೆಂಗಳೂರಿಗೆ ಬಂದಾಗ ಅವರನ್ನು ಯಾರೂ ಸಹ ಶೀಘ್ರದಲ್ಲಿ ಅಪ್ಪಿಕೊಂಡಿರಲಿಲ್ಲ. ಇವರು ಬಳ್ಳಾರಿಯಲ್ಲಿದ್ದಾಗ ರೂಂ ಬಾಯ್, ಪೇಪರ್ ಬಾಯ್, ಸ್ವಾಗತಕಾರ, ಹಾಲು ಮಾರುವವ, ಮೆಡಿಕಲ್ ರೆಪ್ರೆಸೆಂಟೇಟಿವ್, ಗೇಟ್ ಕೀಪರ್ ಇತ್ಯಾದಿ ಸಣ್ಣ–ಸಣ್ಣ ವೃತ್ತಿಗಳನ್ನು ಮಾಡಿದ್ದರು. ಶ್ರೀಯುತರಿಗೆ 62 ವರ್ಷಗಳಾಗಿತ್ತು. ಇದು ಸಾಯುವ ವಯಸ್ಸೆಂದು ನಾನು ಭಾವಿಸುವುದಿಲ್ಲ. ಇವರು ನಮ್ಮ ಮಧ್ಯದಲ್ಲಿ ಇನ್ನೂ ಬಹಳಷ್ಟು ಕಾಲ ಇರಬೇಕಾಗಿತ್ತು. ಇವರು 'ಪ್ರಾರ್ಥನಾ' ಶಾಲೆಯನ್ನು ಸ್ಥಾಪಿಸುವುದರ ಮೂಲಕ ಸಾವಿರಾರು ಮಕ್ಕಳು ತಮ್ಮ ಜ್ಞಾನದ ದಾಹವನ್ನು ನೀಗಿಸಿ, ಅವರು ಸತ್ಪ್ರಜೆ ಹಾಗೂ ಜವಾಬ್ದಾರಿಯುತವಾದ ನಾಗರೀಕರನ್ನಾಗಿ ಮಾಡುವುದರಲ್ಲಿ ಇವರ ಕೊಡುಗೆ ಇದೆ ಎಂದು ನಾನು ಇವತ್ತಿನ ದಿವಸ ಹೇಳುತ್ತಾ, ಅವರನ್ನು ನಾನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಯಸುತ್ತೇನೆ. ಮಾನ್ಯ ಸಭಾನಾಯಕರು ಪ್ರಸ್ತಾಪಿಸಿದಂತೆ, ಇವರು ವಿವಾದಾತ್ಮಕ ವ್ಯಕ್ತಿಯಾಗಿದ್ದರು. ಇವರ ನಿಧನದಿಂದಾಗಿ ನಮ್ಮ ನಾಡು ಶ್ರೇಷ್ಠ ಹಾಗೂ ಖ್ಯಾತ ಪತ್ರಕರ್ತರೊಬ್ಬರನ್ನು ಕಳೆದುಕೊಂಡಂತಾಗಿದೆ. ಇವತ್ತಿನ ದಿವಸ ಇವರು ನಮ್ಮಗಳ ಮಧ್ಯದಲ್ಲಿಲ್ಲ ಎನ್ನುವ ನೋವು ನಮ್ಮನ್ನು ಕಾಡುತ್ತಿದೆ ಎನ್ನುವ ಮಾತನ್ನೂ ಸಹ ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಇಷ್ಟೊಂದು ಮಹನೀಯರುಗಳು ಮೃತರಾಗಿರುವ ಬಗ್ಗೆ ಸಂತಾಪ ಸೂಚನೆಯಲ್ಲಿ ಪ್ರಸ್ತಾಪಿಸಿಲಾಗಿದೆ. ಬಹುತರವಾಗಿ ಇವರುಗಳ ಹುಟ್ಟು–ಸಾವುಗಳ ಮಧ್ಯೆ ಅಗಾಧವಾದ ಸಾಧನೆಯನ್ನು ಮಾಡಿದ್ದಾರೆ. ನಿಧನರಾದ ಬಹಳಷ್ಟು ಜನ ಹುಟ್ಟು–ಸಾವುಗಳ ಮಧ್ಯೆ ಏನನ್ನೂ ಸಾಧಿಸುವುದಿಲ್ಲ ಹಾಗೂ ಅಂತಹವರನ್ನು ನಾವು ನೆನಪಿಸಿಕೊಳ್ಳುವುದಿಲ್ಲ. ಆದರೆ, ಅವರ ಹುಟ್ಟು–ಸಾವುಗಳ ಮಧ್ಯೆ ಸಮಾಜ, ನಾಡು–ನುಡಿ ಅಥವಾ ತಾವು ಆಯ್ಕೆ ಮಾಡಿಕೊಂಡ ಕ್ಷೇತ್ರಗಳಲ್ಲಿ ಅಭೂತಪೂರ್ವವಾದ ಕೆಲಸಗಳನ್ನು ಇವರುಗಳು ಮಾಡಿದ್ದಾರೆ. ಇವರುಗಳು ಇವತ್ತಿನ ದಿವಸ ಭೌತಿಕವಾಗಿ ನಮ್ಮ ಮಧ್ಯದಲ್ಲಿಲ್ಲ; ಆದರೆ, ಮಾನಸಿಕವಾಗಿ ಬಹಳಷ್ಟು ಜನರ ಹೃದಯದಲ್ಲಿ ಶಾಶ್ವತವಾಗಿ ಸ್ಥಾಪಿಸಲ್ಪಟ್ಟಿದ್ದಾರೆ. ಅಂತಹ ಸಾಧನೆಗಳನ್ನು ಮಾಡಿದವರನ್ನು ನಾವು ಇವತ್ತಿನ ದಿವಸ ಇಲ್ಲಿ ನೆನಪಿಸಿಕೊಳ್ಳುವಂತಹ ಔಚಿತ್ಯಪೂರ್ಣವಾದ ಕೆಲಸವನ್ನು ಮಾಡಲಾಗಿದೆ. ಸಭಾನಾಯಕರು ಹಾಗೂ ನಾವು ಇದಕ್ಕೆ ಧ್ವನಿಗೂಡಿಸಿದ್ದೇವೆ. ಈ ಸಂದರ್ಭದಲ್ಲಿ ನಮ್ಮನ್ನು ಅಗಲಿದ ಎಲ್ಲ ಮಹಾನುಭಾವರ ಆತ್ಮಕ್ಕೆ ಭಗವಂತನು ಶಾಂತಿಯನ್ನು ನೀಡಲಿ ಮತ್ತು ಅವರ ಕುಟುಂಬ ವರ್ಗದವರಿಗೆ, ಹಿತೈಷಿಗಳಿಗೆ ಹಾಗೂ ಅಭಿಮಾನಿಗಳಿಗೆ ಇವರುಗಳ ಅಗಲಿಕೆಯಿಂದಾದ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಕಲ್ಪಿಸಲೆಂದು ಪ್ರಾರ್ಥಿಸುತ್ತೇನೆ. ಮಾತನಾಡಲು ನನಗೆ ಅವಕಾಶ ನೀಡಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(964)/7–12–2020/12–20/ಎಲ್‌ಎಂ/ಜಿಆರ್**

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಗಳೆ, ಕರ್ನಾಟಕ ಬಯಲಾಟ ಅಕಾಡೆಮಿಯ ಅಧ್ಯಕ್ಷರಾಗಿದ್ದ ಪ್ರೊ: ಟಿ.ಬಿ.ಸೋಲಬಕ್ಕನವರ್ ರವರು ನಿಧನ ಹೊಂದಿದ್ದಾರೆ. ಅವರ ಬಗ್ಗೆ ಸಂತಾಪ ಸೂಚನೆ ಮಂಡನೆಯಾಗಿರುವುದಿಲ್ಲ. ಇವರು ಶಿಗ್ಗಾಂವ್‌ನಲ್ಲಿ ಅದ್ಭುತವಾದ 'ರಾಕ್ ಗಾರ್ಡನ್' ಒಂದನ್ನು ಸೃಷ್ಟಿ ಮಾಡಿದ್ದಾರೆ. ಆಲಮಟ್ಟಿ ಗಾರ್ಡನ್‌ನಲ್ಲಿ ಕಲಾಕೃತಿಗಳನ್ನು ಸೃಷ್ಟಿ ಮಾಡುವ ಮೂಲಕ ಕರ್ನಾಟಕದಲ್ಲಿ ಯಾರೂ ಮಾಡದಂತಹ ಕೆಲಸವನ್ನು ಮಾಡಿದ್ದಾರೆ. ಅವರು ಬಹಳ ಅದ್ಭುತವಾದ ವ್ಯಕ್ತಿ, ಇವರ ಬಗ್ಗೆ ಸಂತಾಪ ಸೂಚನೆಯಲ್ಲಿ ಸೇರಿಸಬೇಕು ಎನ್ನುವುದು ನನ್ನ ಮನವಿ.

**ಸಭಾಪತಿಯವರು:–** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಮೃತರುಗಳ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದಲ್ಲಿ ಹಾಜರಿದ್ದ ಎಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಲಾಯಿತು)**

**ಸಭಾಪತಿಯವರು:–** ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು. ಈಗ ಸಭೆಯನ್ನು 30 ನಿಮಿಷಗಳ ಕಾಲ ಮುಂದೂಡಲಾಗುತ್ತದೆ.

**(ಮಧ್ಯಾಹ್ನ 12 ಗಂಟೆ 23 ನಿಮಿಷದಿಂದ ಸದನವನ್ನು 30 ನಿಮಿಷಗಳ ಕಾಲ ಮುಂದೂಡಲಾಯಿತು)**

(965) 7.12.2020 : 1.10 ಪಿಕೆ:ಎಂಡಿ

**(ಸದನವು ಮಧ್ಯಾಹ್ನ 1 ಗಂಟೆ 15 ನಿಮಿಷಕ್ಕೆ ಸಮಾವೇಶಗೊಂಡಿತು. (ಸಭಾಪತಿಗಳಾದ ಶ್ರೀ ಕೆ.ಪ್ರತಾಪ್‌ಚಂದ್ರ ಶೆಟ್ಟಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಪ್ರಕಾಶ್ ಕೆ.ರಾಥೋಡ್(ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಹಿಂದಿನ ಅಧಿವೇಶನದಲ್ಲಿ ಎಲ್ಲಾ ಸದಸ್ಯರಿಗೂ ಕೋವಿಡ್ ಟೆಸ್ಟ್ ಮಾಡಿಸಬೇಕೆಂದು ಎಲ್ಲಾ ರೀತಿಯ ಸೌಲಭ್ಯಗಳನ್ನು ಮಾಡಿದ್ದರು. ಈ ಸಲ ಅಧಿವೇಶನ ಪ್ರಾರಂಭವಾಗಿದೆ. ಆದರೆ, ಕೋವಿಡ್–19 ಟೆಸ್ಟನ್ನು ಯಾವುದೇ ಶಾಸಕರಿಗಾಗಲಿ, ಅಧಿಕಾರಿಗಳಿಗಾಗಲಿ ಅಥವಾ ಸಿಬ್ಬಂದಿಗಳಿಗಾಗಲಿ ಮಾಡಲು ವ್ಯವಸ್ಥೆ ಮಾಡಿಲ್ಲ. ಎಲ್ಲರಿಗೂ ಕೋವಿಡ್ ಟೆಸ್ಟ್ ಮಾಡುವಂತಹ ವ್ಯವಸ್ಥೆ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರವಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಅಧಿವೇಶನ ನಡೆಯುವಾಗ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಿಬ್ಬಂದಿಗಳಿಗಿರಬಹುದು, ಶಾಸಕರಿಗಿರಬಹುದು ಅಥವಾ ಮಂತ್ರಿಗಳಿಗಿರಬಹುದು, ನಮ್ಮಲ್ಲೇ ಯಾರಿಗಾದರೂ ಒಬ್ಬರಿಗೆ ಕೋವಿಡ್-19 ಇದ್ದರೆ ಅದರಿಂದ ಎಲ್ಲರಿಗೂ ತೊಂದರೆಯಾಗುತ್ತದೆ. ಹಾಗಾಗಿ, ಎಲ್ಲರಿಗೂ ಕೋವಿಡ್-19 ಟೆಸ್ಟ್ ಮಾಡಿ ಅಧಿವೇಶನ ಪ್ರಾರಂಭ ಮಾಡುವುದು ಒಳ್ಳೆಯದು ಎಂದು ನಾನು ಭಾವಿಸುತ್ತೇನೆ. ಇದನ್ನು ಗಂಭೀರವಾಗಿ ಪರಿಗಣಿಸಿ ಸರ್ಕಾರ ಒಂದು ವ್ಯವಸ್ಥೆ ಮಾಡಬೇಕೆಂದು ಕೋರುತ್ತೇನೆ.

## 2. ಪ್ರಕಟಣೆಗಳು

**ಸಭಾಪತಿಯವರು:-** ಈಗ ಪ್ರಕಟಣೆಗಳು.

ಅ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 9ರ ಮೇರೆಗೆ ಮಾನ್ಯ ಸಭಾಪತಿಯವರ ಮತ್ತು ಉಪಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣ ಮಾಡಲು ಈ ಮುಂದಿನ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲಾಗಿದೆ.

1. ಶ್ರೀ ಕೆ.ಸಿ.ಕೊಂಡಯ್ಯ
2. ಶ್ರೀ ಆಯನೂರು ಮಂಜುನಾಥ
3. ಶ್ರೀ ಪುಟ್ಟಣ್ಣ
4. ಶ್ರೀ ಮರಿತಿಬ್ಬೇಗೌಡ

ಆ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 222ರ ಮೇರೆಗೆ 142ನೇ ಅಧಿವೇಶನದಲ್ಲಿ ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ಈ ಮುಂದಿನಂತೆ ರಚಿಸಲಾಗಿರುತ್ತದೆ.

| ಕ್ರ.ಸಂ. | ಹೆಸರುಗಳು<br>ಶ್ರೀಯುತರುಗಳಾದ | ಸ್ಥಾನ |
|---|---|---|
| 1. | ಎಸ್.ಎಲ್.ಧರ್ಮೇಗೌಡ<br>ಮಾನ್ಯ ಉಪಸಭಾಪತಿಯವರು | ಸದಸ್ಯರು |
| 2. | ಕೋಟ ಶ್ರೀನಿವಾಸ ಪೂಜಾರಿ<br>ಮಾನ್ಯ ಸಭಾನಾಯಕರು | ಸದಸ್ಯರು |
| 3. | ಎಸ್.ಆರ್.ಪಾಟೀಲ್<br>ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ನಾಯಕರು | ಸದಸ್ಯರು |
| 4. | ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ<br>ವಿಧಾನ ಪರಿಷತ್ತಿನ ಮಾನ್ಯ ಸರ್ಕಾರಿ ಮುಖ್ಯ ಸಚೇತಕರು | ಸದಸ್ಯರು |
| 5. | ಎಂ.ನಾರಾಯಣಸ್ವಾಮಿ | ಸದಸ್ಯರು |

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

| | | |
|---|---|---|
| | ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು | |
| 6. | ಬಸವರಾಜ ಶಿವಲಿಂಗಪ್ಪ ಹೊರಟ್ಟಿ<br>ವಿಧಾನ ಪರಿಷತ್ತಿನ ಸದಸ್ಯರು | ಸದಸ್ಯರು |
| 7. | ನಸೀರ್ ಅಹ್ಮದ್<br>ವಿಧಾನ ಪರಿಷತ್ತಿನ ಸದಸ್ಯರು | ಸದಸ್ಯರು |
| 8. | ಬಿ.ಕೆ.ಹರಿಪ್ರಸಾದ್<br>ವಿಧಾನ ಪರಿಷತ್ತಿನ ಸದಸ್ಯರು | ಸದಸ್ಯರು |
| 9. | ಶಶಿಲ್ ಜಿ ನಮೋಶಿ<br>ವಿಧಾನ ಪರಿಷತ್ತಿನ ಸದಸ್ಯರು | ಸದಸ್ಯರು |

**ವಿಶೇಷ ಆಹ್ವಾನಿತರು**

| | |
|---|---|
| 10. | ಶ್ರೀ ಬಿ.ಎಸ್.ಯಡಿಯೂರಪ್ಪ, ಮಾನ್ಯ ಮುಖ್ಯಮಂತ್ರಿಯವರು |
| 11. | ಶ್ರೀ ಜೆ.ಸಿ.ಮಾಧುಸ್ವಾಮಿ<br>ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು |
| 12. | ಶ್ರೀ ಲಕ್ಷ್ಮಣ ಸಂಗಪ್ಪ ಸವದಿ<br>ಮಾನ್ಯ ಉಪ ಮುಖ್ಯಮಂತ್ರಿಗಳು |

ಮಾನ್ಯ ಸಭಾಪತಿಯವರು ಕಾರ್ಯಕಲಾಪಗಳ ಸಲಹಾ ಸಮಿತಿಯ ಅಧ್ಯಕ್ಷರಾಗಿರುತ್ತಾರೆ

ಇ) ಎಲ್ಲಾ ಗೌರವಾನ್ವಿತ ಸದಸ್ಯರೆ,

ಅನಿವಾರ್ಯವಾಗಿ ಕಳೆದ ಅಧಿವೇಶನ ಮುಕ್ತಾಯಗೊಂಡ ನಂತರ ನಡೆದ ಒಂದು ಬೆಳವಣಿಗೆಯ ಬಗ್ಗೆ ಈ ಮೂಲಕ ಸದನದ ಗಮನಕ್ಕೆ ತರಬಯಸುತ್ತೇನೆ. ದಿನಾಂಕ 26.9.2020ರ ಮಧ್ಯರಾತ್ರಿ 141ನೇ ಅಧಿವೇಶನವನ್ನು ಅನಿರ್ದಿಷ್ಟಾವಧಿಗೆ ಮುಂದೂಡುವ ಬಗ್ಗೆ ಈ ಪೀಠದಿಂದ ತೆಗೆದುಕೊಂಡ ತೀರ್ಮಾನದ ಬಗ್ಗೆ ಸರ್ಕಾರದ ಹಿರಿಯ ಸಚಿವರೊಬ್ಬರು ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯೆ ವ್ಯಕ್ತಪಡಿಸಿರುವುದು ಪತ್ರಿಕೆಗಳ ಮೂಲಕ ನನ್ನ ಗಮನಕ್ಕೆ ಬಂದಿರುತ್ತದೆ.

ವಾಸ್ತವಾಂಶಗಳ ಮಾಹಿತಿ ಕೊರತೆಯಿಂದ ಆ ಪ್ರತಿಕ್ರಿಯೆಯನ್ನು ನೀಡಿರಬಹುದು ಎಂಬುದಾಗಿ ಭಾವಿಸಿ ಸದರಿ ಸಚಿವರಿಗೆ, ಸಭಾನಾಯಕರಿಗೆ ಹಾಗೂ ವಿರೋಧ ಪಕ್ಷದ ನಾಯಕರಿಗೆ ಪತ್ರವೊಂದನ್ನು ಬರೆದು ವಾಸ್ತವಾಂಶವನ್ನು ವಿವರಿಸಿರುತ್ತೇನೆ. ಸಾಮಾನ್ಯವಾಗಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ನಾಯಕರುಗಳು ಸಭಾಪತಿಯವರೊಂದಿಗೆ ನಡೆಸುವ ಅನೌಪಚಾರಿಕ ಚರ್ಚೆಯ ವಿಷಯಗಳನ್ನು ಬಹಿರಂಗಪಡಿಸುವುದಿಲ್ಲ. ಆದರೆ ಪ್ರಸ್ತುತ ಅಂತಹ ಚರ್ಚಿತ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ವಿಷಯಗಳನ್ನು ಮುಕ್ತವಾಗಿ ಸದನದಕ್ಕೆ ತಿಳಿಸದಿದ್ದಲ್ಲಿ ಈ ಪೀಠಕ್ಕೆ ಕಳಂಕ ಉಂಟಾಗುವ ಸಾಧ್ಯತೆ ಇರುವುದರಿಂದ ಸದರಿ ಪತ್ರದ ಪ್ರತಿಗಳನ್ನು ತಮ್ಮೆಲ್ಲರಿಗೂ ಈ ಮೂಲಕ ನೀಡುತ್ತಿದ್ದೇನೆ. ಈ ವಿಷಯದ ಮೇಲೆ ಯಾವುದೇ ಚರ್ಚೆ ಮಾಡದಂತೆ ಎಲ್ಲರಲ್ಲಿ ಮನವಿ ಮಾಡುತ್ತೇನೆ. ಪತ್ರ ಈ ಕೆಳಕಂಡಂತೆ ಇರುತ್ತದೆ.

"ಕೆ.ಪ್ರತಾಪಚಂದ್ರ ಶೆಟ್ಟಿ
ಸಭಾಪತಿ
ಕರ್ನಾಟಕ ವಿಧಾನ ಪರಿಷತ್ತು

ಸಂಖ್ಯೆ: ಕವಿಪ/1089/ಸಕ/2020 1/10/2020

ಶ್ರೀಯುತ ಸುರೇಶ ಕುಮಾರ್‌ರವರೇ,

ತಮ್ಮ ಇತ್ತೀಚಿನ ಟ್ವಿಟರ್ ಖಾತೆಯಲ್ಲಿ ಪ್ರಕಟಿಸಿದ್ದ "ಸಭಾಪತಿಯವರ ನಡೆ ನಿಗೂಢ. . .ಅಂಪೈರ್ ಎಂದೂ ಹೀಗಿರಬಾರದು . . ." ಎನ್ನುವ ತಮ್ಮ ಟ್ವಿಟರ್ ಖಾತೆಯ ಹೇಳಿಕೆಯ ಕುರಿತಾದ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಪ್ರಮುಖ ಅಂಶಗಳನ್ನು ತಮ್ಮ ಗಮನಕ್ಕೆ ತರುವ ಮೂಲಕ ತಪ್ಪು ತಿಳುವಳಿಕೆಯನ್ನು ನಿವಾರಿಸುವ ಪ್ರಯತ್ನ ಮಾಡುತ್ತಿದ್ದೇನೆ.

ಕಳೆದ 10 ವರ್ಷಗಳ ಕರ್ನಾಟಕ ವಿಧಾನ ಪರಿಷತ್ತಿನ ಇತಿಹಾಸದಲ್ಲಿ ಪ್ರಸಕ್ತ 141ನೇ ಅಧಿವೇಶನವು ಅತೀ ಹೆಚ್ಚು ವಿಧೇಯಕಗಳು ಮಂಡನೆಯಾಗಿರುವ ಮತ್ತು ಅಂಗೀಕೃತವಾಗಿರುವ ಅಧಿವೇಶನವಾಗಿರುತ್ತದೆ. ಈ ಅಧಿವೇಶನದಲ್ಲಿ 44 ವಿಧೇಯಕಗಳ ಪೈಕಿ ಒಂದು ವಿಧೇಯಕ ತಿರಸ್ಕೃತಗೊಂಡು, 3 ವಿಧೇಯಕಗಳು ಬಾಕಿ ಇರುತ್ತವೆ.

ಸಾರ್ವಜನಿಕ ಹಿತದೃಷ್ಟಿಯಿಂದ ವಿಧೇಯಕಗಳ ಕುರಿತು ಸದಸ್ಯರಿಗೆ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಅಗತ್ಯವಾಗಿರುವುದರಿಂದ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಬಹುತೇಕ ಎಲ್ಲಾ ವಿಧೇಯಕದ ಮೇಲೆ ಸುದೀರ್ಘ ಚರ್ಚೆಗೆ ಧಾರಾಳವಾಗಿ ಅವಕಾಶವನ್ನು ಕಲ್ಪಿಸುವುದು ವಾಡಿಕೆ ಮತ್ತು ಈ ಹಿಂದೆಯಿಂದಲೂ ಪಾಲಿಸಿಕೊಂಡು ಬರುತ್ತಿರುವ ಸತ್‌ಸಂಪ್ರದಾಯವಾಗಿರುತ್ತದೆ. ಹೀಗಾಗಿ ಸದನವು ದಿನಾಂಕ 26/09/2020ರ ಮಧ್ಯರಾತ್ರಿ 12 ಗಂಟೆಯ ನಂತರವೂ ಅಂದರೆ ದಿನಾಂಕ 27/09/2020ರ ರಾತ್ರಿ 01.00 ಗಂಟೆಯವರೆಗೂ ಉಪವೇಶನಗೊಂಡಿದ್ದು ವಿಧೇಯಕಗಳ ಕುರಿತು ಚರ್ಚೆಯನ್ನು ನಡೆಸಲಾಗುತ್ತಿತ್ತು.

ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ವಿಧೇಯಕದ ಮೇಲೆ ಚರ್ಚೆಯನ್ನು ಕೇವಲ ಇಬ್ಬರು ಸದಸ್ಯರು ಮಾತ್ರ ಪೂರ್ಣಗೊಳಿಸಿ, 3ನೇ ಸದಸ್ಯರು ವಿಧೇಯಕದ ಕುರಿತು ತಮ್ಮ ಅಭಿಪ್ರಾಯವನ್ನು ಮಂಡಿಸುತ್ತಿರುವಾಗ ಬಹಳಷ್ಟು ಸದಸ್ಯರು ಮಾತನಾಡಲು ಬಾಕಿ ಇದ್ದಾಗ್ಯೂ ಸಚಿವರು ಸೇರಿದಂತೆ ಆಡಳಿತ ಪಕ್ಷದ ಸದಸ್ಯರು ಸಮಯವು ಮೀರಿರುವುದರ ಕುರಿತು ಪದೇ ಪದೇ ಪ್ರಸ್ತಾಪಿಸಿರುವುದನ್ನು ತಾವು ಸದನದ ನಡಾವಳಿಕೆಯಲ್ಲಿ ಗಮನಿಸಬಹುದಾಗಿರುತ್ತದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ದಿನಾಂಕ 26/09/2020 ರಂದು ರಾತ್ರಿ 10.50 ಗಂಟೆಗೆ ವಿಧಾನ ಸಭೆಯ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದಾಗ, ಒಂದು ಹಂತದಲ್ಲಿ ವಿಧಾನ ಪರಿಷತ್ತಿನ ಆಡಳಿತ ಪಕ್ಷದ ನಾಯಕರು ಸದನವನ್ನು ಮುಂದೂಡುವ ಕುರಿತು ನನ್ನ ಬಳಿ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ನಂತರ ಪ್ರತಿ ಪಕ್ಷದ ನಾಯಕರು ಕೂಡ ಅದೇ ಅಭಿಪ್ರಾಯ ವ್ಯಕ್ತಪಡಿಸಿರುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಸಭಾಪತಿ ಹುದ್ದೆಯು ಪಕ್ಷಾತೀತವಾದ ಹುದ್ದೆಯಾಗಿದ್ದು ಸಭಾಪತಿಯವರ ನಡೆಯು ನಿಗೂಢವಾಗಿರಬಾರದು ಎನ್ನುವ ಆಶಯದಿಂದ ಈ ಎಲ್ಲಾ ಮಾಹಿತಿಯನ್ನು ತಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ.

ವಂದನೆಗಳೊಂದಿಗೆ

ಸಹಿ
(ಕೆ.ಪ್ರತಾಪಚಂದ್ರ ಶೆಟ್ಟಿ)

ಶ್ರೀ ಸುರೇಶ್‌ಕುಮಾರ್‌ರವರು
ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಸಚಿವರು
ಕರ್ನಾಟಕ ಸರ್ಕಾರ

ಪ್ರತಿಯನ್ನು:

1. ಶ್ರೀ ಕೋಟಾ ಶ್ರೀನಿವಾಸ ಪೂಜಾರಿಯವರು, ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಹಾಗೂ ಮುಜರಾಯಿ ಮತ್ತು ಧಾರ್ಮಿಕ ದತ್ತಿ ಇಲಾಖೆ ಸಚಿವರು, ಕರ್ನಾಟಕ ಸರ್ಕಾರ ಇವರ ಮಾಹಿತಿಗಾಗಿ.
2. ಶ್ರೀ ಎಸ್.ಆರ್.ಪಾಟೀಲ್‌ರವರು, ಮಾನ್ಯ ವಿರೋಧ ಪಕ್ಷದ ನಾಯಕರು, ಕರ್ನಾಟಕ ವಿಧಾನ ಪರಿಷತ್ತು, ಬೆಂಗಳೂರು ಇವರ ಮಾಹಿತಿಗಾಗಿ."

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(ಮುಂದು . . .)

**(966) 07–12–2020 1.20 ಡಿಎಸ್–ಎಕೆ**

## 3. ನೂತನ ಸದಸ್ಯರ ಪರಿಚಯ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಶಿಕ್ಷಕರ ಕ್ಷೇತ್ರದಿಂದ ನೂತನವಾಗಿ ಪುನರಾಯ್ಕೆಗೊಂಡಿರುವ ಮಾನ್ಯ ಪುಟ್ಟಣ್ಣ ಅವರನ್ನು ಸದನಕ್ಕೆ ಪರಿಚಯಿಸುತ್ತಿದ್ದೇನೆ.

ಶಿಕ್ಷಕರ ಕ್ಷೇತ್ರದಿಂದ ಶ್ರೀ ಶಶೀಲ್ ಜಿ.ನಮೋಶಿ ಅವರು ಸಹ ನೂತನವಾಗಿ ಆಯ್ಕೆಯಾಗಿ ನಮ್ಮ ಸದನಕ್ಕೆ ಬಂದಿದ್ದಾರೆ. ಅವರನ್ನು ಸದನಕ್ಕೆ ಪರಿಚಯಿಸುತಿದ್ದೇನೆ.

ಪದವೀಧರರ ಕ್ಷೇತ್ರದಿಂದ ಶ್ರೀ ಎಸ್.ವ್ಹಿ.ಸಂಕನೂರ ರವರು ಪುನರಾಯ್ಕೆಗೊಂಡಿದ್ದಾರೆ. ಅವರನ್ನು ಸದನಕ್ಕೆ ಪರಿಚಯಿಸುತ್ತಿದ್ದೇನೆ.

ಪದವೀಧರರ ಕ್ಷೇತ್ರದಿಂದ ನೂತನವಾಗಿ ಶ್ರೀ ಚಿದಾನಂದ್ ಎಂ.ಗೌಡ ರವರು ಆಯ್ಕೆಗೊಂಡಿದ್ದಾರೆ. ಅವರನ್ನು ಸದನಕ್ಕೆ ಪರಿಚಯಿಸುತ್ತಿದ್ದೇನೆ.

ನಾಮನಿರ್ದೇಶಿತರಾಗಿ ನೂತನವಾಗಿ ಆಯ್ಕೆಗೊಂಡಿರುವ ಡಾ॥ತಳವಾರ್ ಸಾಬಣ್ಣ ಅವರನ್ನು ಸಹ ಸದನಕ್ಕೆ ಪರಿಚಯಿಸುತ್ತಿದ್ದೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

# 4. ಸಭೆಯ ಮುಂದಿಡಲಾದ ಕಾಗದ ಪತ್ರಗಳು

(ಎರಡನೇ ಪಟ್ಟಿ)

(ಪಟ್ಟಿಯನ್ನು ಲಗತ್ತಿಸಲಾಗಿದೆ)

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

## 5. ಕಾರ್ಯದರ್ಶಿಯವರ ವರದಿ

**ಕಾರ್ಯದರ್ಶಿ, ಕ.ವಿ.ಪ:–** ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ಈ ಕೆಳಕಂಡ ವಿಧೇಯಕಗಳ ಪಟ್ಟಿಯನ್ನು ಸಭೆಯಲ್ಲಿ ಮಂಡಿಸುತ್ತಿದ್ದೇನೆ.

**ಘನತೆವೆತ್ತ ರಾಷ್ಟ್ರಪತಿ/ರಾಜ್ಯಪಾಲರವರಿಂದ ಒಪ್ಪಿಗೆ ಪಡೆದಿರುವ ವಿಧೇಯಕಗಳ ಪಟ್ಟಿ**

**ವಿಧಾನ ಸಭೆಯ ವಿಧೇಯಕಗಳು**

| ಕ್ರಮ ಸಂಖ್ಯೆ | ವಿಧೇಯಕಗಳ ಪಟ್ಟಿ | ಒಪ್ಪಿಗೆಯನ್ನು ಪಡೆದ ದಿನಾಂಕ | ಒಪ್ಪಿಗೆಯನ್ನು ನೀಡಿದವರು |
|---|---|---|---|
| 01. | ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 2020<br>The Karnataka Private Medical Establishments (Amendment) Bill, 2020 | 16.10.2020 | ರಾಜ್ಯಪಾಲರು |
| 02. | ಕರ್ನಾಟಕ ನಗರ ಪಾಲಿಕೆಗಳ (ಮೂರನೇ ತಿದ್ದುಪಡಿ) ವಿಧೇಯಕ, 2020<br>The Karnataka Municipal Corporation (Third Amendment) Bill, 2020 | 01.10.2020 | ರಾಜ್ಯಪಾಲರು |
| 03. | ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕ, 2020<br>The Karnataka Industries (Facilitation) (Amendment) Bill, 2020 | 16.10.2020 | ರಾಜ್ಯಪಾಲರು |
| 04. | ಕರ್ನಾಟಕ ಸಾಂಕ್ರಾಮಿಕ ರೋಗಗಳ ವಿಧೇಯಕ, 2020<br>The Karnataka Epidemic Diseases Bill, 2020 | 16.10.2020 | ರಾಜ್ಯಪಾಲರು |
| 05. | ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ (ತಿದ್ದುಪಡಿ) ವಿಧೇಯಕ, 2020<br>The Karnataka Regulation of Stone Crushers (Amendment) Bill, 2020 | 16.10.2020 | ರಾಜ್ಯಪಾಲರು |
| 06. | ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ನಾಲ್ಕನೇ ತಿದ್ದುಪಡಿ) ವಿಧೇಯಕ, 2020 | 16.10.2020 | ರಾಜ್ಯಪಾಲರು |

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

| | | | |
|---|---|---|---|
| | The Karnataka Town and Country Planning (Fourth Amendment) Bill, 2020 | | |
| 07. | ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ಮೂರನೇ ತಿದ್ದುಪಡಿ) ವಿಧೇಯಕ, 2020<br>The Karnataka Town and Country Planning (Third Amendment) Bill, 2020 | 16.10.2020 | ರಾಜ್ಯಪಾಲರು |
| 08. | ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕ, 2020<br>The Karnataka Municipalities (Amendment) Bill, 2020 | 19.10.2020 | ರಾಜ್ಯಪಾಲರು |
| 09. | ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 2020<br>The Karnataka Town and Country Planning (Second Amendment) Bill, 2020 | 19.10.2020 | ರಾಜ್ಯಪಾಲರು |
| 10 | ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ಎರಡನೇ ತಿದ್ದುಪಡಿ) ವಿಧೇಯಕ, 2020<br>The Karnataka Town and Country Planning (Amendment) Bill, 2020 | 19.10.2020 | ರಾಜ್ಯಪಾಲರು |
| 11. | ಕರ್ನಾಟಕ ನಗರಪಾಲಿಕೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2020<br>The Karnataka Municipal Corporations (Second Amendment) Bill, 2020 | 19.10.2020 | ರಾಜ್ಯಪಾಲರು |
| 12. | ಕರ್ನಾಟಕ ನ್ಯಾಯಾಲಯ ಶುಲ್ಕಗಳು ಮತ್ತು ದಾವೆಗಳ ಮೌಲ್ಯ ನಿರ್ಣಯ (ತಿದ್ದುಪಡಿ) ವಿಧೇಯಕ, 2020<br>Karnataka Court Fees and Suits Valuation (Amendment) Bill, 2020 | 16.10.2020 | ರಾಜ್ಯಪಾಲರು |
| 13. | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2020<br>The Bangalore Development Authority (Amendment) Bill, 2020 | 16.10.2020 | ರಾಜ್ಯಪಾಲರು |
| 14. | ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ | 19.10.2020 | |

" ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

| | | | |
|---|---|---|---|
| | (ತಿದ್ದುಪಡಿ) ವಿಧೇಯಕ, 2020<br>The Karnataka Shops and Commercial Establishments (Amendment) Bill, 2020 | | ರಾಜ್ಯಪಾಲರು |
| 15. | ಕರ್ನಾಟಕ ಭಿಕ್ಷಾಟನೆ ನಿಷೇಧ (ತಿದ್ದುಪಡಿ) ವಿಧೇಯಕ, 2020<br>The Karnataka Prohibition of Beggary (Amendment) Bill, 2020 | 19.10.2020 | ರಾಜ್ಯಪಾಲರು |
| 16. | ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2020<br>The Sarvajna Kshetra Development Authority Bill, 2020 | 16.10.2020 | ರಾಜ್ಯಪಾಲರು |
| 17. | ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, 2020<br>The Karnataka Stamp (Amendment) Bill,2020 | 19.10.2020 | ರಾಜ್ಯಪಾಲರು |
| 18. | ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2020<br>The Karnataka Land Revenue (Amendment) Bill, 2020 | 14.10.2020 | ರಾಜ್ಯಪಾಲರು |
| 19. | ಕರ್ನಾಟಕ ಭೂ ಕಬಳಿಕೆ ನಿಷೇಧ (ತಿದ್ದುಪಡಿ) ವಿಧೇಯಕ, 2020<br>The Karnataka Land Grabbing Prohibition (Amendment) Bill, 2020 | 16.10.2020 | ರಾಜ್ಯಪಾಲರು |
| 20 | ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2020<br>The Karnataka Land Revenue (Second Amendment) Bill, 2020 | 19.10.2020 | ರಾಜ್ಯಪಾಲರು |
| 21. | ಕರ್ನಾಟಕ ವಿಧಾನಮಂಡಲದ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳು ಹಾಗೂ ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2020<br>The Karnataka Legislature Salaries, Pensions and Allowances and Certain Other Law (Amendment) Bill, 2020 | 16.10.2020 | ರಾಜ್ಯಪಾಲರು |
| 22. | ಕರ್ನಾಟಕ ಸಾದಿಲ್ವಾರು ನಿಧಿ (ತಿದ್ದುಪಡಿ) ವಿಧೇಯಕ, 2020 | 14.10.2020 | ರಾಜ್ಯಪಾಲರು |

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

| | | | |
|---|---|---|---|
| | The Karnataka Contingency Fund (Amendment) Bill, 2020 | | |
| 23. | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕ, 2020<br>The Karnataka State Open University (Amendment) Bill, 2020 | 19.10.2020 | ರಾಜ್ಯಪಾಲರು |
| 24. | ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಸಾರ್ವಜನಿಕ ವಲಯದ ಸಂಸ್ಥೆಗಳ ನೌಕರರ ಸೇವೆಗಳನ್ನು ಸಾರ್ವಜನಿಕ ಸೇವೆಗೆ ವಿಲೀನಗೊಳಿಸುವುದಕ್ಕೆ ನಿಷೇಧ) ವಿಧೇಯಕ, 2020<br>The Karnataka State Civil Services (Prohibition of Absorption of the Services of the Employees of Establishments in Public Sector into Public Service) Bill, 2020 | 19.10.2020 | ರಾಜ್ಯಪಾಲರು |
| 25. | ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕ, 2020<br>The Karnataka Fiscal Responsibility (Amendment) Bill, 2020 | 14.10.2020 | ರಾಜ್ಯಪಾಲರು |
| 26. | ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕ, 2020<br>The Karnataka Appropriation (No.3) Bill, 2020 | 14.10.2020 | ರಾಜ್ಯಪಾಲರು |
| 27. | ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2020<br>The Karnataka Goods and Services Tax (Amendment) Bill, 2020 | 14.10.2020 | ರಾಜ್ಯಪಾಲರು |
| 28. | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2020<br>The Karnataka Gram Swaraj and Panchayat Raj (Amendment) Bill, 2020 | 22.10.2020 | ರಾಜ್ಯಪಾಲರು |
| 29. | ಕನ್ನಡ ವಿಶ್ವವಿದ್ಯಾನಿಲಯ ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕ, 2020<br>The Kannada University and | 19.10.2020 | ರಾಜ್ಯಪಾಲರು |

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

| | | | |
|---|---|---|---|
| | Certain other Laws (Amendment) Bill, 2020 | | |
| 30. | ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2020<br>Lakkundi Heritage Area Development Authority Bill, 2020 | 22.10.2020 | ರಾಜ್ಯಪಾಲರು |
| 31. | ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ನಿರಸನಗೊಳಿಸುವ) ವಿಧೇಯಕ, 2020<br>The Karnataka State Civil Service (Regulation of Transfer of Staff of Department of Technical Education) (Repeal) Bill, 2020 | 16.10.2020 | ರಾಜ್ಯಪಾಲರು |
| 32. | ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ನಿರಸನಗೊಳಿಸುವ) ವಿಧೇಯಕ, 2020<br>The Karnataka State Civil Service (Regulation of Transfer of Staff of Department of Collegiate Education) (Repeal) Bill, 2020 | 16.10.2020 | ರಾಜ್ಯಪಾಲರು |
| 33 | ಕರ್ನಾಟಕ ರೇಸ್‌ಕೋರ್ಸುಗಳಿಗೆ ಪರವಾನಗಿ ನೀಡುವ (ತಿದ್ದುಪಡಿ) ವಿಧೇಯಕ, 2020<br>The Karnataka Race Courses Licensing (Amendment) Bill, 2020 | 19.10.2020 | ರಾಜ್ಯಪಾಲರು |

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 6. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ

ವಿಷಯ: ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದಂತಹ ಅತಿವೃಷ್ಟಿಯಿಂದ ಸುಮಾರು 55 ಲಕ್ಷ ಎಕರೆ ಪ್ರದೇಶದಲ್ಲಿ ರೈತರು ಬೆಳೆದಿದ್ದ ಬೆಳೆ ನಾಶವಾಗಿರುವ ಬಗ್ಗೆ.

----

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಸದನ ಪ್ರಾರಂಭವಾಗುವುದಕ್ಕಿಂತ ಒಂದು ಗಂಟೆ ಪೂರ್ವದಲ್ಲಿ ನಿಯಮ 59 ರಡಿಯಲ್ಲಿ ಒಂದು ನಿಲುವಳಿ ಸೂಚನೆಯನ್ನು ಮಂಡಿಸಲು ಅನುಮತಿ ಕೋರಿದ್ದೇನೆ. ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಅತಿವೃಷ್ಟಿಯಿಂದಾಗಿ ಸುಮಾರು 55 ಲಕ್ಷ ಎಕರೆ ಪ್ರದೇಶದಲ್ಲಿ ರೈತರು ಬೆಳೆದಿದ್ದ ಬೆಳೆ ನಾಶವಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಈ ನಿಲುವಳಿ ಸೂಚನೆ ಬಗ್ಗೆ ನಮ್ಮ ಸರ್ಕಾರ ಸ್ಪಷ್ಟವಾಗಿ ಒಂದು ನಿರ್ಧಾರವನ್ನು ತೆಗೆದುಕೊಂಡಿದೆ. ನಾವು ವಿರೋಧ ಪಕ್ಷದಲ್ಲಿದ್ದಾಗ ಅವರು ಹೇಳಿದಂತೆ ನಡೆದುಕೊಂಡಿದ್ದೇವೆ. ತಮ್ಮ ವಿವೇಚನಾ ವ್ಯಾಪ್ತಿಯಲ್ಲಿ ಯಾವುದೇ ನಿಲುವಳಿ ಸೂಚನೆಯ ಪ್ರಸ್ತಾವವನ್ನು ಪ್ರಶ್ನೋತ್ತರ ಮತ್ತು ಶೂನ್ಯ ವೇಳೆಯ ನಂತರ ತೆಗೆದುಕೊಳ್ಳಬೇಕೆಂದು ಸದನ ನಿರ್ಧಾರ ಮಾಡಿದೆ. ನಾನು ಪೀಠಕ್ಕೆ ವಿನಂತಿ ಮಾಡುತ್ತೇನೆ, ತಾವು ಈ ಸತ್ಸಂಪ್ರದಾಯವನ್ನು ಮರೆಯಬಾರದು.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ಏನು ನಿರ್ಣಯವಾಗಿದೆ ಎಂಬುದನ್ನು ಅವರು ತೆಗೆದು ಓದಲಿ. ನಿಲುವಳಿ ಸೂಚನೆ ಬಗ್ಗೆ ಒಂದು initiation ಮಾಡುವುದಕ್ಕೆ ಐದು ನಿಮಿಷ ಕಾಲಾವಕಾಶ ಕೊಡಬೇಕೆಂದು ನಿರ್ಣಯವಾಗಿದೆ. Let the Leader of the House go through the proceedings of the Business Advisory Committee meeting.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಮತ್ತು ಶೂನ್ಯ ವೇಳೆಯ ನಂತರ ನಿಲುವಳಿ ಸೂಚನೆಯ ಪ್ರಸ್ತಾವವನ್ನು ಮಂಡಿಸುವುದಕ್ಕೆ ಅನುಮತಿ ಕೊಡಬಹುದೆಂದು ನಿರ್ಣಯವಾಗಿದೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಒಬ್ಬ ಜವಾಬ್ದಾರಿಯುತ ವಿರೋಧ ಪಕ್ಷದ ನಾಯಕನಾಗಿ ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ನಿರ್ಣಯವಾಗಿರುವುದರ ಬಗ್ಗೆ ನಾನು ಬೆಳಕು ಚೆಲ್ಲುತ್ತಿದ್ದೇನೆ. Let the Leader of the House go through the proceedings of the Business Advisory Committee meeting.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಏನೇ ಮಾತನಾಡಿದರೂ ಕೂಡ ಅದನ್ನು ಕೇಳುವುದಕ್ಕೆ ನಾವು ಸಿದ್ಧರಿದ್ದೇವೆ. ಆದರೆ, ಅವರು ನಿಯಮದ ಪ್ರಕಾರ ಮಾತನಾಡಬೇಕಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:–** ನಾನು ನಿಯಮದ ಪ್ರಕಾರವೇ ಮಾತನಾಡುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಮತ್ತು ಶೂನ್ಯ ವೇಳೆಯ ನಂತರ ನಿಲುವಳಿ ಸೂಚನೆಯ ಪ್ರಾಥಮಿಕ ಮಾಹಿತಿಗೆ ತಾವು ಅವಕಾಶ ಕೊಡಬಹುದಾಗಿದೆ. ಆದ್ದರಿಂದ ದಯವಿಟ್ಟು ತಾವೀಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳಬೇಕೆಂದು ನಾನು ಪೀಠಕ್ಕೆ ವಿನಂತಿ ಮಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ನಿಲುವಳಿ ಸೂಚನೆ ಬಗ್ಗೆ ಪ್ರಸ್ತಾಪ ಬಂದಾಗ ಐದು ನಿಮಿಷ initiation ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು, ಆಮೇಲೆ ಪ್ರಶ್ನೋತ್ತರ ವೇಳೆ, ಶೂನ್ಯ ವೇಳೆ, ಇನ್ನಿತರ ವಿಷಯಗಳನ್ನು ತೆಗೆದುಕೊಂಡ ನಂತರ ಪೀಠ ನಿಲುವಳಿ ಸೂಚನೆಯನ್ನು ಪರಿವರ್ತನೆ ಮಾಡಬಹುದು ಅಥವಾ as it is ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬಹುದು. ಆದರೆ ಐದು ನಿಮಿಷ initiation ಮಾಡುವುದಕ್ಕೆ ಅವಕಾಶ ಕಲ್ಪಿಸಿ ಕೊಡಬೇಕೆಂದು ಕಾರ್ಯ ಕಲಾಪ ಸಲಹಾ ಸಮಿತಿ ಸಭೆಯಲ್ಲೇ ನಿರ್ಣಯವಾಗಿದೆ. I am going as per the proceedings made by the Business Advisory Committee.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಆ ಸ್ಥಾನದಲ್ಲಿದ್ದಾಗ ಸಭಾನಾಯಕರಾಗಿದ್ದಂತಹ ಮಾನ್ಯ ಎಸ್.ಆರ್.ಪಾಟೀಲ್‌ರವರು ಹೀಗೆ ಮಾಡಬೇಕೆಂದು ಹೇಳಿದಾಗ ತಾವು ಒಪ್ಪಿಕೊಂಡು ಪ್ರಶ್ನೋತ್ತರ, ಶೂನ್ಯವೇಳೆಯ ನಂತರವೇ ನನಗೆ ಪ್ರಾಥಮಿಕ ಮಾಹಿತಿಗೆ ಅವಕಾಶ ಮಾಡಿಕೊಟ್ಟಿದ್ದೀರಿ. ನಿಯಮ ಹೀಗಿದೆ, ನಾವೇ ಒಪ್ಪಿಕೊಂಡಿದ್ದೇವೆ, ನಮ್ಮದೇ ಕಾನೂನು, ನಾವೇ ಕಾನೂನನ್ನು ರಚನೆ ಮಾಡಿರುವವರು, ನಾವೇ ಕಾನೂನನ್ನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುರಿಯಬಾರದು ಎಂದು ಅವರು ಹೇಳಿದಾಗ ಅದಕ್ಕೆ ನೀವು ಸಹಮತವನ್ನು ವ್ಯಕ್ತಪಡಿಸಿ, ವಿರೋಧ ಪಕ್ಷದ ನಾಯಕನಾಗಿ ನಾನಿದ್ದಾಗ ತಾವು ಪ್ರಶ್ನೋತ್ತರ ಮತ್ತು ಶೂನ್ಯ ವೇಳೆಯ ನಂತರ ಅವಕಾಶ ಕೊಟ್ಟಿರುವುದನ್ನು ನಾನು ನೆನಪು ಮಾಡುತ್ತಿದ್ದೇನೆ.

**ಸಭಾಪತಿಯವರು:-** ಪ್ರಶ್ನೋತ್ತರ ಮತ್ತು ಶೂನ್ಯ ವೇಳೆಯ ನಂತರ ಪ್ರಾಥಮಿಕ ಮಾಹಿತಿಗೆ ಅವಕಾಶ ಮಾಡಿಕೊಟ್ಟು, ನಿಯಮ 68 ಕ್ಕೆ ಪರಿವರ್ತನೆ ಮಾಡಿದ ನಂತರ ಚರ್ಚೆಗೆ ಅವಕಾಶ ಕೊಡುತ್ತಾರೆ. ಸಬ್ಮಿಷನ್ ಮಾಡುವುದಕ್ಕಿಂತ ಮುಂಚೆ ಐದು ನಿಮಿಷ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಲಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಕಾರ್ಯ ಕಲಾಪ ಸಲಹಾ ಸಮಿತಿಯಲ್ಲಿ ಇದರ ಬಗ್ಗೆ ಸುದೀರ್ಘವಾಗಿ ಚರ್ಚೆಯಾಗಿ ಒಂದು conclusion ಗೆ ಬರಲಾಯಿತು. ಅದರ ಪ್ರಕಾರ ನಿಲುವಳಿ ಸೂಚನೆ ಬಗ್ಗೆ ಐದು ನಿಮಿಷ initiation ಮಾಡುವುದು, ತದನಂತರ ಅದನ್ನು ಪರಿವರ್ತನೆ ಮಡಬಹುದೋ ಅಥವಾ as it is ತೆಗೆದುಕೊಳ್ಳಬೇಕೋ, ಯಾವಾಗ ತೆಗೆದುಕೊಳ್ಳಬೇಕೋ ಎಂಬುದನ್ನು ಪೀಠ ನಿರ್ಧರಿಸುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಹೆಚ್ಚು ಮಾತನಾಡಲಿ ಎನ್ನುವ ಉದ್ದೇಶದಿಂದ ಪ್ರಶ್ನೋತ್ತರ ಮತ್ತು ಶೂನ್ಯ ವೇಳೆಯ ನಂತರ ತೆಗೆದುಕೊಳ್ಳಿ ಎಂದು ಆಗ ನಮಗೆ ಪೀಠ ಹೇಳಿತ್ತು. ಈಗಲೂ ನಾವು ಅದನ್ನೇ ಹೇಳುತ್ತೇವೆ. ವಿರೋಧ ಪಕ್ಷದ ನಾಯಕರಿಗೆ ಹೆಚ್ಚು ಮಾತನಾಡುವುದಕ್ಕೆ ಅನುಕೂಲವಾಗಲಿ ಎನ್ನುವ ಕಾರಣಕ್ಕಾಗಿ ಪ್ರಶ್ನೋತ್ತರ ಮತ್ತು ಶೂನ್ಯ ವೇಳೆಯ ನಂತರವೇ ತೆಗೆದುಕೊಳ್ಳುವುದಕ್ಕೆ ತಾವು ಅನುಮತಿ ಕೊಡಬೇಕೆಂದು ನಾನು ಸರ್ಕಾರದ ಪರವಾಗಿ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಹೆಚ್ಚು ಮಾತನಾಡುವ ಪ್ರಶ್ನೆ ಯಾವಾಗ ಬರುತ್ತದೆಂದರೆ, ತಾವು ಅವಕಾಶ ಕೊಡದಿದ್ದಾಗ ಹೆಚ್ಚು ಮಾತನಾಡಬೇಕಾಗುತ್ತದೆ. ಈಗ only initiation ಮಾಡುತ್ತೇನೆ.

**ಸಭಾಪತಿಯವರು:-** ಆಯಿತು, ಪ್ರಸ್ತಾಪ ಮಾಡಿ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದಂತಹ ಅತಿವೃಷ್ಟಿಯಿಂದ ಸುಮಾರು 55 ಲಕ್ಷ ಎಕರೆ ಪ್ರದೇಶದಲ್ಲಿ ರೈತರು ಬೆಳೆದಿದ್ದ ಬೆಳೆ ನಾಶವಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

50,000 ಕ್ಕಿಂತ ಹೆಚ್ಚು ಮನೆಗಳಿಗೆ ಹಾನಿಯಾಗಿವೆ ಮತ್ತು ಅಪಾರ ಪ್ರಮಾಣದಲ್ಲಿ ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಹಾನಿಯಾಗಿದೆ. ಹಲವರು ಪ್ರಾಣ ಕಳೆದುಕೊಂಡಿದ್ದಾರೆ, ನೂರಾರು ಹಳ್ಳಿಗಳು ನೀರಿನಲ್ಲಿ ಮುಳುಗಿದ್ದು, ಇಲ್ಲಿಯವರೆವಿಗೂ ಪರಿಹಾರ ಕಾರ್ಯನಿರ್ವಹಿಸುವಲ್ಲಿ ರಾಜ್ಯ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎನ್ನುವ ವಿಚಾರವನ್ನಿಟ್ಟುಕೊಂಡು ನಾನು ನಿಲುವಳಿ ಸೂಚನೆಯನ್ನು ಮಂಡಿಸಿದ್ದೇನೆ. Why it should be taken in the form of an Adjournment Motion ಎನ್ನುವುದಕ್ಕೆ ನಾನು ಹೇಳುತ್ತಿದ್ದೇನೆ. ಈ ಪ್ರವಾಹದಿಂದ ಈಗಾಗಲೇ ನಾನು ಹೇಳಿದ ಹಾಗೆ ಕರ್ನಾಟಕ ರಾಜ್ಯದ 30 ಜಿಲ್ಲೆಗಳಲ್ಲಿನ 22 ಜಿಲ್ಲೆಗಳಲ್ಲಿ ಬರತಕ್ಕಂಥ 180 ತಾಲ್ಲೂಕುಗಳು ಪ್ರವಾಹದಿಂದ ಮುಳುಗಿ ಹೋಗಿವೆ. ಅದರ ಜೊತೆಗೆ ಅಂದಾಜು 55 ಲಕ್ಷ ಎಕರೆಯಷ್ಟು ಭೂಮಿಯಲ್ಲಿ ಬೆಳೆದು ನಿಂತಿದ್ದ ಪೈರು ಸಂಪೂರ್ಣವಾಗಿ ನಾಶಗೊಂಡಿದೆ, ಮುಳುಗಿ ಹೋಗಿದೆ. ರೈತರು ಕಂಗಾಲಾಗಿರುವ ಪರಿಸ್ಥಿತಿ ಬಗ್ಗೆ ನಾನು ಹೇಳುತ್ತಿದ್ದೇನೆ. ಅಂದಾಜು 90 ಜನರು ಪ್ರಾಣ ಕಳೆದುಕೊಂಡಿದ್ದಾರೆ. 2000 ಜಾನುವಾರುಗಳು ನೀರಿನಲ್ಲಿ ಮುಳುಗಿ ಹೋಗಿವೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದೆ. 22 ಜಿಲ್ಲೆಗಳಲ್ಲಿ ಪ್ರಮುಖವಾಗಿ ಕಲಬುರ್ಗಿ ಜಿಲ್ಲೆ, ಬೀದರ್ ಜಿಲ್ಲೆ, ಗದಗ ಜಿಲ್ಲೆ, ಧಾರವಾಡ ಜಿಲ್ಲೆ, ಬೆಳಗಾವಿ ಜಿಲ್ಲೆ, ರಾಯಚೂರು ಜಿಲ್ಲೆ, ಹೀಗೆ ರೈತರು ಬೆಳೆದಂತಹ ಪ್ರಮುಖ ಬೆಳೆಗಳು ಸಂಪೂರ್ಣವಾಗಿ ಹಾನಿಯಾಗಿವೆ.

(ಮುಂದು)

**(967) 07-12-2020 1-30/bkp-ak**
**ಶ್ರೀ ಎಸ್.ಆರ್.ಪಾಟೀಲ್**(ಮುಂದು)

ಸನ್ಮಾನ್ಯ ಸಭಾಪತಿಯವರೇ, ಜೋಳ, ಹತ್ತಿ, ಕಬ್ಬು, ಸೊಯಾಬೀನ್ ಇರಬಹುದು ಈ ರೀತಿಯಲ್ಲಿ ಎಲ್ಲಾ ಬೆಳೆಗಳು ಸಂಪೂರ್ಣವಾಗಿ ನಾಶವಾಗಿರುತ್ತದೆ. ಕಳೆದ ಬಾರಿಯೂ ಸಹ ಶತಮಾನದಲ್ಲಿಯೇ ಕಂಡು ಕೇಳರಿಯದೇ ಇರುವಂತಹ ಬಹಳ ದೊಡ್ಡ ಪ್ರಮಾಣದ ಅತಿವೃಷ್ಟಿ ಮತ್ತು ಪ್ರವಾಹದಿಂದ ಸುಮಾರು 35 ಸಾವಿರ ಕೋಟಿಯಷ್ಟು ಬೆಳೆ ಹಾನಿಯಾಗಿದೆ. ಇದು ಕಳೆದ ಬಾರಿ ಆದಂತಹ ಬೆಳೆ ನಷ್ಟದ ಬಗ್ಗೆ ಹೇಳುತ್ತಿದ್ದೇನೆ. ರೈತರ ಬೆಳೆ ನಷ್ಟದ ಪರಿಹಾರಧನವನ್ನು ಸರ್ಕಾರ ಇನ್ನೂ ಸಹ ಸಂಪೂರ್ಣವಾಗಿ ಕೊಟ್ಟಿಲ್ಲ., ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿರುವಂತಹ ಲಕ್ಷಾಂತರ ಮನೆಗಳಿಗೆ ಪರಿಹಾರ ಕೊಡುವಂತಹ ಕಾರ್ಯ ಇನ್ನೂ ಪೂರ್ಣಗೊಂಡಿಲ್ಲ. ಈ ಬಾರಿಯೂ 27 ಜಿಲ್ಲೆಗಳಲ್ಲಿನ ಸುಮಾರು 180 ತಾಲ್ಲೂಕುಗಳಲ್ಲಿ ಅಂದಾಜು 55 ಲಕ್ಷ ಎಕರೆ ಭೂಮಿಯಲ್ಲಿ ಬೆಳೆದು ನಿಂತಂತಹ ಪೈರು ಸಂಪೂರ್ಣವಾಗಿ ಕೊಚ್ಚಿಕೊಂಡು ಹೋಗಿದೆ. 50 ಸಾವಿರಕ್ಕಿಂತ ಹೆಚ್ಚು ಮನೆಗಳು ಹಾಳಾಗಿ ಹೋಗಿವೆ. ಜನರು ಪ್ರಾಣ ಕಳೆದುಕೊಂಡಿದ್ದಾರೆ. ಜಾನುವಾರುಗಳು ತೇಲಿಕೊಂಡು ಹೋಗಿವೆ. ಅದರೆ ಇನ್ನೂ ಅದಕ್ಕೆ ಪರಿಹಾರಧನ ಕೊಡುವಂತಹ ಕೆಲಸವನ್ನು ಸರ್ಕಾರ ಪ್ರಾರಂಭ ಮಾಡಿಲ್ಲ. ಇದಕ್ಕಿಂತ ಬೇರೆ ಯಾವ ಜ್ವಲಂತ ಸಮಸ್ಯೆ ಈ ರಾಜ್ಯದಲ್ಲಿ ಆಗಬೇಕಾಗಿದೆ. ಆದ್ದರಿಂದ, ಮಾನ್ಯ ಸಭಾಪತಿಯವರೆ, ಇದು ಬಹಳ ಮಹತ್ವದ ವಿಚಾರವಾಗಿರುವುದರಿಂದ ಇಲ್ಲಾ ಕಾರ್ಯ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಲಾಪಗಳನ್ನು ಬದಿಗೊತ್ತಿ ನಿಯಮ59 ರಡಿ ನಾನು ಮತ್ತು ನಮ್ಮ ಅನೇಕ ಮಾನ್ಯ ಸದಸ್ಯರು ಸಹಿ ಮಾಡಿ ಮಂಡಿಸಿದಂತಹ ಈ ನಿಲುವಳಿ ಸೂಚನೆ ಮೇಲೆ ಚರ್ಚೆ ಮಾಡಲು ತಾವು ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡುತ್ತಿದ್ದೇನೆ. ಇದನ್ನು ನಿಯಮ 59 ರಡಿ ಯಲ್ಲಿಯೇ ತೆಗೆದುಕೊಂಡರೆ ಒಳ್ಳೆಯದು. ತಮ್ಮ ವಿವೇಚನೆ ಮೇರೆಗೆ ಪೀಠ ಇದನ್ನು ಬೇರೆ ನಿಯಮಕ್ಕೆ ಪರಿವರ್ತನೆ ಸಹ ಮಾಡಬಹುದಾಗಿದೆ. ಇದು ಅತ್ಯಂತ ಜ್ವಲಂತ ಸಮಸ್ಯೆಯಾಗಿದೆ. ನಮ್ಮ ಜಿಲ್ಲೆಗೆ ಹೋಗುವುದೇ ನಮಗೆ ಕಷ್ಟವಾಗಿದೆ. ಕಾರಣವೇನೆಂದರೆ, ಅಲ್ಲಿಗೆ ಹೋದರೆ ನಮ್ಮ ಜನರು 'ಬೆಳೆ ಹಾನಿ ಮತ್ತು ಮನೆಗಳ ಹಾನಿಗೆ ಸರ್ಕಾರ ಒಂದೇ ಒಂದು ರೂಪಾಯಿ ಪರಿಹಾರ ಕೊಟ್ಟಿಲ್ಲವೆಂದು ಅಲ್ಲಿನ ರೈತಾಪಿ ಜನರು ಹೇಳುತ್ತಿದ್ದಾರೆ. ಜೊತೆಗೆ ನಮ್ಮ ಜೊತೆಗಿದ್ದವರಲ್ಲಿ ಕೆಲವರು ಪ್ರವಾಹದಲ್ಲಿ ತೇಲಿ ಹೋಗಿದ್ದಾರೆ. ಇಂತಹ ಸಂದರ್ಭದಲ್ಲಿ ಒಂದು ಪೈಸೆಯನ್ನು ಸಹ ಸರ್ಕಾರ ಪರಿಹಾರ ಕೊಡಲಿಲ್ಲ.' ಎಂದು ಕೇಳುತ್ತಿದ್ದಾರೆ. ಕಳೆದ ಬಾರಿ 35 ಸಾವಿರ ಕೋಟಿ ರೂಪಾಯಿಗಳಷ್ಟು ಬೆಳೆ ನಷ್ಟವಾಗಿತ್ತು, ಈ ಬಾರಿ ಸುಮಾರು 25 ಸಾವಿರ ಕೋಟಿ ರೂಪಾಯಿಗಳಷ್ಟು ಬೆಳೆ ನಷ್ಟವಾಗಿದೆ. ಒಟ್ಟಾರೆಯಾಗಿ, ಸುಮಾರು 60 ಸಾವಿರ ಕೋಟಿ ರೂಪಾಯಿಗಳಷ್ಟು ಬೆಳೆ ನಷ್ಟವಾಗಿದೆ. ಇದಕ್ಕೆ ಸರ್ಕಾರ ಪರಿಹಾರವನ್ನೇ ಕೊಟ್ಟಿಲ್ಲ. ಕಳೆದ ಬಾರಿ ಅಲ್ಪ ಸ್ವಲ್ಪ ಪರಿಹಾರ ಕೊಟ್ಟಿದೆ, ಅದರಲ್ಲೂ ಇನ್ನೂ ಬಾಕಿ ಉಳಿದಿದೆ. ಆದರೆ, ಈ ಬಾರಿ ಆಗಿರುವಂತಹ ನಷ್ಟಕ್ಕೆ ಪರಿಹಾರ ನೀಡುವವರೇ ದಿಕ್ಕಿಲ್ಲ. ಏನು ಸರ್ಕಾರ ಅಸ್ತಿತ್ವದಲ್ಲಿ ಇದೆಯೋ ಇಲ್ಲವೋ ಎಂದು ಜನರು ಸಂಶಯ ಪಡುತ್ತಿದ್ದಾರೆ. The very existence of this government is questioned by the people of Karnataka State. It has gone to that extent. ಜನರು ಕಣ್ಣೀರಿನಲ್ಲಿ ಕೈತೊಳೆಯುತ್ತಿದ್ದಾರೆ. ತಮಗೆ ಗೊತ್ತಿರುವಂತೆ, ಕೃಷಿ ಪ್ರಧಾನವಾದ ಭಾರತ ದೇಶದಲ್ಲಿ ರೈತರ ಸ್ಥಿತಿಗತಿ ಏನಾಗಿದೆ ಎನ್ನುವುದರ ಬಗ್ಗೆ ಬೇರೆ ಬೇರೆ ವಿಚಾರಗಳು ಚರ್ಚೆಗೆ ಬಂದಂತಹ ಸಮಯದಲ್ಲಿ ಚರ್ಚೆ ಮಾಡುತ್ತೇವೆ. ಆದರೆ, ಕರ್ನಾಟಕ ರಾಜ್ಯದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆ ನಾಶವಾಗಿದೆ, ಮನೆಗಳು ಕೊಚ್ಚಿಕೊಂಡು ಹೋಗಿವೆ, ಜನರು ಮತ್ತು ಜಾನುವಾರುಗಳು ನೀರಿನಲ್ಲಿ ತೇಲಿಕೊಂಡು ಹೋಗಿದ್ದರೂ ಸಹ ಸರ್ಕಾರ ಇದರ ಬಗ್ಗೆ ದಿವ್ಯ ನಿರ್ಲಕ್ಷ್ಯ ತೋರುತ್ತಿದೆಯೆಂದು ನಾನು ಬಹಳ ನೋವಿನಿಂದ ಮತ್ತು ಭಾರವಾದ ಮನಸ್ಸಿನಿಂದ ಹೇಳುತ್ತಿದ್ದೇನೆ. ತಮ್ಮ ಮೂಲಕ ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ನಿಯಮ59 ರಡಿಯಲ್ಲಿ ಈ ವಿಚಾರವನ್ನು ಚರ್ಚೆ ಮಾಡಲಿಕ್ಕೆ ನನಗೂ ಮತ್ತು ನನ್ನ ಸ್ನೇಹಿತರಿಗೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು:** ನಿಯಮ 68 ರಡಿಯಲ್ಲಿ ಈ ವಿಚಾರನವನ್ನು ಚರ್ಚೆಗೆ ತೆಗೆದುಕೊಳ್ಳಲಾಗುವುದು. ಈಗ ಪ್ರಶ್ನೋತ್ತರ ಪ್ರಾರಂಭ ಮಾಡೋಣ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತಂತಹ ಮಾತುಗಳನ್ನು ನಾನು ಕೇಳಿದ್ದೇನೆ. ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಪ್ರವಾಹ ಮತ್ತು ಸಂತ್ರಸ್ತರನ್ನು ಈ ಪರಿಯಲ್ಲಿ ಸಮಾಧಾನ ಮಾಡಿ, ಬಡವರಿಗೆ ಮತ್ತು ನೊಂದವರಿಗೆ ಸಹಾಯ ಮಾಡಿದಂತಹ ಮತ್ತೊಂದು ಸರ್ಕಾರ ಇಲ್ಲ. ಪ್ರಥಮ ಬಾರಿಗೆ ನಮ್ಮ ಸರ್ಕಾರ ಈ ಕೆಲಸವನ್ನು ಮಾಡಿದೆ.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ಜನರು ಸಾಯುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):** ಮಾನ್ಯ ಸಭಾಪತಿಯವರೆ, ಅವರು ಯಾವುದೇ ನಿಯಮದಡಿಯಲ್ಲಿ ಈ ವಿಚಾರವನ್ನು ಚರ್ಚೆಗೆ ತಂದರೂ ಸರ್ಕಾರ ಉತ್ತರ ಕೊಡುವುದಕ್ಕೆ ಸಿದ್ಧವಿದೆ.

(ಗೊಂದಲ)

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಮಾಡಿರುವುದು ಸರಿಯಿದೆಯೇ ಎನ್ನುವುದರ ಬಗ್ಗೆ ಈಗ ಸದನದ ಮುಂದೆ ಚರ್ಚೆ ಆಗುತ್ತಿದೆ. ಅದರ ಬಗ್ಗೆ ಅವರು ಉತ್ತರವನ್ನು ಕೊಡಲಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ಯಾವುದೇ ರೀತಿಯ ಚರ್ಚೆಗೆ ಸರ್ಕಾರ ಸಿದ್ಧವಿದೆ. ಅವರು ಮೆಚ್ಚುವಂತಹ ಉತ್ತರವನ್ನು ನಾವು ನೀಡುತ್ತೇವೆ.

**(ಗೊಂದಲ)**

**ಶ್ರೀ. ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ರಾಜ್ಯದ ಆರೂವರೆ ಕೋಟಿ ಜನರು ಅವರನ್ನು ಹಾಡಿ ಹೊಗಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ರಾಜ್ಯದ ಆರೂವರೆ ಕೋಟಿ ಜನರು ಮೆಚ್ಚುವಂತಹ ಉತ್ತರವನ್ನು ಕೊಡುತ್ತೇವೆ. ಆ ಆರೂವರೆ ಕೋಟಿ ಜನರು ನೆಮ್ಮದಿಯಾಗಿದ್ದಾರೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಯಾವುದೇ ರೀತಿಯ ಚರ್ಚೆಗೆ ನಾವು ಸಿದ್ಧರಿದ್ದೇವೆ. ಎಷ್ಟು ಮನೆಗಳನ್ನು ಈ ಸರ್ಕಾರ ಕೊಟ್ಟಿದೆ ಹಿಂದಿನ ಸರ್ಕಾರ ಎಷ್ಟು ಕೊಟ್ಟಿತ್ತು ಎನ್ನುವ ಇತಿಹಾಸವನ್ನು ನೋಡೋಣ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, 5 ಲಕ್ಷ ಜನರಿಗೆ ಮನೆಗಳನ್ನು ಕೊಟ್ಟಿದ್ದಾರೆಯೇ, ಎಷ್ಟು ಜನರಿಗೆ ಪರಿಹಾರವನ್ನು ಕೊಟ್ಟಿದ್ದಾರೆ ಎನ್ನುವುದರ ಬಗ್ಗೆ ಮಾತನಾಡೋಣ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಸನ್ಮಾನ್ಯ ಸಭಾಪತಿಯವರೇ, ನಾವು ಎಲ್ಲ ಮಾಹಿತಿಗಳನ್ನು ಕೊಡುತ್ತೇವೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಅವರಿಂದ ನಾವು ಬರೀ ಉತ್ತರವನ್ನು ಕೇಳುತ್ತಿಲ್ಲ. ಪರಿಹಾರವನ್ನು ಕೊಡಿ ಎಂದು ಕೇಳುತ್ತಿದ್ದೇವೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):** ಮಾನ್ಯ ಸಭಾಪತಿಯವರೇ, ಯಾರು ಸಂಕಷ್ಟದಲ್ಲಿದ್ದಾರೆ ಅವರಿಗೆ ಪರಿಹಾರವನ್ನು ರಾಜಕೀಯ ಕಾರಣಗಳಿಗಾಗಿ ಕೊಟ್ಟಿಲ್ಲ. ಸಂಕಷ್ಟದಲ್ಲಿರುವ ಬಡವರಿಗೆ ಸರ್ಕಾರ ಸಂಪೂರ್ಣವಾಗಿ ನೆರವಾಗಿದೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಯಾವ ಪರಿಹಾರವನ್ನು ಕೊಟ್ಟಿದೆ? ಯಾವುದನ್ನು ಕೊಟ್ಟಿಲ್ಲ ಎನ್ನುವುದರ ಬಗ್ಗೆ ಅವರು ಮಾಹಿತಿಯನ್ನು ನೀಡಲಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಯಾವುದೇ ಚರ್ಚೆಗೂ ಸರ್ಕಾರ ಸಿದ್ಧವಿದೆ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, 35 ಸಾವಿರ ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆಯೆಂದು ಸರ್ಕಾರ ಹೇಳುತ್ತಿದೆ. ಎಷ್ಟು ಪರಿಹಾರ ನೀಡಲಾಗಿದೆ ಎನ್ನುವುದರ ಬಗ್ಗೆ ಮಾಹಿತಿಯನ್ನು ಸರ್ಕಾರ ನೀಡಲಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿः–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಮಾಡಿರುವ ಕೆಲಸವನ್ನು ಮರೆ ಮಾಚದೇ ಅವರಿಗೆ ಮಾಹಿತಿಯನ್ನು ನೀಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್ः–** ಸನ್ಮಾನ್ಯ ಸಭಾಪತಿಯವರೇ, the BJP Government's days are numbered.

**ಸಭಾಪತಿಯವರುः–** ಈಗ ಪ್ರಶ್ನೋತ್ತರ ಮಾನ್ಯ ಪ್ರಸನ್ನಕುಮಾರ್.

**ಶ್ರೀ ಆರ್.ಪ್ರಸನ್ನಕುಮಾರ್ः–** ಸನ್ಮಾನ್ಯ ಸಭಾಪತಿಯವರೇ, ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆः 67 ಅನ್ನು ಮಾನ್ಯ ಸಚಿವರಲ್ಲಿ ಕೇಳಬಯಸುತ್ತಿದ್ದೇನೆ.

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ತಾವು ಪ್ರಶ್ನೋತ್ತರವನ್ನು ತೆಗೆದುಕೊಳ್ಳುವುದರ ಬಗ್ಗೆ ನನ್ನ ಅಭ್ಯಂತರವೇನೂ ಇಲ್ಲ. ಆದರೆ, ಒಂದು ಸ್ಪಷ್ಟೀಕರಣವನ್ನು ಬಯಸುತ್ತಿದ್ದೇನೆ. ಮಾನ್ಯ ಸಚಿವರಾದ ಶ್ರೀ ಎಸ್. ಸುರೇಶ್‌ಕುಮಾರ್‌ರವರು ಹೊರಗಡೆ ಅಂದರೆ, ಸೆಪ್ಟಂಬರ್ 26ನೇ ತಾರೀಖಿನಂದು ............

**ಸಭಾಪತಿಯವರುः–** ಇದರ ಮೇಲೆ ಚರ್ಚೆ ಬೇಡವೆಂದು ಈಗಾಗಲೇ ನಾನು ಹೇಳಿದ್ದೇನೆ.

**ಶ್ರೀ ಎನ್. ರವಿಕುಮಾರ್(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಈ ರೀತಿ ಹೊರಗಡೆ ಕೇಳಿರುವಂತಹ ಪ್ರಶ್ನೆ ಅಥವಾ ಪತ್ರಿಕೆಗಳಲ್ಲಿ ಬಂದಿರುವಂತಹ ಪ್ರಶ್ನೆಗೆ ಸದನದೊಳಗೆ ಉತ್ತರ ಕೊಟ್ಟಿರುವಂತಹ ಉದಾಹರಣೆಗಳು ಈ ಸದನದ ನಡವಳಿಯಲ್ಲಿ ಇಲ್ಲ.

**ಸಭಾಪತಿಯವರುः–** ಹಿಂದೆ ಇರಲಿಲ್ಲ. ಈಗ ಇದೆ. ಇರಲಿ.

**ಶ್ರೀ ಎನ್.ರವಿಕುಮಾರ್:–** ಸನ್ಮಾನ್ಯ ಸಭಾಪತಿಯವರೇ, ಈ ರೀತಿ ಹೊಸ ಸಂಪ್ರದಾಯವನ್ನು ಯಾವ ನಿಯಮಾವಳಿಗಳಡಿಯಲ್ಲಿ ತರಲಾಗಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಸದನದ ಹೊರಗಡೆ ಆಗಿರುವಂತಹ ವಿಚಾರಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಈ ಸದನಕ್ಕೆ ಅಧಿಕಾರವಿದೆ.

(ಗೊಂದಲ)

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ಸದನ ಹೊರಗಡೆ ಮಾನ್ಯ ಸುರೇಶ್‌ಕುಮಾರ್‌ರವರು ಟ್ವೀಟ್ ಮಾಡಿರುವ ವಿಚಾರಕ್ಕೆ ಸದನದ ಒಳಗೆ ಉತ್ತರ ಕೊಡುವಂತಹ ನಿಯಮ ಯಾವ ನಿಯಮಾವಳಿಗಳಲ್ಲಿ ಇದೆ?

(ಗೊಂದಲ)

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ ಅವರು ಮಾಡಿರುವ ಟೀಕೆ ಮಾನ್ಯ ಪ್ರತಾಪ್‌ಚಂದ್ರ ಶೆಟ್ಟಿಯವರ ಮೇಲಲ್ಲ. ಅವರು ಪೀಠದ ಮೇಲೆ ಟೀಕೆ ಮಾಡಿದ್ದಾರೆ. ಸಭಾಪತಿಗಳ ಮೇಲೆ ಟೀಕೆ ಮಾಡಿದ್ದಾರೆ. ಅವರು umpiring ಸರಿ ಇಲ್ಲ ಎಂದು ಹೇಳಿರುವುದನ್ನು ನಾನು ಪ್ರಸ್ತಾಪ ಮಾಡಲಿಲ್ಲ. ಅದನ್ನು ಎಲ್ಲಿ ಕೇಳಬೇಕಾಗಿತ್ತೋ ಅದನ್ನು ಇಲ್ಲಿ ಸೂಕ್ಷ್ಮವಾಗಿ ಹೇಳಲಾಗಿದೆ. ಅದರಲ್ಲಿ ಏನು ಬರೆದಿದ್ದಾರೆ ಎನ್ನುವುದನ್ನು ನೋಡಿ.

(ಗೊಂದಲ)

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ನಮ್ಮ ನಿಯಮಾವಳಿಗಳ ಪುಸ್ತಕದಲ್ಲಿ ಇದಕ್ಕೆ ಅವಕಾಶವಿದೆಯೇ?

(ಗೊಂದಲ)

**Sri S.R. PATIL:** Mr. Chairman Sir, you have already ruled that no discussion should take place on your statement. ನಾವು ಮಾತನಾಡುವುದು ಅವರು ಮಾತನಾಡುವುದು ಸರಿ ಹೋಗುವುದಿಲ್ಲ.

(ಗೊಂದಲ)

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ಹೊಸ ಪರಂಪರೆಯನ್ನು ಹುಟ್ಟಾಕುವುದು ಬೇಡ ಎನ್ನುವುದು ನಮ್ಮ ಕಳಕಳಿಯಾಗಿದೆ.

**Sri S.R. PATIL:** The Chair has already ruled.

**ಶ್ರೀ ಎನ್.ರವಿಕುಮಾರ್:-** ಹಿಂದೆ ಯಾವತ್ತೂ ಈ ರೀತಿ ಆಗಿರಲಿಲ್ಲ. ಹೊಸ ಪದ್ಧತಿ ಅಥವಾ ಹೊಸ ಪರಂಪರೆಯನ್ನು ಪ್ರಾರಂಭ ಮಾಡುವುದು ಬೇಡ. ಸದನದ ನಿಯಮಾವಳಿಗಳಂತೆ ನಡೆದುಕೊಳ್ಳಬೇಕಾಗುತ್ತದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಗೊಂದಲ)

**ಸಭಾಪತಿಯವರು:–** ತಾವು ಈ ಮಾತನ್ನು ಯಾರಿಗೆ ಹೇಳುತ್ತಿದ್ದೀರಿ? ಮಾನ್ಯ ಸಚಿವರಿಗಾ ಅಥವಾ ನನಗಾ?

(ಗೊಂದಲ)

**ಶ್ರೀ ಎನ್.ರವಿಕುಮಾರ್:–** ಸನ್ಮಾನ್ಯ ಸಭಾಪತಿಯವರೇ, ಹಿಂದೆ ಯಾವಾಗಲಾದರೂ ಈ ರೀತಿಯ ಚರ್ಚೆಗೆ ಅವಕಾಶ ಕೊಡಲಾಗಿತ್ತೇ? ಈಗ ಹೊಸ ಸಂಪ್ರದಾಯಕ್ಕೆ ಏತಕ್ಕೋಸ್ಕರ ಅವಕಾಶವನ್ನು ಕೊಡುತ್ತಿದ್ದೀರಿ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಶತಮಾನಗಳಷ್ಟು ಇತಿಹಾಸವಿರುವಂತಹ ಈ ಗೌರವಾನ್ವಿತ ಸದನದಲ್ಲಿ ತಾವು ಏನು ಪ್ರಕಟಣೆ ಕೊಟ್ಟಿದ್ದೀರಿ, ಉನ್ನತ ಪರಂಪರೆ, ಸತ್ಸಂಪ್ರದಾಯ, ಪೀಠದ ಮೇಲೆ ಆಪಾದನೆ ಮಾಡಿರುವಂತಹ ಸಂದರ್ಭದಲ್ಲಿ ಅದು ಪ್ರತಾಪಚಂದ್ರ ಶೆಟ್ಟಿಯವರ ಮೇಲೆ ಮಾಡಿರುವಂತಹ ಆಪಾದನೆಯಲ್ಲ, ಪೀಠಕ್ಕೆ ಆಗಿರುವಂತಹ ಅಗೌರವ ಎನ್ನುವ ದೃಷ್ಟಿಯಿಂದ ತಾವು ಪ್ರಕಟಣೆ ಕೊಟ್ಟಿದ್ದೀರಿ, ಇದರ ಬಗ್ಗೆ ಚರ್ಚೆ ಬೇಡವೆಂದು ಗೌರವಯುತವಾಗಿ ಹೇಳಿದ್ದೀರಿ, ತಮ್ಮ ಗೌರವಯುತವಾದ ಮಾತುಗಳನ್ನು ಈ ಸದನದ ಗೌರವಯುತ ಸದಸ್ಯರು ಪಾಲಿಸಬೇಕೆಂದು ವಿರೋಧ ಪಕ್ಷದ ನಾಯಕನಾಗಿ ಹೇಳುವುದಕ್ಕೆ ಬಯಸುತ್ತಿದ್ದೇನೆ.

**(ಮುಂದು)**

**(968) 07.12.2020 01.40 ಎಸ್‌ವಿ–ವಿಕೆ**
**ಶ್ರೀ ಎಸ್.ಆರ್.ಪಾಟೀಲ್**(ಮುಂದುವರೆದುದು)

ಇದರ ಬಗ್ಗೆ ಚರ್ಚೆ ಮಾಡುವುದು ಬೇಡವೆಂದು ತಾವು ಗೌರವಯುತವಾಗಿ ಹೇಳಿದ್ದೀರಿ. ಈ ಸದನದ ಗೌರವಾನ್ವಿತ ಸದಸ್ಯರು ಅದನ್ನು ಪಾಲಿಸಬೇಕೆಂದು ಪ್ರತಿಪಕ್ಷದ ನಾಯಕನಾಗಿ ನಾನು ಮನವಿ ಮಾಡುತ್ತೇನೆ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧಪಕ್ಷದ ನಾಯಕರಿಗೂ ಸಾಕಷ್ಟು ಅನುಭವಗಳು ಸದನದ ಒಳಗೆ ಆಗಿದೆ. ಈ ರೀತಿಯ ಅನುಭವ ನನಗೆ ಹೊಸತು ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಹೊಸತಾಗಿರಬಹುದು. ಆದ್ದರಿಂದ ನಾನು ಒಂದು ಸ್ಪಷ್ಟೀಕರಣವನ್ನು ಬಯಸುತ್ತಿದ್ದೇನೆ. ತಾವು ಕೊಟ್ಟಿರುವ ಉತ್ತರವನ್ನು ಯಾವ ನಿಯಮಾವಳಿಗಳ ಅಡಿಯಲ್ಲಿ ನೀಡಿರುತ್ತೀರಿ? ಇದೇ ರೀತಿಯಾಗಿ ಅನೇಕ ಟ್ವೀಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಬರುತ್ತವೆ. ಅವುಗಳಿಗೂ ತಾವು ಉತ್ತರವನ್ನು ನೀಡುವಿರಾ?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, please permit me to speak..

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ಮಾನ್ಯ ರವಿಕುಮಾರ್ ಅವರೇ, ಈಗ ತಾವು ಮಾತನಾಡಲು ಎದ್ದು ನಿಂತಿದ್ದೀರಿ. ತಾವು ಯಾವ ನಿಯಮದಡಿಯಲ್ಲಿ ಮಾತನಾಡಲು ನಿಂತಿದ್ದೀರಿ ಎಂಬುದನ್ನು ಹೇಳಿ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ತಾವು ಒಂದು ವಿಷಯವನ್ನು ಸದನದಲ್ಲಿ ಮಂಡನೆ ಮಾಡಿ ಅದರ ಬಗ್ಗೆ ಚರ್ಚೆ ಮಾಡುವುದು ಬೇಡ ಎಂದರೆ ಅದು ಯಾವ ನ್ಯಾಯ?

**ಡಾ:ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಚರ್ಚೆ ಮಾಡಲು ಅವಕಾಶವನ್ನು ನೀಡಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್ ಅವರು ಸ್ಪಷ್ಟೀಕರಣ ನೀಡಬೇಕೆಂದು ಕೇಳುತ್ತಿದ್ದಾರೆ. ನಾನು ಒಂದು ನಿಮಿಷದಲ್ಲಿ ಹೇಳುತ್ತೇನೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ಅನುಸಾರವಾಗಿ ಈ ಒಂದು ಸದನ ನಡೆಯಬೇಕೆಂಬುದಾಗಿ ನಾನು ಆಶಿಸುತ್ತೇನೆ.

**ಡಾ:ವೈ.ಎ.ನಾರಾಯಣಸ್ವಾಮಿ:-** ಎಲ್ಲರಿಗೂ ಅದೇ ಆಶಯವಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಮ್ಮ ಪೀಠಕ್ಕೆ ಈ ನಿಯಮಗಳನ್ನು ಮೀರಿ, ಅವುಗಳನ್ನು ಬದಿಗೊತ್ತಿ you have got an unfettered discretionary powers. Wherein you can suspend all these rules and give a ruling. ಇದು ಯಾವ ನಿಯಮದಡಿಯಲ್ಲಿ ಎಂದು ಮಾನ್ಯ ರವಿಕುಮಾರ್ ಅವರು ಕೇಳುತ್ತಿದ್ದು ಬಹಳ ಒಳ್ಳೆಯ ಪ್ರಶ್ನೆ. ಆದರೆ ಈ ಪೀಠಕ್ಕೆ ಇರುವ discretionary power ಅಂದರೆ, it is an unfettered discretionary power. You can suspend all these rules and give a ruling.

**(ಗೊಂದಲ)**

**ಸಭಾಪತಿಯವರು:-** ನಿಯಮ 342.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ರೀತಿಯಲ್ಲಿ ಹೊಸ ಪರಂಪರೆಯನ್ನು ಹಾಕುತ್ತಾ ಹೋದರೆ ದಿನಕ್ಕೊಂದು ಹೊಸ ಪರಂಪರೆಯನ್ನು ಹಾಕಬಹುದು. ಸದನವನ್ನು ವ್ಯವಸ್ಥಿತ ರೀತಿಯಲ್ಲಿ ನಡೆಸುವುದಕ್ಕೆ ಆಗುವುದಿಲ್ಲ.

**ಡಾ:ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು ಸ್ಪಷ್ಟೀಕರಣವನ್ನು ಕೊಟ್ಟಿರುವಿರಿ. ಇಲ್ಲ ಎಂದು ಹೇಳುವುದಿಲ್ಲ. ಯಾರು ಹೇಳಿಕೆಯನ್ನು ಕೊಟ್ಟಿದ್ದಾರೆಯೋ ಅವರಿಗೂ ಮಾತನಾಡಲು ಅವಕಾಶ ಕೊಡಿ. ಅವರು ಹೇಳುತ್ತಾರೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ಸುಮ್ಮನೆ ಅವರನ್ನೇಕೆ ಎಳೆಯುತ್ತೀರಿ?

**ಶ್ರೀ ಆರ್.ಪ್ರಸನ್ನಕುಮಾರ್:-** ಮಾನ್ಯ ಸಭಾಪತಿಯವರೇ, ಪೀಠದ ವಿರುದ್ಧ ಅಗೌರವ ತೋರಿದವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಹೀಗೆ ದಿನಕ್ಕೊಂದು ಹೊಸ ಪರಂಪರೆ ಸೃಷ್ಟಿಸುತ್ತಾ ಹೋದರೆ ನಿಯಮಾವಳಿಗಳ ಪುಸ್ತಕ ಏಕೆ ಬೇಕು? ಸಂವಿಧಾನ ಏಕೆ ಬೇಕು? ನೀವು ಹೊಸ ಪರಂಪರೆಯನ್ನು ಪ್ರಾರಂಭಿಸುವುದಾದರೆ ಎಲ್ಲರೂ ಪ್ರಾರಂಭಿಸುತ್ತಾರೆ. ಸದನದ ನಿಯಮಾವಳಿಗಳ ಅನುಸಾರ ಉತ್ತರವನ್ನು ಕೊಡಿ.

**ಸಭಾಪತಿಯವರು:-** ಮಾನ್ಯ ರವಿಕುಮಾರ್ ಅವರೇ, ನಾನು ನಿಮಗೆ ಚರ್ಚೆಗೆ ಅನುಮತಿಯನ್ನು ಕೊಟ್ಟಿರುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಪ್ರತಿಪಕ್ಷದ ನಾಯಕರು ಕೆಲವು ಅಂಶಗಳನ್ನು ಉಲ್ಲೇಖ ಮಾಡಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮೇಲ್ಮನೆ ಎಂದರೆ ಬಹಳ ಹಿರಿತನ ಇದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು tempt ಮಾಡುವುದು ಬೇಡ. I can speak on this point. ಸಭಾಪತಿಯವರ ಪೀಠವೆಂದರೆ ನ್ಯಾಯಸ್ಥಾನವಿದ್ದಂತೆ. ನ್ಯಾಯಾಲಯದ ಆದೇಶಕ್ಕೆ ಈ ರೀತಿ comment ಮಾಡಿದರೆ ಸುಮ್ಮನಿರುತ್ತಾರೆಯೇ? Suo Moto ಎನ್ನುವ ಪ್ರಶ್ನೆ ಬರುತ್ತದೆ. ತಾವು ಇದರ ಬಗ್ಗೆ ಚರ್ಚೆ ಬೇಡ ಎಂದು ಮನವಿ ಮಾಡಿಕೊಂಡಿರುತ್ತೀರಿ. ಆದ್ದರಿಂದ ಇದರ ಮೇಲಿನ ಚರ್ಚೆಯಲ್ಲಿ ನಾವು ಭಾಗಿಯಾಗುವುದಿಲ್ಲ. ಇದನ್ನು ನಾವು ಮುಂದಕ್ಕೆ ತೆಗೆದುಕೊಂಡು ಹೋಗುವುದಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಸಮಯದ ಬಗ್ಗೆ ಇಷ್ಟೆಲ್ಲಾ ಮಾತನಾಡುವವರು ಅನವಶ್ಯಕವಾಗಿ ಇಷ್ಟು ಮಾತನಾಡುತ್ತಿದ್ದಾರೆ. ಇದು ಸರಿಯೇ? ಮಾನ್ಯ ಸಭಾಪತಿಯವರು ಕೊನೆಯ ಎರಡು ಸಾಲುಗಳಲ್ಲಿ ಏನು ಬರೆದಿದ್ದಾರೆ ಎಂಬುದನ್ನು ಮಾನ್ಯ ಸಭಾನಾಯಕರು ಒಮ್ಮೆ ಓದಬೇಕು. ಇದನ್ನು ಚರ್ಚೆಗೆ ತರಬಾರದು ಎಂದು ಸರ್ಕಾರಕ್ಕೆ ಹೇಳಿದ್ದಾರೆಯೇ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದು ವ್ಯಕ್ತಿಗತ comment ಅಲ್ಲ. ನ್ಯಾಯಾಲಯದ ವಿರುದ್ಧ ಯಾರಾದರೂ comment ಮಾಡಿದರೆ Suo Moto, the Court can give a

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

summons. It amounts to contempt of Court ಎಂದು ನ್ಯಾಯಾಲಯದವರು ನಿರ್ಣಯವನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಬಹಳ ಚರ್ಚೆ ಮಾಡುವುದು ಬೇಡ. ನನಗೆ ಮಾನ್ಯ ಸುರೇಶ್ ಕುಮಾರ್ ಅವರ ಬಗ್ಗೆ ಬಹಳ ಗೌರವವಿದೆ. ಅವರು ಒಬ್ಬ ಸುಸಂಸ್ಕೃತ ಸಚಿವರಾಗಿದ್ದು, ಅವರ ಬಗ್ಗೆ ಅಪಾರವಾದ ಗೌರವವಿದೆ. ಅದಕ್ಕಾಗಿ ನಾನು ಇದನ್ನು ವಿಸ್ತೃತವಾಗಿ ಲಂಬಿಸುವುದಕ್ಕೆ ಹೋಗುವುದಿಲ್ಲ. ಇದು ನ್ಯಾಯಸ್ಥಾನ, ತಾವು ನ್ಯಾಯಾಧೀಶರು. ಯಾವುದೇ ಒಂದು ನ್ಯಾಯಾಲಯದ ಮೇಲೆ, ನ್ಯಾಯಾಧೀಶರ ಮೇಲೆ comment ಮಾಡಿದ್ದರೆ ತಕ್ಷಣ contempt of Court proceedings ಪ್ರಾರಂಭವಾಗುತ್ತದೆ. ಯಾರೂ contempt of Court proceedings ಹಾಕದಿದ್ದರೆ, ನ್ಯಾಯಾಲಯ Suo Moto summons ಕೊಟ್ಟು ತಿಂಗಳಾನುಗಟ್ಟಲೆ ಜೈಲಿಗೆ ಕಳುಹಿಸಿರುವ ಉದಾಹರಣೆಗಳಿವೆ.

**(ಗೊಂದಲ)**

**ಸಭಾಪತಿಯವರು:-** ಪ್ರಶ್ನೋತ್ತರ ಕಲಾಪವನ್ನು ತೆಗೆದುಕೊಳ್ಳುವುದು ಬೇಡವೇ? (ಗೊಂದಲ) ಯಾವುದೂ ಕಡತಕ್ಕೆ ಹೋಗುವುದಿಲ್ಲ. ಮಾನ್ಯ ಡಾ:ವೈ.ಎ.ನಾರಾಯಣಸ್ವಾಮಿಯವರು ಮಾತನಾಡಿರುವುದು ಯಾವುದೂ ಕಡತಕ್ಕೆ ಹೋಗುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶಾನುಸಾರ ಸದನದ ನಡವಳಿಗಳನ್ನು ದಾಖಲಿಸಲಾಗಿರುವುದಿಲ್ಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸುರೇಶ್ ಕುಮಾರ್ ಅವರು ಮಾಡಿದಂತಹ ಒಂದು ಟ್ವೀಟ್‌ಗೆ ತಾವು ನೀಡಿರುವ ಪ್ರತಿಕ್ರಿಯೆಯ ಕುರಿತು ನಮ್ಮಲ್ಲಿ ಏನೂ ಗೊಂದಲವಿಲ್ಲ. ಈ ಸದನದಲ್ಲಿ ನಡೆದು ಬಂದಿರುವಂತಹ ಸತ್ಸಂಪ್ರದಾಯಗಳು, ಪರಂಪರೆಗಳ ಬಗ್ಗೆ ನನಗಿಂತ ಹೆಚ್ಚು ತಾವು ತಿಳಿದಿರುತ್ತೀರಿ. ಮಾನ್ಯ ಶ್ರೀ ಯಂ.ಸಿ.ನಾಣಯ್ಯನವರು, ಮಾನ್ಯ ಶ್ರೀ ಬಸವರಾಜ ಹೊರಟ್ಟಿಯವರು ಇತಿಹಾಸದುದ್ದಕ್ಕೂ ನಮಗೆ ಮಾರ್ಗದರ್ಶನ ಮಾಡಿದ್ದಾರೆ. ತಮ್ಮಲ್ಲಿ ನನ್ನದೊಂದು ವಿನಂತಿ. ರಾಜ್ಯದಲ್ಲಿ ವಿಧಾನ ಪರಿಷತ್ತಿಗೆ, ಕೇಂದ್ರದಲ್ಲಿ ರಾಜ್ಯಸಭೆಗೆ ಬಹುತೇಕ ಆಡಳಿತ ಪಕ್ಷಕ್ಕೆ ಬಹುಮತವಿರುವ ಸಂಭವಗಳು ಕಡಿಮೆ. ಇಲ್ಲಿ ನಾನು-ನೀವು ನೋಡಿದಂತೆ ಇತಿಹಾಸದುದ್ದಕ್ಕೂ ಯಾವುದೇ ವಿಧೇಯಕಗಳು ತಿರಸ್ಕೃತಗೊಂಡದ್ದು ಕಡಿಮೆ. ಒಂದು ಘಟನೆ ನಡೆದ ಹಿನ್ನೆಲೆಯಲ್ಲಿ ಒಂದಷ್ಟು ಚರ್ಚೆಗಳಾಗಿದೆ. ಮಾನ್ಯ ಸುರೇಶ್ ಕುಮಾರ್ ಅವರು ಬಹಳ ಹಿರಿಯ ಸದಸ್ಯರು, ಸಂಸದೀಯ ವ್ಯವಹಾರಗಳ ಅರಿವು ಇರುವವರು ಸರ್ಕಾರಕ್ಕೆ ಇರುವಂತಹ ಆತಂಕವನ್ನು ಟ್ವೀಟ್ ಮೂಲಕ ವ್ಯಕ್ತ ಪಡಿಸಿದ್ದಾರೆಂದು ನಾನು ಭಾವಿಸಿದ್ದೇನೆ. ತಾವು ಅದಕ್ಕೆ ಉತ್ತರವನ್ನು ಕೊಡುತ್ತೀರೆಂದು ನಾನು ನಿರೀಕ್ಷೆ ಮಾಡಿರಲಿಲ್ಲ. ತಾವು ಅದಕ್ಕೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಉತ್ತರವನ್ನು ನೀಡಿದ್ದೀರಿ. ಸಾರ್ವಜನಿಕವಾಗಿ ಈ ರೀತಿಯ ಚರ್ಚೆಗಳು ಹೆಚ್ಚಾಗುತ್ತಾ ಹೋದರೆ, ಸದನದಲ್ಲಿಯೂ ಪ್ರಸ್ತಾಪ ಮಾಡುತ್ತಾ ಹೋದರೆ, ವಿಧಾನ ಪರಿಷತ್ತಿನಲ್ಲಿ ಬಹುಮತವಿದೆಯೆಂದು ಸರ್ಕಾರದ ವಿಧೇಯಕಗಳನ್ನು ತಿರಸ್ಕೃತಗೊಳಿಸುತ್ತಾ ಹೋದರೆ ಸರ್ಕಾರ ನಡೆಸುವುದು ಹೇಗೆ? ಪ್ರಜಾಪ್ರಭುತ್ವ ವ್ಯವಸ್ಥೆ ಮುಂದುವರೆಯುವುದು ಹೇಗೆ? ನಮ್ಮ ಸರ್ಕಾರ ಒಂದಷ್ಟು ದಿನಗಳು ಇರುತ್ತವೆ. ವಿರೋಧಪಕ್ಷದ ಸರ್ಕಾರ ಒಂದಷ್ಟು ದಿನಗಳು ಇರುತ್ತವೆ. ವಿಧಾನ ಪರಿಷತ್ತಿನಲ್ಲಿ ನಮಗೆ ಬಹುಮತ ಇದ್ದಂತಹ ಸಂದರ್ಭದಲ್ಲಿ ವಿಧೇಯಕಗಳನ್ನು ತಿರಸ್ಕೃತಗೊಳಿಸಿ, ಕೆಳಮನೆಯಲ್ಲಿ ಅನುಮೋದನೆಗೊಂಡ ವಿಧೇಯಕವನ್ನು ಮೇಲ್ಮನೆಯಲ್ಲಿ ತಿರಸ್ಕೃತಗೊಳಿಸಿದರೆ ಸರ್ಕಾರ ನಡೆಸುವುದು ಹೇಗೆ? ಆ ಹಿನ್ನೆಲೆಯಲ್ಲಿ ಕೆಲವು ವಿದ್ಯಮಾನಗಳು ಕಾಲಕಾಲಕ್ಕೆ ನಡೆಯುತ್ತಿರುತ್ತವೆ. ಇತ್ತೀಚೆಗೆ ಮಾನ್ಯ ಸುರೇಶ್‌ಕುಮಾರ್ ಅವರು ತಮ್ಮ ನೋವನ್ನು ಟ್ವೀಟ್ ಮೂಲಕ ತೋಡಿಕೊಂಡಿರಬಹುದು. ತಾವು ಈ ವಿವಾದವನ್ನು ಮುಗಿಸೋಣ ಎಂದು ಹೇಳಿದ್ದೀರಿ. ಇದರಲ್ಲಿ ನನ್ನದೇನೂ ವಾದವಿಲ್ಲ. ಆದರೆ ಇಂತಹ ಸಂಪ್ರದಾಯಗಳು ಮುಂದುವರೆದರೆ ಯಾವುದೇ ಪಕ್ಷವಾಗಲೀ ಸರ್ಕಾರವನ್ನು ನಡೆಸುವುದು ಕಷ್ಟವೆನಿಸುತ್ತದೆ. ತಮ್ಮ ಗಮನಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಈಗ ಅವರಿಗೆ ಏನಾಗಿದೆ ಎಂಬುದನ್ನು ಅವರು ಹೇಳಿದ್ದಾರೆ.

**ಸಭಾಪತಿಯವರು:-** ಈಗ ಆ ವಿಷಯನ್ನು ಬಿಡಿ. ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 07. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಪ್ರಶ್ನೆ ಸಂಖ್ಯೆ 67**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆರ್.ಪ್ರಸನ್ನಕುಮಾರ್:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿರುವ ಆಸ್ಪತ್ರೆಗಳಲ್ಲಿ ಖಾಲಿಯಿರುವ ಹುದ್ದೆಗಳ ಬಗ್ಗೆ ಅದರಲ್ಲಿಯೂ ಕೋವಿಡ್ ಸಂದರ್ಭದಲ್ಲಿ ಖಾಲಿ ಇದ್ದುದಕ್ಕೆ ಏನು ತೊಂದರೆಯಾಗಿದೆ ಎನ್ನುವುದರ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೆನು. ಅದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ ಬಂದಿದೆ ಎಂದು ಹೇಳಿದ್ದಾರೆ. ಹಲವಾರು ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವುದಕ್ಕೆ ಆದೇಶವನ್ನು ಕೊಟ್ಟಿದ್ದಾರೆ.

**(ಮುಂದು)**

**(969) 07.12.2020 1.50 ಕೆಜಿ–ವಿಕೆ**
**ಶ್ರೀ ಆರ್.ಪ್ರಸನ್ನಕುಮಾರ್(ಮುಂದುವರೆದುದು)**

ಅದನ್ನು ಕೇವಲ ಆರು ತಿಂಗಳಿಗೆ ಮಾತ್ರ ಕೊಟ್ಟಿದ್ದಾರೆ. ಆರು ತಿಂಗಳಿಗೆ ಕೊಟ್ಟರೆ ಮತ್ತೆ ಇದೇ ಪರಿಸ್ಥಿತಿ ಮುಂದುವರಿಯುತ್ತದೆ. ಅದಕ್ಕೆ ಈಗ ಹೊರಗುತ್ತಿಗೆಯ ಆಧಾರದ ಮೇಲೆ ತೆಗೆದುಕೊಳ್ಳುವುದಕ್ಕೆ ಹೊರಟ್ಟಿದ್ದಾರೆ. ಸರ್ಕಾರ ಖಾಲಿ ಇರುವಂತಹ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಕ್ರಮತೆಗೆದುಕೊಂಡಿಲ್ಲ. ಆಯುರ್ವೇದಿಕ್ ವೈದ್ಯರನ್ನು ಸಹ ಕೋವಿಡ್–19 ಕರ್ತವ್ಯಕ್ಕೆ ತೊಡಗಿಸಿಕೊಂಡು ಅವರಿಗೆ ತಿಂಗಳಿಗೆ ರೂ.25,000/– ವೇತನವನ್ನು ನೀಡುತ್ತಿದ್ದಾರೆ. ಅದೇರೀತಿ ಎಂ.ಬಿ.ಬಿ.ಎಸ್., ಪದವಿ ಮಾಡಿದ ವೈದ್ಯರಿಗೆ ತಿಂಗಳಿಗೆ ರೂ.60,000/– ವೇತನ ಕೊಡಬೇಕಾಗಿತ್ತು. ಆದರೆ, ಅವರಿಗೂ ಸಹ ತಿಂಗಳಿಗೆ ರೂ.25,000/– ವೇತನ ಕೊಡುತ್ತಿದ್ದಾರೆ. ಇಂತಹ ವಿಶೇಷ ಕರ್ತವ್ಯಗಳ ಸಂದರ್ಭದಲ್ಲಿ ಸರ್ಕಾರ ಹೆಚ್ಚಿನ ವೇತನ ಕೊಡುತ್ತೇವೆಂದು ಘೋಷಣೆ ಮಾಡಿತ್ತು. ಆದರೆ, ಕೊಟ್ಟಿಲ್ಲ. ಕೋವಿಡ್–19ರ ವಿಶೇಷ ಕರ್ತವ್ಯ ನಿರ್ವಹಿಸುತ್ತಿರುವಂತಹ ವೈದ್ಯರಿಗೆ, ಶುಶ್ರೂಷಕರು, ಲ್ಯಾಬ್ ಟೆಕ್ನೀಷಿಯನ್ ಮತ್ತು ಡಾಟಾ ಎಂಟ್ರಿ ಆಪರೇಟರ್‌ಗಳಿಗೆ ಫೆಬ್ರವರಿ, 2021 ರವರೆಗೆ ಮಾತ್ರ ಕರ್ತವ್ಯದ ಆದೇಶ ಇದೆ. ಫೆಬ್ರವರಿ 2021 ರ ನಂತರ ಅವರೆಲ್ಲರೂ ಕರ್ತವ್ಯಗಳಿಂದ ಬಿಡುಗಡೆಯಾದರೆ, ಮತ್ತೆ ನಮ್ಮ ಸರ್ಕಾರಿ ಆಸ್ಪತ್ರೆಗಳ ಪರಿಸ್ಥಿತಿ ಮೊದಲಿನಂತೆ ಆಗುತ್ತದೆ. ಆದ್ದರಿಂದ, ಸರ್ಕಾರ ಖಾಯಂ ನೌಕರರನ್ನು ಭರ್ತಿ ಮಾಡಿಕೊಳ್ಳಬೇಕೆಂದು ಹಾಗೂ ಆಯುರ್ವೇದಿಕ್ ವೈದ್ಯರಿಗೆ ಕಡಿಮೆ ವೇತನ ಕೊಡುತ್ತಿದ್ದು, ಅವರಿಗೂ ಸಹ ಹೆಚ್ಚಿನ ವೇತನ ಕೊಡಬೇಕೆಂದು ಸರ್ಕಾರವನ್ನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ॥ ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಆರ್.ಪ್ರಸನ್ನಕುಮಾರ್‌ರವರು ವ್ಯಕ್ತಪಡಿಸಿರುವಂತಹ ಸಂದೇಹ ಮತ್ತು ಅವರ ಬದ್ಧತೆಯನ್ನು ನಿಜವಾಗಲೂ ಮೆಚ್ಚುತ್ತೇನೆ. ಆದರೆ, ಮಾನ್ಯ ಸದಸ್ಯರ ಗಮನಕ್ಕೆ ಒಂದು ವಿಷಯವನ್ನು ತರುವುದಕ್ಕೆ ಇಷ್ಟಪಡುತ್ತೇನೆ. ನೇರ ನೇಮಕಾತಿಗಳನ್ನು ಮಾಡಿಕೊಳ್ಳಬೇಕಾದರೆ ಅದಕ್ಕೆ ಕೆಲವೊಂದು ನಿಯಮಗಳು ಇವೆ. ಹಾಗಾಗಿ, ಕೋವಿಡ್-19 ಬಂದಂತಹ ಸಂದರ್ಭದಲ್ಲಿ ತಕ್ಷಣಕ್ಕೆ ಆರು ತಿಂಗಳ ಮಟ್ಟಿಗೆ 6500 ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. ಅದರಲ್ಲಿ ಆರೋಗ್ಯಧಿಕಾರಿಗಳು, ತಜ್ಞರು ಮತ್ತು ಇತರೇ ಸಿಬ್ಬಂದಿಯವರು ಇದ್ದಾರೆ. ಇದರ ಜೊತೆಯಲ್ಲಿಯೇ ಸುಮಾರು 2158 ಹುದ್ದೆಗಳನ್ನು ಸೃಜನೆ ಮಾಡುವುದರಲ್ಲಿ ಕ್ರಮವನ್ನು ವಹಿಸಿದ್ದೇವೆ. ಇದರಲ್ಲಿ 1246 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು (General Duty Doctors), ಅದೇರೀತಿ 88 ದಂತ ಆರೋಗ್ಯ ವೈದ್ಯಾಧಿಕಾರಿಗಳು ಮತ್ತು 824 ವಿವಿಧ ತಜ್ಞರು ಸೇರಿದಂತೆ ಒಟ್ಟು 2158 ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಇದೇ ಡಿಸೆಂಬರ್ ಅಂತ್ಯಕ್ಕೆ ಅಥವಾ ಜನವರಿ 15ನೇ ತಾರೀಖಿನೊಳಗೆ ಈ ಪ್ರಕ್ರಿಯೆ ಮುಗಿಯುತ್ತದೆ. ಇದರ ಜೊತೆಗೆ ನಮ್ಮ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಕೋವಿಡ್-19ರ ವಿಶೇಷ ಕರ್ತವ್ಯ ನಿರ್ವಹಣೆಗೆ ಒಟ್ಟು 6500 ಸಿಬ್ಬಂದಿಯನ್ನು ತೆಗೆದುಕೊಳ್ಳಲಾಗಿದೆ. ಇದನ್ನು ಸಹ ಮತ್ತೆ ಪರಿಶೀಲಿಸಿ ಅಗತ್ಯವಿದ್ದರೆ, ಮತ್ತೆ ಮೂರು ತಿಂಗಳು, ಆರು ತಿಂಗಳು ಅಥವಾ ಎಲ್ಲಿಯವರೆಗೆ ಕೋವಿಡ್-19 ನಿಯಂತ್ರಣಕ್ಕೆ ಅಗತ್ಯವಿದೆ ಅಲ್ಲಿಯವರೆಗೂ ಸಹ ಈ ಸಿಬ್ಬಂದಿಯನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಸರ್ಕಾರಕ್ಕೆ ಯಾವುದೇ ರೀತಿಯ ತೊಂದರೆ ಇಲ್ಲ.

**ಶ್ರೀ ಆರ್.ಪ್ರಸನ್ನಕುಮಾರ್:-** ಮಾನ್ಯ ಸಭಾಪತಿಯವರೇ, ತಾಲ್ಲೂಕ್ ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರ ನೇಮಕವಾಗಿಲ್ಲ. ಎಂ.ಬಿ.ಬಿ.ಎಸ್., ಪದವಿ ಹೊಂದಿದ ಮತ್ತು ಆಯುರ್ವೇದಿಕ್ ವ್ಯದ್ಯರನ್ನು ಸದ್ಯದ ಪರಿಸ್ಥಿತಿಗೆ ಅಲ್ಲಿಗೆ ನೇಮಕ ಮಾಡಿದ್ದಾರೆ. ಆದರೆ, ತಜ್ಞ ವೈದ್ಯರನ್ನು ನೇಮಕ ಮಾಡಿಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

**ಡಾ॥ ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಆಯಿತು. ಅದನ್ನು ಪರಿಶೀಲಿಸುತ್ತೇವೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ 90**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಅದರಲ್ಲಿ ಒಂದು ಸಮಾಧಾನ ಏನೆಂದರೆ, ಸಮಾಜ ಕಲ್ಯಾಣ ಇಲಾಖೆಯಡಿಲ್ಲಿ ಬರುವಂತಹ ವಿವಿಧ ನಿಗಮಗಳಲ್ಲಿ ಕೊಳವೆ ಬಾವಿ ಕೊರೆಯುವುದರಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವಂತಹ ಕ್ರಮಗಳೇನು ಎನ್ನುವಂತಹ ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಸರ್ಕಾರ ಅವ್ಯವಹಾರ ನಡೆದಿರುವುದು ನಿಜ. ಆದರೆ, ಅದರ ವಿರುದ್ಧ ಕ್ರಮ ಜರುಗಿಸಿಲ್ಲವೆಂಬ ಉತ್ತರವನ್ನು ನೀಡಿದ್ದಾರೆ.

ಮಾನ್ಯ ಸಭಾಪತಿಯವರೇ, ಕೆಳೆದ ಅಧಿವೇಶನದ ದಿನಾಂಕ 23.09.2020 ರಂದು ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ವಿವಿಧ ನಿಗಮಗಳಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಅವ್ಯವಹಾರ ಆಗಿದೆ ಅದಕ್ಕೆ ಸದನ ಸಮಿತಿಯನ್ನು ರಚನೆ ಮಾಡಬೇಕೆಂದು ಬಹಳ ವಿವರವಾಗಿ ಚರ್ಚೆಯಾಗಿತ್ತು. ಅದಕ್ಕೆ ಸರ್ಕಾರ ಒಪ್ಪಿಕೊಂಡಿದೆ. ಈ ಯೋಜನೆಯಲ್ಲಿ ಅದಂತಹ ಅವ್ಯವಹಾರದ ತನಿಖೆಯನ್ನು ಮಾಡುವುದಕ್ಕೆ ಎ.ಸಿ.ಬಿ., ಗೆ ವಹಿಸಲಾಗಿತ್ತು. ನಂತರ ಸರ್ಕಾರ ಎ.ಸಿ.ಬಿ.,ಗೆ ಪತ್ರ ಬರೆದು ಸರ್ಕಾರವೇ ಇದರ ತನಿಖೆಯನ್ನು ಮಾಡುತ್ತೇವೆಂದು ಎ.ಸಿ.ಬಿ.,ಯಿಂದ ಅದನ್ನು ವಾಪಸ್ಸು ಪಡೆದುಕೊಂಡಿದೆ. ಇದರ ತನಿಖೆಯನ್ನು ಎ.ಸಿ.ಬಿ.,ಯಿಂದ ವಾಪಸ್ಸು ಪಡೆದುಕೊಂಡಿತ್ತು. ನಂತರ ದಿನಾಂಕ 11.03.2019 ರಂದು Dr. Soundar Rajan ರವರ ನೇತೃತ್ವದಲ್ಲಿ ಸಮಿತಿಯನ್ನು ಮಾಡಿತ್ತು. ಆ ಸಮಿತಿಯು ಸುಮಾರು ಎಂಟು ತಿಂಗಳು ಕಳೆದರೂ ಸಹ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ನಂತರ ಆ ಸಮಿತಿಯನ್ನು dissolve ಮಾಡಿ ದಿನಾಂಕ 30.11.2019 ರಂದು ಮತ್ತೊಂದು ಸಮಿತಿಯನ್ನು ಮಾಡಿತ್ತು. ನಿವೃತ್ತ ಐ.ಎ.ಎಸ್., ಅಧಿಕಾರಿಯಾದ ಶ್ರೀ ವೆಂಕಟಯ್ಯರವರನ್ನು ಆ ಸಮಿತಿಗೆ ಅಧ್ಯಕ್ಷರನಾಗಿ ಮಾಡಿತ್ತು. ಈ ಅಧಿಕಾರಿ ಅಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ಇದ್ದಂತಹ ಸಂದರ್ಭದಲ್ಲಿ ಈ ಅವ್ಯವಹಾರ ನಡೆದಿದೆಯೋ ಆ ಅಧಿಕಾರಿಯನ್ನೇ ಇದರ ಅಧ್ಯಕ್ಷರನ್ನಾಗಿ ಮಾಡಿರುವುದು ಬಹಳ ದುರುಂತ ಎನ್ನುವ ಸಂಗತಿಯನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವರನ್ನು ಅಧ್ಯಕ್ಷರನ್ನಾಗಿ ಮಾಡಿದ ನಂತರ ಒಂದು ವರ್ಷ, ಒಂದು ತಿಂಗಳು ಕಳೆದರೂ ಸಹ ಯಾವುದೇ progress ಇಲ್ಲ. ಅಂದರೆ, ಇದರ ಅರ್ಥ ಏನು? ಇಲ್ಲಿ ಸರ್ಕಾರ ಯಾರನ್ನೂ ರಕ್ಷಣೆ ಮಾಡುವುದಕ್ಕೆ ಹೊರಟಿದೆ ಎನ್ನುವಂತಹ ಅನುಮಾನ ಎಲ್ಲರಿಗೂ ಬರುತ್ತದೆ.

ಮಾನ್ಯ ಸಭಾಪತಿಯವರೇ, ಇದರ ತನಿಖೆಯನ್ನು ಎ.ಸಿ.ಬಿ.,ಗೆ ಕೊಟ್ಟು ನಂತರ ದಿನಾಂಕ 03.05.2019 ರಂದು ಪತ್ರ ಬರೆದು ಅವರಿಂದ ವಾಪಸ್ಸು ಪಡೆದಿದ್ದು ಏಕೆ ಎನ್ನುವುದು ಮೊದಲನೆ ಪ್ರಶ್ನೆ. ಇದರಲ್ಲಿ ಯಾವಾಗ ಅವ್ಯವಹಾರ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಡೆದಿದೆಯೋ, ಅದೇ ಸಂದರ್ಭದಲ್ಲಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿದ್ದವರನ್ನು ಈ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ್ದು ಏಕೆ ಎನ್ನುವುದು ಎರಡನೆ ಪ್ರಶ್ನೆ. ಈ ಅವ್ಯವಹಾರದ ಬಗ್ಗೆ ಈ ಸದನದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಚರ್ಚೆಯಾಗಿ ಸದನ ಸಮಿತಿಯನ್ನು ಮಾಡಬೇಕೆಂದು ತೀರ್ಮಾನವಾಗಿ 2/3 ತಿಂಗಳು ಕಳೆದಿದ್ದರೂ ಸಹ ಇನ್ನೂ ಏಕೆ ಸದನ ಸಮಿತಿಯನ್ನು ರಚನೆ ಮಾಡಿ ಅನುಷ್ಠಾನಕ್ಕೆ ತಂದಿಲ್ಲ ಎನ್ನುವುದು ಮೂರನೆ ಪ್ರಶ್ನೆ.

ಮಾನ್ಯ ಸಭಾಪತಿಯವರೇ, ನಾಲ್ಕನೆ ಪ್ರಶ್ನೆ ಏನೆಂದರೆ, ಈ ಭಷ್ಟಚಾರ ಮುಂದುವರಿದ ಭಾಗವಾಗಿ ಇಲಾಖೆಯಲ್ಲಿ ದಿನಾಂಕ 10.11.2020 ರಂದು ಈ ಇಲಾಖೆಯಲ್ಲಿ turnkey basis ನಲ್ಲಿ ಎಲ್ಲಾ ಕೊಳವೆ ಬಾವಿ ಕೊರೆಯುವುದು ಮತ್ತು ಅದಕ್ಕೆ ಪಂಪು ಅಳವಡಿಸುವುದನ್ನು ಒಬ್ಬರಿಗೆ ಕೊಡಬೇಕೆಂದು ಒಂದು ಹೊಸ ಆದೇಶವನ್ನು ಮಾಡಿದ್ದಾರೆ. ಇದರ ಮೂಲಕ ಮಾನ್ಯ ಗೌರವಾನ್ವಿತ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ "ಆತ್ಮನಿರ್ಭರ ಭಾರತ" SSI, MSME and Startup Units ಗಳಿಗೆ ತೊಂದರೆಯಾಗುತ್ತಿದೆ, ಆದ್ದರಿಂದ, ದಯವಿಟ್ಟು ಈ ಆದೇಶವನ್ನು ವಾಪಸ್ಸು ಪಡೆಯುವರೇ? ಈ ನಾಲ್ಕು ಪ್ರಶ್ನೆಗಳಿಗೂ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಬಿ.ಶ್ರೀರಾಮುಲು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಾ॥ ವೈ.ಎ.ನಾರಾಯಣಸ್ವಾಮಿಯವರು ಇದನ್ನು ಕಳೆದ ಅಧಿವೇಶನದಲ್ಲಿ ಕೇಳಿದಂತಹ ಸಂದರ್ಭದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಗೋವಿಂದಕಾರಜೋಳರವರು ಸದನದಲ್ಲಿ ಇರಲಿಲ್ಲ. ಅಂದು ಇದರ ಬಗ್ಗೆ ಗಂಭೀರವಾಗಿ ಚರ್ಚೆಯಾದ ನಂತರ ಇದಕ್ಕೆ ಸದನ ಸಮಿತಿಯನ್ನು ಮಾಡುವಂತಹ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ ಹಿನ್ನೆಲೆಯಲ್ಲಿ ಮಾನ್ಯ ಸಭಾನಾಯಕರು ಅದಕ್ಕೆ ಸಹಮತ ವ್ಯಕ್ತಿಪಡಿಸಿದ್ದಾರೆ. ಕೊಳವೆಬಾವಿ ಅವ್ಯವಹಾರದ ಬಗ್ಗೆ ಬಹಳ ವಿವರವಾಗಿ ಚರ್ಚೆಯಾದಂತಹ ಸಂದರ್ಭದಲ್ಲಿ ನಾನು ಸಹ ಇದರ ಬಗ್ಗೆ, ಒಂದು ಕಡೆ ಕೊಳವೆ ಬಾವಿ ಕೊರೆದ ನಂತರ ಅದಕ್ಕೆ pump set ಕೊಡುವವರು ಮತ್ತು ವಿದ್ಯುತ್ ಸರಬರಾಜು ಮಾಡುವವರು ಬಹಳ ತಡ ಮಾಡಿ ಕೊಡುತ್ತಾರೆ. ಈ ಕಾರಣಗಳಿಂದ ಆ ಕೊಳವೆಬಾವಿಗಳಲ್ಲಿ ನೀರು ಬತ್ತಿಹೋಗುತ್ತದೆ. ಮಾನ್ಯ ಸದಸ್ಯರು ಎತ್ತಿರುವಂತಹ ಪ್ರಶ್ನೆ ಬಹಳ ಚೆನ್ನಾಗಿವೆ. ಈ ಬಾರಿ ಇನ್ನೂ ಟೆಂಡರ್ ಆಗಿಲ್ಲ. ಟೆಂಡರ್ ಆಗುವಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರ ಬಳಿ ಇದರ ಬಗ್ಗೆ ಚರ್ಚೆ ಮಾಡಿ ಪರಿಶೀಲಿಸಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇನೆ. ಸದನ ಸಮಿತಿ ಮಾಡುವುದರ ಬಗ್ಗೆ ನನ್ನ ಯಾವುದೇ ಅಭ್ಯಂತರ ಇರುವುದಿಲ್ಲ. ಏಕೆಂದರೆ, ಈ ಯೋಜನೆ 1984 ರಲ್ಲಿ ಪ್ರಾರಂಭವಾಗಿ ಇಲ್ಲಿಯವರೆಗೆ ಸುಮಾರು 1,25,495 ಕೊಳವೆಬಾವಿಗಳನ್ನು ಕೊರೆದು ಅವುಗಳಿಗೆ ವಿದ್ಯುತ್ ಮತ್ತು pump set ಗಳನ್ನು ಅಳವಡಿಸುವಂತಹ ಕೆಲಸವನ್ನು ಮಾಡಿದ್ದಾರೆ. ಅದರಲ್ಲಿ ಅವ್ಯವಹಾರವಾಗಿದೆ ಎನ್ನುವಂತಹ ವಿಚಾರ ಬಂದಂತಹ ಸಂದರ್ಭದಲ್ಲಿ ನಿವೃತ್ತ ಐ.ಎ.ಎಸ್., ಅಧಿಕಾರಿಯಾದ ಶ್ರೀ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೆಂಕಟಯ್ಯನವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾಡಿದೆ. ಕೋವಿಡ್-19 ಬಂದ ಹಿನ್ನೆಲೆಯಲ್ಲಿ ಅವರು ಎಲ್ಲಿಗೂ ಹೋಗಲಿಕ್ಕೆ ಆಗಲಿಲ್ಲ.

ಮಾನ್ಯ ಸಭಾಪತಿಯವರೇ, ಈಗ ನನಗೆ ಎರಡು ತಿಂಗಳ ಕಾಲವಕಾಶ ಮಾಡಿಕೊಟ್ಟರೆ ಅಧಿಕಾರಿಗಳ ಬಳಿ ಚರ್ಚೆ ಮಾಡಿ ಇದರಲ್ಲಿ ಏನು ಅವ್ಯವಹಾರ ಆಗಿದೆ ಅದರ ಬಗ್ಗೆ ಸಂಪೂರ್ಣವಾದಂತಹ ಮಾಹಿತಿಯನ್ನು ಕೊಡುವಂತಹ ಕೆಲಸವನ್ನು ಮಾಡುತ್ತೇನೆ. ಇಲ್ಲವೆಂದರೆ, ಇದಕ್ಕೆ ಸದನ ಸಮಿತಿ ಮಾಡುವುದರಿಂದ ಒಂದು ರೀತಿಯಲ್ಲಿ ತಿಲಾಂಜಲಿ ಆಡಿದಂತೆ ಆಗುತ್ತದೆ ಎಂದರೆ, ಅದಕ್ಕೆ ನನ್ನ ಅಭ್ಯಂತರ ಇರುವುದಿಲ್ಲ.

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು, ಇದಕ್ಕೆ ಸದನ ಸಮಿತಿಯನ್ನು ಯಾವಾಗ ಮಾಡುತ್ತಾರೆಂದು ತಿಳಿಸಬೇಕು.

**ಶ್ರೀ ಎಸ್.ಎಲ್.ಬೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಾ॥ವೈ.ಎ. ನಾರಾಯಣಸ್ವಾಮಿಯವರು ಯಾರ ಅಧಿಕಾರದ ಅವಧಿಯಲ್ಲಿ ಈ ಅವ್ಯವಹಾರ ನಡೆದಿದೆ ಎಂದು ಇದೆ, ಆ ಸಮಯದಲ್ಲಿ ಇದ್ದಂತಹ ಅಧಿಕಾರಿಯನ್ನೇ ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆ ಎನ್ನುವಂತಹ ಪ್ರಶ್ನೆಗೆ ಉತ್ತರ ತೆಗೆದುಕೊಂಡಿಲ್ಲ.

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಒಂದು ನೇರವಾದ ಪ್ರಶ್ನೆಯನ್ನು ಕೇಳುತ್ತೇನೆ. ಎ.ಸಿ.ಬಿ., ತನಿಖೆ ಮಾಡಲು ಸಮರ್ಥವಲ್ಲ, ಸರ್ಕಾರವೇ ಸಮರ್ಥವಿದೆ ಎಂದು ಪತ್ರ ಬರೆದು ಅದನ್ನು ವಾಪಸ್ಸು ಪಡೆದಿದ್ದು ಏಕೆ? ಇದು ಮೊದಲನೆ ಪ್ರಶ್ನೆ. ಅದಾದ ಮೇಲೆ ಅಲ್ಲಿ ಇಲಾಖಾಧಿಕಾರಿಯಾಗಿದಂತಹ ಒಬ್ಬರನ್ನು ಆ ಸಮಿತಿಗೆ ಅಧ್ಯಕ್ಷರನ್ನಾಗಿ ನೇಮಿಸಿದ್ದು ಏಕೆ? ಒಂದು ವೇಳೆ ನೇಮಿಸಿದ್ದರೂ ಸಹ ಒಂದೂವರೆ ವರ್ಷಗಳಿಂದ ಯಾವುದೇ progress ಆಗಿಲ್ಲ ಏಕೆ? ಮಾನ್ಯ ಸಚಿವರು ದಯವಿಟ್ಟು ಇದಕ್ಕೆ ಉತ್ತರ ಕೊಡಬೇಕು.

**ಶ್ರೀ ಬಿ.ಶ್ರೀರಾಮುಲು:-** ಮಾನ್ಯ ಸಭಾಪತಿಯವರೇ, ಈ ಯೋಜನೆಯಲ್ಲಿ ಅವ್ಯವಹಾರ ಆಗಿದ್ದಂತಹ ಸಂದರ್ಭದಲ್ಲಿ ಐ.ಎ.ಎಸ್., ಅಧಿಕಾರಿಯಾದ ಶ್ರೀ ವೆಂಕಟಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿತ್ತು. ಆದರೆ, ಇದರಲ್ಲಿ ಏನು ಅವ್ಯವಹಾರ ಆಗಿದೆ ಎನ್ನುವಂತಹ ವಿಷಯ ಬಂದಂತಹ ಸಂದರ್ಭದಲ್ಲಿ 2015-16 ನೇ ಸಾಲಿನಲ್ಲಿ ಪ್ರಧಾನ ಕಾರ್ಯದರ್ಶಿಗಳಾಗಿ ಅವರ ಅವಧಿ ಮುಗಿದಿತ್ತು.

**(ಮುಂದು)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(970)07–12–2020(2–00)ಎಂವಿ–ಬಿಎನ್‌ಎಸ್**

**ಶ್ರೀ ಬಿ.ಶ್ರೀರಾಮುಲು (ಮುಂದು:–**

2015–16ನೆ ಇಸವಿಯಲ್ಲಿ ಪ್ರಧಾನ ಕಾರ್ಯದರ್ಶಿಗಳಾಗಿ ಅವರ ಅವಧಿ ಮುಗಿದಿತ್ತು. ಹಾಗಾಗಿ ಆಗ ಇದ್ದಂತಹ ಸಂದರ್ಭದಲ್ಲಿ ಸರ್ಕಾರ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿ ವರದಿಯನ್ನು ನೀಡಬೇಕೆಂದು ಒಂದು ತೀರ್ಮಾನವನ್ನು ತೆಗೆದುಕೊಂಡಿತು. ಇದು ಯಾವ್ಯಾವ ಸಮಯದಲ್ಲಿ, ಎಷ್ಟೆಷ್ಟು ಅವ್ಯವಹಾರ ಮತ್ತು ಏನೇನಾಗಿದೆ ಎಂದು ಇದರ ಬಗ್ಗೆ ನಾನು ಮತ್ತೆ ಅಧಿಕಾರಿಗಳ ಜೊತೆ ಕುಳಿತು ಈ ವಿಚಾರದ ಬಗ್ಗೆ ಬಹಳಷ್ಟು ಸುದೀರ್ಘವಾಗಿ ಅಧ್ಯಯನ ಮಾಡುತ್ತಿದ್ದೇನೆ. ಇದಕ್ಕೆ ಶೀಘ್ರದಲ್ಲೆ ಒಂದು ಸದನ ಸಮಿತಿಯನ್ನು ಮಾಡಿ, ನಂತರ ಇದಕ್ಕೆ ತಿಲಾಂಜಲಿ ಹಾಡುವ ಕೆಲಸವನ್ನು ಮಾಡುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಡಾ||ವೈ.ಎ.ನಾರಾಯಣಸ್ವಾಮಿಯವರು ಆಡಳಿತ ಪಕ್ಷದಲ್ಲಿ ಇದ್ದಾರೆ. ಅವರು ಗೌರವಾನ್ವಿತ ಸದಸ್ಯರು. ಇಲ್ಲಿ ಅವ್ಯವಹಾರವಾಗಿದೆ ಎಂದು ಮಾನ್ಯ ಮಂತ್ರಿಗಳು prima facie ಒಪ್ಪಿಕೊಂಡಿದ್ದಾರೆ. ಒಪ್ಪಿಕೊಂಡ ಮೇಲೆ, ಕನಿಷ್ಟ ಪಕ್ಷ ಸಂಬಂಧಪಟ್ಟಂತಹ ಯಾವುದಾದರೂ ಅಧಿಕಾರಿಗೆ suspend ಮಾಡಿದ್ದಾರೆಯೇ ಎಂಬ ವಿಚಾರವನ್ನು ಮಾನ್ಯ ಸಚಿವರು ಹೇಳಬೇಕು. ಅವ್ಯವಹಾರವನ್ನು ಒಪ್ಪಿಕೊಂಡ ಮೇಲೆ ನಂತರ ಅದರ ವಿಚಾರಣೆಯಾಗುತ್ತದೆ. ಅದನ್ನು ಒಪ್ಪಿಕೊಂಡು ಮತ್ತು ಅದು ಗೊತ್ತಾದ ಮೇಲೂ ಕೂಡ ಆ ಅಧಿಕಾರಿಗಳು ಇನ್ನು ಅಲ್ಲೇ ಇದ್ದಾರೆ. ಮಾನ್ಯ ಸಚಿವರು ಅವರಲ್ಲಿ ಯಾರ ಮೇಲಾದರೂ ಕ್ರಮಕೈಗೊಂಡಿದ್ದಾರೆಯೇ ಎಂದು ದಯಮಾಡಿ ತಿಳಿಸಬೇಕು. ಸದಸ್ಯರಾದ ಡಾ||ವೈ.ಎ.ನಾರಾಯಣಸ್ವಾಮಿಯವರು ಮಾತನಾಡುವುದಕ್ಕೆ ಅವರ ಬಾಯಿ ಕಟ್ಟುತ್ತದೆ ಎಂದು ನನಗೆ ಗೊತ್ತಿದೆ. ಈ ವಿಚಾರ ಬಹಳ ಗಂಭೀರವಾಗಿದೆ.

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ಇದಕ್ಕೆ ಸಂಬಂಧಪಟ್ಟಂತೆ ಆರ್ಥಿಕ ಇಲಾಖೆ ಸಂಪೂರ್ಣವಾಗಿ ಒಂದು special audit ಅನ್ನು ಮಾಡುವಂತಹ ಕೆಲಸ ಆಗುತ್ತಿದೆ. Special audit ಜೊತೆಯಲ್ಲಿ ಒಂದು ರೀತಿಯ ಮೌಲ್ಯಮಾಪನ ಮಾಡುವಂತಹ ಕೆಲಸ ಆಗುತ್ತಿದೆ. ಅದಕೋಸ್ಕರವಾಗಿ already ಮಾನ್ಯ ಸದಸ್ಯರು ಏನು ಯಾವ ಅಧಿಕಾರಿಗಳನ್ನು ಅವತ್ತಿನ ಸಂದರ್ಭದಲ್ಲಿ suspend ಮಾಡಿದ್ದಾರೆ ಎಂಬ ವಿಚಾರವನ್ನು ಎತ್ತಿದ ನಂತರ, ನಾನು ಎಲ್ಲೆಲ್ಲಿ ಅವ್ಯವಹಾರವಾಗಿದೆ ಎಂಬುದರ ಬಗ್ಗೆ ಸುದೀರ್ಘವಾಗಿ ಯಾವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು ಮತ್ತು ಯಾವ ರೀತಿಯಲ್ಲಿ enquiry ಮಾಡಬೇಕು ಎನ್ನುವಂಥದ್ದು ಕೂಡ

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮುಖ್ಯವಾಗುತ್ತದೆ. ಇವತ್ತು ಆರ್ಥಿಕ ಇಲಾಖೆಯವರು ಈ ವಿಚಾರದಲ್ಲಿ interfere ಆಗಿದ್ದಾರೆ. ಈಗ ಶ್ರೀ ವೆಂಕಟಯ್ಯನವರ ನೇತೃತ್ವದಲ್ಲಿ ಒಂದು enquiry ನಡೆಯುತ್ತಿದೆ. ನನಗೆ ಎರಡು ತಿಂಗಳುಗಳ ಕಾಲ ಅವಕಾಶ ನೀಡಿದರೆ, ಎರಡು ತಿಂಗಳ ಒಳಗೆ ಸದನಕ್ಕೆ ವರದಿಯನ್ನು ಕೊಡುವಂತಹ ಕೆಲಸವನ್ನು ಮಾಡುತ್ತೇನೆ. ಇದರಲ್ಲಿ ಯಾವುದೇ ಪ್ರಶ್ನೆ ಇಲ್ಲ. ಇದರಲ್ಲಿ ಯಾರನ್ನು ಉಳಿಸಬೇಕು ಮತ್ತು ತೊಂದರೆಯಾದಂತಹವರನ್ನು ಹಿಡಿದುಕೊಳ್ಳಬೇಕು ಎಂಬುವುದು ಯಾವುದೂ ಇಲ್ಲ. ಎಷ್ಟನೇ ಇಸವಿಯಲ್ಲಿ ಗಂಗಾ ಕಲ್ಯಾಣ ಯೋಜನೆಯಲ್ಲಿ ಅವ್ಯವಹಾರವಾಗಿದೆ ಎಂಬ ವಿಷಯ ಬಂದಂತಹ ಸಮಯದಲ್ಲಿ, ಅದರ ಬಗ್ಗೆ ಬಹಳಷ್ಟು ಕಡೆ, ಕೆಲವೊಂದು ಕಡೆ ನೀರು ಬರಲಾರದಂತಹ ಕಡೆ ನೀರು ಬಂದಿದೆ ಎಂದು ರೊಕ್ಕ ತೆಗೆದುಕೊಳ್ಳುವುದು. ಕೆಲವೊಂದು ಸಲ ನೀರು ಬಂದಿದ್ದರು ಸಹ ಅಲ್ಲಿನ ಫಲಾನುಭವಿಗಳ ಬಳಿಗೆ ಹೋಗಿ ಹಣ ಪಡೆದಿರುವ ವಿಚಾರ ಇರಬಹುದು. ಬೇರೆ ಬೇರೆ ವಿಚಾರದಲ್ಲಿ ಈ ರೀತಿಯಾಗಿ ಆಗಿರುವ ಕಾರಣ, already enquiry start ಆಗಿದೆ. Enquiry ಮುಗಿದ ತಕ್ಷಣ ನಾನು ಸದನಕ್ಕೆ ವರದಿ ಕೊಡುವಂತಹ ಕೆಲಸವನ್ನು ಮಾಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 172**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಹರೀಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ಮರುಮೌಲ್ಯಮಾಪನಕ್ಕೆ ವಿದ್ಯಾರ್ಥಿಗಳು ಸಲ್ಲಿಸಿದಂತಹ 16971 ಅರ್ಜಿಗಳಲ್ಲಿ, 15937 ಅರ್ಜಿಗಳನ್ನು ಮರುಮೌಲ್ಯಮಾಪನ ಮಾಡಿ, ವಿದ್ಯಾರ್ಥಿಗಳಿಗೆ ಸರಿಯಾದ ಅಂಕವನ್ನು ನೀಡಲಾಗಿದೆ ಎಂಬ ವಿಚಾರವನ್ನು ಹೇಳಿದ್ದಾರೆ. ಮರುಮೌಲ್ಯಮಾಪನ ಮಾಡಿರುವುದು ಸರಿಯಿದೆ. ಆದರೆ, ಪ್ರಶ್ನೆ ಕೇಳಿದ ಉದ್ದೇಶ ಇಷ್ಟೆ. ಅಂದರೆ, ಹದಿಹರೆಯದ ಮಕ್ಕಳು ಎಸ್.ಎಸ್.ಎಲ್.ಸಿ. ಎಂದರೆ ಅವರ ಮನಸ್ಸು ಸ್ವಲ್ಪ ಮೃದು ಇರುತ್ತದೆ. ಅವರಿಗೆ ಅಂಕ ಗಳಿಸುವುದೇ ಒಂದು ಪ್ರಪಂಚವಾಗಿರುತ್ತದೆ. ಈಗಿನ ಮಕ್ಕಳಿಗೆ ಅಂಕ ಗಳಿಸುವುದನ್ನು ಬಿಟ್ಟರೆ, ಬೇರೇನೂ ಇರುವುದಿಲ್ಲ. ಆದುದರಿಂದ ಅವರು ಶೀಘ್ರವಾಗಿ ಆಘಾತಕ್ಕೆ ಒಳಗಾಗುತ್ತಾರೆ ಮತ್ತು ಆತ್ಮಹತ್ಯೆ ಮಾಡಿಕೊಂಡಂತಹ ಪ್ರಕರಣಗಳನ್ನು ಕೂಡ ನಾವು ಓದಿದ್ದೇವೆ. ಇದರಿಂದ ಮಕ್ಕಳ ಮೇಲೆ ದುಷ್ಪರಿಣಾಮವಾಗಬಾರದು ಮತ್ತು ಮಕ್ಕಳು ಭಯಪಡಬಾರದು ಎಂಬ ವಿಚಾರವಾಗಿ ಈ ಪ್ರಶ್ನೆಯನ್ನು ಕೇಳಿದ್ದೇನೆ. ಕೋವಿಡ್-19 ಸಂದರ್ಭದಲ್ಲಿ ಶಿಕ್ಷಕರು ಮತ್ತು ಮಕ್ಕಳು ಈ ಇಬ್ಬರಿಗೂ ಕೂಡ ಆತಂಕದಲ್ಲೇ ಎಸ್.ಎಸ್.ಎಲ್.ಸಿ. ಪರೀಕ್ಷೆಯಾಗಿದೆ ಮತ್ತು ಆತಂಕದಲ್ಲೇ ತಿದ್ದುವಂತಹ ಕೆಲಸ ಕೂಡ ಆಗಿದೆ. ಈಗ ಅಂಕಗಳಲ್ಲಿ ವ್ಯತ್ಯಾಸವಾದಾಗ ಮಕ್ಕಳು ಬಹಳಷ್ಟು ನೊಂದುಕೊಳ್ಳುತ್ತಾರೆ. ಅದಕ್ಕೆ ಅದನ್ನು ಸರಿಪಡಿಸಬೇಕೆಂದು ಮಾತ್ರ ಕೇಳಿದ ಉದ್ದೇಶ ಹೊರತು, ಅವರಿಗೆ ದಂಡ ಮತ್ತು ಶಿಕ್ಷೆಯನ್ನು ವಿಧಿಸಬೇಕು ಎನ್ನುವಂತಹ ಉದ್ದೇಶವಲ್ಲ. ಈ ಒಂದು ಸಂದರ್ಭದಲ್ಲಿ ಮೌಲ್ಯಮಾಪನ ಮಾಡುವಾಗ ಕಠಿಣವಾಗಿ ಇರಬೇಡಿ, ಉದಾರತೆ ಇರಬೇಕು ಎನ್ನುವಂತಹ ಮಾತನ್ನು ಮಾನ್ಯ ಸಚಿವರು ಹೇಳಿದ್ದಾರೆ. ಅದರ ಪ್ರಕಾರ ಮೌಲ್ಯಮಾಪನ ನಡೆಯಬಹುದಿತ್ತು ಎನ್ನುವಂತಹ ಉದ್ದೇಶದಿಂದ ಕೇಳಿದ್ದೇನೆ. ಈ ಪ್ರಶ್ನೆಗೆ ಮಾನ್ಯ ಸಚಿವರು ಸರಿಯಾದ ಉತ್ತರವನ್ನು ನೀಡಿದ್ದಾರೆ.

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರ ಕಾಳಜಿ ಮತ್ತು ಅವರ ಭಾವನೆಯನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡಿದ್ದೇನೆ. ಈ ವರ್ಷ ಬಹಳ ಒಂದು ಸವಾಲನ್ನು ಎದುರಿಸಿ ಎಸ್.ಎಸ್.ಎಲ್.ಸಿ. ಪರೀಕ್ಷೆ ನಡೆದಿದೆ. ಮತ್ತೆ ಇಡೀ ದೇಶವೇ ಗಮನಹರಿಸಿದ ರೀತಿಯಲ್ಲಿ ನಮ್ಮ ರಾಜ್ಯದ ಎಸ್.ಎಸ್.ಎಲ್.ಸಿ. ಪರೀಕ್ಷೆ ನಡೆದಿದೆ. ಸುಮಾರು ಎಂಟೂವರೆ ಲಕ್ಷ ಮಕ್ಕಳು ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಬರೆದಿದ್ದರು. ಮತ್ತೆ ನಮ್ಮ ಎಸ್.ಎಸ್.ಎಲ್.ಸಿ. ಪರೀಕ್ಷಾ ಮಂಡಳಿ ಏನಿದೆ, ಅದು ಇಡೀ ದೇಶದಲ್ಲೇ ಉತ್ತಮವಾದ ಒಂದು ಮಂಡಳಿ ಎಂಬ ಹೆಸರನ್ನು ತೆಗೆದುಕೊಂಡಿದೆ. ನಾವು ಪರೀಕ್ಷೆಯನ್ನು ಮಾಡಿದ್ದೇವೆ ಮತ್ತೆ ಮೌಲ್ಯಮಾಪನ ಕೂಡ ಈ ಸಲ ಬಹಳ ಚೆನ್ನಾಗಿ ಆಗಿದೆ. ಏಕೆಂದರೆ, ನಾವು ಯಾವ ಸಂದರ್ಭದಲ್ಲಿ ಪರೀಕ್ಷೆಯನ್ನು ಮಾಡಿದ್ದೇವೆಂದು ಅದನ್ನು ಗಮನದಲ್ಲಿಟ್ಟುಕೊಂಡು ಮೌಲ್ಯಮಾಪನ ಮಾಡಿದ್ದೇವೆ. ನಾನು ಮೌಲ್ಯಮಾಪನ ಕೇಂದ್ರಗಳಿಗೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ಮೌಲ್ಯಮಾಪಕರು ಕೂಡ ಕೋವಿಡ್-19 ವಾತಾವರಣದಲ್ಲೇ ಮೌಲ್ಯಮಾಪನವನ್ನು

ಮಾಡುತ್ತಿದ್ದರು. ಎಂಟೂವರೆ ಲಕ್ಷ ವಿದ್ಯಾರ್ಥಿಗಳಲ್ಲಿ 16971 ವಿದ್ಯಾರ್ಥಿಗಳು ಮರು ಮೌಲ್ಯಮಾಪನಕ್ಕೆ ಅರ್ಜಿಯನ್ನು ಹಾಕಿದ್ದರು. ಮೌಲ್ಯಮಾಪನ ಬಹಳ ಸಲ subjective ಆಗುತ್ತದೆ. ಇದಕ್ಕೆ ಮೂರು ಜನರು ಬೇರೆ ಬೇರೆ ರೀತಿಯಲ್ಲಿ ಮಾಪನ ಕೊಡುತ್ತಾರೆ. ಇನ್ನು ಕೆಲವು ಕಡೆಗಳಲ್ಲಿ ಮೌಲ್ಯಮಾಪನವಾದ ಮೇಲೆ ಅದನ್ನು ಕಂಪ್ಯೂಟರ್‌ಗಳಿಗೆ feed ಮಾಡುವುದು. ಹೆಚ್ಚು ಕಡಿಮೆಯಾಗಿರುವುದು ಕೂಡ ನಮ್ಮ ಗಮನಕ್ಕೆ ಬಂದರೆ ಅವರ ಮೇಲೆ ಮಂಡಳಿ ಹಿಂದಿನಿಂದ ಏನು ಕ್ರಮ ತೆಗೆದುಕೊಳ್ಳುತ್ತಿದೆಯೋ ಅದನ್ನು ತೆಗೆದುಕೊಳ್ಳುತ್ತದೆ. ಆದರೆ, ಮಾನ್ಯ ಸದಸ್ಯರು ಹೇಳಿದ ಮಾತು, ಅಂದರೆ ಈಗ ನನಗೆ ಅನಿಸುವುದು ರಾಜ್ಯದ ಎಲ್ಲಾ ಶಿಕ್ಷಕರಿಗೆ ಮತ್ತು ಮೌಲ್ಯಮಾಪಕರಿಗೆ ಇದು ಕೇಳಿಸಬೇಕು. ಏಕೆಂದರೆ, ಮಕ್ಕಳು ಬಹಳ ಕಷ್ಟಪಟ್ಟು ಓದಿ, ಅವರು ಕೂಡ ಏನೇನೋ ಭರವಸೆಗಳನ್ನು ಮತ್ತು ಕನಸುಗಳನ್ನು ಇಟ್ಟುಕೊಂಡಿರುತ್ತಾರೆ. ಆ ಕನಸುಗಳನ್ನು ಭಗ್ನ ಮಾಡುವುದು ಮತ್ತು ಮಾನ್ಯ ಸದಸ್ಯರು ಹೇಳಿದ ಹಾಗೆ ಕೆಲವರು ಜೀವಕ್ಕೆ ಆಪತ್ತು ತಂದುಕೊಳ್ಳುವಂತಹ ಪರಿಸ್ಥಿತಿ ಖಂಡಿತವಾಗಿ ಬರಬಾರದು. ನಾವು ಇನ್ನು ಹೆಚ್ಚು ಪರಿಣಾಮಕಾರಿಯಾಗಿ ಮತ್ತು ಗುಣಮಟ್ಟವಾಗಿ ಈ ರೀತಿಯಾದ ಲೋಪಗಳು ಬರದೆ ಇರುವಂತಹ ರೀತಿಯಲ್ಲಿ ಮೌಲ್ಯಮಾಪನ ಮಾಡಿಸುವುದು ನಮ್ಮ ಜವಾಬ್ದಾರಿ. ಏಕೆಂದರೆ, ನಾನು ಬಹಳ ಮುಂಚೆಯೇ ಹೇಳುತ್ತೇನೆ; ಆ ಎಲ್ಲಾ ಮಕ್ಕಳು ನಮ್ಮ ಮಕ್ಕಳು, ಈಗ ಯಾವುದೇ ಒಂದು ಮಗುವಿಗೆ ತೊಂದರೆಯಾದರೂ ಸಹ ನಮಗೆ ದುಃಖವಾಗುತ್ತದೆ. ಖಂಡಿತವಾಗಿ ಮಂಡಳಿ ಯಾರಿಗೂ ಕೂಡ ತೊಂದರೆಯಾಗದ ರೀತಿಯಲ್ಲಿ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಭರವಸೆ ನೀಡುತ್ತೇನೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಪ್ರಶ್ನೆ ಸಂಖ್ಯೆ: 08**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ಅದಕ್ಕೆ ಮಾನ್ಯ ಸಚಿವರಿಗೆ ಧನ್ಯವಾದಗಳು. ಸಮುದಾಯ ಆರೋಗ್ಯ ಕೇಂದ್ರಕ್ಕೆ ಒಟ್ಟು 33 ಸಿಬ್ಬಂದಿಯನ್ನು ಒದಗಿಸಲಾಗುವುದು ಎಂದು ಇದೆ. ನಮ್ಮ ಜಿಲ್ಲೆಯಲ್ಲಿ ಡಾಕ್ಟರ್ ಮತ್ತು ನರ್ಸ್‌ಗಳು ಇದ್ದಾರೆ. ಈಗ ಐದು ಜನ ಡಾಕ್ಟರ್‌ಗಳು ಇರುವ ಕಡೆಗಳಲ್ಲಿ ಒಬ್ಬರು ಡಾಕ್ಟರ್ ಇರುತ್ತಾರೆ. ಮತ್ತೆ 30 ಜನ ಸಿಬ್ಬಂದಿ ಇರುವ ಕಡೆ 7 ರಿಂದ 8 ಜನ ಸಿಬ್ಬಂದಿ ಮಾತ್ರ ಇದ್ದಾರೆ. ಹಾಗಾಗಿ ಆರೋಗ್ಯ ಕೇಂದ್ರಗಳಲ್ಲಿ ಸರಿಯಾದ ರೀತಿಯಲ್ಲಿ ಕ್ರಮ ಜರುಗುತ್ತಿಲ್ಲ. ನಮ್ಮ ಹಾಸನ ಜಿಲ್ಲೆಯ ಹಿರಿಸಾವೆ ಮತ್ತು ಶ್ರವಣಬೆಳಗೊಳ ಇಂತಹ ಕಡೆಗಳಲ್ಲೂ ಸಹ ಆ್ಯಂಬುಲೆನ್ಸ್ ಮತ್ತು ಶೌಚಾಲಯಗಳು ಸರಿಯಾದ ರೀತಿಯಲ್ಲಿ ಇಲ್ಲ. ಹಾಗಾಗಿ ಇದನ್ನೆಲ್ಲಾ ಸರಿಪಡಿಸುವಂತಹ ಕೆಲಸವನ್ನು ಮಾನ್ಯ ಸಚಿವರು ಮಾಡಬೇಕು. ಅದರ ಜೊತೆಗೆ ನೌಕರಿ ಭರ್ತಿ ಬಗ್ಗೆ ಹೇಳಿದ್ದಾರೆ. ಅದರಲ್ಲಿ 1250 ಜನ ವೈದ್ಯಾಧಿಕಾರಿಗಳನ್ನು ಆಯ್ಕೆ ಮಾಡುವಂಥದ್ದು ಬಹಳ ಒಂದು ಒಳ್ಳೆಯ ವಿಚಾರ. ಆದರೆ, 1250 ಜನರನ್ನು ಆಯ್ಕೆ ಮಾಡಿದ ನಂತರ ಮತ್ತೆ ಏನಾಗುತ್ತದೆಂದರೆ, ಒಂದು ಅಥವಾ ಎರಡು ವರ್ಷದಲ್ಲಿ ಆ ವೈದ್ಯಾಧಿಕಾರಿಗಳು ಕೆಲಸವನ್ನು ಬಿಟ್ಟು ಹೋಗುವಂತಹ ಸಂಸ್ಕೃತಿ ಇದೆ. ಅದಕ್ಕೆ ನೇಮಕಾತಿಯ ಎರಡು ಮತ್ತು ಮೂರನೆ ಪಟ್ಟಿಯನ್ನು ಇಟ್ಟುಕೊಂಡು, ಈಗ ಯಾರಾದರೂ ವೈದ್ಯಾಧಿಕಾರಿಗಳು ಕೆಲಸ ಬಿಟ್ಟು ಹೋದಂತಹ ಸಂದರ್ಭದಲ್ಲಿ ಪುನರ್ ಆಯ್ಕೆಗೆ ನಿಯಮವನ್ನು ಬದಲಾವಣೆ ಮಾಡುವ ಸಂಬಂಧವಾಗಿ ಸ್ನೇಹಿತರಾದ ಮಾನ್ಯ ಆರ್.ಪ್ರಸನ್ನ ಕುಮಾರ್‌ರವರು ಮಾತನಾಡಿರುವುದಕ್ಕೆ ಮಾನ್ಯ ಸಚಿವರು ಒಂದು ಒಳ್ಳೆಯ ಉತ್ತರವನ್ನು ನೀಡಿದ್ದಾರೆ. ನೇಮಕಾತಿ ನಡೆಯುವಂತಹ ಸಂದರ್ಭದಲ್ಲಿ 1250 ಜನರನ್ನು ಆಯ್ಕೆ ಮಾಡಿದರೆ, ಇನ್ನು ಹತ್ತು ವರ್ಷವಾದರು ಯಾವುದೇ ಸರ್ಕಾರಗಳು ಬಂದರೂ ಸಹ ಮತ್ತೆ ಆ ಉದ್ಯೋಗವನ್ನು ಭರ್ತಿ ಮಾಡುವಂತಹ ಕೆಲಸ ಮಾಡುವುದಿಲ್ಲ. ಹಾಗಾಗಿ, ಎರಡು ಮತ್ತು ಮೂರನೆ ಪಟ್ಟಿಗಳನ್ನು ಮಾಡಬೇಕೆಂದು ಹೇಳಿ, ಮೊನ್ನೆ ಹಾಸನ ಜಿಲ್ಲೆಯಲ್ಲಿ ಡಿ.ಹೆಚ್.ಓ.ರವರ ಜೊತೆಯಲ್ಲಿ ಸಭೆ ನಡೆದಂತಹ ಸಂದರ್ಭದಲ್ಲಿ ಇಂತಹ ಒಂದು ಸಲಹೆಯನ್ನು ನೀಡಿದ್ದೇನೆ. ಆದುದರಿಂದ ಮಾನ್ಯ ಸಚಿವರು ಅದರ ಕಡೆಗೆ ಗಮನ ಹರಿಸಬೇಕು. ಮುಖ್ಯವಾಗಿ ಹಿರಿಸಾವೆ ಮತ್ತು ಶ್ರವಣಬೆಳಗೊಳ ಒಂದು ಒಳ್ಳೆಯ ಕ್ಷೇತ್ರಗಳು. ಅಂದರೆ, ಅವುಗಳು ಹೆದ್ದಾರಿಯಲ್ಲಿ ಇರುವುದರಿಂದ ಆ್ಯಂಬುಲೆನ್ಸ್ ಸೇವೆ ಕೇವಲ ಪತ್ರಿಕೆಯಲ್ಲಿ ಮಾತ್ರ ಇರಬಾರದು. ಆ್ಯಂಬುಲೆನ್ಸ್ ಅನ್ನು ಒದಗಿಸುವಂತಹ ಕೆಲಸವನ್ನು ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಡಾ||ಕೆ.ಸುಧಾಕರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಾರಂಭದಲ್ಲಿ ಕೇಳಿರುವಂತಹ ಪ್ರಶ್ನೆಗಳು ಎಂದರೆ, ಹಾಸನ ಜಿಲ್ಲೆಯಲ್ಲಿ ಎಷ್ಟು ಸಮುದಾಯ ಚಿಕಿತ್ಸಾ ಕೇಂದ್ರಗಳ ಅಭಿವೃದ್ಧಿ ಆಗಬೇಕೆಂದು ಕೇಳಿದ್ದರು. ಅದರ ಪ್ರಕಾರ ಈಗಾಗಲೇ ಅದನ್ನು ಹೇಳಿದ್ದೇನೆ. ಈಗ ಸಮತಟ್ಟು ಪ್ರದೇಶಗಳಲ್ಲಿ ಸುಮಾರು 1,20,000 ಜನಸಂಖ್ಯೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇರುವಂತಹ ಕಡೆ, ಏನು ನಮ್ಮ ಭಾರತೀಯ ಸಾರ್ವಜನಿಕ ಆರೋಗ್ಯ ಗುಣಮಟ್ಟಗಳ (ಐ.ಪಿ.ಹೆಚ್.ಎಸ್.)ನ ವರದಿಯ ಮಾರ್ಗಸೂಚಿ ಪ್ರಕಾರ ಇವತ್ತು ಈ ಹೊಸ ನಿಯಮವನ್ನು ಪಾಲಿಸುತ್ತಿದ್ದೇವೆ.

**(ಮುಂದು...)**

**(971) 07.12.2020 02.10 ಎಲ್ಎಲ್/ಬಿಎನ್ಎಸ್**

**ಡಾ||ಕೆ.ಸುಧಾಕರ್**(ಮುಂದುವರೆದುದು)

ಅದೇ ರೀತಿ ಗುಡ್ಡಗಾಡು ಪ್ರದೇಶದಲ್ಲಿ, ಮರುಭೂಮಿ ಪ್ರದೇಶವಾದರೆ ಸುಮಾರು 80 ಸಾವಿರ ಜನಸಂಖ್ಯೆಗೆ ಒಂದು ಸಮುದಾಯ ಆರೋಗ್ಯ ಕೇಂದ್ರವನ್ನು ಸ್ಥಾಪಿಸುತ್ತೇವೆ. ಇವೊತ್ತಿನ ದಿವಸ ಹಾಸನ ಜಿಲ್ಲೆಯಲ್ಲಿರತಕ್ಕಂತಹ ಜನಸಂಖ್ಯೆ 2011ರ ಜನಗಣತಿಯ ಪ್ರಕಾರ ಸುಮಾರು 13 ಲಕ್ಷದ 99 ಸಾವಿರ ಇದೆ. ಇದರ ಪ್ರಕಾರ 12 ಸಮುದಾಯ ಚಿಕಿತ್ಸಾ ಕೇಂದ್ರಗಳಿರಬೇಕು. ಆದರೆ, ಅಲ್ಲಿ 15 ಸಮುದಾಯ ಚಿಕಿತ್ಸಾ ಕೇಂದ್ರ ಇದೆ. Subsidiary ಆಗಿ ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಉಪ ಪ್ರಶ್ನೆ ಏನಿವೆ ಎಂದರೆ, ಕೆಲವು ಆಸ್ಪತ್ರೆಗಳಲ್ಲಿ ವೈದ್ಯರುಗಳ ಕೊರತೆ ಇದೆ. ಹಾಗಾಗಿ, ವೈದ್ಯರ ನೇಮಕಾತಿ ಮಾಡುವಂತಹ ಸಂದರ್ಭದಲ್ಲಿ ಅವರು ಶಾಶ್ವತವಾಗಿ ನೆಲೆಸುವಂತಹ ರೀತಿಯಲ್ಲಿ ಕ್ರಮ ವಹಿಸಬೇಕೆಂದು ಕೇಳಿದ್ದಾರೆ. ಇವೆಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಇವೊತ್ತಿನ ದಿವಸ ನೇಮಕಾತಿ ಮಾಡಲಾಗುತ್ತಿದೆ. ಈ ಹಿಂದೆ ಸಾಕಷ್ಟು ಕಹಿ ಅನುಭವಗಳು ನಮಗೆ ಆಗಿರುವುದರಿಂದ, ಎಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಹೊಸ ಕಾನೂನಿನ ಅನ್ವಯದಲ್ಲಿಯೇ ನೇಮಕಾತಿ ಮಾಡುತ್ತೇವೆಂದು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ತಿಳಿಸುವುದಕ್ಕೆ ಬಯಸುತ್ತೇನೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಪ್ರಶ್ನೆ ಸಂಖ್ಯೆ:06**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಕೆ. ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಉತ್ತರ ತೃಪ್ತಿದಾಯಕವಾಗಿದೆ. ಆದರೆ, ಇದರ ಮಧ್ಯದಲ್ಲಿ ನನ್ನಲ್ಲಿ ಕೆಲವು ಗೊಂದಲಗಳು ಕೂಡ ಇವೆ. ಬಹುಶಃ ನಾನು, "ಈವರೆಗೂ ಚಿಕ್ಕಮಗಳೂರು ಜಿಲ್ಲೆಗೆ ಕೋವಿಡ್–19 ತಡೆಗಟ್ಟಲು ಮತ್ತು ಕೋವಿಡ್–19 ಚಿಕಿತ್ಸೆಗಾಗಿ ಬಿಡುಗಡೆ ಮಾಡಿರುವ ಹಣವೆಷ್ಟು(ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು) ಎನ್ನುವ" ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ನೀಡಿರುವ ಉತ್ತರ ಎಲ್ಲವೂ ಸರಿಯಾಗಿದೆ. ಆದರೆ, ಇಲ್ಲಿ ಸ್ವಲ್ಪ ಗೊಂದಲವೆಂದು ಹೇಳುವುದಾದರೆ, "ಕೋವಿಡ್–19 ರ ಸಂಬಂಧ ಸರ್ಕಾರದಿಂದ ಪ್ರತ್ಯೇಕವಾಗಿ ಅನುದಾನ ಬಿಡುಗಡೆಯಾಗಿರುವುದಿಲ್ಲ. ಆಯುಷ್ಮಾನ್ ಭಾರತ್ ಯೋಜನೆಯ ಲೆಕ್ಕ ಶೀರ್ಷಿಕೆಯಡಿ ವೆಚ್ಚವನ್ನು ಭರಿಸಲಾಗುತ್ತಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೋವಿಡ್–19 ಚಿಕಿತ್ಸೆಗಾಗಿ ರೂ.25.10 ಲಕ್ಷ ಮೊತ್ತವನ್ನು ಖರ್ಚು ಮಾಡಲಾಗಿರುತ್ತದೆ" ಎಂದು ಉತ್ತರ ನೀಡಿರುತ್ತಾರೆ. ಜೊತೆಗೆ, 2ನೇ ಹಂತದ ಕೋವಿಡ್–19 ಸಾಂಕ್ರಾಮಿಕ ರೋಗ ಏನಿದೆ ಅದು ತುಂಬಾ ಗಂಭೀರವಾಗಿರುತ್ತದೆ ಎನ್ನುವುದನ್ನು ಸಹ ಮಾನ್ಯ ಸಚಿವರೇ ಹೇಳಿರುತ್ತಾರೆ. ಬಹುಶಃ ಹಣದ ಕೊರತೆಯಿಂದ... ಈಗಾಗಲೇ ಚಳಿಗಾಲ ಇರುವುದರಿಂದ, ಡಿಸೆಂಬರ್ ಮತ್ತು ಜನವರಿ ತಿಂಗಳಿನಲ್ಲಿ ಈ ರೋಗ ಗಂಭೀರತೆಯನ್ನು ಪಡೆಯುತ್ತದೆ ಎನ್ನುವುದು ಕೂಡ ಸಾಮಾನ್ಯವಾಗಿ ಇವೊತ್ತಿನ ದಿವಸ ಎಲ್ಲರೂ ಮಾತನಾಡುವ ವಿಚಾರವಾಗಿದೆ. ಹಾಗಾಗಿ, ಇದಕ್ಕೆ ಸರ್ಕಾರದ ತಯಾರಿಗಳು ಏನಾಗಿದೆ ಅಥವಾ ಹಿಂದಿನ ಪರಿಸ್ಥಿತಿ ಪುನಃ ಉದ್ಭವವಾಗುತ್ತವೆಯೇ ಎನ್ನುವ ಪ್ರಶ್ನೆ ನನ್ನನ್ನು ಕಾಡುತ್ತಿದೆ.

ಎರಡನೆಯದಾಗಿ, ಈಗಾಗಲೇ ಸಾಕಷ್ಟು ವ್ಯವಸ್ಥೆಯ ಅಡಿಯಲ್ಲಿ ಕೋವಿಡ್–19 ಅನ್ನು ನಿಯಂತ್ರಣ ಮಾಡುವುದರಲ್ಲಿ ಸರ್ಕಾರ ಯಶಸ್ವಿಯಾಗಿದೆ. ಅದಕ್ಕಾಗಿ, ನಾವು ಯಾವುದೇ ರೀತಿಯ ಪಕ್ಷ–ಭೇದ ಇಲ್ಲದೇ ಇದನ್ನು ನಾವು ಅಭಿನಂದಿಸಬೇಕಾಗುತ್ತದೆ. ಕಾರಣ ಏನೆಂದರೆ, ಇವೊತ್ತಿನ ದಿವಸ ಪತ್ರಿಕೆಗಳಲ್ಲಿ ಅಥವಾ ಟಿ.ವಿ. ಮಾಧ್ಯಮಗಳನ್ನು ನಾವು ನೋಡಿದರೆ ದಿನದಿಂದ–ದಿನಕ್ಕೆ ಕೋವಿಡ್–19 ರೋಗಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಹಾಗಾಗಿ, ಇದರ ಮಧ್ಯದಲ್ಲಿ ನಾವುಗಳು ಕೆಲವು ವಿಚಾರಗಳನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು ಎನ್ನುವುದು ನನ್ನ ಸಲಹೆಯಾಗಿದೆ. ನಮ್ಮ ಜಿಲ್ಲೆಯಲ್ಲಿ ವೈದ್ಯರುಗಳು ಸಾಕಷ್ಟು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ. ಆ ದೃಷ್ಟಿಯಿಂದ, ಇಡೀ ರಾಜ್ಯದ ಬಗ್ಗೆ ಮಾತನಾಡದೇ ನಮ್ಮ ಜಿಲ್ಲೆಯಲ್ಲಿ ಹೇಳುವುದಾದರೆ, ಇವೊತ್ತಿನ ದಿವಸ ಕೋವಿಡ್–19 ರೋಗದಿಂದ ಬಳಲುತ್ತಿರುವವರ ಸಂಖ್ಯೆ ಕಡಿಮೆಯಾಗಿದೆ. ಆದರೆ, ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ವೈದ್ಯರುಗಳು ಕೂಡ ಕೋವಿಡ್–19 ರೋಗಕ್ಕೆ ತುತ್ತಾಗಿದ್ದಾರೆ. ನಾನು ಈಗಾಗಲೇ ಉಲ್ಲೇಖ ಮಾಡಿದ ರೀತಿಯಲ್ಲಿ ಅವರೆಲ್ಲರೂ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ, ಅವರುಗಳ ಬಗ್ಗೆ ಎಷ್ಟು ಕಾಳಜಿಯನ್ನು ವಹಿಸುತ್ತಿದ್ದೇವೆ

ಎನ್ನುವ ಯೋಚನೆಯನ್ನು ನಾವು ಮಾಡಬೇಕಾಗಿದೆ. ಇವೊತ್ತಿನ ದಿವಸ ಕೋವಿಡ್ ವಾರಿಯರ್ಸ್ ಎಂದು ಹೇಳುತ್ತೇವೆ. ಅದರಲ್ಲಿ ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ಪೌರ ಕಾರ್ಮಿಕರು ಇವರೆಲ್ಲರೂ ತುಂಬಾ ಪ್ರಾಮಾಣಿಕವಾಗಿ ಕೆಲಸ ಮಾಡುವಂತಹ ಸಂದರ್ಭದಲ್ಲಿ ನಾವು ಅವರನ್ನು ಮರೆಯಬಾರದು. ಏಕೆಂದರೆ, ಈಗಾಗಲೇ ಅನೇಕ ಸಮಸ್ಯೆಗಳು ಅವರಲ್ಲಿದೆ. ಅವರು ಮಾಡುತ್ತಿರುವಂತಹ ಕಾರ್ಯಗಳಿಗೆ ತಕ್ಕಂತಹ ಸವಲತ್ತುಗಳು ಅವರಿಗೆ ಸಿಗುತ್ತಿಲ್ಲವೇನೋ ಎನ್ನುವ ಕೊರಗು ನನ್ನನ್ನು ಕಾಡುತ್ತಿದೆ. ಇದು ನನ್ನ ವೈಯಕ್ತಿಕ ಅಭಿಪ್ರಾಯವಾಗಿದೆ. ಹಾಗಾಗಿ, ಕೋವಿಡ್-19 ರೋಗವನ್ನು ಸರ್ಕಾರ ಎಷ್ಟು ಗಂಭೀರತೆಯಿಂದ ತೆಗೆದುಕೊಂಡಿದೆ, ಅದೇ ರೀತಿ ಕೊರೊನಾ ವಾರಿಯರ್ಸ್ ಬಗ್ಗೆ ತೆಗೆದುಕೊಳ್ಳಬೇಕೆನ್ನುವುದು ನನ್ನ ಅನಿಸಿಕೆಯಾಗಿದೆ.

ಮೂರನೆಯದಾಗಿ, ಒಂದು ಜಿಲ್ಲೆಯಲ್ಲಿ ಆಸ್ಪತ್ರೆ ಇದೆ. ಆ ಜಿಲ್ಲೆಯಲ್ಲಿರುವಂತಹ ಆಸ್ಪತ್ರೆಗಿಂತಲೂ ತಾಲ್ಲೂಕು ಕೇಂದ್ರದಲ್ಲಿರುವ ಆಸ್ಪತ್ರೆಗಳಲ್ಲಿಯೇ ಕೋವಿಡ್-19 ಚಿಕಿತ್ಸೆ ಕೊಡಿಸುವಂತಹ ವ್ಯವಸ್ಥೆಗಳನ್ನು ಮಾಡಬೇಕು. ಈಗಾಗಲೇ ಕಡೂರು ಮತ್ತು ತರೀಕೆರೆಗಳಲ್ಲಿ ಆ ವ್ಯವಸ್ಥೆ ಮಾಡಲಾಗಿರುತ್ತದೆ. ನಾನು ಇಲ್ಲವೆಂದು ಹೇಳುತ್ತಿಲ್ಲ. ಆದರೆ, ಅದು ರಾಜ್ಯದ ಎಲ್ಲಾ ಭಾಗಗಳಲ್ಲಿಯೂ ಆದರೆ, ಖಂಡಿತವಾಗಿಯೂ ಹೆಚ್ಚಿನ ರೀತಿಯಲ್ಲಿ ಕೋವಿಡ್-19 ಅನ್ನು ನಿಯಂತ್ರಿಸುವುದಕ್ಕೆ ಅವಕಾಶವಾಗುತ್ತದೆ. ಜೊತೆಗೆ, ಆಸ್ಪತ್ರೆಗಳಲ್ಲಿ ವೈದ್ಯರುಗಳ ಕೊರತೆ ಇರುವುದರಿಂದ, ಕೂಡಲೇ ಅಲ್ಲಿಗೆ ವೈದ್ಯರುಗಳ ನೇಮಕಾತಿ ಮಾಡಿ, ತಾಲ್ಲೂಕು ಕೇಂದ್ರದಲ್ಲಿರುವ ಆಸ್ಪತ್ರೆಗಳಲ್ಲಿ ವ್ಯವಸ್ಥೆಗಳನ್ನು ಮಾಡಿದರೆ ಕೋವಿಡ್-19 ಅನ್ನು ಸಂಪೂರ್ಣವಾಗಿ ಒಂದು ಹಂತಕ್ಕೆ ತರಬಹುದು ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಈ ಬಗ್ಗೆ ಮಾನ್ಯ ಸಚಿವರ ಅಭಿಪ್ರಾಯ ಏನೆಂದು ತಿಳಿಸಬೇಕೆಂದು ಕೋರುತ್ತೇನೆ.

**ಡಾ||ಕೆ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಇವೊತ್ತಿನ ದಿವಸ ಕೋವಿಡ್-19 ನಿಂದ ಬಳಲುತ್ತಿರುವಂತಹ ರೋಗಿಗಳಿಗೆ ನಮ್ಮ ಸರ್ಕಾರಿ ಆಸ್ಪತ್ರೆಗಳಿರಬಹುದು ಅಥವಾ ಸರ್ಕಾರದ ವತಿಯಿಂದ ರೆಫರಲ್ ಆಗಿ ನೊಂದಣಿಯಾಗಿರುವಂತಹ ಖಾಸಗಿ ಆಸ್ಪತ್ರೆಗಳಲ್ಲಿ ಯಾರು ಚಿಕಿತ್ಸೆ ಪಡೆದಿದ್ದಾರೆ, ಇವರೆಲ್ಲರಿಗೂ ಕೂಡ ನಮ್ಮ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್(ಎಸ್.ಎ.ಎಸ್.ಟಿ.) ಅಡಿಯಲ್ಲಿ ಮತ್ತು ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕದ ಅಡಿಯಲ್ಲಿ ಚಿಕಿತ್ಸೆ ನೀಡಲಾಗಿರುತ್ತದೆ. ಆದಾಗ್ಯೂ, ಚಿಕ್ಕಮಗಳೂರು ಜಿಲ್ಲೆಗೆ ಸೀಮಿತವಾಗಿ ಹೇಳಬೇಕಾದರೆ, ಸುಮಾರು 25.10 ಲಕ್ಷ ಕೋವಿಡ್-19 ಚಿಕಿತ್ಸೆಗಾಗಿ ಖರ್ಚು ಮಾಡಲಾಗಿರುತ್ತದೆ. ಈ ಬಗ್ಗೆ ತಾಲ್ಲೂಕುವಾರು ಮಾಹಿತಿಯನ್ನು ಕೊಟ್ಟಿದ್ದೇವೆ. ಈಗಾಗಲೇ ಹೇಳಿರುವಂತೆ ಚಿಕ್ಕಮಗಳೂರು ಜಿಲ್ಲೆಯಲ್ಲಿ 992 ಕೋವಿಡ್ ಸೋಂಕಿತರು ಉಚಿತವಾಗಿ ಚಿಕಿತ್ಸೆ ಪಡೆದಿದ್ದು, 978 ಜನರು ಡಿಸ್ಚಾರ್ಜ್ ಆಗಿರುತ್ತಾರೆ. ಮಾನ್ಯ ಸದಸ್ಯರ ಉಪ ಪ್ರಶ್ನೆ ವಿಶೇಷವಾಗಿ ಕೋವಿಡ್-19 ಎರಡನೇ ಅಲೆ ಬಂದರೆ ಏನು ಎಂಬುದಾಗಿದೆ. ಈಗಾಗಲೇ ತಾಂತ್ರಿಕ ಸಲಹಾ ಸಮಿತಿಯವರು ಸರ್ಕಾರಕ್ಕೆ ಕೊಟ್ಟಿರುವ ವರದಿ

"ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಕಾರ, ಡಿಸೆಂಬರ್ ಅಥವಾ ಜನವರಿ ತಿಂಗಳ ಅಂತ್ಯದ ವೇಳೆಗೆ ಎರಡನೇ ಅಲೆ ಬಂದಾಗ ಯಾವ ರೀತಿ ಮಾರ್ಗಸೂಚಿಗಳನ್ನು ಮತ್ತು ಸಿದ್ಧತೆಗಳನ್ನು ಸರ್ಕಾರ ಮಾಡಿಕೊಳ್ಳಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ವಿಶೇಷ ಗಮನವನ್ನು ಕೊಟ್ಟು ಸರ್ಕಾರ ಸಾಕಷ್ಟು ತಯಾರಿ ಮಾಡಿಕೊಳ್ಳಬೇಕೆಂದು ಮಾನ್ಯ ಸದಸ್ಯರು ಕಳಕಳಿ ವ್ಯಕ್ತಪಡಿಸಿದ್ದಾರೆ. ಖಂಡಿತವಾಗಿಯೂ ಇದೇ ನಿಟ್ಟಿನಲ್ಲಿ ನಾವು ಕ್ರಮವನ್ನು ವಹಿಸುತ್ತಿದ್ದೇವೆ. ಈ ಬಗ್ಗೆ ಪದೇ ಪದೇ ಅನೇಕ ಸಮಾಲೋಚನೆಗಳನ್ನು ಮಾಡಿದ್ದೇವೆ. ಒಂದು ವೇಳೆ ಎರಡನೇ ಅಲೆ ಬಂದಾಗ ನಾವು ಯಾವ ರೀತಿ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎನ್ನುವುದರ ಬಗ್ಗೆ ಗಮನವನ್ನು ಕೊಟ್ಟಿದ್ದೇವೆ. ಇದರ ಜೊತೆ ಜೊತೆಗೆ, ರಾಜ್ಯದಲ್ಲಿ ನಾಗರಿಕ ಬಂಧುಗಳು ಕೂಡ ವಿಶೇಷವಾಗಿ ನಮಗೆ ಸಹಕಾರ ಕೊಡಬೇಕಾಗಿದೆ. ಇವೊತ್ತಿನ ದಿವಸ ಬಹಳಷ್ಟು ಜನ ಫೇಸ್ ಮಾಸ್ಕ್‌ಗಳನ್ನು ತೊರೆದಿರುವುದರಿಂದ, ಮುಂದೆ ಸಾಕಷ್ಟು ಗಂಭೀರವಾದಂತಹ ಸಮಸ್ಯೆಗಳು ಉದ್ಭವವಾಗಬಹುದು ಎಂಬ ಬಗ್ಗೆ ನಮಗೆ ಶಂಕೆಯಿದೆ. ಆ ನಿಟ್ಟಿನಲ್ಲಿ ನಾನು ಈ ಸದನದ ಮೂಲಕ ರಾಜ್ಯದ ಜನತೆಗೆ ಮನವಿ ಮಾಡುವುದೇನೆಂದರೆ, ನಮ್ಮಲ್ಲಿ ಸ್ಪಷ್ಟವಾದ ಲಸಿಕೆ ಬರುವವರೆಗೂ ಕೂಡ ಪ್ರತಿಯೊಬ್ಬರು ಸಾಮಾಜಿಕ ಅಂತರವನ್ನು ಕಾಪಾಡುವುದು ಮತ್ತು ಫೇಸ್ ಮಾಸ್ಕ್ ಅನ್ನು ಧರಿಸುವಂತಹ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸುವುದು ಬಹಳ ಅವಶ್ಯವಾಗಿರುತ್ತದೆ.

ಮಾನ್ಯ ಸದಸ್ಯರು ತಮ್ಮ ಮೂರನೆಯ ಉಪಪ್ರಶ್ನೆಯಲ್ಲಿ ಕೊರೊನಾ ಯೋಧರ ವೇತನ ಅಥವಾ ಇತರ ವಿಶೇಷ ಸೌಲಭ್ಯಗಳ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಈ ಅಂಶಗಳನ್ನು ನಾವು ಗಮನದಲ್ಲಿಟ್ಟುಕೊಂಡು ನಾವು ಅನೇಕ ಕೊರೊನಾ ಯೋಧರಿಗೆ ವಿಶೇಷ ಅನುದಾನವನ್ನು ಕೊಟ್ಟಿದ್ದೇವೆ, ವಿಶೇಷ ಚಿಕಿತ್ಸೆಗಳನ್ನು ಕೊಟ್ಟಿದ್ದೇವೆ ಮತ್ತು ಕೋವಿಡ್–19 ನಿಂದಾಗಿ ಯಾರಿಗೆ ಸಾವು ಸಂಭವಿಸಿದೆ, ಅಂತಹ ಕುಟುಂಬ ವರ್ಗದವರಿಗೆ ಕೇವಲ ಸಾಂತ್ವನ ಅಲ್ಲದೇ ಅವರಿಗೆ ಉದ್ಯೋಗ ಇರಲಿ ಮತ್ತು 50 ಲಕ್ಷ ರೂಪಾಯಿಗಳ ಪರಿಹಾರವನ್ನು ಮಾನ್ಯ ಪ್ರಧಾನ ಮಂತ್ರಿಗಳು ಏನು ಘೋಷಣೆ ಮಾಡಿದ್ದಾರೆ ಅದರ ಅಡಿಯಲ್ಲಿ ಈಗಾಗಲೇ ಅವರಿಗೆ ಪರಿಹಾರ ನೀಡುವಂತಹ ಕೆಲಸವನ್ನು ಮಾಡಿದ್ದೇವೆ. ಮಾನ್ಯ ಸದಸ್ಯರು ಅಂತಿಮವಾಗಿ ತಾಲ್ಲೂಕು ಕೇಂದ್ರಗಳಲ್ಲಿಯೂ ಕೂಡ ಚಿಕಿತ್ಸಾ ಕೇಂದ್ರಗಳನ್ನು ಸುಸಜ್ಜಿತಗೊಳಿಸಬೇಕೆಂದು ಹೇಳಿದ್ದಾರೆ. ಆ ನಿಟ್ಟಿನಲ್ಲಿ ನಾವು ಇಡೀ ರಾಜ್ಯದಲ್ಲಿ ಪ್ರಾರಂಭದಲ್ಲಿ ನಮಗೆ 5–6 ಸಾವಿರ ಸಾಮರ್ಥ್ಯದ ಆಕ್ಸಿಜನ್ ಬೆಡ್ ಏನಿತ್ತು ಅದನ್ನು ಇವೊತ್ತಿನ ದಿವಸ ಸುಮಾರು 35 ಸಾವಿರ ಹಾಸಿಗೆ ಸಾಮರ್ಥ್ಯಕ್ಕೆ ಆರೋಗ್ಯ ಇಲಾಖೆಯಲ್ಲಿ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಎರಡರಲ್ಲಿಯೂ ಕೂಡ ಮೇಲ್ದರ್ಜೆಗೇರಿಸಿದ್ದೇವೆ. ಅಂದರೆ, ಪ್ರತಿ ತಾಲ್ಲೂಕಿನಲ್ಲಿಯೂ ಕೂಡ ನಾಳೆಯ ದಿವಸ ಕೋವಿಡ್–19 ಸೋಂಕಿತರು ಹೆಚ್ಚಾದರೂ ಕೂಡ ತಾಲ್ಲೂಕು ಕೇಂದ್ರಗಳಲ್ಲಿಯೇ ಅವರಿಗೆ ಚಿಕಿತ್ಸೆಯನ್ನು ಕೊಡುವಂತಹ ನಿಟ್ಟಿನಲ್ಲಿ ಆಕ್ಸಿಜನ್ ಇರಬಹುದು ಅಥವಾ ಅದಕ್ಕೆ ಬೇಕಾದಂತಹ ಎಲ್ಲಾ ಉಪಕರಣಗಳನ್ನು ಈಗಾಗಲೇ ಸರಬರಾಜು ಮಾಡಿದ್ದೇವೆ. ಹಾಗಾಗಿ, ಮುಂದಿನ ದಿನಗಳಲ್ಲಿ ಕೋವಿಡ್–19 ಎರಡನೇ ಅಲೆ ಬಂದರೂ ಕೂಡ ಅದನ್ನು ಬಹಳ ಬಿಗಿಯಾಗಿ ನಿಯಂತ್ರಣ ಮಾಡುವುದಕ್ಕೆ ಎಲ್ಲಾ ಅಗತ್ಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಅಲ್ಲಂ ವೀರಭದ್ರಪ್ಪ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೋವಿಡ್-19 ರೋಗದ ಬಗ್ಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಹೇಳಿದ್ದಾರೆ. ಅದನ್ನು ನಾವು ಸ್ವಾಗತ ಮಾಡುತ್ತೇವೆ. ಈ ದಿನದ ದಿನಪತ್ರಿಕೆಯಲ್ಲಿ ಆಂಧ್ರಪ್ರದೇಶ ರಾಜ್ಯದಲ್ಲಿ ಒಂದು ಹೊಸ ಬಗೆಯ ಸಾಂಕ್ರಾಮಿಕ ರೋಗ ಬಂದಿರುತ್ತದೆ. ಅದರಿಂದಾಗಿ, ಸುಮಾರು 300-400 ಜನ unconscious ಆಗಿ ಹೋಗಿದ್ದಾರೆ. ಅಲ್ಲಿಂದ ನಮ್ಮ ಕನ್ನಡ ನಾಡಿಗೆ ಬಹಳಷ್ಟು ಜನ ಪ್ರಯಾಣಿಕರು ಬರುತ್ತಿರುತ್ತಾರೆ ಮತ್ತು ಹೋಗುತ್ತಿರುತ್ತಾರೆ. ಇದರಿಂದ ಬಹಳಷ್ಟು ಜನ ಸೇರುತ್ತಿರುತ್ತಾರೆ. ಅಲ್ಲದೇ, ದೆಹಲಿಯ All India Institute of Medical Sciences ಆಸ್ಪತ್ರೆಗೆ ಕೂಡ ಬಹಳಷ್ಟು ಜನ ಬಂದಿರುತ್ತಾರೆ. ಅದು ಏನು ರೋಗ ಎಂಬ ಬಗ್ಗೆ ಇದುವರೆವಿಗೂ ಗೊತ್ತಿರುವುದಿಲ್ಲ. ಅದರ ಬಗ್ಗೆ ಸರ್ಕಾರ ಆಲೋಚನೆ ಮಾಡಬೇಕು. ನಮ್ಮ ಕರ್ನಾಟಕದಿಂದ ಅಲ್ಲಿಗೆ ಹೋಗುವವರಿಗೆ ರೋಗ ಹರಡಬಹುದು ಎನ್ನುವ ಮುಂದಾಲೋಚನೆಯಿಂದ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ಎಂಬ ಬಗ್ಗೆ ತಿಳಿಸಬೇಕು.

(ಮುಂದು)

**(972)07.12.2020/2.20/ವೈಎಲ್-ಜಿಆರ್**

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಚಿಕ್ಕಮಗಳೂರು ಜಿಲ್ಲೆ ಹಾಗೂ ಮಂಗಳೂರು ಜಿಲ್ಲೆಗೆ ಸಂಬಂಧಿಸಿದಂತೆ ಮಾತನಾಡುತ್ತೇನೆ. ಈ ವಿಚಾರವಾಗಿ ಮಾನ್ಯ ವೈದ್ಯಕೀಯ ಸಚಿವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಕೆಲವು ಖಾಸಗಿ ಆಸ್ಪತ್ರೆಗಳನ್ನು ಗುರುತು ಮಾಡಿ ನೋಡಿದಾಗ ಕೆಲವು ಖಾಸಗಿ ಆಸ್ಪತ್ರೆಗಳಲ್ಲಿ ಲಕ್ಷಾಂತರ ರೂಪಾಯಿ ಬಿಲ್ ನಮೂದಿಸಿದ್ದು, ಈ ಸಂಬಂಧ ಮಾನ್ಯ ವೈದ್ಯಕೀಯ ಸಚಿವರಿಗೆ ದೂರು ಬಂದಿರುತ್ತದೆ. ಆದರೆ. ಯಾವುದೇ ಆಸ್ಪತ್ರೆ ಮೇಲೆಯೂ ಸರ್ಕಾರ ಕ್ರಮಕೈಗೊಂಡಿರುವುದಿಲ್ಲ. ಇದು ಒಂದು ದುರ್ದೈವ ಎಂದು ಹೇಳುವುದಕ್ಕೆ ಬಯಸುತ್ತೇನೆ. ಇನ್ನೊಂದು ನೋವಿನ ಸಂಗತಿಯೇನೆಂದರೆ, ಮಾನ್ಯ ವೈದ್ಯಕೀಯ ಸಚಿವರಿಗೂ ತಿಳಿದಿರುವ ಹಾಗೆ ದೇಹವನ್ನು ನೀಡದ ಹಾಗೆ ಸುಮಾರು 15 ರಿಂದ 20 ಲಕ್ಷ ರೂಪಾಯಿಗಳವರೆಗೂ ಬಿಲ್ ಮಾಡಿದ್ದಾರೆ. ಎಲ್ಲಾ ನ್ಯೂಸ್ ಚಾನಲ್‌ನಲ್ಲಿಯೂ ಪ್ರಕಟವಾಗಿದೆ ಮತ್ತು ವಾಟ್ಸಾಪ್‌ನಲ್ಲಿಯೂ ಸಂದೇಶ ಬಂದಿದೆ. ಆದರೂ ಯಾವುದೇ ವೈದ್ಯರ ಮೇಲೆ ಸಹ ಕ್ರಮಕೈಗೊಂಡಿರುವುದಿಲ್ಲ. ಕುಟುಂಬಸ್ಥರು ಹೇಗೋ ಕಷ್ಟಪಟ್ಟು ಹಣವನ್ನು ಕಟ್ಟಿದ್ದಾರೆ. ನಾನು ಕೇಳುವುದೇನೆಂದರೆ, ಮೂಡಬಿದರೆಯಲ್ಲಿ ಶ್ರೀಮತಿ ಎನ್.ಪದ್ಮಾಕ್ಷಿ ಎಂಬ ಶಿಕ್ಷಕಿ ಕರೋನಾ ಖಾಯಿಲೆಯಿಂದಾಗಿ ಮಂಗಳೂರು ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದರು. ಆಕೆಯ ಮಗಳು ಆಸ್ಪತ್ರೆಗೆ ಅಡ್ಮಿಟ್ ಆದ ತಕ್ಷಣ ವಾಟ್ಸಾಪ್‌ನಲ್ಲಿ ಸಂದೇಶವನ್ನು ಕಳುಹಿಸಿದಳು. ಮಾನ್ಯ ಶಿಕ್ಷಣ ಸಚಿವರು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಸಹ ತಕ್ಷಣವೇ ಅದಕ್ಕೆ ಸ್ಪಂದಿಸಿದ್ದರು. ಸರ್ಕಾರದಿಂದ ಚಿಕಿತ್ಸೆ ವೆಚ್ಚ ಭರಿಸಲಾಗುವುದು ಎಂದು ಹೇಳಿದರು. ಇದಕ್ಕೆ ಮಾನ್ಯ ವೈದ್ಯಕೀಯ ಸಚಿವರು ಸಹ ಸ್ಪಂದಿಸಿದ್ದು, 'ಕರೋನಾ ಪೀಡಿತ ಶಿಕ್ಷಕಿ ಹೊಣೆ ಹೊತ್ತ ಸರ್ಕಾರ' ಎಂದು ಪತ್ರಿಕೆಯಲ್ಲಿಯೂ

ವರದಿಯಾಗಿದೆ. ನಾನು ಸಹ ಶ್ರೀಮತಿ ಎನ್.ಪದ್ಮಾಕ್ಷಿಯವರ ಮನೆಗೆ ಭೇಟಿ ನೀಡಿ ವಿಚಾರಿಸಿದಾಗ ಸುಮಾರು ಆರೂವರೆ ಲಕ್ಷ ರೂಪಾಯಿ ಖರ್ಚು ಮಾಡಿದ್ದು, ಸರ್ಕಾರದಿಂದ ಅವರಿಗೆ ಒಂದು ರೂಪಾಯಿ ಸಹ ಆಸ್ಪತ್ರೆಯ ಬಿಲ್ ಭರಿಸಿರುವುದಿಲ್ಲ. ಪರಿಹಾರ ನೀಡುವ ಕುರಿತು ಯಾವುದೇ ವಿಚಾರ ಇರುವುದಿಲ್ಲ. ಕುಟುಂಬದವರೇ ಸಾಲ ಮಾಡಿ, ಬೇರೆ–ಬೇರೆ ರೀತಿಯಲ್ಲಿ ಹಣವನ್ನು ಹೊಂದಿಸಿ ರೂ. 6,50,000.00 ಗಳನ್ನು ಪಾವತಿಸಿರುತ್ತಾರೆ. ರೂ. 6,50,000.00 ಗಳನ್ನು ಪಾವತಿಸಿದ ನಂತರ ಮತ್ತೆ ಬಿಲ್ ಆಗಿದ್ದು, ಸರ್ಕಾರ ಇದಕ್ಕೆ ಸಂಬಂಧಿಸಿದಂತೆ ಏನು ಕ್ರಮಕೈಗೊಂಡಿದೆ ಎಂಬುದನ್ನು ತಿಳಿಸಬೇಕು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಕೋವಿಡ್–19 ವಿಚಾರವಾಗಿ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ವಿವರವಾದ ಉತ್ತರವನ್ನು ಮಾನ್ಯ ಸಚಿವರು ನೀಡಿದ್ದಾರೆ. ನನ್ನ ಪ್ರಶ್ನೆಯೇನೆಂದರೆ, ಡಿಸೆಂಬರ್ ಕೊನೆಯ ವಾರದ ವರ್ಷಾಚರಣೆ ಹಿನ್ನೆಲೆ ಇಡೀ ರಾಜ್ಯದಲ್ಲಿ ನಡೆಸುವ ಆಚರಣೆ ಕೋವಿಡ್‌ನ 2ನೇ ಅಲೆಗೆ ನಾಂದಿ ಆಗುತ್ತದೆ. ಆ ಹಿನ್ನೆಲೆಯಲ್ಲಿ ಸಾಮಾಜಿಕ ಅಂತರವಾಗಲಿ ಅಥವಾ ಮಾಸ್ಕ್ ಧಾರಣೆ ಬಗ್ಗೆಯಾಗಲಿ ಈಗಾಗಲೇ ನಿಷ್ಕಾಳಜಿ ತೋರಿಸುತ್ತಿದ್ದಾರೆ. ಇವತ್ತಿನ ದಿನ ಪತ್ರಿಕೆಯಲ್ಲಿ ಪ್ರಕಟವಾಗುವ ಸಂಖ್ಯೆಯನ್ನು ನೋಡಿದಾಗ ಕರೋನಾ ಹರಡುವುದು ಕಡಿಮೆಯಾಗಿದೆ ಎಂಬುದು ಗೊತ್ತಾಗುತ್ತದೆ. ಆದರೆ, ಡಿಸೆಂಬರ್‌ನಲ್ಲಿ ಹೆಚ್ಚು ಆಗುವ ಸಂದರ್ಭವಿದ್ದು, ಯಾವ ರೀತಿ ಇದನ್ನು ನಿಯಂತ್ರಣ ಮಾಡಲು ಸರ್ಕಾರ ಕ್ರಮಕೈಗೊಳ್ಳುತ್ತದೆ ಎಂಬುದನ್ನು ತಿಳಿಸಬೇಕು.

**ಡಾ॥ ಕೆ.ಸುಧಾಕರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಭೋಜೇಗೌಡರು ತಿಳಿಸಿದ ಹಾಗೆ ಖಾಸಗಿ ಆಸ್ಪತ್ರೆಗಳು ಸರ್ಕಾರವು ಭರಿಸುವ ನಿಗದಿತ ದರಕ್ಕಿಂತ ಹೆಚ್ಚು ಹಣವನ್ನು ತೆಗೆದುಕೊಂಡಿದ್ದಾರೆ ಎಂದು ದೂರು ಹೇಳಿದ್ದಾರೆ. ಇಂತಹ ದೂರಿಗೆ ಸಂಬಂಧಿಸಿದಂತೆ ರಾಜ್ಯ ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟಗಳಲ್ಲಿ ಸಮಿತಿಗಳನ್ನು ನಡೆಸಿದ್ದೇವೆ. ಸುಮಾರು 120ಕ್ಕೂ ಹೆಚ್ಚು ದೂರುಗಳು ಬಂದಿದ್ದು, ಈ ದೂರುಗಳಿಗೆ ಸಂಬಂಧಿಸಿದಂತೆ ನಿಖರವಾದ ಕ್ರಮ ಕೈಗೊಳ್ಳುವಂತೆ ಆದೇಶ ಮಾಡಲಾಗಿದೆ. ಕೆಲವು ಕಡೆ ಎಸ್.ಎ.ಎಸ್.ಟಿ., (ಸುರಕ್ಷಾ ಆರೋಗ್ಯ ಸುರಕ್ಷಾ ಟ್ರಸ್ಟ್) ಮೂಲಕ ಸರ್ಕಾರದಿಂದ ಭರಿಸುವ ಹಣವೇನಿದೆ, ಆ ಹಣವನ್ನು ತೆಗೆದುಕೊಳ್ಳುವುದರ ಜೊತೆಗೆ ಚಿಕಿತ್ಸೆ ಪಡೆಯುವ ಸೋಂಕಿತ ಕುಟುಂಬದಿಂದಲೂ ಹಣ ಪಡೆದುಕೊಂಡಿರುವುದು ನಮ್ಮ ಗಮನದಲ್ಲಿದ್ದು, ಅಂಥವರ ಮೇಲೆಯೂ ಕ್ರಮ ಕೈಗೊಳ್ಳುತ್ತೇವೆ. ವಿಶೇಷವಾಗಿ ಸಂಬಂಧಪಟ್ಟ ಮ್ಯಾನೇಜ್‌ಮೆಂಟ್‌ರವರ ಮೇಲೆ ಕ್ರಮ ಕೈಗೊಳ್ಳುವ ಕೆಲಸ ಮಾಡುತ್ತೇವೆ ಎಂಬ ಭರವಸೆಯನ್ನು ನೀಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಶ್ರೀಮತಿ ಎನ್.ಪದ್ಮಕ್ಷಿಯವರಿಗೆ ಬರಬೇಕಾಗಿರುವ ಹಣವನ್ನು ಸರ್ಕಾರದಿಂದ ಭರಿಸಿಕೊಡುವ ಕೆಲಸವಾಗಬೇಕು. ಇದೊಂದು ದುರ್ದೈವದ ಸಂಗತಿಯಾಗಿದೆ.

**ಡಾ॥ ಕೆ.ಸುಧಾಕರ್:–** ಮಾನ್ಯ ಸಭಾಪತಿಯವರೇ, ಅವರು ರೆಫರಲ್ ಮೂಲಕ ನೋಂದಣಿಯಾದರೆ ಬಹಳ ಸುಲಭವಾಗಿ ಎಸ್.ಎ.ಎಸ್.ಟಿ., ಅಡಿಯೊಳಗೆ ಬರುತ್ತದೆ. ಕೆಲವರು ಸ್ವಯಂಪ್ರೇರಿತರಾಗಿ ಖಾಸಗಿ ಆಸ್ಪತ್ರೆಗೆ ಸೇರ್ಪಡೆಗೊಂಡರೆ, ಅದು ಎಸ್.ಎ.ಎಸ್.ಟಿ., ಅಡಿಯೊಳಗೆ ಬರುವುದಿಲ್ಲ. ಆದರೂ ಸಹ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ಹೇಳಿ ಮಾಡಿಸಿಕೊಡುತ್ತೇನೆ. ವರ್ಷಾಚರಣೆ ಸಂದರ್ಭದಲ್ಲಿ ಕೋವಿಡ್‌ನ ಎರಡನೇ ಅಲೆ ಬರಲು ಸಾಧ್ಯವಿದೆ ಎಂದು ಮಾನ್ಯ ಸದಸ್ಯರು ಕಳವಳ ಏನಿದೆ, ಅದಕ್ಕೆ ಸಂಬಂಧಿಸಿದಂತೆ ನಮ್ಮ ತಾಂತ್ರಿಕ ಸಲಹಾ ಸಮಿತಿಯವರು ಒಂದು ವರದಿಯನ್ನು ಸಹ ನೀಡಿದ್ದಾರೆ. ಈ ಸಂಬಂಧ ಗಂಭೀರವಾಗಿ ಚರ್ಚೆ ಸಹ ಮಾಡಲಾಗಿದೆ. ಬಹುಶಃ ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ, ಯಾವ ರೀತಿ ವರ್ಷಾಚರಣೆಯನ್ನು ಹಮ್ಮಿಕೊಳ್ಳಬೇಕು, ಯಾವ ರೀತಿ ಮಾರ್ಗಸೂಚಿ ಅನುಸರಿಸಬೇಕೆಂಬುದನ್ನು ಒಂದೆರಡು ದಿವಸದಲ್ಲಿ ಘೋಷಣೆ ಮಾಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ 178+208**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಮತ್ತು ಶ್ರೀ ಕಾಂತರಾಜ್(ಬಿಎಂಎಲ್) ರವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಉನ್ನತ ಶಿಕ್ಷಣ ಸಚಿವರು ಬಹಳ ಸುದೀರ್ಘವಾದ ಉತ್ತರವನ್ನು ಒದಗಿಸಿದ್ದಾರೆ. ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯವನ್ನು ಯಾವಾಗ ಸ್ಥಾಪನೆ ಮಾಡಲಾಗಿದೆ; ಇದರ ಉದ್ದೇಶಗಳೇನು ಎಂಬ ಪ್ರಶ್ನೆಗೆ ಉತ್ತರವನ್ನು ನೀಡಿದ್ದಾರೆ. ಅದಕ್ಕಿಂತ ಬಹಳ ಪ್ರಮುಖವಾದ ವಿಷಯವೇನೆಂದರೆ, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದಲ್ಲಿ ಗುತ್ತಿಗೆ/ಸಂಚಿತ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಕಳೆದ 10 ತಿಂಗಳುಗಳ ಬಾಕಿ ವೇತನ ನೀಡದೆ ಏಕಾಏಕಿ ಅವರುಗಳನ್ನು ತೆಗೆದು ಹಾಕಿರುವುದು ನಿಜವೇ; ಈ ಸಂಬಂಧ ಸರ್ಕಾರ ಈ ಹಿಂದೆ ಸದನದಲ್ಲಿ ವೇತನ ಪಾವತಿ ಮಾಡುವುದಾಗಿ ಭರವಸೆ ನೀಡಿರುವುದು ನಿಜವೇ; ಎಂದು ಪ್ರಶ್ನೆ ಕೇಳಿದ್ದು, ಮಾನ್ಯ ಉನ್ನತ ಶಿಕ್ಷಣ ಸಚಿವರು ಬಹಳ ಸುದೀರ್ಘವಾಗಿ ಉತ್ತರವನ್ನು ನೀಡಿದ್ದಾರೆ. ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದಲ್ಲಿ ಗುತ್ತಿಗೆ ಅಡಿಯಲ್ಲಿ ಸುಮಾರು ಜನರು ಕಾರ್ಯನಿರ್ವಹಿಸುತ್ತಿದ್ದರು. ಯಾರು ಅವರನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾರೆ, ಎಲ್ಲಿ ಲೋಪವಾಗಿದೆ ಎಂಬುದರ ಬಗ್ಗೆ ಕೆಲಸಕ್ಕೆ ಸೇರಿದವರಿಗೆ ತಿಳಿದಿರುವುದಿಲ್ಲ. ಸುಮಾರು 10 ತಿಂಗಳುಗಳಿಂದ ಕಾರ್ಯನಿರ್ವಹಿಸಿದ್ದು, ಅವರಿಗೆ ಸಂಬಳವನ್ನು ನೀಡಿರುವುದಿಲ್ಲ. ಜೊತೆಗೆ ಹೊಸದಾಗಿ ಆಯ್ಕೆಯಾದ ಕುಲಪತಿಯವರನ್ನು ಏಕಾಏಕಿ ಕರ್ತವ್ಯದಿಂದ ತೆಗೆದು ಹಾಕಲಾಗಿದೆ. ಇದರ ಬಗ್ಗೆ ಬಹಳ ಸುದೀರ್ಘವಾಗಿ 140ನೇ ಅಧಿವೇಶನದಲ್ಲಿಯೂ ಸಹ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಚರ್ಚೆ ಮಾಡಿದ್ದು, ಆ ಸಂದರ್ಭದಲ್ಲಿ ಉನ್ನತ ಶಿಕ್ಷಣ ಸಚಿವರು ಯಾರ್ಯಾರು ಬೋಧಕೇತರ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸಿದ್ದಾರೆ ಅವರಿಗೆ ಸಂಬಳವನ್ನು ಬಿಡುಗಡೆ ಮಾಡಿಸುತ್ತೇನೆ ಎಂದು ಇದೇ ಸದನದಲ್ಲಿ ವಾಗ್ದಾನ ಸಹ ಮಾಡಿದ್ದರು. ಆದರೆ, ಹೊಸದಾಗಿ ಆಯ್ಕೆಯಾದ ಕುಲಪತಿಯವರು ಇದ್ಯಾವುದನ್ನು ಪರಿಗಣಿಸದೇ ಸಿಬ್ಬಂದಿಗಳನ್ನು ಏಕಾಏಕಿಯಾಗಿ ಕರ್ತವ್ಯದಿಂದ ತೆಗೆದು ಹಾಕಿರುವುದು ಬಹಳ ನೋವಿನ ಸಂಗತಿಯಾಗಿದೆ. ತಮ್ಮ ಮೂಲಕ ಮಾನ್ಯ ಉನ್ನತ ಶಿಕ್ಷಣ ಸಚಿವರಲ್ಲಿ ವಿನಂತಿಸುವುದೇನೆಂದರೆ, ಯಾರ್ಯಾರು ಕರ್ತವ್ಯ ನಿರ್ವಹಿಸಿದ್ದಾರೆ, ಅವರಿಗೆ ಆದಷ್ಟು ಬೇಗ ಸಂಬಳವನ್ನು ಬಿಡುಗಡೆಗೊಳಿಸಬೇಕು. ಜೊತೆಗೆ ಯಾರು ಅರ್ಹತೆ ಹೊಂದಿರುತ್ತಾರೆ, ಅವರನ್ನು ಗುತ್ತಿಗೆ ಆಧಾರದ ಮೇಲೆ ಮುಂದುವರೆಸಬೇಕೆಂದು ಕೇಳಿಕೊಳ್ಳುತ್ತೇನೆ.

**ಡಾ॥ ಸಿ.ಎನ್.ಅಶ್ವಥ್‌ನಾರಾಯಣ:–** ಮಾನ್ಯ ಸಭಾಪತಿಯವರೇ, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದಲ್ಲಿ ಸುಮಾರು 136 ಸಿಬ್ಬಂದಿಯನ್ನು ಯಾವುದೇ ಸರ್ಕಾರದ ಅನುಮತಿ ಇಲ್ಲದೇ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿತ್ತು. ಹಾಗಾಗಿ ಅವರನ್ನು ಕರ್ತವ್ಯದಿಂದ ತೆಗೆದು ಹಾಕಲಾಗಿದೆ. ಜೊತೆಗೆ ನೂತನ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕುಲಪತಿಯವರನ್ನು ತೆಗೆದು ಹಾಕಲಾಗಿದೆ. ಸುಮಾರು 136 ಜನರಿಗೂ ಭರಿಸಬೇಕಾಗಿರುವ ಸಂಬಳವೇನಿದೆ, ಅದನ್ನು ತ್ವರಿತವಾಗಿ ಒದಗಿಸುವ ಕೆಲಸವನ್ನು ಸರ್ಕಾರದಿಂದ ಮಾಡಲಾಗುತ್ತದೆ ಎಂದು ತಿಳಿಸಲು ಇಚ್ಛಿಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನದೊಂದು ಉಪ ಪ್ರಶ್ನೆ ಇದೆ. ಅದೇನೆಂದರೆ, ನಮ್ಮ ರಾಜ್ಯದಲ್ಲಿ ರೂಸಾ ಕಾರ್ಯಕ್ರಮದಡಿಯಲ್ಲಿ ಎರಡು ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಲಾಗಿತ್ತು. (1) ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಬೆಂಗಳೂರು ಹಾಗೂ (2) ಇಂಟಿಗ್ರೇಟೆಡ್ ಯೂನಿವರ್ಸಿಟಿ, ಮಂಡ್ಯ. ಈ ವಿಶ್ವವಿದ್ಯಾನಿಲಯಗಳು ಪ್ರಾರಂಭಗೊಂಡು ಮೂರು ವರ್ಷಗಳಾಗುತ್ತಿದೆ. ಈ ಎರಡೂವರೆ ವರ್ಷಗಳ ಹಿಂದೆ ವಿಶ್ವವಿದ್ಯಾಲಯವನ್ನು ನಡೆಸುವ ಸಲುವಾಗಿ ತಾತ್ಕಾಲಿಕವಾಗಿ ನೌಕರರನ್ನು ನೇಮಕ ಮಾಡಿಕೊಳ್ಳಲಾಗಿದೆ. ಸರ್ಕಾರದ ವಿಶೇಷಾಧಿಕಾರಿ ಎಂಬುವವರು ನೇಮಕ ಮಾಡಿಕೊಂಡಿದ್ದರು. ಈ ನೌಕರರಿಗೆ ಒಂದೂವರೆ ವರ್ಷದವರೆಗೂ ಸಂಬಳ ನೀಡಲಾಗಿದ್ದು, ಕಳೆದ 10 ತಿಂಗಳುಗಳಿಂದ ಬಾಕಿ ವೇತನವನ್ನು ನೀಡಿರುವುದಿಲ್ಲ. ಜೊತೆಗೆ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದಲ್ಲಿ 3 ಜನರಿಗೆ ಮಾತ್ರ ಆದೇಶದ ಪ್ರತಿಯನ್ನು ನೀಡಲಾಗಿದೆ. ಉಳಿದವರಿಗೆ ಆದೇಶದ ಪ್ರತಿಯನ್ನು ನೀಡಿರುವುದಿಲ್ಲ, ಜೊತೆಗೆ ಏಕಾಏಕಿ ಕರ್ತವ್ಯದಿಂದ ತೆಗೆದು ಹಾಕಿ, ಬೀದಿಗೆ ತಂದಿದ್ದಾರೆ. ವಿಶ್ವವಿದ್ಯಾಲಯಕ್ಕೆ ನೌಕರರು ಬೇಕೇ ಬೇಕಲ್ಲವೇ? ಮಂಡ್ಯ ವಿಶ್ವವಿದ್ಯಾಲಯದಲ್ಲಿ ಸಹ ಇದೇ ರೀತಿ ಮಾಡಲಾಗಿದ್ದು, ಅಲ್ಲಿನ ನೌಕರರು ನ್ಯಾಯಾಲಯದ ಮೊರೆ ಹೋಗಿ ತಡೆಯಾಜ್ಞೆ ತಂದಿದ್ದು, ಈಗ ಆ ವಿಶ್ವವಿದ್ಯಾಲಯ ಮುಂದುವರೆಯುತ್ತಿದೆ. ಆದರೆ, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದಲ್ಲಿ ಎಲ್ಲರನ್ನೂ ತೆಗೆದು ಹಾಕಲಾಗಿದ್ದು, ವಿಶ್ವವಿದ್ಯಾಲಯವನ್ನು ಹೇಗೆ ನಡೆಸುವುದು? ಆರ್ಟ್ಸ್, ಕಾಮರ್ಸ್, ಸೈನ್ಸ್ ಮತ್ತು ಹೋಮ್ ಸೈನ್ಸ್ ಕಾಲೇಜು – ಈ 4 ಕಾಲೇಜುಗಳನ್ನು ಮರ್ಜ್ ಮಾಡಲಾಗಿದೆ.

(ಮುಂದು)

**(973)07.12.2020/2.30/ಎಸ್‌ಕೆ-ಜಿಆರ್**
**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದುವರೆದುದು)**

ಆ ರೀತಿ merge ಮಾಡಿರುವ ಕಾಲೇಜುಗಳಲ್ಲಿ ಸುಮಾರು ಐದಾರು ಸಾವಿರ ಮಕ್ಕಳಿದ್ದಾರೆ. ಆದರೆ ಬೋಧನೆ ಮಾಡುವ ಬೋಧಕರನ್ನು ಮತ್ತು ನೌಕರರನ್ನು ವಿಶೇಷಾಧಿಕಾರಿಗಳು ಇದ್ದಾಗ ಇದ್ದವರನ್ನು ಕುಲಪತಿಗಳು ಬಂದ ಮಾರನೇ ದಿನವೇ ಮನೆಗೆ ಹೋಗು ಎಂದು ಆದೇಶ ಮಾಡಿದರೆ, ಮಕ್ಕಳಿಗೆ ಬೋಧನೆ ಮಾಡಲು ಬೋಧಕರು ಬೇಕಲ್ಲವೇ? ಇದರ ಅರ್ಥವೇನು? ಈ ರೀತಿ ಮಾಡಿದರೆ ವಿಶ್ವವಿದ್ಯಾಲಯವನ್ನು ನಡೆಸಿಕೊಂಡು ಹೋಗುವುದು ಹೇಗೆ? ಅವರು ನಿರುದ್ಯೋಗಿಗಳಲ್ಲವೇ, ಅವರು ಈ ರಾಜ್ಯದವರಲ್ಲವೇ? ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವೇತನ ಕೊಡುತ್ತೇವೆಂದು ಕಳೆದ ಬಾರಿ ಅಧಿವೇಶನದಲ್ಲಿ ಹೇಳಿದ್ದರು. ನೌಕರರನ್ನು ವಿಶ್ವವಿದ್ಯಾಲಯದಿಂದ ಏತಕ್ಕೆ ತೆಗೆದು ಹಾಕುತ್ತೀರಾ? ದಯವಿಟ್ಟು, ಅವರನ್ನು ಈ ವಿಶ್ವವಿದ್ಯಾಲಯದಲ್ಲಿ ಮುಂದುವರೆಸಿಕೊಂಡು ಹೋಗಬೇಕು. ಮಂಡ್ಯದಲ್ಲಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವ ರೀತಿ ಮುಂದುವರೆಸಿಕೊಂಡು ಹೋಗುತ್ತಿದ್ದಿರೋ, ಅದೇ ರೀತಿ ಇವರನ್ನು ಸಹ ಮುಂದುವರೆಸಬೇಕು. ಅವರಿಗೆ ಕೊಡಬೇಕಾದಂತಹ ಹತ್ತು ತಿಂಗಳ ವೇತನ ಬಾಕಿಯನ್ನು ಕೂಡಲೇ ಬಿಡುಗಡೆ ಮಾಡಬೇಕು.

**ಶ್ರೀ ಯು.ಬಿ. ವೆಂಕಟೇಶ್(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ನೌಕರರನ್ನು ಈ ವಿಶ್ವವಿದ್ಯಾನಿಲಯದಲ್ಲಿ ಮುಂದುವರೆಸಿಕೊಂಡು ಹೋಗಬೇಕು. ಕಾನೂನು ಬಾಹಿರ ಎಂದು ತೆಗೆದು ಹಾಕಿದ್ದಾರೆ. ಈ ನೌಕರರನ್ನು ತೆಗೆದುಕೊಂಡಿದ್ದಂತಹ ಅಧಿಕಾರಿಗಳ ಮೇಲೆ ಏನೇನು ಕ್ರಮಗಳನ್ನು ಜರುಗಿಸಿದ್ದಾರೆ? ನೌಕರರು ಅಮಾಯಕರು ಅವರನ್ನು ಬೀದಿಗೆ ತಳ್ಳಿದಿರಿ. ಇವರನ್ನೆಲ್ಲಾ ನೇಮಕಾತಿಯನ್ನು ಮಾಡಿಕೊಂಡು ಬೇಕಾದಷ್ಟು ಏನೇನು ಅವ್ಯವಹಾರಗಳನ್ನು ಮಾಡಿದ್ದಾರೋ, ಅವರಿಗೆ ಯಾವ ರೀತಿ ಶಿಕ್ಷೆ ಕೊಡುತ್ತಿದ್ದೀರಿ ಎನ್ನುವುದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು.

**ಡಾ. ಸಿ.ಎನ್.ಅಶ್ವತ್ಥನಾರಾಯಣ:–** ಮಾನ್ಯ ಸಭಾಪತಿಯವರೇ, ಈ ಎರಡು unitary ವಿಶ್ವವಿದ್ಯಾಲಯಗಳಲ್ಲಿ ಕಾನೂನು ಬಾಹಿರವಾಗಿ ನೇಮಕಾತಿಯನ್ನು ಮಾಡಲಾಗಿತ್ತು. ಹಾಗಾಗಿ ಅವರನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ಕಾನೂನಾತ್ಮಕವಾಗಿ ಸಾಧ್ಯವಿರಲಿಲ್ಲ. ಇವರನ್ನು ಉದ್ಯೋಗದಿಂದ ತೆರವುಗೊಳಿಸುವಂತಹದ್ದಾಗಿದೆ. ಇದು ಕಾನೂನು ಪ್ರಕಾರ ಮಾಡಬೇಕಾಗಿರುವಂತಹ ಕ್ರಮವಾಗಿದೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಹಾಗಾದರೆ, ವಿಶ್ವವಿದ್ಯಾನಿಲಯವನ್ನು ಯಾರ ಕೈಯಲ್ಲಿ ನಡೆಸುತ್ತೀರಿ? ಇದು ನನಗೆ ಅರ್ಥವಾಗುತ್ತಿಲ್ಲ. ಆದರೆ ನೇರ ನೇಮಕಾತಿಯೂ ಇಲ್ಲ.

**ಡಾ. ಸಿ.ಎನ್.ಅಶ್ವತ್ಥನಾರಾಯಣ:–**ಮಾನ್ಯ ಸಭಾಪತಿಯವರೇ, ಇಲ್ಲಿ ಕಾನೂನು ಪಾಲನೆಯಾಗಬೇಕಾಗಿದೆ. ಇಲ್ಲಿ ಮುಂಚೆ ಇದ್ದಂತಹ ವಿಶೇಷಾಧಿಕಾರಿಗಳ ವಿರುದ್ಧವಾಗಿ Enquiry conduct ಮಾಡುವಂತಹದ್ದು ಆಗುತ್ತಿದೆ. ಅವರು ಯಾವುದೇ ರೀತಿಯಾಗಿ ಸರ್ಕಾರದ ಅನುಮತಿ ತೆಗೆದುಕೊಳ್ಳದೇ ನೇಮಕಾತಿಯನ್ನು ಮಾಡಿದ್ದಾರೆ. ಹಾಗಾಗಿ ಸಂಪೂರ್ಣವಾಗಿ ಆ ವಿಶ್ವವಿದ್ಯಾಲಯದಲ್ಲಿ ಕಾನೂನುಬಾಹಿರವಾಗಿ ನೇಮಕಾತಿಯನ್ನು ಮಾಡಿದ್ದಾರೆ. ಇವತ್ತು ಅದನ್ನು ಸರಿಪಡಿಸುವುದಕೋಸ್ಕರ ಕ್ರಮವನ್ನು ವಹಿಸಲಾಗಿದೆ. ಅವರಿಗೆ ಕೊಡಬೇಕಾಗಿರುವ ಸಂಬಳವನ್ನು ಕೊಡುವಂತಹದ್ದಾಗಿದೆ. ಮುಂದಿನ ದಿನಗಳಲ್ಲಿ ಅವಶ್ಯಕತೆಯಿದ್ದಲ್ಲಿ ಸರ್ಕಾರದಿಂದ ಅನುಮತಿಯನ್ನು ತೆಗೆದುಕೊಂಡು, ನೇಮಕಾತಿಯನ್ನು temporary ಆಗಿ ಮಾಡುವಂತಹದ್ದಾಗುತ್ತದೆ ಎಂದು ತಿಳಿಸುವುದಕ್ಕೆ ಇಚ್ಛೆಸುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರ ಮುಖಾಂತರ ಉಪ ಮುಖ್ಯಮಂತ್ರಿಯವರಿಗೆ ಮನವಿ ಮಾಡುತ್ತೇನೆ. ಕಾನೂನು ಬಾಹಿರವಾಗಿ ನೇಮಕಾತಿಯನ್ನು ಮಾಡಿದ್ದರೆ, ವಿಶೇಷಾಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದರೆ ಇರುವಂತಹ ನೌಕರರನ್ನು ಬೀದಿಗೆ ತಳ್ಳಿದರೆ ಏನಾಗಬೇಕು? ವಿಶ್ವವಿದ್ಯಾನಿಲಯದ ಕೆಲಸವನ್ನು ಯಾವಾಗಲೂ ಮಾಡಲೇಬೇಕಲ್ಲವೇ? ಪರ್ಯಾಯವಾಗಿ ಯಾರೂ ಇಲ್ಲ. ನೌಕರರು ಒಂದೆರಡು ವರ್ಷಗಳ ಕಾಲ ಕೆಲಸ ಮಾಡಿ, ಈಗ ಮನೆಗೆ ಹೋಗಿ ಎಂದರೆ, ಇದರ ಅರ್ಥವೇನು? ಇದಕ್ಕೆ ಏನಾದರೂ set right ಮಾಡಬೇಕು ಇನ್ನೂ ಯಾರ್ಯಾರನ್ನು ತೆಗೆದುಕೊಳ್ಳಬೇಕು. ಒಂದು ವೇಳೆ roster ನ ಉಲ್ಲಂಘನೆಯಾಗಿದ್ದರೆ, ತೆಗೆದುಕೊಳ್ಳಲಿ. ಇನ್ನೂ ನಿಯಮ ಉಲ್ಲಂಘನೆಯಾಗಿದ್ದರೆ, additional ಆಗಿ ತೆಗೆದುಕೊಳ್ಳಿ. ಆದರೆ ಏಕಾಏಕಿ ಒಬ್ಬರನ್ನೂ ಬಿಡದೇ ನೌಕರರನ್ನು ಮನೆಗೆ ಕಳುಹಿಸಿದರೆ, ವಿಶ್ವವಿದ್ಯಾನಿಲಯ ನಡೆಯುವುದು ಹೇಗೆ? ಇವರು ಬೀದಿಗೆ ಬಂದರೆ, ಇವರ ಬದುಕು ಹೇಗೆ? ಮಾನ್ಯ ಸಭಾಪತಿಯವರೇ, ದಯವಿಟ್ಟು ಮಾನ್ಯ ಉಪ ಮುಖ್ಯಮಂತ್ರಿಯವರು ಸ್ಪಷ್ಟವಾದ ಉತ್ತರವನ್ನು ನೀಡಬೇಕು. ಯಾರು ಕಾನೂನು ಉಲ್ಲಂಘನೆ ಮಾಡಿದ್ದಾರೋ, ಅವರ ಮೇಲೆ ಕ್ರಮ ತೆಗೆದುಕೊಳ್ಳಲಿ. ಆದರೆ ನೌಕರರ ಏನು ಮಾಡುತ್ತಾರೆ ಪಾಪ. ಆ ನೌಕರರುಗಳನ್ನು ಸುಮ್ಮನೆಯಾಗಿ ನೇಮಕ ಮಾಡಿಕೊಂಡಿಲ್ಲ. ಅವರ ಹತ್ತಿರ ಹಣವನ್ನು ತೆಗೆದುಕೊಂಡೇ, ನೇಮಕಾತಿ ಮಾಡಿಕೊಂಡಿದ್ದಾರೆ. ಅವರನ್ನು ಬೀದಿಗೆ ತಳ್ಳಿದರೆ, ಅವರೇನು ಆತ್ಮಹತ್ಯೆ ಮಾಡಿಕೊಳ್ಳಬೇಕೇ? ಈಗ 123 ಜನರ ಭವಿಷ್ಯ ಮತ್ತು ಜೀವನದ ಬದ್ಧತೆಯ ಪ್ರಶ್ನೆಯಾಗಿದೆ. ಅವರು ಕಷ್ಟಪಟ್ಟು ಸಾಲವನ್ನು ಮಾಡಿ, ನೇಮಕಾತಿ ಮಾಡಿಕೊಳ್ಳುವುದಕ್ಕೆ ಹಣವನ್ನು ಏನು ಕೊಡಬೇಕೋ, ಅದನ್ನೆಲ್ಲಾ ಕೊಟ್ಟು, ವಿಶ್ವವಿದ್ಯಾನಿಲಯದ ಕೆಲಸಕ್ಕೆ ಬಂದಿದ್ದಾರೆ.

**ಸಭಾಪತಿಯವರು:–** ಮಾನ್ಯ ಸಚಿವರೇ ಮಾತನಾಡಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ನೌಕರರು ಎರಡು ವರ್ಷಗಳಾದ ಮೇಲೆ ಬೀದಿಗೆ ತಳ್ಳಿದರೆ ಹೇಗೆ? ದಯವಿಟ್ಟು, ಅವರನ್ನು ಏಕಾಏಕಿ ಮನೆಗೆ ಹೋಗಿ ಎಂದರೆ ಅರ್ಥವೇನು? ಇದು ನನಗೆ ಅರ್ಥವಾಗುತ್ತಿಲ್ಲ.

**(ಈ ಹಂತದಲ್ಲಿ ಸರ್ಕಾರದ ನೀತಿಯನ್ನು ಪ್ರತಿಭಟಿಸಿ ಮಾನ್ಯ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡರು ಬಾವಿಗೆ ಬಂದು, ಧರಣಿಯಲ್ಲಿ ನಿರತರಾದರು)**

**ಸಭಾಪತಿಯವರು:–** ಮಾನ್ಯ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನವರೇ ಮಾತನಾಡಿ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಪ್ರಶ್ನೆ ಸಂಖ್ಯೆ 60 ಅನ್ನು ಮಾನ್ಯ ಉಪ ಮುಖ್ಯಮಂತ್ರಿ ಮತ್ತು ಉನ್ನತ ಶಿಕ್ಷಣ ಸಚಿವರನ್ನು ಕೇಳುವುದಕ್ಕೆ ಬಯಸುತ್ತೇನೆ.

**ಡಾ. ಸಿ.ಎನ್.ಅಶ್ವತ್ಥನಾರಾಯಣ (ಉಪ ಮುಖ್ಯಮಂತ್ರಿ):–** ಮಾನ್ಯ ಸಭಾಪತಿಯವರೇ, ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರವನ್ನು ಒದಗಿಸಲಾಗಿದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರಾಜ್ಯ ಸರ್ಕಾರ ಯಾವ ರೀತಿ ಜಾರಿಗೆ ತರುತ್ತದೆ ಎಂಬುದರ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ಆ ಪ್ರಶ್ನೆಗೆ ಒದಗಿಸಿರುವಂತಹ ಉತ್ತರವನ್ನು...

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಾವಿಯಲ್ಲಿದ್ದಾರೆ. ಸಮಾಧಾನವಾದ ಉತ್ತರ ಕೊಡಬೇಕು.

**ಸಭಾಪತಿಯವರು:–** ಆಗ ತಾವು ಮಾತನಾಡಬೇಕಾಗಿತ್ತು.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸದಸ್ಯರು ಧರಣಿ ಕುಳಿತುಕೊಂಡಾಗ, ಸಮಾಧಾನವಾದ ಉತ್ತರ ಕೊಡಬೇಕು. ಈ ತರಹ ಸರಿ ಎನಿಸುವುದಿಲ್ಲ.

**(ಗೊಂದಲ)**

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಇದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡಲಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರನ್ನು ಬಾವಿಯಲ್ಲಿ ಧರಣಿಯಲ್ಲಿಟ್ಟುಕೊಂಡು, ನಾವು ಸದನವನ್ನು ನಡೆಸುವುದು ಅಷ್ಟು ಸೂಕ್ತವೆನಿಸುವುದಿಲ್ಲ.

**(ಗೊಂದಲ)**

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಅವರನ್ನು ಅವರ ಸ್ಥಾನಕ್ಕೆ ಕಳುಹಿಸಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾನಿಲಯದಲ್ಲಿ ಸುಮಾರು 126 ಜನ ನೌಕರರ ಬಗ್ಗೆ ವಿಚಾರವನ್ನು ಕೇಳಿದ್ದಾರೆ ಮತ್ತು ಇದಕ್ಕೆ ಸಂಬಂಧಪಟ್ಟಂತಹವರ ಮೇಲೆ ಕ್ರಮವಿಲ್ಲ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸದಸ್ಯರು ಬಾವಿಯಲ್ಲಿದ್ದಾರೆ.

**(ಗೊಂದಲ)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಎಸ್.ಎಲ್ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಇದರ ಜೊತೆಗೆ ಅವರಿಗೆ ರಕ್ಷಣೆಯಿಲ್ಲ ಎಂದರೆ ಹೇಗೆ? ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಮಾನ್ಯ ಉಪ ಮುಖ್ಯಮಂತ್ರಿಯವರು ಸಮಂಜಸವಾದ ಉತ್ತರವನ್ನು ಕೊಡಬೇಕು. ಮಾನ್ಯ ಸದಸ್ಯರು ಬಾವಿಯಲ್ಲಿದ್ದುಕೊಂಡು, ಸದನವನ್ನು ನಡೆಸುವುದು ಬೇಡ.

**(ಗೊಂದಲ)**

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

**(ಗೊಂದಲ)**

**ಶ್ರೀ ಎಸ್.ಎಲ್ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸಚಿವರು ಉತ್ತರವನ್ನು ಕೊಡಲಿ. ಆಗ ಮುಂದುವರೆಯಲಿ.

**(ಗೊಂದಲ)**

**ಡಾ. ಸಿ.ಎನ್.ಅಶ್ವತ್ಥನಾರಾಯಣ:–**ಮಾನ್ಯ ಸಭಾಪತಿಯವರೇ, ನಾನು ಬಹಳ ಸ್ಪಷ್ಟವಾಗಿ ಉತ್ತರವನ್ನು ಹೇಳಿದ್ದೇನೆ. ನೌಕರರನ್ನು ಕಾನೂನತ್ಮಕವಾಗಿ ಮುಂದುವರೆಸುವುದಕ್ಕೆ ಸಾಧ್ಯವಿಲ್ಲ. ಈಗಾಗಲೇ ನೇಮಕಾತಿಗೆ ಸಂಬಂಧಪಟ್ಟ ವಿಶೇಷಾಧಿಕಾರಿಗಳು ಕಾನೂನು ಉಲ್ಲಂಘನೆ ಮಾಡಿರುವ ಕಾರಣ ಅವರ ಮೇಲೆ Enquiry conduct ಮಾಡುವುದಕ್ಕೆ, ನಾವು ಮಾನ್ಯ ರಾಜ್ಯಪಾಲರಿಗೆ ಅನುಮತಿಗಾಗಿ ಈಗಾಗಲೇ ಪತ್ರವನ್ನು ಬರೆದಿದ್ದೇವೆ. **(ಗೊಂದಲ)** Enquiry conduct ಮಾಡಿ, ಅವರ ಮೇಲೆ ಕ್ರಮವನ್ನು ಜರುಗಿಸುತ್ತೇವೆ. ಯಾರೂ ಕಾನೂನು ಉಲ್ಲಂಘನೆ ಮಾಡಿ ನೇಮಕಾತಿಯನ್ನು ಮಾಡಿದ್ದಾರೋ, ಅವರ ಮೇಲೆ ...

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡರು ತಮ್ಮ ಸ್ಥಾನಕ್ಕೆ ಹಿಂತಿರುಗಿದರು)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಈಗಾಗಲೇ ವಿಶ್ವವಿದ್ಯಾನಿಲಯದಲ್ಲಿ ನೌಕರರು ಎರಡು ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ಅವರನ್ನು ಕೆಲಸದಿಂದ ಹೇಗೆ ತೆಗೆಯುತ್ತೀರಿ?

**ಡಾ. ಸಿ.ಎನ್.ಅಶ್ವತ್ಥನಾರಾಯಣ:–**ಮಾನ್ಯ ಸಭಾಪತಿಯವರೇ, ಅವರನ್ನು ಮುಂದುವರೆಸುವುದಕ್ಕೆ ಸಾಧ್ಯವಿಲ್ಲ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಯವರ ಮಾತನ್ನು ನಾವು ಒಪ್ಪುತ್ತೇವೆ. ತಮಗೆ ಗೊತ್ತಿರುವಂತೆ, ನೌಕರರನ್ನು ಅಕ್ರಮವಾಗಿ ನೇಮಕಾತಿಯಾಗಿದೆ ಎಂದ ಮೇಲೆ, ಅಕ್ರಮವಾಗಿ ತೆಗೆದುಕೊಂಡಿರುವ ಅಧಿಕಾರಿಗಳನ್ನು suspend ಮಾಡಬೇಕಲ್ಲ. Enquiry ಆಮೇಲೆ ಮಾಡಿ. Forthwith ಅವರನ್ನು suspend ಮಾಡಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಆದರೆ ಪಾಪ ನೌಕರರು ಏನು ಮಾಡಿದ್ದಾರೆ?

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಈಗ suspend ಮಾಡದೇ ಅವರನ್ನು ಇಟ್ಟು, ವಿಚಾರಣೆಯನ್ನು ಮಾಡುತ್ತೀರಾ? ಅವರನ್ನು ಕೂಡಲೇ suspend ಮಾಡಿ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-**ಈಗಾಗಲೇ ಒಂದೆರಡು ವರ್ಷಗಳ ಕಾಲ ವಿಶ್ವವಿದ್ಯಾಲಯದಲ್ಲಿ ನೌಕರರು ಕೆಲಸ ಮಾಡಿದ್ದಾರೆ. ಅವರನ್ನು ಮುಂದುವರೆಸಲೇ ಬೇಕಲ್ಲ.

**(ಗೊಂದಲ)**

**ಡಾ. ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಚಿವರನ್ನು ಮಾತನಾಡುವುದಕ್ಕೆ ಬಿಡಿ.

**(ಗೊಂದಲ)**

**ಡಾ. ಸಿ.ಎನ್.ಅಶ್ವತ್ಥನಾರಾಯಣ:-**ಮಾನ್ಯ ಸಭಾಪತಿಯವರೇ, ಈ ಒಂದು ವಿಚಾರದಲ್ಲಿ ಪ್ರೋಸಿಜರ್ ಲ್ಯಾಪ್ಸ್ ಆಗಿದೆ ಎಂದು ಪ್ರೋಸಿಜರ್ ಪ್ರಕಾರ Enquiry conduct ಮಾಡಿ, ಅವರ ಮೇಲೆ ಕ್ರಮ ಜರುಗಿಸುವಂತಹ ಕೆಲಸವಾಗುತ್ತಿದೆ. ಇದಕ್ಕೆ ಸಂಬಂಧಪಟ್ಟಂತೆ ಏನೇ ಕೆಲಸ ಮಾಡಿದರೂ, ಅದನ್ನು ಸರಿಪಡಿಸುವಂತಹದ್ದಾಗಬೇಕಾಗಿದೆ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಪ್ರೋಸಿಜರ ಪ್ರಕಾರ ನೇಮಕಾತಿ ಮಾಡುವವರೆಗೆ ಅಲ್ಲಿ ಕೆಲಸ ಮಾಡುವವರು ಬೇಕಲ್ಲವೇ? ಅವರನ್ನು ಮನೆಗೆ ಹೋಗಿ ಎನ್ನುತ್ತಾರೆ. ಇದು ಯಾವ ನ್ಯಾಯ. ಇದು ನಮಗೆ ಅರ್ಥವಾಗುವುದಿಲ್ಲ. **(ಗೊಂದಲ)** ನೇಮಕಾತಿ ರದ್ದಾಗುವುದಾದರೆ ಆಗಲಿ. ಮರು ನೇಮಕಾತಿ ಮಾಡಿ. ಆದರೆ ವಿಶ್ವವಿದ್ಯಾನಿಲಯದಲ್ಲಿ ಯಾರೂ ಕೆಲಸ ಮಾಡುವುದೇ ಬೇಡವೇ? ಅಲ್ಲಿ ಸಿಬ್ಬಂದಿಗಳೇ ಇಲ್ಲ. ಇದು ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಚಿವರೇ, ಮುಂದೆ ಮರು ನೇಮಕಾತಿ ಮಾಡುವಾಗ, ಅವರಿಗೇನಾದರೂ preference ಕೊಡಬಹುದೇ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಆದರೆ ನೇಮಕಾತಿ ಪ್ರಕ್ರಿಯೆಯನ್ನು ಹೊಸದಾಗಿ ಪ್ರಾರಂಭ ಮಾಡಲಿ. ಈಗ ತಾತ್ಕಾಲಿಕವಾಗಿ ಎರಡು ವರ್ಷಗಳಿಂದ ಕೆಲಸ ಮಾಡುತ್ತಿರುವ ನೌಕರರನ್ನು ಮನೆಗೆ ಕಳುಹಿಸಿದರೆ ವಿಶ್ವವಿದ್ಯಾನಿಲಯವನ್ನು ನಡೆಸುವುದು ಹೇಗೆ? ಮತ್ತೆ ಮುಂದೇನು? ಇದು ನನಗೆ ಅರ್ಥವಾಗುತ್ತಿಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನೇಮಕಾತಿ ಪ್ರಕ್ರಿಯೆಯನ್ನೇನಾದರೂ ಕೈಗೊಂಡಿದ್ದಾರೋ, ಅದು ಇಲ್ಲ. ಆದರೆ ಅವರನ್ನು ಸುಮ್ಮನೆ ಮನೆಗೆ ಹೋಗಿ ಎಂದರೆ, ಇದರ ಅರ್ಥವೇನು? ಈ ವಿಶ್ವವಿದ್ಯಾನಿಲಯದಲ್ಲಿ ನೌಕರರನ್ನು ಎರಡು ವರ್ಷ ಏತಕ್ಕಾಗಿ ಕೆಲಸ ಮಾಡಿಸಿಕೊಂಡಿದ್ದಾರೆ? ಅವರಿಗೆ ಸಂಬಳವನ್ನಾದರೂ ಕೊಟ್ಟಿದ್ದಾರೆಯೇ ಅದೂ ಇಲ್ಲ. ಇದು ಹುಡಗಾಟನಾ. ನನಗೆ ಅರ್ಥವಾಗುತ್ತಿಲ್ಲ. ಹತ್ತು ತಿಂಗಳಾದರೂ ಅವರಿಗೆ ಸಂಬಳ ಕೊಟ್ಟಿಲ್ಲ. ನೌಕರರನ್ನು ಎರಡು ಕಾಲು ವರ್ಷಗಳ ಕಾಲ ಕೆಲಸವನ್ನು ಮಾಡಿಸಿಕೊಂಡಿದ್ದೀರಿ. ಅವರನ್ನು ಮನೆಗೆ ಹೋಗಿ ಎನ್ನುತ್ತೀರಿ.

**ಡಾ:ಸಿ.ಎನ್.ಅಶ್ವತ್ಥನಾರಾಯಣ:–** ಮಾನ್ಯ ಸಭಾಪತಿಯವರೇ, ಯಾವುದೇ ರೀತಿಯಾಗಿ ಸಂಬಳವನ್ನು ಕೊಡವುದನ್ನಾ ಬಾಕಿ ಇಡುವುದಿಲ್ಲ. ಸಂಬಳವನ್ನು ಕೊಡಲಾಗುವುದು. ಇದರಲ್ಲಿ ಕಾನೂನು ಉಲ್ಲಂಘನೆಯಾಗಿದೆ ಎಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–**ನೇರ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿ, ಇವರು ಅರ್ಹತೆಯಿಲ್ಲವೆಂದು ಮನೆಗೆ ಕಳುಹಿಸಿ. ನಮ್ಮದು ಆ ವಿಚಾರವಲ್ಲ. ಈಗ ನೌಕರರನ್ನು ಏಕಾಏಕಿ ಮನೆಗೆ ಕಳುಹಿಸಿದ್ದೀರಿ.

**ಸಭಾಪತಿಯವರು:–**ನೌಕರರನ್ನು ಕಾನೂನಬಾಹಿರವಾಗಿ ತೆಗೆದುಕೊಂಡ ಮೇಲೆ, ಅವರನ್ನು ಮನೆಗೆ ಕಳುಹಿಸುತ್ತೀರಾ ಹೇಳಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–**ಮಾನ್ಯ ಸಭಾಪತಿಯವರೇ, ಕಾನೂನು ಬಾಹಿರವಾಗಿ ನೇಮಕಾತಿ ಮಾಡಿರುವವರ ಮೇಲೆ ಕ್ರಮವನ್ನು ಜರುಗಿಸಲಿ. ಆದರೆ ನೌಕರರು ಪಾಪ ಏನು ಮಾಡುತ್ತಾರೆ? ವಿಶ್ವವಿದ್ಯಾನಿಲಯದಲ್ಲಿ ಎರಡು ಕಾಲು ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ದಯವಿಟ್ಟು, ಮಾನ್ಯ ಸಭಾಪತಿಯವರೇ, ಇಡೀ ದಿನ ನಾನು ಬಾವಿಯಲ್ಲಿ ಇರುತ್ತೇನೆ. ತಾವು ಖಾಯಂ ನೌಕರರನ್ನು ನೇಮಕ ಮಾಡುವುದಾದರೆ, ಅದನ್ನು ಮಾಡಿಲಿ. ವಿಶ್ವವಿದ್ಯಾನಿಲಯ ನಡೆಯಬೇಕಲ್ಲವೇ?

**(ಗೊಂದಲ)**

**ಡಾ:ಸಿ.ಎನ್.ಅಶ್ವತ್ಥನಾರಾಯಣ:–** ಮಾನ್ಯ ಸಭಾಪತಿಯವರೇ, ಯಾರೇ ಮುಂದುವರೆಸಿದರೂ ಕಾನೂನು ಉಲ್ಲಂಘನೆಯಾಗುತ್ತದೆ. ಇದನ್ನು ಯಾರೂ ಮುಂದುವರೆಸಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಈಗ ಬಂದಿರುವರು ಮುಂದುವರೆಸಿದರೆ, ಅವರ ಮೇಲೆ ಕಾನೂನು ಕ್ರಮ ಜರುಗಿಸುವಂತಹದ್ದಾಗುತ್ತದೆ. ಹಾಗಾಗಿ ಮುಂದುವರೆಸುವ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪ್ರಶ್ನೆಯೇ ಇಲ್ಲ. ಈ ಹಿಂದೆ ಇದ್ದಂತಹ ಅಧಿಕಾರಿಗಳು ಮಾಡಿದ್ದನ್ನು, ಇವರು ಯಾರಾದರೂ ಮುಂದುವರೆಸಿದರೆ, ಇವರ ಮೇಲೆ ಕ್ರಮ ಜರುಗಿಸುತ್ತೇವೆ. ಹಾಗಾಗಿ ಯಾವುದೇ ರೀತಿಯ ಅವಕಾಶವಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–**ಮಾನ್ಯ ಸಭಾಪತಿಯವರೇ, ಉಪ ಕುಲಪತಿಯವರೇ ವಿಶ್ವವಿದ್ಯಾನಿಲ್ಯವನ್ನು ನಡೆಸುತ್ತಾರೆಯೇ?

**ಡಾ: ಸಿ.ಎನ್.ಅಶ್ವತ್ಥನಾರಾಯಣ:–**ಮಾನ್ಯ ಶ್ರೀಕಂಠೇಗೌಡರನ್ನು ಕರೆದು ಇದರ ಬಗ್ಗೆ ಚರ್ಚೆ ಮಾಡುತ್ತೇನೆ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಆದರೆ ವಿಶ್ವವಿದ್ಯಾನಿಲಯ ನಡೆಯಬೇಕಲ್ಲಾ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಶ್ರೀಕಂಠೇಗೌಡರೇ ಮಾನ್ಯ ಸಚಿವರು ಇದರ ಚರ್ಚೆ ಮಾಡಿದಾಗ ತಮ್ಮನ್ನು ಕರೆಯುತ್ತಾರೆ. ಆಗ ತಾವು ಮಾತನಾಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಇದು ನನಗೆ ಅರ್ಥವಾಗುತ್ತಿಲ್ಲ. ಉಪ ಕುಲಪತಿಯೊಬ್ಬರೇ ವಿಶ್ವವಿದ್ಯಾನಿಲಯವನ್ನು ನಡೆಸುತ್ತಾರೆಯೇ? ಹೋಗಲಿ, ನೇಮಕಾತಿಯನ್ನಾದರೂ ಮಾಡಲಾಗುತ್ತದೆಯೇ. ಇದರ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ.

**(ಗೊಂದಲ)**

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಮಗೆ ಗೌರವ ಕೊಟ್ಟು, ಮಾನ್ಯ ಕೆ.ಟಿ. ಶ್ರೀಕಂಠೇಗೌಡರನ್ನು ಕರೆಸಿ ಚರ್ಚೆ ಮಾಡುತ್ತೇವೆಂದು ಹೇಳಿದ್ದಾರೆ. ಸದಸ್ಯರು ಈ ರೀತಿಯಾಗಿ ಮುಂದುವರೆಸುವುದು ಸರಿಯಲ್ಲ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ,...

**(ಗೊಂದಲ)**

(ಮುಂದು)

**(974) 07.12.2020 2.40 ಟಿಸಿಹೆಚ್–ಎಂಡಿ**

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ ಆ ರೀತಿ ಅಕ್ರಮವಾಗಿ ನೇಮಕಾತಿ ಮಾಡಿದಂತಹ ಅಧಿಕಾರಿಗಳ ಮೇಲೆ ಸರ್ಕಾರ ತುರ್ತಾಗಿ ಕ್ರಮಕೈಗೊಳ್ಳಲಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆ ಶಿಕ್ಷಕರು ಮತ್ತು ಸಿಬ್ಬಂದಿಗಳನ್ನು ಮನೆಗೆ ಕಳುಹಿಸಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಉನ್ನತ ಶಿಕ್ಷಣ ಸಚಿವರು ತಮ್ಮನ್ನು ಕಚೇರಿಗೆ ಕರೆದು ಮಾತನಾಡುತ್ತೇವೆಂದು ಈಗಾಗಲೇ ಅವರಿಗೆ ಹೇಳಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಅವರ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳದೆಯೇ ಆ ಶಿಕ್ಷಕರು ಮತ್ತು ಸಿಬ್ಬಂದಿಗಳನ್ನು ಮನೆಗೆ ಕಳುಹಿಸಿದರೆ ಹೇಗೆ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದನ್ನು ಕೊನೆ ಮಾಡಬೇಕಲ್ಲ. ಇದು Question Hour, Question Day ಆಗಬಾರದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರವರು ಸದನದ ಬಾವಿಯಲ್ಲಿ ನಿಂತುಕೊಂಡಿದ್ದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರ ಸಲಹೆ ಮೇರೆಗೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಶ್ರೀ ಶ್ರೀಕಂಠೇಗೌಡರವರನ್ನು ಕರೆದು, ಮಾತನಾಡಿ ಈ ಸಮಸ್ಯೆಯನ್ನು ಪರಿಹಾರ ಮಾಡಲು ಯೋಚನೆ ಮಾಡುತ್ತೇವೆಂದು ಹೇಳಿದರು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಉನ್ನತ ಶಿಕ್ಷಣ ಸಚಿವರೇ, ನೀವು ಒಂದು ಸಭೆ ಕರೆದು ಶ್ರೀ ಕೆ.ಟಿ.ಶ್ರೀಕಂಠೇಗೌಡರವರೊಂದಿಗೆ ಚರ್ಚೆ ಮಾಡಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ.60+62**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ಘೋಷಣೆ ಮಾಡಿರುವ ಶಿಕ್ಷಣಕ್ಕೆ ಸಂಬಂಧಿಸಿದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರಾಜ್ಯ ಸರ್ಕಾರದ ವತಿಯಿಂದ ಜಾರಿಗೆ ತರಲಾಗಿದೆಯೇ ಎಂದು ನಾನು ಪ್ರಶ್ನೆಯನ್ನು ಕೇಳಿದ್ದೆನು. ಅದಕ್ಕೆ ಮಾನ್ಯ ಸಚಿವರು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸುವಲ್ಲಿ ರಾಜ್ಯ ಸರ್ಕಾರವು ಕಾರ್ಯೋನ್ಮುಖವಾಗಿದೆ ಎನ್ನತಕ್ಕಂಥ ಉತ್ತರವನ್ನು ಕೊಟ್ಟಿದ್ದಾರೆ. ಮುಂದುವರೆದು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರಾಜ್ಯದಲ್ಲಿ ಸಮರ್ಪಕವಾಗಿ ಜಾರಿಗೆ ತಂದು ಕಾರ್ಯನಿರ್ವಹಿಸುವ ಸಲುವಾಗಿ National Education Policy-2020 ಅನುಷ್ಠಾನ ಕಾರ್ಯಪಡೆಯನ್ನು ರಚನೆ ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ನಾನು ಇದನ್ನು ಸ್ವಾಗತ ಮಾಡುತ್ತಾ, ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸುವ ಕುರಿತು ಈ ಎರಡು clarification ನ್ನು ನಾನು ಮಾನ್ಯ ಸಚಿವರಿಗೆ ಕೇಳುವುದಕ್ಕೆ ಬಯಸುತ್ತಿದ್ದೇನೆ. ಸದರಿ ಯೋಜನೆಯು ಪ್ರಾಥಮಿಕ ಶಿಕ್ಷಣ ಹಾಗೂ ಗ್ರಾಮೀಣ ಮತ್ತು ನಗರ ಭಾಗಗಳಲ್ಲಿ ವೃತ್ತಿಪರ ಶಿಕ್ಷಣಕ್ಕೆ ಅನುಕೂಲ ಮಾಡಿಕೊಡುತ್ತದೆ ಎನ್ನತಕ್ಕಂಥ ವಿಚಾರವನ್ನು ಮಾನ್ಯ ಸಚಿವರಿಗೆ ಕೇಳುವುದಕ್ಕೆ ಬಯಸುತ್ತಿದ್ದೇನೆ. ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ಮತ್ತು ವೃತ್ತಿಪರ ಶಿಕ್ಷಣಕ್ಕೆ ಹೆಚ್ಚು ಅನುಕೂಲ ಮಾಡತಕ್ಕಂಥ ವಿಚಾರದಲ್ಲಿ ಸರ್ಕಾರದ ನಿಲುವೇನು? ಇದರ ಜೊತೆಗೆ ಹೊಸ ಶಿಕ್ಷಣ ನೀತಿಯಲ್ಲಿ ಮಾತೃ ಭಾಷೆಗೆ ಹೆಚ್ಚು ಮಹತ್ವವನ್ನು ಕೊಡತಕ್ಕಂಥ ವಿಚಾರದಲ್ಲಿ ಸರ್ಕಾರದ ನಿಲುವೇನು ಎನ್ನತಕ್ಕಂಥ ಮಾತನ್ನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಕೇಳುವುದಕ್ಕೆ ಬಯಸುತ್ತಿದ್ದೇನೆ.

**ಡಾ॥ಅಶ್ವಥ್ ನಾರಾಯಣ ಸಿ.ಎನ್:-** ಮಾನ್ಯ ಸಭಾಪತಿಯವರೇ, ಮುಖ್ಯವಾಗಿ ಸ್ವಾತಂತ್ರ್ಯ ಪಡೆದ 34 ವರ್ಷಗಳ ನಂತರ ಮೂರನೇ ಬಾರಿಗೆ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತರಲಾಗಿದೆ. ಈ ಒಂದು ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಈಗಾಗಲೇ ಘೋಷಣೆಯಾಗಿವ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ನಮ್ಮ ರಾಜ್ಯದಲ್ಲಿ ಕಾರ್ಯರೂಪಕ್ಕೆ ತರಲು ಈಗಾಗಲೇ ನಾವು ಸೂಚನೆ ಕೊಟ್ಟು ಕಾರ್ಯಪಡೆಯನ್ನು ರಚನೆ ಮಾಡಿರತಕ್ಕಂಥ ಮೊಟ್ಟಮೊದಲ ರಾಜ್ಯವಾಗಿದೆ. ಈ ಕಾರ್ಯಪಡೆಯನ್ನು ದಿನಾಂಕ 04.03.2020ರಲ್ಲಿ ರಚಿಸಲಾಯಿತು. ಈಗಾಗಲೇ ಈ ಕಾರ್ಯಪಡೆ ಸಾಕಷ್ಟು ಅಧ್ಯಯನವನ್ನು ಮಾಡಿ, ಸಾಕಷ್ಟು ವಿಚಾರಗಳನ್ನೆಲ್ಲಾ ವಿನಿಮಯ ಮಾಡಲಾಗಿದೆ. ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಎಸ್.ವಿ.ರಂಗನಾಥ್‌ರವರ ಅಧ್ಯಕ್ಷತೆಯಲ್ಲಿ ರಚಿಸಿದ್ದ 15 ಜನರ ತಂಡದ ಸಮಿತಿಯು ಈಗಾಗಲೇ ವರದಿ ಸಲ್ಲಿಸಿದೆ. ದಿನಾಂಕ 07.11.2020ರಂದು ಆ ವರದಿಯನ್ನು ಸಲ್ಲಿಸಿ, ಯಾವ ರೀತಿ ಈ ಒಂದು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಕಾರ್ಯರೂಪಕ್ಕೆ ತರಬೇಕು ಎನ್ನತಕ್ಕಂಥ Implementation Plan ನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಟ್ಟಿದ್ದಾರೆ. ಆ Implementation Plan ಮಾಡಲು ಸವಿಸ್ತಾರವಾಗಿ ಅಧಿಕಾರಿಗಳ ಹಂತದಲ್ಲಿ ಮತ್ತು ಸರ್ಕಾರದಲ್ಲಿಯೂ ಕೂಡ ಚರ್ಚೆಯನ್ನು ಮಾಡಿ ಯಾವ ರೀತಿ ಇದನ್ನು ಕಾರ್ಯರೂಪಕ್ಕೆ ತರಬೇಕೆಂದು ಈಗಾಗಲೇ ಯೋಜನೆ ಮಾಡುತ್ತಿದ್ದೇವೆ. ತ್ವರಿತವಾಗಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು 2020-21ಕ್ಕೆ ಅನುಷ್ಠಾನ ಮಾಡುವಂಥದ್ದಾಗುತ್ತದೆ. 2020-21 ಅನುಷ್ಠಾನ ಮಾಡಲು ಪ್ರಾರಂಭದ ವರ್ಷವಾಗಿರುತ್ತದೆ. ಇದನ್ನು ಕಾರ್ಯರೂಪಕ್ಕೆ ತರಲು 15 ವರ್ಷಗಳ ಕಾಲಾವಧಿ ಇರುತ್ತದೆ. ಇದನ್ನು ಹಂತ ಹಂತವಾಗಿ ಕಾರ್ಯರೂಪಕ್ಕೆ ತರುವಂಥದ್ದಾಗುತ್ತಿದೆ. ವ್ಯವಸ್ಥಿತವಾಗಿ ಒಂದು ಕಾಯ್ದೆಗಳ ಮೂಲಕ structural reforms and administrative reforms ನ್ನು ತಂದು ನಮ್ಮ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಒಂದು ಉತ್ತಮವಾದ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವುದಕ್ಕೆ ಎಲ್ಲಾ ರೀತಿಯಾದ ಪ್ರಯತ್ನವನ್ನು ನಮ್ಮ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಉನ್ನತ ಶಿಕ್ಷಣ ಈ ಎರಡೂ ಇಲಾಖೆಯ ಜೊತೆಜೊತೆಯಲ್ಲಿಯೇ ಮಾಡುವಂಥದ್ದಾಗುತ್ತದೆ.

ಪ್ರಾರಂಭಿಕವಾಗಿ ಮೊದಲನೆಯ recommendation ಇರುವಂಥದ್ದು, ಕರ್ನಾಟಕ ಶಿಕ್ಷಣ ಆಯೋಗ ಮಾಡಬೇಕು ಎಂದು ಇದೆ. ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ಶಿಕ್ಷಣ ಆಯೋಗವನ್ನು ರಚನೆ ಮಾಡಿ, ಆ ಒಂದು ಆಯೋಗದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಉಪಾಧ್ಯಕ್ಷರಾಗಿರುತ್ತಾರೆ ಹಾಗೂ ಉನ್ನತ ಶಿಕ್ಷಣ ಸಚಿವರು ಕೂಡ ಉಪಾಧ್ಯಕ್ಷರಾಗಿರುತ್ತಾರೆ. ಇನ್ನಿತರೆ ಸದಸ್ಯರುಗಳು ಇರುತ್ತಾರೆ. ಆ ಮೂಲಕ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಮತ್ತು ಉನ್ನತ ಶಿಕ್ಷಣದಲ್ಲೂ ವರ್ಗೀಕರಣ ಮಾಡಿಕೊಂಡು, ಅದರಡಿಯಲ್ಲಿ ಇನ್ನೂ ಹೆಚ್ಚಿನ ವಿಭಾಗೀಕರಣವನ್ನು ಮಾಡಿಕೊಂಡು ಏನು ಒಂದು accreditation, regulation, funding and research and innovation ಆಗಲೀ ಮಾಡುವುದಕ್ಕೆ ನಾಲ್ಕು verticals ಗಳನ್ನು ಮಾಡುವಂಥದ್ದು ಇದೆ. ಈಗಾಗಲೇ ಉನ್ನತ ಶಿಕ್ಷಣ ಕೌನ್ಸಿಲ್ ಇದೆ. ಅದನ್ನೇ strengthen ಮಾಡಿ ಅದರಡಿಯಲ್ಲಿ ತರುವಂಥದ್ದು ಮತ್ತು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣದಲ್ಲೂ ಕೂಡ ಪ್ರಾಥಮಿಕ ಶಿಕ್ಷಣ ಪರಿಷತ್‌ನ್ನು ಮಾಡಿ ಅದರಡಿಯಲ್ಲೂ ಕೂಡ ಒಂದೆರಡು verticals ನ್ನು ಮಾಡಬೇಕು ಎಂದು ಇದ್ದೇವೆ. ಆ verticals ನ ಅಡಿಯಲ್ಲಿ ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತರಲಾಗುವುದು ಮತ್ತು ನಮ್ಮ ಉನ್ನತ ಶಿಕ್ಷಣದಲ್ಲಿ ನಮ್ಮ Karnataka State University Act ನ್ನು ಹೊಸದಾಗಿ ಒಂದು Act ಎಂದು ತರುವಂಥದ್ದನ್ನು ಮಾಡಿಕೊಂಡು ಸಾಕಷ್ಟು ಸುಧಾರಣೆಗಳನ್ನು ತರುವಂಥದ್ದು ಇದೆ. ಏಕೆಂದರೆ ಈಗ ಇರುವಂಥ ಕಾಯ್ದೆ ಅಷ್ಟು ಪ್ರಸ್ತುತವಾಗಿರಲಿಲ್ಲ, ಅದು ಬಂದು ಸುಮಾರು 20 ವರ್ಷವಾಗಿದೆ. ಈ ಒಂದು ರಾಷ್ಟ್ರೀಯ ಶಿಕ್ಷಣ ನೀತಿಗೆ ಆಧಾರವಾಗಿ ಅಷ್ಟು match ಆಗುವುದಿಲ್ಲ. ಹಾಗಾಗಿ, ಸಾಕಷ್ಟು ಬದಲಾವಣೆ ತರುವಂಥದ್ದು ಆಗಬೇಕಾಗುತ್ತದೆ. ಬದಲಾವಣೆ ತರುವುದಕ್ಕೂ ಕೂಡ ಒಂದು ಸಮಿತಿಯನ್ನು ರಚನೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಡಲಾಗಿದೆ. ಆ ಸಮಿತಿಯ ಪ್ರಕಾರವಾಗಿ ಆ ಎಲ್ಲಾ ಅನುಷ್ಠಾನಗಳನ್ನು, ಸಾಕಷ್ಟು ಪ್ರಕ್ರಿಯೆಗಳನ್ನು ಒಳಗೊಂಡು ಉನ್ನತ ಶಿಕ್ಷಣದಲ್ಲಿ ಹೇಳಬೇಕೆಂದರೆ ಇನ್ನೂ ಹೆಚ್ಚು ಸವಿಸ್ತಾರವಾಗಿ research intensive ಆಗಿ teaching intensive ಮತ್ತು minimal ಎಂದರೆ degree awarding Autonomous Institute ಆಗಿರುತ್ತದೆ. ಇದನ್ನೆಲ್ಲಾ achieve ಮಾಡುವುದಕ್ಕೆ 15 ವರ್ಷಗಳು ಬೇಕಾಗಬಹುದು. ಮುಂದಿನ 5 ವರ್ಷದಲ್ಲೂ ಕೂಡ ನಾವು ಒಂದಿಷ್ಟು target ನ್ನು ಇಟ್ಟುಕೊಂಡಿದ್ದೇವೆ. Teaching Intensive University ಗಳನ್ನು ಎಷ್ಟು ಗುರ್ತಿಸಬೇಕು ಮತ್ತು Research Intensive University ಗಳನ್ನು ಎಷ್ಟು ಗುರ್ತಿಸಬೇಕೆಂದು ನೋಡುತ್ತಿದ್ದೇವೆ. ಒಂದಷ್ಟು autonomous ಕೇಂದ್ರಗಳು ಈಗಾಗಲೇ RUSA (Rashtriya Uchchatar Shiksha Abhiyan) ಅಡಿಯಲ್ಲಿರುವ Unitary University ಗಳಾಗಿವೆ. ಇನ್ನೂ ಒಂದಷ್ಟು ಸಂಸ್ಥೆಗಳನ್ನು Autonomous Institute ಗಳನ್ನು ಮಾಡುವಂಥದ್ದು ಮತ್ತು ಯೂನಿವರ್ಸಿಟಿಗಳನ್ನು ಮಾಡುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ನಡೆಸಲಾಗುವುದು.

ನಮ್ಮ ಮುಖ್ಯ ಉದ್ದೇಶ ಇರುವುದು ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವುದು. ಈ ಕಾಲಕ್ಕೆ ಪ್ರಸ್ತುತವಾಗಿ relevant ಆಗಿ all-round development ಆಗಬೇಕಿದೆ. All-round development ಎನ್ನುವಂಥದ್ದು, ಶಿಕ್ಷಣವು ಇದುವರೆಗೆ ಕೇವಲ academicsಗಷ್ಟೇ ಸೀಮಿತವಾಗಿತ್ತು. ಇವತ್ತಿನ ದಿವಸ ಎಲ್ಲಾ aspects ಗಳನ್ನು cover ಮಾಡುವಂಥದ್ದು ಆಗಬೇಕು. ಇವತ್ತಿನ ದಿವಸ ಯಾವುದು extra-curricular ಎನ್ನುವುದು ಇಲ್ಲ. ಕ್ರೀಡೆಯಲ್ಲಿ extra-curricular ಇರುವುದು, ಸಾಂಸ್ಕೃತಿಕದಲ್ಲಿ extra-curricular ಇರುವುದು ಅಥವಾ ನಮ್ಮ social aspectsನಲ್ಲಿ ಎಲ್ಲಾ extra ಇರುವುದು. ಯಾವುದನ್ನೂ extra ಇರುವುದಕ್ಕೆ ಅವಕಾಶವಿಲ್ಲದೇ, ಎಲ್ಲವನ್ನೂ curricular activities ನಲ್ಲಿಯೇ ತಂದು ಸಮಗ್ರವಾದಂತಹ ಒಂದು ಶಿಕ್ಷಣವನ್ನು ಪಡೆಯಬಹುದು. ಮೊದಲೆಲ್ಲಾ 12 ವರ್ಷ ಮಾತ್ರ formal education ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿತ್ತು. ಆದರೆ ಈಗ 15 ವರ್ಷ formal education ನ್ನು ಕೊಡುತ್ತಿದ್ದೇವೆ. ನಿಜಕ್ಕೂ ಹೇಳಬೇಕೆಂದರೆ, ಪ್ರೀ-ನರ್ಸರಿಯಿಂದ 3 ವರ್ಷ additional ಆಗಿ add ಆಗಿದೆ. ಇದು ಬಹಳ ಮುಖ್ಯವಾಗಿತ್ತು. ಏಕೆಂದರೆ, ವೈಜ್ಞಾನಿಕವಾಗಿ ನೋಡಿದರೂ ಕೂಡ ಶೇ.85ರಷ್ಟು ಮೆದುಳು ಬೆಳವಣಿಗೆ 3 ರಿಂದ 6 ವಯಸ್ಸಿನಲ್ಲಿ ಆಗುತ್ತದೆ, ಇದು ಎಲ್ಲರಿಗೂ ಗೊತ್ತಿದೆ. ಹಾಗಾಗಿ, ಆ ಕಾಲದಲ್ಲಿ ಶಿಕ್ಷಣ ಕೊಡದೇ ಇದ್ದಾಗ, ಎಲ್ಲೋ ಒಂದು ಕಡೆ ಕಲಿಕೆಯಲ್ಲಿ ನಿಜಕ್ಕೂ ಸುಧಾರಣೆಗಳನ್ನು ಕಾಣುವುದಕ್ಕೆ ಸಾಧ್ಯವಿರುತ್ತಿರಲಿಲ್ಲ. ಇವತ್ತಿನ ದಿವಸ ಇದನ್ನು formal ಆಗಿ ಸರ್ಕಾರದಲ್ಲಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಬದಲಾವಣೆ ತರುವುದು ನಿಜಕ್ಕೂ ಒಂದು ದೊಡ್ಡ ಬೆಳವಣಿಗೆಯಾಗಿದ್ದು, ಇದರಿಂದ ನಾವು ಸುಧಾರಣೆಯನ್ನು ಕಾಣಬಹುದು. ಇವತ್ತಿನ ದಿವಸ ಇರತಕ್ಕಂಥ 12 ವರ್ಷದ ಶಿಕ್ಷಣದಿಂದ 5+3+3+4=15 ವರ್ಷ ಎಂದು ವಿಂಗಡಣೆಯಾಗಿದೆ. ಇದರ ಪ್ರಕಾರವಾಗಿ 12 ರಿಂದ 15 ವರ್ಷಗಳಾಗುತ್ತದೆ. 3 ವರ್ಷ ಪ್ರೀ–ನರ್ಸರಿ ಶಿಕ್ಷಣ ಕಾಲದಲ್ಲಿ ಶೇ.85ರಷ್ಟು ಮಕ್ಕಳ ಮೆದುಳು ಬೆಳವಣಿಗೆಯಾಗುತ್ತದೆ. ಮೆದುಳು ಬೆಳವಣಿಗೆ ಕಾಲದಲ್ಲಿ ಶಿಕ್ಷಣ ಕೊಟ್ಟಾಗ ಕಲಿಕೆಯಲ್ಲಿ ಎಷ್ಟು ಭಾಷೆಗಳನ್ನು ಬೇಕಾದರೂ ಕಲಿಯುವಂಥ ಶಕ್ತಿ ಆ ವಯಸ್ಸಿನಲ್ಲಿ ಬೆಳೆಸಿಕೊಳ್ಳುವಂಥದ್ದು ಇದೆ. ಹಾಗಾಗಿ, ಬಹಳ ಪ್ರಸ್ತುತವಾಗಿದೆ. ಇದು ದೊಡ್ಡ ಸುಧಾರಣೆ ಎಂದು ಹೇಳಿದರೆ ತಪ್ಪಾಗಲಾರದು. ಪ್ರೀ–ನರ್ಸರಿ, ಪ್ರಾಥಮಿಕ, ಪ್ರೌಢಶಿಕ್ಷಣ ಇದನ್ನೆಲ್ಲಾ ಉತ್ತಮ ಗುಣಮಟ್ಟವನ್ನು all-round personality ಗಳನ್ನು ಎಲ್ಲೋ ಒಂದು ಕಡೆ ವ್ಯಕ್ತಿತ್ವದಲ್ಲಿ ಸಾಕಷ್ಟು ಸುಧಾರಣೆಗಳನ್ನು ನೋಡಬಹುದು. ಇವತ್ತಿನ ದಿವಸ ನಮ್ಮನ್ನು ನಾವು ಸಬಲೀಕರಣ ಮಾಡಿಕೊಳ್ಳುವುದಕ್ಕೆ ಶಿಕ್ಷಣವೇ ಅತಿ ಮುಖ್ಯವಾದುದು. ಇವತ್ತಿನ ದಿವಸ ಇಡೀ ವಿಶ್ವದಲ್ಲಿ ಎಲ್ಲೇ ಆಗಲೀ ನಾವು ಶಿಕ್ಷಣವನ್ನು ಬಲವಾಗಿ ನಂಬುತ್ತೇವೆ. ನಿಜವಾದ ಸಬಲೀಕರಣವನ್ನು ಕಾಣಲು ಶಿಕ್ಷಣದ ಮೂಲಕವೇ ಸಾಧ್ಯವಿದೆ ಎನ್ನುವಂಥ ಸಂಪೂರ್ಣ ನಂಬಿಕೆ ನಮ್ಮಲ್ಲಿದೆ. ಅದರ ವ್ಯತ್ಯಾಸವನ್ನು ನಮ್ಮ ನಮ್ಮ ಜೀವನದಲ್ಲಿ ಪ್ರತಿಯೊಬ್ಬರೂ ನೋಡಿಕೊಂಡಿದ್ದೇವೆ. ಹಾಗಾಗಿ, ಈ ದಿಕ್ಕಿನಲ್ಲಿ ಆ ಎಲ್ಲಾ ಸುಧಾರಣೆಗಳನ್ನು ಉನ್ನತ ಶಿಕ್ಷಣದಲ್ಲಿ disciplinary, flexible 3 ರಿಂದ 4 ವರ್ಷಗಳಲ್ಲಿ ನೋಡುವಂಥದ್ದು, ಇಂತಹ ಹಲವಾರು ಸುಧಾರಣೆಗಳಾಗಬೇಕಿದೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯರಾದ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ಮತ್ತು ಮಾನ್ಯ ನಾರಾಯಣಸ್ವಾಮಿಯವರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಉತ್ತರ ಬರದೇ ಇದ್ದಾಗ ಇವರಿಗೇಕೆ ಮುಜುಗರ? ಅವರು ಮಾತೃಭಾಷೆ ಬಗ್ಗೆ ಹೇಳಲಿಲ್ಲ, ಹಣ ಎಷ್ಟು ಮೀಸಲಿಟ್ಟಿದ್ದಾರೆಂದು ಹೇಳಲಿಲ್ಲ, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಏನು ಅನುಕೂಲ ಮಾಡಿದ್ದೇವೆಂದು ಕೂಡ ಹೇಳಲಿಲ್ಲ.

**(ಮುಂದು...)**

**(975)7–12–2020/2.50/ಎಂ.ಎಂ–ಎಂ.ಡಿ**
**ಶ್ರೀ ಎಸ್.ಎಲ್.ಭೋಜೇಗೌಡ(ಮುಂದುವರೆದುದು)**

ಉನ್ನತ ಶಿಕ್ಷಣ ಸಚಿವರಿಗೆ ನಾನು special thanks ಹೇಳಬೇಕು. ನಮ್ಮನ್ನೆಲ್ಲಾ ಕರೆದು ಒಂದು ಒಳ್ಳೆಯ ಸಭೆ ಮಾಡಿದರು. ಸಭೆಯಲ್ಲಿ ಸುದೀರ್ಘವಾಗಿ ಎರಡು ಗಂಟೆಗಳ ಕಾಲ ಚರ್ಚೆಯಾಯಿತು. ಚರ್ಚೆಯಲ್ಲಿ faculties ಗಳ ಬಗ್ಗೆ ಬಹಳ ಚರ್ಚೆಯಾಗಿದೆ. ಶ್ರೀ ಕವಟಗಿಮಠರವರು ಹಣವನ್ನು ಎಷ್ಟು ಇಟ್ಟಿದ್ದೀರಿ ಎಂದು ಪ್ರಶ್ನೆ ಕೇಳಿದರು. ಬಹಳ ಮುಖ್ಯವಾಗಿ ಸಂಸಾರ ನಡೆಯಬೇಕಾದರೆ ಒಳಗೆ ಏನಿದೆ ಎಂದು ನೋಡಬೇಕು. ರಾಷ್ಟ್ರೀಯ ಶಿಕ್ಷಣ ನೀತಿ ಒಂದು ದೊಡ್ಡ ವಿಚಾರವೆಂದು ಹೇಳಿದರೆ, ಪಾರ್ಲಿಮೆಂಟ್‌ನಲ್ಲಾಗಲೀ, ಹೊರಗಡೆಯಾಗಲೀ, ಒಳಗಾಗಲೀ ಎಲ್ಲಿಯೂ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೂಡ without discussion unanimous ಆಗಿ resolution pass ಆಗಿದ್ದು ಇತ್ತೀಚಿನ ದಿನಗಳಲ್ಲಿ ಯಾವುದಾದರೂ ಇದ್ದರೆ ಅದು ರಾಷ್ಟ್ರೀಯ ಶಿಕ್ಷಣ ನೀತಿ ಎಂದು ಹೇಳುವುದಕ್ಕೆ ಬಹಳ ಸಂತೋಷವಾಗುತ್ತದೆ. ಅದಕ್ಕೆ ಬೇಕಾದಂತಹ infrastructure create ಮಾಡಬೇಕಲ್ಲವೇ. ಅದನ್ನು ಮಾಡುವುದಕ್ಕೆ ಹಣ ಎಷ್ಟು ಇಟ್ಟಿದ್ದೀರಿ ಎಂದು ಕೇಳಿದರು. ವಿಶೇಷವಾಗಿ ಕನ್ನಡ ಭಾಷೆ ಏನೆಂದು ಕೇಳಿದರು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ವೃತ್ತಿಪರ ಶಿಕ್ಷಣಕ್ಕೆ ಏನು ನೀವು ಒತ್ತು ಕೊಡುತ್ತೀರಿ ಎನ್ನುವುದು ಮತ್ತು ಕನ್ನಡ;

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:-** ಮಾನ್ಯ ಸಭಾಪತಿಯವರೇ, ಉನ್ನತ ಶಿಕ್ಷಣ ಸಚಿವರು ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ಕಾರ್ಯಪಡೆ ರಚಿಸಿರುವುದಾಗಿ ಹೇಳಿದರು. ಆ ಕಾರ್ಯಪಡೆಯ ಅಧ್ಯಕ್ಷರು ಯಾರೆಂದರೆ, ಈ ರಾಜ್ಯದ ಮುಖ್ಯಕಾರ್ಯದರ್ಶಿಯಾಗಿದ್ದ ಶ್ರೀ ಎಸ್.ವಿ. ರಂಗನಾಥ್‌ರವರು. ಅವರು ರಾಜ್ಯದಲ್ಲಿ ದೊಡ್ಡ ಆರ್ಥಿಕ ಅಪರಾಧವನ್ನು ಹೊತ್ತುಕೊಂಡು ಅದರ ಮಾಲೀಕನೇ ಆತ್ಮಹತ್ಯೆಗೆ ಗುರಿಯಾದಂತಹ 'ಕಾಫಿ ಡೇ' ಸಂಸ್ಥೆಯ ಇವತ್ತಿನ ಅಧ್ಯಕ್ಷರು ಸಹ ಆಗಿದ್ದಾರೆ. ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಏನು ಹೇಳುತ್ತದೆ ಎಂದರೆ, ಪ್ರಧಾನ ಮಂತ್ರಿಯವರು ಪದೇ ಪದೇ ಹೇಳಿದ್ದಾರೆ. The sanctity, the chastity, the quality and the morality ಏನಿದೆ ಇಲ್ಲಿ? ಒಬ್ಬ ಆರ್ಥಿಕ ಅಪರಾಧದ ಸಂಸ್ಥೆಯ ಅಧ್ಯಕ್ಷನನ್ನು, ಈ ರಾಜ್ಯದಲ್ಲಿ ಕಾರ್ಯಪಡೆಯ ಅಧ್ಯಕ್ಷರಾಗಲು ಬೇರೆ ಯಾರೂ ಇಲ್ಲವೇ? ದಯಮಾಡಿ ಅದು ಮಾನಸಿಕವಾಗಿ ಏನು ಆಗುತ್ತದೆ? ಇದು ಶಿಕ್ಷಣ. ಬಹಳ ಮೌಲ್ಯಯುತವಾದ, ಪಾವಿತ್ರ್ಯತೆಗೊಳಗಾದ ಶಿಕ್ಷಣವನ್ನು ಒಬ್ಬ ಅಪವಿತ್ರ ಸಂಬಂಧವಿರುವಂತಹ, ಒಬ್ಬ ಅಧ್ಯಕ್ಷನಾಗಿರುವಂತಹವನು ಆರ್ಥಿಕ ಅಪರಾಧದ ಹಿನ್ನೆಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಂತಹ ಸಂಸ್ಥೆಗೆ ದಯಮಾಡಿ ಸನ್ಮಾನ್ಯ ಮಂತ್ರಿಗಳೇ, ಅವರನ್ನು ತೆಗೆದು ಬೇರೆಯವರನ್ನು ಮಾಡಿ. ಕರ್ನಾಟಕದಲ್ಲಿ ಬೇರೆ ಜನರು ಇಲ್ಲವೇ? ಆದ್ದರಿಂದ ಎಸ್.ವಿ. ರಂಗನಾಥ್ ಯಾರಿದ್ದಾರೆ ಕಾಫಿ ಡೇ ಅಧ್ಯಕ್ಷರಾಗಿ, ದಯಮಾಡಿ first he must be removed. ಅಲ್ಲಿಗೆ ಬೇರೆ ಜನರನ್ನು ನಾಮನಿರ್ದೇಶನ ಮಾಡುತ್ತೀರೋ ಏನು ಮಾಡುತ್ತೀರೋ ಅದನ್ನು ಮಾಡಿ.

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಬಹಳ ವಿವರವಾಗಿ ಉನ್ನತ ಶಿಕ್ಷಣದ ಬಗ್ಗೆ ಮತ್ತು ರಾಷ್ಟ್ರೀಯ ಶಿಕ್ಷಣ ನೀತಿ ಬಗ್ಗೆ ಒಂದು ಒಳ್ಳೆಯ ವಿವರಣೆ ಕೊಟ್ಟಿದ್ದರು. ಅದಕ್ಕೆ ಎಲ್ಲರ ಪರವಾಗಿ, ಶಿಕ್ಷಣ ಕ್ಷೇತ್ರದ ಪರವಾಗಿ ಅಭಿನಂದನೆ ಸಲ್ಲಿಸುತ್ತಾ ನನ್ನ ಪ್ರಶ್ನೆ ಇರುವುದು ಮೂಲಭೂತ ಸೌಕರ್ಯದೊಂದಿಗೆ ಶಿಕ್ಷಕರನ್ನು ಯಾವ ರೀತಿ ಮೌಲ್ಯಮಾಪನ ಮಾಡಲಾಗುತ್ತದೆಯೋ ಮತ್ತು ಅಸ್ತಿತ್ವದಲ್ಲಿರುವಂತಹ ಶಿಕ್ಷಕರ ಮೌಲ್ಯಮಾಪನದ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆಧಾರದ ಮೇಲೆ ಅವರಿಗೆ ಮುಂದಿನ ಪೀಳಿಗೆಗೆ ಸಿದ್ಧಪಡಿಸಲಾಗುತ್ತದೆ ಎಂಬುದನ್ನು ಗಮನಹರಿಸಬೇಕೆಂದು ಮನವರಿಕೆ ಇದೆ. ಏಕೆಂದರೆ, ಈಗಾಗಲೇ ನೇಮಕಗೊಂಡಿರುವಂತಹ ಶಿಕ್ಷಕರು ಮತ್ತು ಅತಿಥಿ ಉಪನ್ಯಾಸಕರು ತರಬೇತಿ ಇಲ್ಲದೇ ಇರುವಂತಹ ಶಿಕ್ಷಕರಾಗಿರುತ್ತಾರೆ. ನಾನು ಶಿಕ್ಷಣ ಕ್ಷೇತ್ರದಲ್ಲಿ ಸುಮಾರು 30 ವರ್ಷ ಕೆಲಸ ಮಾಡಿ ಬಂದಿದ್ದೇನೆ. ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕೌಶಲ್ಯಕ್ಕೆ ಹೆಚ್ಚಿನ ಆದ್ಯತೆ ಕೊಟ್ಟಿರುವುದರಿಂದ ಮತ್ತು ಈಗಾಗಲೇ ಬರುವಂತಹ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದವರಾಗಿರುವುದರಿಂದ ಅದಕ್ಕೆ ತಾವು ಹೆಚ್ಚಿನ ಮಹತ್ವ ಕೊಡಬೇಕು ಮತ್ತು ಅಸ್ತಿತ್ವದಲ್ಲಿರುವಂತಹ ಶಿಕ್ಷಕರ ಬಗ್ಗೆ ಯಾವ ರೀತಿ ನಾವು ತರಬೇತಿಯನ್ನು ಸಿದ್ಧಪಡಿಸಬೇಕು, ಯಾವ ರೀತಿ ಕೌಶಲ್ಯತೆಯನ್ನು ಅವರಿಗೆ motivate ಮಾಡಬೇಕು ಎಂಬ ಬಗ್ಗೆ ತಾವು ಹೇಳಬೇಕು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ಅತಿಥಿ ಉಪನ್ಯಾಸಕರನ್ನು quality ಇಲ್ಲದಿರುವವರನ್ನು ನೇಮಕ ಮಾಡಿದ್ದಾರೆ ಎಂಬುದನ್ನು ದಯಮಾಡಿ ಕಡತದಿಂದ ತೆಗೆಯಬೇಕು.

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸದಸ್ಯರಲ್ಲಿ ಇನ್ನೊಂದು ಮನವಿ ಇದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಇಲ್ಲಿ quality of education ಇಲ್ಲದಿದ್ದರೆ ವಿಶ್ವವಿದ್ಯಾನಿಲಯದಲ್ಲಿ ರ್‍ಯಾಂಕ್ ಬರುತ್ತಿತ್ತೇ? ಅತಿಥಿ ಉಪನ್ಯಾಸಕರ ಬಗ್ಗೆ ಹಾಗೆ ಹೇಳಿರುವುದು ತಪ್ಪಿದೆ ಅದನ್ನು ದಯಮಾಡಿ ಕಡತದಿಂದ ತೆಗೆಯಬೇಕು. ಅತಿಥಿ ಉಪನ್ಯಾಸಕರು NET (National Eligibility Test), SLET (State Level Eligibility Test) ಮಾಡಿಕೊಂಡು ಒಳ್ಳೆಯ ಗುಣಮಟ್ಟದ ಶಿಕ್ಷಣವನ್ನು ಈ ನಾಡಿನಲ್ಲಿ ಕೊಟ್ಟಿದ್ದಾರೆ. ಅವರ ಬಗ್ಗೆ ಇಷ್ಟೊಂದು ಕೀಳಾಗಿ ಮಾತನಾಡಬಾರದು. ದಯಮಾಡಿ ಅದನ್ನು ಕಡತದಿಂದ ತೆಗೆಯಬೇಕು.

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ನಾನು ತಪ್ಪಾಗಿ ಮಾತನಾಡುತ್ತಿಲ್ಲ. ಅವರಿಗೆ ತರಬೇತಿ ಕೊಡುವುದರ ಬಗ್ಗೆ, ಅವರಿಗೆ ಮುಂದಿನ ಶಿಕ್ಷಣ ನೀತಿ;

**ಶ್ರೀ ಎಸ್.ವಿ.ಸಂಕನೂರ:-** ಮಾನ್ಯ ಭೋಜೇಗೌಡರು ತಪ್ಪಾಗಿ ತಿಳಿದುಕೊಂಡಿದ್ದಾರೆ. ಅವರು ಕೌಶಲ್ಯಕ್ಕೆ ಮಹತ್ವ ಕೊಡುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಅಷ್ಟೇ.

(ಗೊಂದಲ)

**ಡಾ: ತಳವಾರ್ ಸಾಬಣ್ಣ:-** ಇಲ್ಲಿ ಎಲ್ಲರಿಗೂ ತರಬೇತಿ ನೀಡಬೇಕು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ವಿಶ್ವನಾಥ್‌ರವರು ಪ್ರಸ್ತಾಪಿಸಿದ್ದು ಎಲ್ಲಿಯವರೆಗೆ ಬಂತು?

**ಡಾ: ತಳವಾರ್ ಸಾಬಣ್ಣ:-** ಗ್ರಾಮೀಣ ಪ್ರದೇಶದ ಮಕ್ಕಳ ದೃಷ್ಟಿಕೋನ ಇಟ್ಟುಕೊಂಡು ... ಸಿದ್ಧಪಡಿಸಿಕೊಂಡು ...

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಶಿಕ್ಷಣದ ಬಗ್ಗೆ ಆತ್ಮಜ್ಞಾನವುಳ್ಳವರು (ಗೊಂದಲ) ಒಂದು ಒಳ್ಳೆಯ ಸಲಹೆ ಕೊಟ್ಟಿದ್ದಾರೆ ಅದು ಎಲ್ಲಿಗೆ ಬಂತು? ಮಾನ್ಯ ವಿಶ್ವನಾಥ್‌ರವರ ಸಲಹೆ ಎಲ್ಲಿಗೆ ಬಂತು ಎಂದು ನನಗೆ ಅರ್ಥವಾಗಲಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಮ್ಮ ಶಿಕ್ಷಣ ಸಚಿವರು ಸದಸ್ಯರ ಪ್ರಶ್ನೆಗೆ ಉತ್ತರ ಕೊಡುತ್ತಾರೆ ಎಂದರೆ ಸವಿಸ್ತಾರವಾಗಿ ಒಂದು ಚರ್ಚೆ ಮಾಡಿದರು, ಬಹಳ ಸಂತೋಷ. ಮಾನ್ಯ ಸದಸ್ಯರಾದ ಶ್ರೀ ವಿಶ್ವನಾಥ್‌ರವರು ಹೇಳಿದ್ದನ್ನು ಸ್ವಾಗತ ಮಾಡುತ್ತಾ ರಾಷ್ಟ್ರೀಯ ಶಿಕ್ಷಣ ನೀತಿ "National Education Policy-2020" ಇದು ಜುಲೈ 29ನೇ ತಾರೀಖಿನಂದು ಕೇಂದ್ರ ಸರ್ಕಾರ ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಂಡು ಅದನ್ನು ಅನುಷ್ಠಾನಕ್ಕೆ ತರಬೇಕೆಂದು ಘೋಷಣೆ ಮಾಡಿದರು. ಶಿಕ್ಷಣ ಎನ್ನುವುದು ಈ ದೇಶದ ಭವಿಷ್ಯವನ್ನು ನಿರ್ಧಾರ ಮಾಡುವಂತಹ ಬಹಳ ಗಂಭೀರವಾದ ಒಂದು ವಿಷಯವಾಗಿದೆ. ಇದನ್ನು ಎಲ್ಲಾ Stakeholders ಜೊತೆ ಚರ್ಚೆ ಮಾಡಿ ತದನಂತರ ಕೇಂದ್ರ ಸರ್ಕಾರದವರು ತೀರ್ಮಾನಕ್ಕೆ ಬರಬೇಕಾಗಿತ್ತು. ಇದು ಸಮವರ್ತಿ ಪಟ್ಟಿಯಲ್ಲಿದ್ದರೂ ಸಹ ರಾಜ್ಯ ಪಟ್ಟಿಯಲ್ಲಿರುವಂತಹ ಈ ವಿಚಾರವನ್ನು ನಾವು ಸವಿಸ್ತಾರವಾಗಿ ಚರ್ಚೆ ಮಾಡಬೇಕಾಗಿತ್ತು. ಕೇಂದ್ರ ಸರ್ಕಾರದವರು ಸಂಪುಟದಲ್ಲಿ ತೀರ್ಮಾನ ತೆಗೆದುಕೊಂಡು ಇದು ಪಾರ್ಲಿಮೆಂಟ್‌ನಲ್ಲಿ ಚರ್ಚೆಯಾಗಲಿಲ್ಲ. ಕೋವಿಡ್ ಸಂದರ್ಭದಲ್ಲಿ ಈ ಶಿಕ್ಷಣ ನೀತಿಯನ್ನು ತೆಗೆದುಕೊಂಡು ಬಂದು ಏನು ವರದಿಯ ಪ್ರಕಾರ ಇದರ ಚರ್ಚೆಯನ್ನು ಎಲ್ಲಿ ಮಾಡಿದ್ದಾರೆ ಎಂದರೆ, ಶಿಕ್ಷಣ ನೀತಿಯಲ್ಲಿ ಕೊಠಾರಿ ಸಮಿತಿ ಇತ್ತು, ತದನಂತರ ಕಸ್ತೂರಿ ರಂಗನ್‌ರವರು ಸಹ ಅದರ ಅಧ್ಯಕ್ಷತೆ ವಹಿಸಿದ್ದರು. ಅವರು ರಾಜ್ಯಸಭಾ ಸದಸ್ಯರು ಕೂಡ ಆಗಿದ್ದರು. ಚರ್ಚೆ ಮಾಡಿರುವಂತಹವರು ಯಾರು ಎಂದರೆ, ಭಾರತೀಯ ಶಿಕ್ಷಣ ಮಂಡಲ್, ಬಿ.ಎಸ್.ಎಂ., ಶಿಕ್ಷಣ ಸಂಸ್ಕೃತಿ ಉತ್ಥಾನ್ [ಎಸ್.ಎಸ್.ಯು.ಎನ್], ಭಾರತೀಯ ಭಾಷಾ ಮಂಚ್ ಇವರುಗಳ ಅನಿಸಿಕೆಗಳೇನಿತ್ತು ಅದರ ವರದಿಯನ್ನು ಕೊಠಾರಿ ಅಥವಾ ಕಸ್ತೂರಿ ರಂಗನ್ ಸಮಿತಿಗೆ ಕೊಟ್ಟರು. ಅದರ ಮೇಲೆ ತೀರ್ಮಾನ ತೆಗೆದುಕೊಂಡಿದ್ದಾರೆ. ಈ ಸಂಸ್ಥೆಯ ಹಿನ್ನೆಲೆ ನೋಡಿದಾಗ ಇವರು ಯಾವ ರೀತಿ ಕೊಟ್ಟಿರಬಹುದೆಂದು ಬಹಳ ಯೋಚನೆ ಮಾಡಬೇಕು. ಮತ್ತೊಂದು ಗಂಭೀರವಾದ ವಿಚಾರವೇನೆಂದರೆ, ಮಾನ್ಯ ಕವಟಗಿಮಠರವರು ಭಾಷೆಯ ವಿಚಾರದಲ್ಲಿ ಕೇಳಿದರು. ತಾವೂ ಸಹ ಇಲ್ಲಿಯ ತನಕ 34 ವರ್ಷಗಳಾದ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಂತರ ಮೊಟ್ಟ ಮೊದಲ ಬಾರಿಗೆ ಶಿಕ್ಷಣ ನೀತಿಯ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ ಎಂದು ಹೇಳಿದಿರಿ. 1835ನೇ ಇಸವಿಯಲ್ಲಿ 'ಮೆಕಾಲೆ'ಯವರು ಶಿಕ್ಷಣ ನೀತಿಯನ್ನು ಈ ದೇಶದಲ್ಲಿ ಜಾರಿಗೆ ತಂದಾಗ ಭಾಷೆ ಎಂದು ಬಂದಾಗ 1947ನೇ ಇಸವಿಯ ನಂತರ ಪಂಡಿತ್ ಜವಾಹರಲಾಲ್ ನೆಹರುರವರು 'Tri-Language Policy' ತ್ರಿಭಾಷಾ ಸೂತ್ರವನ್ನು ಅಳವಡಿಸಿಕೊಂಡಿದ್ದೆವು. ಕೆಲವು ರಾಜ್ಯದಲ್ಲಿ ಅದನ್ನು ಒಪ್ಪಿಕೊಂಡರು, ಇನ್ನು ಕೆಲವು ರಾಜ್ಯದಲ್ಲಿ ಅದನ್ನು ಒಪ್ಪಲಿಲ್ಲ. ಈಗ ಇದರಲ್ಲಿ ಮಾತೃಭಾಷೆಯನ್ನು ಮಾಡಿಕೊಂಡಿದ್ದೀರಿ 'Two Language Policy' ತರುತ್ತಿದ್ದೀರಿ. ಅಂದರೆ mother tongue and Hindi, ನಾವು ಕರ್ನಾಟಕದಲ್ಲಿ ಕನ್ನಡ, ತುಳು ಮತ್ತು ಕೊಡವ ಭಾಷೆಯನ್ನು ಸಹ ಮಾತನಾಡುತ್ತೇವೆ. ಆ ಸಂದರ್ಭದಲ್ಲಿ ಮಾತೃಭಾಷೆ ಮತ್ತು ಹಿಂದಿ ಎಂದಾಗ ನಾವು ಯಾವ ಭಾಷೆಯನ್ನು ಕಲಿಯಬೇಕು? ಉತ್ತರ ಭಾರತದಲ್ಲಿ ಹೋದಾಗ ಈ ದೇಶದಲ್ಲಿ ಶೇ.41 ರಷ್ಟು ಜನ ಹಿಂದಿ ಭಾಷೆ ಮಾತನಾಡುತ್ತಾರೆ. ಅಲ್ಲಿ ಮಾತೃಭಾಷೆ ಎಂದರೆ ಹಿಂದಿ. ಬಾಕಿ ನಾವೆಲ್ಲಾ ಏನು ಮಾಡಬೇಕು? ಮೈಲಿಗಲ್ಲು ನೋಡಿದರೂ ಸಹ ಅಲ್ಲಿ ಹಿಂದಿ ಬಿಟ್ಟರೆ ಬೇರೆ ಭಾಷೆ ಇರುವುದಿಲ್ಲ. ಆದ್ದರಿಂದ ಇದನ್ನು ಸಂಪೂರ್ಣವಾಗಿ, ಸಮಗ್ರವಾಗಿ ಎಲ್ಲಾ Stakeholders ಹತ್ತಿರ ಚರ್ಚೆ ಮಾಡಿ ತಾವು ಅನುಷ್ಠಾನಕ್ಕ ತರುವಂತಹ ಪ್ರಯತ್ನ ಮಾಡಬೇಕೇ ವಿನಃ; ತಾವು ಈಗಾಗಲೇ ಪ್ರಶ್ನೆಗೆ ಉತ್ತರ ಕೊಟ್ಟಿದ್ದೀರಿ. ಅದೇನೆಂದರೆ, ರಾಷ್ಟ್ರೀಯ ಶಿಕ್ಷಣ ನೀತಿಯ ಆಧಾರದ ಮೇಲೆ ರೂಪಿಸಲಾಗುತ್ತದೆ ಮತ್ತು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸುವಲ್ಲಿ ರಾಜ್ಯಸರ್ಕಾರವು ಕಾರ್ಯೋನ್ಮುಖವಾಗಿದೆ. ಇದೆಲ್ಲವನ್ನೂ ಮಾಡುವುದಕ್ಕಿಂತ ಮೊದಲು ದಯವಿಟ್ಟು ತಾವು ಸಹ ವಿಶ್ವವಿದ್ಯಾನಿಲಯದಿಂದ ಬಂದಿರುವವರು, ನಾನು ಮತ್ತು ನಿಮ್ಮ ಸುರೇಶ್ ಕುಮಾರ್‌ರವರು ಒಂದೇ ಕಾಲೇಜಿನಲ್ಲಿ ಓದಿದವರು, ವಿಶ್ವವಿದ್ಯಾನಿಲಯದಲ್ಲಿದ್ದವರು, ಒಳ್ಳೊಳ್ಳೆಯ ಪ್ರೊಫೆಸರ್‌ಗಳ ಕೆಳಗೆ ಕೆಲಸ ಮಾಡಿದವರು. ಆದ್ದರಿಂದ ದಯವಿಟ್ಟು ಇದು ದೇಶದ ಭವಿಷ್ಯದ ಪ್ರಶ್ನೆ. ಇದನ್ನು ಏಕಾಏಕಿ ಕೋವಿಡ್ ಸಂದರ್ಭದಲ್ಲಿ ಅನುಷ್ಠಾನಕ್ಕೆ ತಂದು, ಕರ್ನಾಟಕ ಮೊಟ್ಟ ಮೊದಲನೆಯ ರಾಜ್ಯ ಶಿಕ್ಷಣ ನೀತಿಯನ್ನು ಅನುಷ್ಠಾನಕ್ಕೆ ತರುತ್ತಿರುವುದು ಎಂಬ ಕೀರ್ತಿ ಕಳೆದುಕೊಳ್ಳಬೇಡಿ. ಇವತ್ತು ಹೇಳಬೇಕಾದರೆ ಅಮೇರಿಕ ಅಧ್ಯಕ್ಷರಾಗಿದ್ದಂತಹ ಶ್ರೀ ಒಬಾಮಾ ರವರು ಭಾಷಣ ಮಾಡುವ ಸಂದರ್ಭದಲ್ಲಿ ಅಮೇರಿಕದ ಮಕ್ಕಳು ಬೆಂಗಳೂರು ಮತ್ತು ಬೀಜಿಂಗ್ ಮಕ್ಕಳು ಪಠ್ಯಪುಸ್ತಕದಲ್ಲಿ ಕಲಿಯುವುದನ್ನು ಕಲಿಯಬೇಕೆಂದು ಹೇಳುತ್ತಾರೆ ವಿನಃ ಅದನ್ನು dilute ಮಾಡುವುದಕ್ಕೆ ಹೋಗಬೇಡಿ. ಕರ್ನಾಟಕ ರಾಜ್ಯದ ಕೀರ್ತಿ ಶಿಕ್ಷಣದಲ್ಲಿ ಬಹಳ ಎತ್ತರದಲ್ಲಿದೆ. ಈ ಶಿಕ್ಷಣ ನೀತಿಯನ್ನು ನೋಡಿದಾಗ, I am proud to speak Hindi. ನಾನೊಬ್ಬ ಕಾಂಗ್ರೆಸ್‌ನವನಾಗಿ ಹಿಂದಿ ಮಾತನಾಡುತ್ತೇನೆ. ಅದರ ಅರ್ಥ ಬೇರೆ ಯಾರೂ ನನ್ನ ಮೇಲೆ ಹಿಂದಿಯನ್ನು impose ಮಾಡುವುದಕ್ಕಾಗುವುದಿಲ್ಲ, ಹೇರುವುದಕ್ಕಾಗುವುದಿಲ್ಲ.

(ಮುಂದು)

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**(976) 07–12–2020/ 03–00/ ಕೆಹೆಚ್–ಎಕೆ**

**ಶ್ರೀ ಬಿ.ಕೆ.ಹರಿಪ್ರಸಾದ್(ಮುಂದುವರೆದುದು)**

ಆದ್ದರಿಂದ ದಯವಿಟ್ಟು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಿ. Because your party has got a brute majority in the parliament. ತಮಗೆ ಬಹುಮತ ಇದೆ ಎಂದು ಭವಿಷ್ಯವನ್ನು, ಮಕ್ಕಳ ಭವಿಷ್ಯವನ್ನು, ಈ ರಾಷ್ಟ್ರದ ಭವಿಷ್ಯವನ್ನು ಸ್ವಲ್ಪ ಗಂಭೀರವಾಗಿ ಪರಿಗಣನೆ ಮಾಡುವುದು ಒಳ್ಳೆಯದು ಎಂದು ನನಗನಿಸುತ್ತದೆ. ಭಾಷೆ ವಿಚಾರದಲ್ಲಿ ಮತ್ತು ಈ ಒಂದು ಸಂಘ–ಸಂಸ್ಥೆಗಳ ಬಗ್ಗೆ ಏನಾದರೂ ಹಿನ್ನೆಲೆ ಇದ್ದರೆ ನಮಗೆ ಗೊತ್ತಿಲ್ಲ. ಅದರ ಬಗ್ಗೆ ತಾವು ಹೇಳಿದರೆ ಒಳ್ಳೆಯದು ಎಂದು ನನಗನಿಸುತ್ತದೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಇನ್ನು 30 ನಿಮಿಷಗಳು ಮುಂದಕ್ಕೆ ಹಾಕಿ ಸರಿಯಾಗುತ್ತದೆ.

**ಸಭಾಪತಿಯವರು:–** ಈಗಾಗಲೇ ಒಂದೂಕಾಲು ಗಂಟೆಯಾಯಿತು. ಇನ್ನೂ 8 ಪ್ರಶ್ನೆಗಳು ಇವೆ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಹೊಸ ಶಿಕ್ಷಣ ನೀತಿಯನ್ನು 2020–21ನೇ ಸಾಲಿಗೆ ಜಾರಿಗೆ ತರಬೇಕೆಂದು ಸರ್ಕಾರ ನಿರ್ಧಾರ ಕೈಗೊಂಡು, ಇದನ್ನು ಸಮರ್ಪಕವಾಗಿ ಹೇಗೆ ಜಾರಿಗೆ ತರಬೇಕೆನ್ನುವುದರ ಬಗ್ಗೆ ಕಾರ್ಯಕ್ರಮವನ್ನು ರಚಿಸಿರುವುದಕ್ಕೆ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ. ಆದರೆ ಇವತ್ತು ಮೂಲತಃ ಪ್ರಶ್ನೆಯೇನೆಂದರೆ, ಹೊಸ ಶಿಕ್ಷಣ ನೀತಿಯೊಳಗೆ ಯಾವ ಅಂಶಗಳು ಇದೆಯೋ, ಏನಾದರೂ ಬದಲಾವಣೆ ತರುವುದರ ಬಗ್ಗೆ ಪ್ರಾಥಮಿಕ ಶಾಲಾ ಶಿಕ್ಷಕರು, ಪ್ರೌಢ ಶಾಲಾ ಶಿಕ್ಷಕರು, ಪಿ.ಯು. ಡಿಗ್ರಿ ಕಾಲೇಜ್‌ನ ಶಿಕ್ಷಕರು ಇದರ ಬಗ್ಗೆ ಸರಿಯಾಗಿ, ಸಮರ್ಪಕವಾಗಿ ಯಾರು ತಿಳಿದುಕೊಂಡಿಲ್ಲ. ಶಿಕ್ಷಣ ಸಂಸ್ಥೆಗಳು ಏನು ನಡೆಯುತ್ತವೆಯೋ, ಅವರಿಗೆ ಇದರ ಬಗ್ಗೆ ಗೊತ್ತಿಲ್ಲ. ಹಾಗಾಗಿ ಸರ್ಕಾರಕ್ಕೆ ತಮ್ಮ ಮೂಲಕ ವಿನಂತಿಯೇನೆಂದರೆ, ವಿಭಾಗ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಇದರ ಸಾಧಕ–ಬಾಧಕಗಳ ಬಗ್ಗೆ ಚರ್ಚೆಯಾಗಬೇಕು. ಆ ವಿಚಾರ ಸಂಕೀರ್ಣಗಳನ್ನು ತಿಳಿದುಕೊಂಡು ಸರ್ಕಾರ ನಡೆಸಬೇಕೆಂದು ನನ್ನ ವಿನಂತಿಯಾಗಿದೆ.

**ಡಾ। ಅಶ್ವಥ್ ನಾರಾಯಣ ಸಿ.ಎನ್:–** ಮಾನ್ಯ ಸಭಾಪತಿಯವರೇ, ಮುಖ್ಯವಾಗಿ ನಮ್ಮ ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಮಾನ್ಯ ಸದಸ್ಯರಿಗೆ ನಾನು ಏನು ಹೇಳುವುದಕ್ಕೆ ಇಷ್ಟಪಡುತ್ತೇನೆ ಎಂದರೆ, ಐದೂವರೆ ವರ್ಷಕ್ಕಿಂತ ಹೆಚ್ಚಿನ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಾಲ ಎಲ್ಲಾ ಹಂತದಲ್ಲೂ, ಎಲ್ಲಾ ಸರ್ಕಾರದಲ್ಲೂ ಸಾಕಷ್ಟು consultation ನಡೆದಿದೆ. ಯೂನಿವರ್ಸಿಟಿ ಮಟ್ಟದಿಂದ ಹಿಡಿದು, ಕಾಲೇಜಿನಿಂದ ಹಿಡಿದು, ಆನ್‌ಲೈನ್‌ನಿಂದ ಹಿಡಿದು ಎಲ್ಲಾ public domain ನಲ್ಲಿ ಎಲ್ಲಾ ಕಡೆಯಲ್ಲೂ ಅದನ್ನು ಲಭ್ಯವಾಗುವಂತೆ ಮಾಡಿ ಎಲ್ಲರ ಸಲಹೆ-ಸೂಚನೆಗಳನ್ನು ಪಡೆಯುವುದಕ್ಕೆ ಸಂಪೂರ್ಣವಾಗಿ ಪ್ರಯತ್ನವನ್ನು ಮಾಡಿದ್ದೇವೆ. ಈ ದಿಕ್ಕಿನಲ್ಲಿ ದೀರ್ಘಕಾಲದ ಒಂದು consultation, ಇನ್ನು ಯಾವ ಒಂದು ಪ್ರಕ್ರಿಯೆಯಲ್ಲೂ ನಡೆದಿರುವುದಕ್ಕೆ ಸಾಧ್ಯ ಇಲ್ಲ. ಅಷ್ಟು ದೀರ್ಘಕಾಲದಲ್ಲಿ consultation ನಡೆದಿರುವಂತಹದ್ದು ಇದೆ. ಇಲ್ಲಿ ಮುಖ್ಯವಾಗಿ ಇವತ್ತಿನವರೆಗೂ ನಾವು ಎಲ್ಲೇ ನೋಡಿದಾಗಲೂ ಕೂಡ ಒಬ್ಬ ವ್ಯಕ್ತಿಯಿಂದಾಗಲಿ, ಒಂದೇ ಒಂದು ಸಂಸ್ಥೆಯಿಂದಾಗಲಿ ಇದರ ಬಗ್ಗೆ ಅಪಸ್ವರ ಕೇಳಿರುವಂತಹದ್ದು ಇಲ್ಲ. ಎಲ್ಲಾ ಕಡೆಯಿಂದಲೂ ಸ್ವಾಗತ ಮಾಡಿರುವಂತಹದ್ದು ಇದೆ. ಇವತ್ತು ಸಮಗ್ರವಾಗಿ ಶಿಕ್ಷಣದ ಗುಣಮಟ್ಟ ಎಲ್ಲಿದೆ ಎಂಬುದು ಎಲ್ಲರಿಗೂ ಗೊತ್ತಿತ್ತು. ASER (Annual Status of Education Report), ಇನ್ನೊಂದು, ಮತ್ತೊಂದು ಎಲ್ಲಾ ವರದಿಯನ್ನು ನೋಡಿದಾಗ ಎಷ್ಟು ಶೇಕಡಾವಾರುನಲ್ಲಿ ಇದೆ ಎನ್ನುವಂತಹದ್ದು ವ್ಯಕ್ತವಾದಾಗ, ಪ್ರಾಥಮಿಕ ಶಿಕ್ಷಣದಲ್ಲಿ ಗುಣಮಟ್ಟದ ಕಲಿಕೆ ಯಾವ ರೀತಿ ಇದೆ ಎಂಬುದು ಗೊತ್ತಾಗುತ್ತದೆ. ಇವತ್ತು ಕಲಿಕೆ ಎನ್ನುವುದು rot learning ಎಂದು ನಾವು ನೀವು ಒಪ್ಪಿಕೊಳ್ಳುತ್ತೇವೆ. ಇವತ್ತು ಎಲ್ಲೋ ಒಂದು ಕಡೆ concept learning ಬೇಕು. Concept learning ಫೌಂಡೇಶನ್ ಅನ್ನು ಸರಿಯಾಗಿ ಅರ್ಥಮಾಡಿಕೊಂಡರೆ ಯಾವ ರೀತಿ ಪ್ರಶ್ನೆಯನ್ನು ಟ್ವಿಸ್ಟ್ ಮಾಡಿ ಕೇಳಿದರೂ ಉತ್ತರಿಸುವಂತಹದಕ್ಕೆ ಫೌಂಡೇಶನ್ ಕಲಿತಿರಬೇಕು. ಉತ್ತಮವಾಗಿ ಕಲಿಕೆಯಾದರೆ ಮಾತ್ರ ಸಾಧ್ಯ ಎನ್ನುವಂತಹ ನಂಬಿಕೆಯಲ್ಲಿ ಸಂಪೂರ್ಣವಾಗಿ ಶಿಕ್ಷಣದಲ್ಲಿ ಎಲ್ಲಿಯೂ ಕೂಡ ಇದರಲ್ಲಿ ಇನ್ನೇನೂ ಬೇರೆ ಏನೂ ವಿಚಾರಗಳು ಇಲ್ಲ. Concept learning ಅನ್ನು ಅರ್ಥಪೂರ್ಣವಾಗಿ ಮಾಡಬೇಕು. A critical learning, creative learning and being critical about his own learning is required. ಅದೆಲ್ಲೋ ಒಂದು ಕಡೆ attitude ಎನ್ನುವಂತಹದ್ದು ಬಹಳ ಮುಖ್ಯ. ಇದರ ಬಗ್ಗೆ ಅವಲೋಕನ ಮಾಡಿಕೊಳ್ಳುವಂತಹದ್ದು ಬಹಳ ಮುಖ್ಯ. ನಾನು ಯಾವ ರೀತಿ ಕಲಿಯುತ್ತಿದ್ದೇನೆ. ಎಷ್ಟು ಉತ್ಸಾಹದಲ್ಲಿ ಕಲಿಯುತ್ತಿದ್ದೇನೆ. ಎಷ್ಟು ಉತ್ತಮ ವಾತಾವರಣ ಇದೆ ಎನ್ನುವಂತಹದ್ದು ಬಹಳ ಮುಖ್ಯವಾದಂತಹ ವಿಚಾರ. ಇದೆಲ್ಲಾ ಒಳಪಟ್ಟಂತೆ ನಮ್ಮ ಸ್ನೇಹಿತರು ಕೆಲವರು ಇದು ಶಿಕ್ಷಕರ ಗುಣಮಟ್ಟನೋ, ವಿದ್ಯಾರ್ಥಿಗಳ ಗುಣಮಟ್ಟನೋ, ಪೋಷಕರು, ವಾತಾವರಣ ಅಥವಾ ವ್ಯವಸ್ಥೆಯೋ ಒಟ್ಟಾರೆಯಾಗಿ ಇವೆಲ್ಲವುಗಳನ್ನು ಗಮನದಲ್ಲಿಟ್ಟುಕೊಂಡು ಎಲ್ಲೋ ಒಂದು ಕಡೆ ಮಗು sustainable development ಆಗಬೇಕಾದರೆ ಉತ್ತಮವಾದಂತಹ ಶಿಕ್ಷಣ ಬೇಕೆನ್ನುವ ಏಕೈಕ ದೃಷ್ಟಿಯಿಂದ ಗಮನದಲ್ಲಿಟ್ಟುಕೊಂಡು ಮಾಡುವಂತಹದ್ದಾಗಿದೆ. ಹಾಗಾಗಿ ಇದು Concurrent Subject ಆಗಿರುವುದರಿಂದ, deep

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

consultation ನಡೆದಿರುವಂತಹದ್ದು ಮತ್ತು ಭಾಷೆ ಪಾಲಿಸಿ ವಿಚಾರಕ್ಕೆ ಬಂದಾಗ language policy ಅವರಿಗೂ ಕೂಡ ನಾವು ಈ ಭಾಷೆ ತೆಗೆದುಕೊಳ್ಳುತ್ತೇವೆ. ಇದನ್ನು ಹೊರತುಪಡಿಸುತ್ತೇವೆ ಎಂದು ಇಟ್ಟಿಲ್ಲ. Open ಇದೆ ಮತ್ತು ಎಲ್ಲಾ ಭಾಷೆಗಳನ್ನು ಪ್ರೋತ್ಸಾಹಿಸುವುದಕ್ಕೆ ಅವಕಾಶ ಮಾಡಿಕೊಡುವಂತಹದ್ದು. ಮುಖ್ಯವಾಗಿ ಇವತ್ತು ಬಹಳ ಸ್ಪಷ್ಟವಾಗಿ ಮಾತೃ ಭಾಷೆಯಲ್ಲಿಯೇ ಕಲಿಕೆಯಾಗಬೇಕೆನ್ನುವಂತಹದ್ದು ಇಲ್ಲ. ಇದನ್ನು ಪಡೆಯುವುದಕ್ಕೆ ಅವಕಾಶವನ್ನು ಮಾತೃ ಭಾಷೆಯಲ್ಲಿಯೇ ಕನಿಷ್ಠ 5ನೇ ತರಗತಿಯವರೆಗೂ ಕಲಿಕೆಯಾಗಬೇಕೆಂದು ಬಹಳ ಸ್ಪಷ್ಟವಾಗಿ ಇದೆ. ಇನ್ನು 8ನೇ ತರಗತಿಯವರೆಗೂ extend ಆಗಬೇಕೆಂದು ಕೂಡ ಇದೆ. ಮತ್ತು ಇದೆಲ್ಲಾ ಸಂಘಟನೆಗಳು ...

.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಹಿಂದಿ ಏಕೆ ಹಾಕುತ್ತಿದ್ದೀರಿ?

**ಡಾ। ಅಶ್ವಥ್ ನಾರಾಯಣ ಸಿ.ಎನ್:–** ಮಾನ್ಯ ಸಭಾಪತಿಯವರೇ, ಇನ್ನು ಯಾವುದೇ ಭಾಷೆಯನ್ನು ಏರುವಂತಹದ್ದು ಇನ್ನು ಏನೂ ಮಾಡಿಲ್ಲ. ಇವತ್ತು ಹಿಂದಿ ಏರುವಂತಹ ಪ್ರಯತ್ನ ನಡೆದಿದ್ದರೆ ಕಾಂಗ್ರೆಸ್ ಸ್ಥಾನದಲ್ಲಿಯೇ ನಡೆದಿರುವಂತಹದ್ದು, ಯಾವ ಕಾಲದಲ್ಲಿ ತ್ರಿಭಾಷಾ ನೀತಿಯನ್ನು ತಂದಿದ್ದು?

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ನಾನು ಸಂಪೂರ್ಣವಾಗಿ ನೋಡಿದ್ದೇನೆ. ಶಿಕ್ಷಣ ನೀತಿಯಲ್ಲಿ ಮಾತೃ ಭಾಷೆಯಲ್ಲಿ ಕಲಿಕೆ, ಅದರ ಜೊತೆಗೆ ಹಿಂದಿ, ಇಂಗ್ಲೀಷ್ ಮರೆತು ಹೋಗಿದ್ದೀರಿ. ಅದರ ಜೊತೆಗೆ ಪರೋಕ್ಷವಾಗಿ ಸಂಸ್ಕೃತವನ್ನು ತರುವುದಕ್ಕೆ ಪ್ರಯತ್ನ ನಡೆಯುತ್ತಿದೆ.

**ಡಾ। ಅಶ್ವಥ್ ನಾರಾಯಣ ಸಿ.ಎನ್:–** ಮಾನ್ಯ ಸಭಾಪತಿಯವರೇ, ಇದು ನಮ್ಮ root language. ಯಾವ ಭಾಷೆ ಬೇಕೋ, ಅದನ್ನು ಕಲಿಯುವುದಕ್ಕೆ ಅವಕಾಶ ಇದೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, Kannada is a root language. ಅದನ್ನು ಕಲಿಯುವುದಕ್ಕೆ...

**ಡಾ। ಅಶ್ವಥ್ ನಾರಾಯಣ ಸಿ.ಎನ್:–** ಮಾನ್ಯ ಸಭಾಪತಿಯವರೇ, ಖಂಡಿತವಾಗಿಯೂ ಕನ್ನಡ ಕಲಿಯುವುದಕ್ಕೆ ಅವಕಾಶ ಇದೆ. ಅಗ್ರಮಾನ ಸ್ಥಾನ ಪ್ರಾತಿನಿಧ್ಯಕ್ಕೆ ಕೊಟ್ಟಿರುವಂತಹದ್ದು.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, Sanskrit is a dead language. ಅದಕ್ಕೆ 600 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಕನ್ನಡಕ್ಕೆ 6 ಕೋಟಿ ಕೂಡ ಇಲ್ಲ.

**ಡಾ। ಅಶ್ವಥ್ ನಾರಾಯಣ ಸಿ.ಎನ್:-** ಮಾನ್ಯ ಸಭಾಪತಿಯವರೇ, ಇದು ಕನ್ನಡನಾಡು, ಕನ್ನಡವನ್ನು ಕಲಿಯಬೇಕು. ಕನ್ನಡದಲ್ಲಿಯೇ ಶಿಕ್ಷಣವನ್ನು ಕೊಡಬೇಕು. ಉನ್ನತ ಶಿಕ್ಷಣವನ್ನು ಕೊಡಬೇಕು ಎನ್ನುವಂತಹ ಗುರಿಯಿಟ್ಟುಕೊಂಡಿದ್ದೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಸಂಸ್ಕೃತ ಮಾತನಾಡುವಂತಹವರು 50 ಸಾವಿರ ಜನ ಇದ್ದಾರೆ. ಅದಕ್ಕೇ ಕೇಂದ್ರ ಸರ್ಕಾರದವರು ಎಷ್ಟು ಅನುದಾನ ಕೊಟ್ಟಿದ್ದಾರೆ? ಕನ್ನಡಕ್ಕೆ ಎಷ್ಟು ಅನುದಾನ ಕೊಟ್ಟಿದ್ದಾರೆ ಎಂದು ತಿಳಿದುಕೊಂಡು ನನಗೆ ನಂತರ ಉತ್ತರ ಕೊಟ್ಟರೆ ಸಂತೋಷ.

**ಡಾ। ಅಶ್ವಥ್ ನಾರಾಯಣ ಸಿ.ಎನ್:-** ಮಾನ್ಯ ಸಭಾಪತಿಯವರೇ, ಕನ್ನಡ ಶಾಸ್ತ್ರೀಯ ಭಾಷೆಗೆ ...

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಪಾರ್ಲಿಮೆಂಟ್‌ನಲ್ಲಿ ಶಾಸ್ತ್ರೀಯ ಭಾಷೆಯ ಬಗ್ಗೆ ಮೊಟ್ಟ ಮೊದಲನೇಯದಾಗಿ ನಾನೇ ಎತ್ತಿದ್ದೇನೆ. ಈಗ ತಾವು ಎಷ್ಟೆಷ್ಟು ಅನುದಾನ ಕೊಟ್ಟಿದ್ದೀರಿ ಎಂಬ ಪ್ರಶ್ನೆ ಬಹಳ ಸ್ಪಷ್ಟವಾಗಿ ಇದೆ.

**ಡಾ। ಅಶ್ವಥ್ ನಾರಾಯಣ ಸಿ.ಎನ್:-** ಮಾನ್ಯ ಸಭಾಪತಿಯವರೇ, ಯಾವ ರೀತಿ ಅನುಷ್ಠಾನ ಮಾಡಿದ್ದೇವೆ ಮತ್ತು ಕಾರ್ಯರೂಪಕ್ಕೆ ತಂದಿದ್ದೇವೆ ಎಂಬುದು ಗೊತ್ತಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಬಹಳ ಸ್ಪಷ್ಟವಾಗಿ ಇದೆ. ಸಂಸ್ಕೃತಕ್ಕೆ ಎಷ್ಟು ಅನುದಾನ ಇದೆ, ಕನ್ನಡಕ್ಕೆ ಎಷ್ಟು ಅನುದಾನ ಇದೆ ಎಂಬುದರ ಬಗ್ಗೆ ನನಗೆ ಹೇಳಿದರೆ ಸಾಕು.

**ಡಾ। ಅಶ್ವಥ್ ನಾರಾಯಣ ಸಿ.ಎನ್:-** ಮಾನ್ಯ ಸಭಾಪತಿಯವರೇ, ಅನುದಾನ ಎಷ್ಟಿದೆ ಎಂಬುದನ್ನು ನೋಡಿ ನಾನು ಹೇಳುತ್ತೇನೆ. ಇದರ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಮಾಹಿತಿ ತೆಗೆದುಕೊಂಡು ತಿಳಿಸುತ್ತೇನೆ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:-** ಮಾನ್ಯ ಸಭಾಪತಿಯವರೇ, ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ.37 . .

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ। ಅಶ್ವಥ್ ನಾರಾಯಣ ಸಿ.ಎನ್:–** ಮಾನ್ಯ ಸಭಾಪತಿಯವರೇ, ಒಂದೇ ಒಂದು ನಿಮಿಷ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಚಿವರೇ, ಈಗಾಗಲೇ ಮುಂದಿನ ಪ್ರಶ್ನೆಯನ್ನು ಕರೆದಿದ್ದಾರೆ. ಈಗಾಗಲೇ ಒಂದು ಪ್ರಶ್ನೆಗೆ ಒಂದು ಗಂಟೆಯಾಯಿತು. ಇದು ಬಹಳ ಮಹತ್ವದ ಪ್ರಶ್ನೆಯಾಗಿದೆ. I do admit. ಇಲ್ಲದಿದ್ದರೆ 30 ನಿಮಿಷಗಳ ಚರ್ಚೆಗೆ ಹಾಕಿಸಿ.

**ಡಾ। ಅಶ್ವಥ್ ನಾರಾಯಣ ಸಿ.ಎನ್:–** ಮಾನ್ಯ ಸಭಾಪತಿಯವರೇ, ನಮ್ಮ ನಿವೃತ್ತ ಮುಖ್ಯ ಕಾರ್ಯದರ್ಶಿಯವರಾದ ಎಸ್.ವಿ.ರಂಗನಾಥ್‌ರವರ ಮೇಲೆ ಮಾಡಿರುವಂತಹ ಆಪಾದನೆಯನ್ನು ದಯವಿಟ್ಟು ಅವರು ಯಾರು ಆಪಾದನೆಗೆ ಒಳಗಾಗಿರುವವರು ಅಲ್ಲ. ಈ ರೀತಿ ನಿಜಕ್ಕೂ ಉತ್ತಮವಾಗಿ ಕಾರ್ಯವನ್ನು ನಿರ್ವಹಿಸಿರುವಂತಹವರು. ಅವರು ಯಾವುದೇ ಆಪಾದನೆಗೂ ಒಳಗಾಗಿರುವವರು ಅಲ್ಲ. ಈ ರೀತಿ ಕಡತದಿಂದ ತೆಗೆದು ಹಾಕಬೇಕೆಂಬುದು ನನ್ನ ಒತ್ತಾಯ.

**Sri ADAGUR H. VISHWANATH:** I am sorry.

**ಡಾ॥ ಅಶ್ವಥ್ ನಾರಾಯಣ ಸಿ.ಎನ್.:–** ಮುಖ್ಯವಾಗಿ Higher Education Council ನ ಉಪಾಧ್ಯಕ್ಷರಾಗಿರುವಂತಹ ಅರ್ಹತೆಗೆ ಆಧಾರವಾಗಿ ಈ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಲಾಗಿದೆ. ಈ ರೀತಿ ಆಡಳಿತದ ಅನುಭವ ಇದೆ. ತಿಳುವಳಿಕೆ ಇದೆ. ಮನವರಿಕೆ ಇದೆ. ಈ ನಾಡಿಗೆ ಉತ್ತಮ ಕೊಡುಗೆಯನ್ನು ಕೊಟ್ಟಂತಹವರು. ಅವರ ಬಗ್ಗೆ ಈ ರೀತಿ ಹೇಳಿಕೆ ಕೊಡುವಂತಹದ್ದು ನನ್ನ ಮಟ್ಟಿಗೆ ಸರಿಯಿಲ್ಲ. ಅವರು ಹೇಳಿರುವಂತಹ ಅಭಿಪ್ರಾಯವನ್ನು ದಯವಿಟ್ಟು ಕಡತದಿಂದ ತೆಗೆದು ಹಾಕಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ ನಾನು ಏನು ಹೇಳಿದ್ದೇನೆ ಎಂಬುದನ್ನು ತಾವು ಅರ್ಥಮಾಡಿಕೊಳ್ಳಬೇಕು. ನಾನು ಅವರು ಅಪರಾಧಿಗಳು ಎಂದು ಹೇಳುತ್ತಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಶಿಕ್ಷಣ ಸಂಸ್ಥೆ ಎಷ್ಟರಮಟ್ಟಿಗೆ ಇದೆ ಎಂಬುದನ್ನು ಎಲ್ಲರೂ ಸಹ ನೋಡುತ್ತಾರೆ. ಆ ವ್ಯಕ್ತಿಯ ಮೇಲೆ ವ್ಯಕ್ತಿಗತವಾಗಿ ಯಾರು ಆಪಾದನೆ ಮಾಡುತ್ತಿಲ್ಲ. ಆ ಸಂಸ್ಥೆಯ ಬಗ್ಗೆ ಹೇಳುತ್ತಿದ್ದೇನೆ. ಈ ಸಂಸ್ಥೆ ಈಗಾಗಲೇ ಆರ್ಥಿಕ ಅಪರಾಧದಲ್ಲಿ ಇದೆ.

**(ಗೊಂದಲ)**

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಡಾ। ಅಶ್ವಥ್ ನಾರಾಯಣ ಸಿ.ಎನ್:–** ಮಾನ್ಯ ಸಭಾಪತಿಯವರೇ, ಅವರ ಮೇಲೆ ಯಾವುದೇ ಆಪಾದನೆ ಇಲ್ಲ ಎಂಬುದನ್ನು ನಾನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರು ಉತ್ತಮವಾದ ಕರ್ತವ್ಯವನ್ನು ಮಾಡಿ ಉಪಾಧ್ಯಕ್ಷರಾಗಿರುವಂತಹದ್ದು ಇದೆ.

**(ಗೊಂದಲ)**

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, I am sorry. Higher Education Minister ರವರು National Education Policy ಅನ್ನು ಓದಿಲ್ಲ ಎಂದು ನಾನು ಅಂದುಕೊಳ್ಳುತ್ತೇನೆ. What the Prime Minister presses... ಅವರು ಹೇಳುತ್ತಾ ಹೋಗುತ್ತಾರೆ; the quality, the sanctity, the morality... ಅದು ಎಲ್ಲಿದೆ? ಅದು ಬೇಕಲ್ಲವೇ?

**ಡಾ। ಅಶ್ವಥ್ ನಾರಾಯಣ ಸಿ.ಎನ್:–** ಮಾನ್ಯ ಸಭಾಪತಿಯವರೇ, ಶ್ರೀ ಎಸ್.ವಿ.ರಂಗನಾಥ್‌ರವರು ಎಲ್ಲಾ quality, morality ಇರುವವರು.

**Sri ADAGUR H. VISHWANATH:** I am humbly sorry for your poor knowledge.

**Dr. ASHWATH NARAYAN. C.N.:** Very clearly ಅವರು ಬಹಳ ಉತ್ತಮ ಸ್ಥಾನವನ್ನು ನಿರ್ವಹಿಸಿದ್ದಾರೆ.

**Sri ADAGUR H. VISHWANATH:** No, I am sorry. ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಾನು ಏನೋ ಹೇಳಿದರೆ, ಅವರು ಏನೋ ಹೇಳುತ್ತಾರೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ: 37**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. 2020–21ನೇ ಸಾಲಿಗೆ ಪೋಷಕರು ಶಾಲೆಗಳಿಗೆ ಮಕ್ಕಳನ್ನು ದಾಖಲಿಸುತ್ತಿಲ್ಲ ಹಾಗೂ ಶುಲ್ಕಗಳನ್ನು ಪಾವತಿಸುತ್ತಿಲ್ಲವೆಂಬ ಖಾಸಗಿ ಶಾಲೆಗಳ ಅಹವಾಲುಗಳ ಹಿನ್ನೆಲೆಯಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ:ಸಿ7(2) ಪ್ರಾಶಿಅ.ಶುಲ್ಕ.30:2020–21, ದಿನಾಂಕ:05–09–2020ರಲ್ಲಿ ಸೆಪ್ಟೆಂಬರ್, 2019 ಅಂತ್ಯದೊಳಗೆ ಈ ಸಾಲಿನ ಪ್ರವೇಶಾತಿ ಪ್ರಕ್ರಿಯೆ ಪೂರ್ಣಗೊಳಿಸುವಂತೆ ಹಾಗೂ ಮೊದಲನೇ ಕಂತಿನ ಶುಲ್ಕವನ್ನು ಪಡೆಯಲು ಆದೇಶಿಸಲಾಗಿದೆ ಎಂದು ನಾನು ಕೇಳಿರುವಂತಹ ಮೊದಲನೆಯ ಪ್ರಶ್ನೆಗೆ ಮಾನ್ಯ ಸಚಿವರು ಈ ರೀತಿಯ ಉತ್ತರವನ್ನು ನೀಡಿದ್ದು, ಎಲ್ಲಾ ಖಾಸಗಿ ಶಾಲೆಗಳು 3 ಅಥವಾ 4 ಕಂತುಗಳಲ್ಲಿ ಹಣವನ್ನು ತೆಗೆದುಕೊಳ್ಳುತ್ತಾರೆ. ಇದರಲ್ಲಿ ಶೇಕಡಾ 100 ರಷ್ಟು ಶಾಲೆಗಳಲ್ಲಿ ಶೇಕಡಾ 10 ರಷ್ಟು ಶಾಲೆಗಳ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ.

(ಮುಂದು)

**(977) 07.12.2020 ಎಸ್‌ಪಿಆರ್/ಎಕೆ 3.10**
**ಶ್ರೀ ಹೆಚ್.ಎಂ.ರಮೇಶ್‌ಗೌಡ(ಮುಂದುವರೆದುದು)**

ಈ ವ್ಯವಸ್ಥೆಯಲ್ಲಿನ ಶೇಕಡಾ ನೂರು ಶಾಲೆಗಳ ಪೈಕಿ ಶೇಕಡಾ ಹತ್ತರಷ್ಟು ಶಾಲೆಗಳು ಬಹಳ ದೊಡ್ಡ ದೊಡ್ಡ ಶಾಲೆಗಳಾಗಿದ್ದು, ಅವುಗಳ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಇವತ್ತಿನ ದಿವಸ ರಾಜ್ಯದ ಉತ್ತರ ಕರ್ನಾಟಕ ಭಾಗದಲ್ಲಿ ಅಥವಾ ಬೆಂಗಳೂರಿನಲ್ಲಿ ಸುಮಾರು ಎರಡು ಸಾವಿರಕ್ಕಿಂತ ಹೆಚ್ಚು ಶಾಲೆಗಳಿರಬಹುದು. ಆ ಪೈಕಿ budgeted school ಗಳು ಪೋಷಕರಿಂದ ಕಂತಿನಲ್ಲಿ ಪಡೆಯುವ ಶುಲ್ಕದಲ್ಲಿ, ಅಲ್ಲಿನ ಭೋಧಕ ಹಾಗೂ ಭೋಧಕೇತರ ಸಿಬ್ಬಂದಿಗಳಿಗೆ ಸಂಬಳವನ್ನು ನೀಡುತ್ತದೆ. ಮಾನ್ಯ ಸಚಿವರು ಮಾಧ್ಯಮದಲ್ಲಿ ಹಲವಾರು ಬಾರಿ ಹೇಳಿಕೆಗಳನ್ನು ನೀಡಿದ್ದಾರೆ. ಆ ಸಂದರ್ಭದಲ್ಲಿ ಆನ್‌ಲೈನ್ ಮುಖಾಂತರ ಮಾಡುವ ಪಾಠಗಳಿಗೆ ಸರಿಯಾದ ರೀತಿಯಲ್ಲಿ ಶುಲ್ಕವನ್ನು ಪಡೆಯಬೇಕು ಎಂಬುದಾಗಿ ಎಲ್ಲಿಯೂ ಸಹ ಹೇಳಿಲ್ಲ. ಆದರೆ ಲಿಖಿತ ಉತ್ತರದಲ್ಲಿ 'ಸರ್ಕಾರವು ವಿದ್ಯಾರ್ಥಿಗಳ ದಾಖಲಾತಿ ಸಂಬಂಧ ಹಾಗೂ ಶುಲ್ಕ ಪಾವತಿಯ ಬಗ್ಗೆ ಸ್ಪಷ್ಟವಾಗಿ ನಿರ್ದೇಶನ ನೀಡಿರುತ್ತದೆ' ಎಂಬುದಾಗಿ ತಿಳಿಸಲಾಗಿರುತ್ತದೆ. ಆದರೆ ಸರ್ಕಾರವು ಈ ವಿಚಾರದಲ್ಲಿ ಎಲ್ಲಿಯೂ ಸಹ ಸ್ಪಷ್ಟವಾಗಿ ತಿಳಿಸಿಲ್ಲ. ಮುಂದುವರೆದು, 'ಆರ್.ಟಿ.ಇ. ಅಡಿಯಲ್ಲಿ, 2020–21 ನೇ ಸಾಲಿಗೆ ಶುಲ್ಕ ಮರುಪಾವತಿಗಾಗಿ ಹಂಚಿಕೆಯಾದ 550 ಕೋಟಿ ರೂಪಾಯಿಗಳಲ್ಲಿ ಈಗಾಗಲೇ ಸರ್ಕಾರದಿಂದ 412.50 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ' ಎಂದು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಸರ್ಕಾರವು ತಪ್ಪು ಉತ್ತರವನ್ನು ನೀಡಿದೆ. ಸದನಕ್ಕೆ ತಪ್ಪು ಮಾಹಿತಿ ನೀಡಿದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಧಿಕಾರಿಗಳ ವಿರುದ್ಧವೂ ಸಹ ಸೂಕ್ತ ಕ್ರಮ ಜರುಗಿಸಬೇಕು. 2020-21 ನೇ ಸಾಲಿನ ಆರ್.ಟಿ.ಇ. ಹಣವನ್ನು ಈಗಾಗಲೇ ಪಾವತಿಸಲಾಗಿದೆ ಎಂದು ಸರ್ಕಾರವು ಹೇಳಿದೆ. ಆದರೆ ಸರ್ಕಾರವು ಈ ರೀತಿಯಾಗಿ ಮಾಡಿಲ್ಲ. ಇದೇ ವಿಚಾರಕ್ಕೆ ಸಂಬಂಧಪಟ್ಟಂತೆ, ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಇಲಾಖೆಯ ಕಾರ್ಯದರ್ಶಿಗಳ ವಿರುದ್ಧ ರಿಟ್ ಅರ್ಜಿಯೊಂದನ್ನು ಸಲ್ಲಿಸಲಾಗಿದೆ. ಅದರ ವಿಚಾರಣೆಯು ಇದೇ ತಿಂಗಳ 14 ರಂದು ಮುಕ್ತಾಯಗೊಳ್ಳುತ್ತದೆ. ಆದರೂ ಸಹ ಈ ವಿಚಾರದಲ್ಲಿ ಯಾವುದೇ ಕ್ರಮಗಳನ್ನು ತೆಗೆದುಕೊಂಡಿಲ್ಲ. 2019-20 ನೇ ಸಾಲಿನ ಆರ್.ಟಿ.ಇ. ಶುಲ್ಕವನ್ನು ಇನ್ನೂ ಪಾವತಿಸಿಲ್ಲವೆಂದು ನಾನು ಹೇಳುತ್ತಿದ್ದೇನೆ. ಇದರ ಬಗ್ಗೆ ಸಚಿವರು ಸ್ಪಷ್ಟೀಕರಣವನ್ನು ನೀಡಬೇಕು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಶಿಕ್ಷಣ ನೀತಿಯ ಬಗ್ಗೆ ಅರ್ಧ ಗಂಟೆಗಳ ಕಾಲ ಚರ್ಚೆಯನ್ನು ಮಾಡಲು ಅವಕಾಶ ಮಾಡಿಕೊಡಬೇಕೆಂದು ನಾನು ಕೋರುತ್ತೇನೆ.

**ಸಭಾಪತಿಯವರು:-** ಈ ಬಗ್ಗೆ ಪತ್ರವನ್ನು ಸಲ್ಲಿಸಿ.

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಪ್ರಸಕ್ತ ವರ್ಷವು ಕೋವಿಡ್-19 ವರ್ಷವಾಗಿದ್ದು, ಈ ಅವಧಿಯಲ್ಲಿ ಸಮಾಜದ ಎಲ್ಲಾ ವರ್ಗಗಳ ಮೇಲೆ ಬಹಳ ದೊಡ್ಡ ವ್ಯತಿರಿಕ್ತ ಪರಿಣಾಮ ಬೀರಿದೆ. ಅದರಲ್ಲೂ ಶಿಕ್ಷಣ ಇಲಾಖೆಯ ಮೇಲೆ ತುಂಬಾ ದೂರಗಾಮಿ ಪರಿಣಾಮವು ಬೀರಿದೆ. ಶಿಕ್ಷಣ ಕ್ಷೇತ್ರದಲ್ಲಿ ಎಲ್ಲಾ ವರ್ಗದ ಪೋಷಕರೂ ಸಹ ಆರ್ಥಿಕವಾಗಿ ಜರ್ಝರಿತರಾಗಿದ್ದಾರೆ. ಅದೇ ರೀತಿಯಾಗಿ ಖಾಸಗಿ ಶಾಲೆಯ ಶಿಕ್ಷಕರು ಬಹಳ ಸಂಕಷ್ಟಕ್ಕೆ ಈಡಾಗಿದ್ದಾರೆ. ಇವತ್ತಿನ ದಿವಸ ಇಂತಹ ಪರಿಸ್ಥಿತಿಗಳನ್ನು ನಾವು ಸಮವಾಗಿ ತೂಗಿಸಬೇಕು. ಈ ವಿಚಾರದಲ್ಲಿ ನಾನು ವಿವರವಾದ ಉತ್ತರವನ್ನು ನೀಡುತ್ತೇನೆ. ಈ ವಿಚಾರದಲ್ಲಿ ನಾವು ಸುತ್ತೋಲೆಯನ್ನು ಹೊರಡಿಸಿದ್ದೇವೆ. ಏಕೆಂದರೆ, ಕೆಲವೊಂದು ಶಾಲೆಗಳು ಪೋಷಕರಿಗೆ ಎಸ್.ಎಂ.ಎಸ್.ಗಳನ್ನು ಕಳುಹಿಸಿ, ನಿರ್ದಿಷ್ಟ ದಿನಾಂಕದೊಳಗೆ ದಾಖಲಾತಿ ಮಾಡಿಕೊಳ್ಳದಿದ್ದರೆ ಅಥವಾ ಶುಲ್ಕವನ್ನು ಪಾವತಿಸದಿದ್ದರೆ, ದಿನಂಪ್ರತಿಯಾಗಿ 100 ರೂಪಾಯಿಗಳ ದಂಡ ವಿಧಿಸಲಾಗುವುದು ಎಂಬುದಾಗಿ ತಿಳಿಸಿವೆ. ಈ ಸಂಗತಿಯು ನಮ್ಮ ಗಮನಕ್ಕೆ ಬಂದ ಮೇಲೆ, ನಾವು ಯಾವಾಗ ಶಾಲೆಯನ್ನು ಪುನರಾರಂಭ ಮಾಡುತ್ತೇವೆ ಎನ್ನುವುದು ತಿಳಿದಿರಲಿಲ್ಲ. ಹೀಗಾಗಿ ಮುಂದಿನ ಸೂಚನೆ ಬರುವವರೆಗೆ ದಾಖಲಾತಿಗಳನ್ನು ಮಾಡಿಕೊಳ್ಳಬಾರದು ಎಂಬುದಾಗಿ ನಾವು ಸುತ್ತೋಲೆಯ ಮುಖಾಂತರ ತಿಳಿಸಿದ್ದೇವೆ. ಇದಾದ ನಂತರ ಶಿಕ್ಷಕರು, ಯಾವ ಪೋಷಕರು ಸ್ವಯಂ ಪ್ರೇರಿತರಾಗಿ ಶುಲ್ಕವನ್ನು ಭರಿಸಲು ಮುಂದೆ ಬರುತ್ತಾರೋ ಅವರಿಂದ ಶುಲ್ಕವನ್ನು ಪಡೆಯಲು ಅವಕಾಶವನ್ನು ನೀಡಿ ಎಂಬುದಾಗಿ ಕೋರಿದರು. ಆಗ ಇಂತಹ ಪ್ರಸಂಗಗಳಲ್ಲಿ ಶುಲ್ಕವನ್ನು ಪಡೆಯಲು ಅವಕಾಶವನ್ನು ನೀಡಿದ್ದೇವೆ. ಪ್ರಸಕ್ತ ವರ್ಷವು ವಿಚಿತ್ರವಾಗಿರುವುದರಿಂದ ಹಾಗೂ ಪೋಷಕರು ಸಂಕಷ್ಟದಲ್ಲಿರುವುದರಿಂದ ಯಾವುದೇ ಕಾರಣಕ್ಕೂ ಸಹ ಕಳೆದ ವರ್ಷಕ್ಕಿಂತ ಹೆಚ್ಚಿನ ಶುಲ್ಕವನ್ನು ವಿಧಿಸಬಾರದು;

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಧ್ಯವಾದರೆ, ಪ್ರಸಕ್ತ ಸಾಲಿನ ಶುಲ್ಕವನ್ನು ಕಡಿಮೆ ಮಾಡಿ ಎಂಬುದಾಗಿ ತಿಳಿಸಿದ್ದೇವೆ. ಸೆಪ್ಟಂಬರ್ ತಿಂಗಳ ಅಂತ್ಯದೊಳಗೆ ಮಕ್ಕಳ ದಾಖಲಾತಿಯನ್ನು ಮಾಡಿಕೊಳ್ಳಬೇಕು ಹಾಗೂ ಒಂದು ಕಂತಿನ ಶುಲ್ಕವನ್ನು ಪಾವತಿಸಬೇಕೆಂದು ತಿಳಿಸಿದ್ದೇವೆ. ಆದರೆ ಹೀಗಾಗಲಿಲ್ಲ. ಆದ್ದರಿಂದ ಅಂತಿಮ ಗಡುವನ್ನು ಅಕ್ಟೋಬರ್ ಮತ್ತು ನವೆಂಬರ್ ಅಂತ್ಯದವರೆಗೆ ವಿಸ್ತರಿಸಲಾಯಿತು. ಬಹಳಷ್ಟು ಕಡೆಗಳಲ್ಲಿ ಪೋಷಕರು ಮಕ್ಕಳನ್ನು ಶಾಲೆಗೆ ದಾಖಲಿಸಲು ಸಿದ್ಧರಿಲ್ಲ. ಒಂದು ವೇಳೆ ಶಾಲೆ ಪುನರಾರಂಭವಾದರೂ ಸಹ ಪ್ರಾಥಮಿಕ ಹಂತಕ್ಕೆ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ ಎನ್ನುವ ಮನಸ್ಥಿತಿಯಲ್ಲಿ ಅವರಿದ್ದಾರೆ. ಅವರ ಮನೋಭಾವನೆ ಸರಿಯೋ ಅಥವಾ ತಪ್ಪೋ ಗೊತ್ತಿಲ್ಲ. ಇಂತಹ ಆತಂಕ ಸಮಾಜದಲ್ಲಿದೆ. ಈ ದೃಷ್ಟಿಯಿಂದ ಈಗಾಗಲೇ ಶಿಕ್ಷಣ ಇಲಾಖೆಯು ಖಾಸಗಿ ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳ ಜೊತೆಗೆ ದಿನಾಂಕ 06/11/2020 ಮತ್ತು 27/11/2020 ಗಳಂದು ಎರಡು ಸುತ್ತಿನ ಮಾತುಕತೆಯನ್ನು ನಡೆಸಿದೆ ಹಾಗೂ ಅವರೆಲ್ಲರ ಅಹವಾಲುಗಳನ್ನು ಸ್ವೀಕರಿಸಲಾಗಿದೆ. ಇದಕ್ಕೆ ಪರಿಹಾರವನ್ನು ಹುಡುಕುವ ಪ್ರಯತ್ನವನ್ನು ಮಾಡಲಾಗುತ್ತಿದೆ.

ಮುಂದುವರೆದು, ಆರ್.ಟಿ.ಇ. ವಿಚಾರಕ್ಕೆ ಸಂಬಂಧಪಟ್ಟಂತೆ ಸರ್ಕಾರವು ನೀಡಿರುವ ಲಿಖಿತ ಉತ್ತರವು ಸತ್ಯ ಹಾಗೂ ವಾಸ್ತವಾಂಶಗಳಿಂದ ಕೂಡಿದೆ. ಇದರಲ್ಲಿ ಯಾವುದೇ ಮಾಹಿತಿಯು ಸುಳ್ಳಿಲ್ಲ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿರುವ ಸಂಗತಿಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಪ್ರಸಕ್ತ ವರ್ಷವು ವಿಚಿತ್ರವಾದ ವರ್ಷವಾಗಿದೆ. ಜನಸಾಮಾನ್ಯರು, ಶಿಕ್ಷಕರು ಹಾಗೂ ಶಿಕ್ಷಣ ಸಂಸ್ಥೆಗಳನ್ನು ಒಳಗೊಂಡಂತೆ ಎಲ್ಲರೂ ಸಂಕಷ್ಟ ಹಾಗೂ ಆರ್ಥಿಕ ತೊಂದರೆಯಲ್ಲಿದ್ದಾರೆ. ಆದರೆ, ಕಡೆಯ ಪಕ್ಷ ಶಿಕ್ಷಕ ಹಾಗೂ ಇನ್ನಿತರೆ ಸಿಬ್ಬಂದಿಗಳ ನೆರವಿಗೆ ಸರ್ಕಾರ ಬರಬೇಕೆಂದು ನಾವು ಅವತ್ತಿನಿಂದಲೂ ಕೇಳುತ್ತಿದ್ದೇವೆ. ಸರ್ಕಾರಕ್ಕೆ ಅನುಕಂಪವಿದೆ. ಇವತ್ತಿನ ಪರಿಸ್ಥಿತಿಯಲ್ಲಿ ಹಲವಾರು ಸಮಸ್ಯೆಗಳಿಂದಾಗಿ ಶುಲ್ಕವನ್ನು ಭರಿಸಲಾಗುತ್ತಿಲ್ಲ. ಪ್ರಶ್ನೋತ್ತರ ವೇಳೆಯಲ್ಲಿ ನಾನು ಈ ವಿಚಾರದ ಬಗ್ಗೆ ಚರ್ಚಿಸುವುದಿಲ್ಲ. ಬೇರೆ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಅವರ ಇಲಾಖೆಗಳು ನೆರವು ನೀಡಿವೆ. ಆದ್ದರಿಂದ ದಯಮಾಡಿ ಶಿಕ್ಷಣ ಇಲಾಖೆಯಿಂದಾಗಲೀ ಅಥವಾ ಆರ್ಥಿಕ ಇಲಾಖೆಯ ಮೂಲಕವಾಗಲೀ, ಅನುದಾನರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ, ಆಯಾಗಳನ್ನು ಸೇರಿದಂತೆ 'ಡಿ' ಗುಂಪಿನ ನೌಕರರಿಗೆ ಆಹಾರ ಕಿಟ್‌ಗಳನ್ನು ಅಥವಾ ಯಾವುದೇ ಪ್ಯಾಕೇಜ್‌ಯನ್ನು ವಿತರಣೆ ಮಾಡಬೇಕೆಂದು ನಾನು ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಪೋಷಕರಿಂದ ಶುಲ್ಕ ಸ್ವೀಕರಿಸಿಲ್ಲವಾದ್ದರಿಂದ ಈಗಿನ ಪರಿಸ್ಥಿತಿಯಲ್ಲಿ ಆಡಳಿತ ಮಂಡಳಿಗಳಿಗೆ ತಮ್ಮ ಶಿಕ್ಷಕರಿಗೆ ವೇತನ ಪಾವತಿಸಲು ಹಣವಿಲ್ಲ. ಇದರಿಂದಾಗಿ ಶಿಕ್ಷಕರು ಆತ್ಮಹತ್ಯೆಯ ಹಾದಿಯನ್ನು ಹಿಡಿದಿದ್ದಾರೆ. ಶುಲ್ಕವನ್ನು ಪಾವತಿಸಿ ಎಂದು ಬಿಗಿಯಾಗಿ ಯಾರೂ ಸಹ ಹೇಳುವುದಕ್ಕಾಗುತ್ತಿಲ್ಲ; ಏಕೆಂದರೆ ಪೋಷಕರೂ ಸಹ ತೊಂದರೆಯಲ್ಲಿದ್ದಾರೆ. ಇಂತಹ ಸನ್ನಿವೇಶಗಳಲ್ಲಿ ಸರ್ಕಾರವು ನೆರವಿಗೆ ಬರಬೇಕು. ಒಂದು ವೇಳೆ ಸರ್ಕಾರವು ನೆರವು ನೀಡಿಲ್ಲವೆಂದಾದರೆ, ಏನು ಮಾಡಬೇಕು? ಈ ಎಲ್ಲಾ ಅಂಶಗಳ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಿನ್ನೆಲೆಯಲ್ಲಿ, ಸರ್ಕಾರವು ಈ ಕೂಡಲೇ, ಖಾಸಗಿ ಶಾಲೆಗಳ ನೌಕರರ ನೆರವಿಗೆ ಧಾವಿಸಬೇಕು ಹಾಗೂ ವಿಶೇಷವಾದ ಪ್ಯಾಕೇಜ್‌ನ್ನು ಘೋಷಿಸಬೇಕೆಂದು ನಾನು ತಮ್ಮ ಮೂಲಕ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದೇ ವಿಚಾರಕ್ಕೆ ಸಂಬಂಧಪಟ್ಟಂತೆ ಪೂರಕವಾಗಿ ನಾನು ಮಾತೊಂದನ್ನು ಹೇಳುತ್ತೇನೆ. ರಾಜ್ಯದ ಮುಖ್ಯ ಮಂತ್ರಿಗಳು, ಶಿಕ್ಷಣ ಸಚಿವರು ಹಾಗೂ ಉನ್ನತ ಶಿಕ್ಷಣ ಸಚಿವರನ್ನೊಳಗೊಂಡಂತೆ ಪದವೀಧರರ ಹಾಗೂ ಶಿಕ್ಷಕರ ಕ್ಷೇತ್ರದ ನಮ್ಮ 14 ಜನಪ್ರತಿನಿಧಿಗಳೊಂದಿಗೆ ಮುಖ್ಯಮಂತ್ರಿಗಳ ಅಧಿಕೃತ ನಿವಾಸ 'ಕೃಷ್ಣ' ಇಲ್ಲಿ ಸಭೆಯೊಂದನ್ನು ಮಾಡಿದ್ದರು.

**ಸಭಾಪತಿಯವರು:-** ಸಚಿವರೇ, ಸದಸ್ಯರು ಕೇಳಿರುವ ಪ್ರಶ್ನೆಗೆ ಉತ್ತರಿಸಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುವ ಶಿಕ್ಷಕರಿಗೆ ಏನಾದರೂ ಪರಿಹಾರ ನೀಡುವುದಾಗಿ ಅವತ್ತಿನ ದಿವಸ ಒಂದು ಮಾತನ್ನು ನೀಡಿದ್ದರು. ಇದಾಗಿ ಐದಾರು ತಿಂಗಳುಗಳು ಕಳೆದಿವೆ. ಹೀಗಾಗಿ ಸರ್ಕಾರವು ಹೇಗಾದರೂ ಸರಿ ಶಿಕ್ಷಕರ ನೆರವಿಗೆ ಧಾವಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ ಹಾಗೂ ಸಾಕಷ್ಟು ಬಾರಿ ಹೇಳಿಕೆಗಳನ್ನು ನೀಡಿದ್ದಾರೆ. ಪದವೀಧರರ ಹಾಗೂ ಶಿಕ್ಷಕರ ಕ್ಷೇತ್ರದ ಜನಪ್ರತಿನಿಧಿಗಳನ್ನು ಅಥವಾ ನಮ್ಮಗಳನ್ನು ಕರೆಸಿ ಸಭೆಯನ್ನೂ ಸಹ ಮಾಡಿದ್ದಾರೆ. ಶಿಕ್ಷಣ ಆಯುಕ್ತರ ಕಛೇರಿಯಲ್ಲಿ ನಡೆಸಿದ ಸಭೆಯನ್ವಯ ಯಾವೂದು ಸಹ ಜಾರಿಗೆ ಬಂದಿಲ್ಲ. ಸುಮಾರು 40-50 ವರ್ಷಗಳಿಂದ ಶಿಕ್ಷಣ ಸಂಸ್ಥೆಗಳು ನಡೆದುಕೊಂಡು ಬರುತ್ತಿವೆ; ಈಗ ಕೋವಿಡ್-19 ಕಾಯಿಲೆಯು ಬಂದಿರುವುದರಿಂದ ಇದು ಕಷ್ಟದ ದಿನಗಳು ಎಂದು ಮಾನ್ಯ ಸಚಿವರು ಹೇಳಿದ್ದಾರೆ.

**ಸಭಾಪತಿಯವರು:-** ಸದಸ್ಯರೇ, ತಾವು ಬಹಳಷ್ಟು ಸಮಯವನ್ನು ತೆಗೆದುಕೊಂಡಿದ್ದೀರಿ. ಮುಂದಿನ ಪ್ರಶ್ನೆ ಶ್ರೀ ನಾರಾಯಣಸ್ವಾಮಿಯವರದ್ದು.

**ಶ್ರೀ ಹೆಚ್.ಎಂ.ರಮೇಶ್‌ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದಂತೆ, ಈಗ ಕೋವಿಡ್-19 ಕಾಯಿಲೆಯ ಪರಿಸ್ಥಿತಿ ಇದೆ. ಯಾವುದೇ ಹೊಸ ಯೋಜನೆಯನ್ನು ತೆಗೆದುಕೊಳ್ಳಬೇಕಾದರೆ, ಲೋಕೋಪಯೋಗಿ, ಅಗ್ನಿ ಶಾಮಕ ಇಲಾಖೆಗಳಿಂದ ದೃಢೀಕರಣ ಪತ್ರ ಪಡೆಯಬೇಕೆಂದು ಹೇಳುತ್ತಾರೆ. ಆದರೆ, ಅಂದಿನ ಸಭೆಯಲ್ಲಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಈ ನಿಯಮವು ಹಳೆಯ ಶಾಲೆಗಳಿಗೆ ಅನ್ವಯಿಸುವುದಿಲ್ಲ ಕೇವಲ ಹೊಸ ಶಾಲೆಗಳಿಗೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾತ್ರವೇ ಎಂದು ಹೇಳಿದ್ದರು. ಹೀಗಾಗಿ ಇದಕ್ಕೆ ಸಂಬಂಧಪಟ್ಟಂತೆ ನಿರ್ದಿಷ್ಟವಾದ ಆದೇಶವನ್ನು ಮಾಡಬೇಕು. ಇಲಾಖೆಯ ಮಂತ್ರಿಗಳಿಂದ ಹಾಗೂ ಪ್ರಧಾನ ಕಾರ್ಯದರ್ಶಿಗಳಿಂದ ಈ ವಿಚಾರದಲ್ಲಿ ಆದೇಶವನ್ನು ಮಾಡಿಸಿ ಎಂಬುದಾಗಿ ಆಯುಕ್ತರ ಕಛೇರಿಯಲ್ಲಿ ನಮಗೆ ಹೇಳುತ್ತಾರೆ. ಆದರೆ ಇದುವರೆಗೂ ಯಾವುದೇ ರೀತಿಯಾದ ಆದೇಶವನ್ನು ಹೊರಡಿಸಿಲ್ಲ. ಸರ್ಕಾರವೇ ತಿಳಿಸಿದಂತೆ, ಆರ್.ಟಿ.ಇ. ಕಾಯ್ದೆಯ ಕಲಂ 8(ಎಫ್) ಮತ್ತು 8(ಜಿ) ಗಳ ರೀತ್ಯಾ ಕನಿಷ್ಠ ಮಕ್ಕಳು ಶಾಲೆಗೆ ಬರಬೇಕು. ಅದರೆ, ಮಕ್ಕಳು ಶಾಲೆಗೆ ಬರದೇ, ಕೇವಲ ಅವರ ಹಾಜರಾತಿಯನ್ನು ನೀಡಿ, ಅವರುಗಳನ್ನು ಉತ್ತೀರ್ಣಗೊಳಿಸಲಾಗುವುದು ಎಂದು ಹೇಳಿದರೆ, ಇದು ಎಷ್ಟರ ಮಟ್ಟಿಗೆ ಸರಿ ಎನ್ನುವುದನ್ನು ಶಿಕ್ಷಣ ಸಚಿವರು ತಿಳಿಸಬೇಕು.

**ಶ್ರೀ ಎಸ್.ಸುರೇಶ್ ಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈಗ ಕೇಳಿರುವ ಪ್ರಶ್ನೆಯು ನನಗೆ ಅರ್ಥವಾಗಲಿಲ್ಲ. ಪೋಷಕರ, ಅವರ ಮನೆ ಹಾಗೂ ಕುಟುಂಬದ ಪರಿಸ್ಥಿತಿಗಳನ್ನೂ ಸಹ ನೋಡಬೇಕೆಂದು ನಾನು ಮತ್ತೊಮ್ಮೆ ಹೇಳುತ್ತೇನೆ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಯಾವುದು ಅರ್ಥವಾಗಲಿಲ್ಲವೆಂದು ನಾನು ಕೇಳುತ್ತೇನೆ.

**ಶ್ರೀ ಎಸ್.ಸುರೇಶ್ ಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರು ಖಾಸಗಿ ಶಿಕ್ಷಣ ಸಂಸ್ಥೆಗಳ ವಿಚಾರವನ್ನು ಬಹಳಷ್ಟು ಬಾರಿ ಪ್ರಸ್ತಾಪಿಸಿದ್ದಾರೆ. ನಾವೂ ಸಹ ಈ ವಿಚಾರದಲ್ಲಿ ಪ್ರಯತ್ನಗಳನ್ನು ಮಾಡಿದ್ದೇವೆ. ಯಾವ ರೀತಿಯಾಗಿ ಅವರುಗಳಿಗೆ ಸಹಾಯ ಮಾಡಬಹುದು ಎಂಬುದರ ಬಗ್ಗೆ ಬೇರೆ ಬೇರೆ ರೀತಿಯಾದ ಸಭೆಗಳನ್ನು ಮಾಡಿದ್ದೇವೆ. ಖಾಸಗಿ ಶಾಲೆಗಳ ಶಿಕ್ಷಕರಿಗೆ ಸಹಾಯ ಮಾಡಬೇಕೆಂದು ಮಾನ್ಯ ಪುಟ್ಟಣ್ಣನವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

(ಮುಂದು)

**(978)/7–12–2020/3–20/ಎಲ್‌ಎಂ/ವಿಕೆ**

**ಶ್ರೀ ಎಸ್.ಸುರೇಶ್ ಕುಮಾರ್(ಮುಂದುವರೆದುದು)**

ಖಾಸಗಿ ಶಾಲಾ ಶಿಕ್ಷಕರಿಗೆ ಸಹಾಯ ಮಾಡಬೇಕು. ಅವರಿಗೆ ಫುಡ್ ಕಿಟ್ ಆದರೂ ಕೊಡಬೇಕು ಎಂದು ಮಾನ್ಯ ಸದಸ್ಯರಾದ ಪುಟ್ಟಣ್ಣನವರು ಹೇಳಿದ್ದಾರೆ. ಇದರ ಬಗ್ಗೆ ನಾನು ಹಣಕಾಸು ಇಲಾಖೆಯನ್ನು ಹೊಂದಿರುವ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಮಾತನಾಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಹೆಚ್.ಎಂ.ರಮೇಶ್‌ಗೌಡ:-** ಮಾನ್ಯ ಸಭಾಪತಿಗಳೆ, RTE ಹಣದ ಮತ್ತು PWD Certificate ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳಲಿಲ್ಲ.

**ಶ್ರೀ ಎಸ್.ಸುರೇಶ್ ಕುಮಾರ್:-** ಈ ವರ್ಷ ಅದನ್ನು ಸ್ಥಗಿತಗೊಳಿಸಲಾಗಿದೆ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:-** ಮಾನ್ಯ ಸಭಾಪತಿಗಳೆ, ಹಳೆಯ ಕಟ್ಟಡಗಳಿಗೆ ಹೇಗೆ implement ಮಾಡುತ್ತೀರಿ? ಹೊಸ ಕಟ್ಟಡಗಳಿಗೆ ಹೊಸ ಕಾನೂನನ್ನು ಜಾರಿಗೆ ತನ್ನಿ. ಸುಮಾರು 45 ರಿಂದ 50 ವರ್ಷಗಳ ಹಳೆಯ ಶಾಲಾ ಕಟ್ಟಡಗಳು ಇವೆ. ಅವುಗಳಿಗೆ ಹೇಗೆ ಮಾಡಲಾಗುತ್ತದೆ?

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸಭಾಪತಿಗಳೆ, ಇದು ಸರ್ಕಾರದ stand ಅಲ್ಲ. ಎಲ್ಲರಿಗೂ ಗೊತ್ತಿರುವಂತಹ ವಿಚಾರ, ಕುಂಭಕೋಣಂನಲ್ಲಿ Krishna English Medium School ಎನ್ನುವ ಶಾಲೆ ಇತ್ತು. ಆ ಶಾಲೆಯಲ್ಲಿ ಬೆಂಕಿ ಬಿದ್ದು 52 ಮಕ್ಕಳು ಬೆಂದು ಸುಟ್ಟು ಸತ್ತು ಹೋದರು. ಈ ಘಟನೆಯಾದ ಮೇಲೆ ಎಲ್ಲಾ ಶಾಲಾ ಕಟ್ಟಡಗಳಲ್ಲಿ fire safety ಇರಬೇಕು, ಕಟ್ಟಡ ಸುರಕ್ಷಿತವಾಗಿರಬೇಕು ಎಂದು ಕೋರ್ಟ್ ಮಾಡಿರುವ ಸೂಚನೆ ಇದು. ನಾನು ಎಲ್ಲಾ ಶಾಲೆಗಳಿಗೆ ಹೋಗಿ ನೋಡಿದ್ದೇನೆ. ಪರಿಸ್ಥಿತಿಯ ಅರಿವು ನನಗೂ ಇದೆ. ಇದಕ್ಕಾಗಿ ನಾವು ಪರಿಹಾರವನ್ನು ಹುಡುಕಬೇಕಾಗಿದೆ. ಆದ್ದರಿಂದ ಈ ವರ್ಷ ಕೋವಿಡ್ ಇರುವುದರಿಂದ ಈ ಅಕಾಡಮಿಕ್ ವರ್ಷಕ್ಕೆ ಅದನ್ನು postpone ಮಾಡಿಸಿದ್ದೇವೆ. ಅದಕ್ಕಾಗಿ ಮೂರು ತಿಂಗಳ ಸಮಯವನ್ನು ಕೊಟ್ಟಿದ್ದೇವೆ. ಆದರೆ ಹಳೆಯ ಕಟ್ಟಡಗಳಲ್ಲಿ ಇದನ್ನು ತರಲು ಆಗುವುದಿಲ್ಲ, ಕಟ್ಟಡದ ಸುತ್ತ ಓಡಾಡಲು ಜಾಗ ಕೊಡಲು ಆಗುವುದಿಲ್ಲ. ಇದು ನಮಗೂ ಗೊತ್ತಿದೆ. ಆದ್ದರಿಂದ ಇದಕ್ಕಾಗಿ Via Media ಮಾಡಿ, ಖಂಡಿತವಾಗಿ ಇದಕ್ಕೆ ಪರಿಹಾರವನ್ನು ಕಂಡುಹಿಡಿಯುತ್ತೇವೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಸಾರಿಗೆ ಸಚಿವರು):-** ಮಾನ್ಯ ಸಭಾಪತಿಗಳೆ, ಭೋಜನ ವಿರಾಮ ಇದೆಯೋ ಇಲ್ಲವೋ? ಭೋಜನಕ್ಕೆ ವಿರಾಮ ಕೊಡುವುದಿಲ್ಲ ಎನ್ನುವುದಾದ್ದರೆ ಸದನಕ್ಕೆ ತಿಳಿಸಿ, ಭೋಜನ ಮಾಡಬೇಕಾದವರು ಹೋಗಿ ಭೋಜನ ಮಾಡಿಕೊಂಡು ಬರುತ್ತಾರೆ.

**ಸಭಾಪತಿಯವರು:-** ಪ್ರಶ್ನೋತ್ತರದ ಮಧ್ಯದಲ್ಲಿ ಭೋಜನಕ್ಕೆ ವಿರಾಮ ಕೊಡಲು ಬರುವುದಿಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಭೋಜನ ವಿರಾಮವಿರುವುದಿಲ್ಲ ಎನ್ನುವುದನ್ನು ಸದನದಲ್ಲಿ ಹೇಳಿಬಿಡಿ. ಊಟ ಮಾಡಿಕೊಂಡು ಬರುವವರು ಹೋಗಿ ಊಟ ಮಾಡಿಕೊಂಡು ಬರುತ್ತಾರೆ. ಸಂಜೆ 6–00 ಗಂಟೆಯವರೆಗೆ ಪ್ರಶ್ನೋತ್ತರವನ್ನು ನಡೆಸಿ ನಮ್ಮದೇನು ಅಭ್ಯಂತರವಿಲ್ಲ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ಪ್ರಶ್ನೋತ್ತರದ ಮಧ್ಯದಲ್ಲಿ ಭೋಜನಕ್ಕೆ ವಿರಾಮ ಕೊಡಬಾರದು ಎಂದು ನಿಯಮವೇನು ಇಲ್ಲ. ಭೋಜನದ ನಂತರ ಮತ್ತೆ ಪ್ರಶ್ನೋತ್ತರ ಅವಧಿಯನ್ನು ಮುಂದುವರೆಸಬಹುದು.

**ಸಭಾಪತಿಯವರು:–** ಈಗ ಸದನವನ್ನು ಭೋಜನ ವಿರಾಮಕ್ಕಾಗಿ ಸಂಜೆ 4 ಗಂಟೆ 30 ನಿಮಿಷದವರೆಗೆ ಮುಂದೂಡಲಾಗುತ್ತದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(979) 7.12.2020 : 4.50 ಪಿಕೆ:ಬಿಎನ್‌ಎಸ್**

**(ಮಧ್ಯಾಹ್ನ 3 ಗಂಟೆ 22 ನಿಮಿಷಕ್ಕೆ ಭೋಜನ ವಿರಾಮಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 4 ಗಂಟೆ 52 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಸಭಾಪತಿಯವರಾದ ಶ್ರೀ ಕೆ.ಪ್ರತಾಪ್‌ಚಂದ್ರ ಶೆಟ್ಟಿಯವರು ಪೀಠಾಸೀನರಾದರು)**

**ಪ್ರಶ್ನೆ ಸಂಖ್ಯೆ : 55**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ನಾರಾಯಣಸ್ವಾಮಿ:-**ಮಾನ್ಯ ಸಭಾಪತಿಯವರೇ, ನಾನು ಮೂರು ಪ್ರಶ್ನೆಗಳನ್ನು ಕೇಳಿದ್ದೆ. ಅ) ಪ್ರಶ್ನೆ ನಗರದಲ್ಲಿ ಕೋವಿಡ್ 19ರ ಸೋಂಕಿತರನ್ನು ವಿವಿಧ ಖಾಸಗಿ ಏಜೆನ್ಸಿಗಳು ಸಂಪರ್ಕಿಸಿ ಕಟ್ಟಡಗಳಿಗೆ ಸೋಂಕು ನಿವಾರಣಾ ದ್ರವ ಸಿಂಪಡಣೆ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಒದಗಿಸುವುದಾಗಿ ದುಂಬಾಲು ಬೀಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದದಿಯೇ;

ಆ) ಕೋವಿಡ್ ಪೀಡಿತರ ಮಾಹಿತಿಯಲ್ಲಿ ಗೌಪ್ಯತೆ ಕಾಪಾಡದ ಖಾಸಗಿ ಏಜೆನ್ಸಿಗಳಿಗೆ ಮಾಹಿತಿ ಲಭ್ಯವಾಗುತ್ತಿರುವುದಕ್ಕೆ ಕಾರಣರ್ಯಾರು;

ಇ) ಮಾಹಿತಿ ಗೌಪ್ಯತೆಯನ್ನು ಕಾಪಾಡದಿದ್ದರೆ ಅದು ಅಪರಾಧವಾಗುವುದಿಲ್ಲವೇ; ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಯವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ಎಂಬ ಪ್ರಶ್ನೆಗಳನ್ನು ಕೇಳಿದ್ದೆ.

ಮಾನ್ಯ ಸಚಿವರು, ಪರಿಣಾಮಕಾರಿಯಾಗಿ, ಸಮರ್ಪಕವಾಗಿ ಕೋವಿಡ್ ಮಾರಕ ರೋಗವನ್ನು ನಿರ್ವಹಣೆ ಮಾಡುತ್ತಿದ್ದಾರೆ ಎಂದು ಭಾವಿಸಿದ್ದೆ. ಆದರೆ ಇವರಿಂದ ನಾನು ಇಂತಹ ಉತ್ತರವನ್ನು ನಿರೀಕ್ಷೆ ಮಾಡಿರಲಿಲ್ಲ. ಯಾರೋ ಅಧಿಕಾರಿಗಳು ಕೊಟ್ಟಿರುವ ಮಾಹಿತಿಯನ್ನು ಉತ್ತರವಾಗಿ ಹೇಳಿದ್ದಾರೆ. ಕೋವಿಡ್-19 ಸೋಂಕಿತರನ್ನು ಖಾಸಗಿ ಏಜೆನ್ಸಿಗಳು ಸಂಪರ್ಕಿಸುವುದು ಹಾಗೂ ಕಟ್ಟಡಗಳಿಗೆ ಸೋಂಕು ನಿವಾರಣಾ ದ್ರವ ಸಿಂಪಡಣೆ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಒದಗಿಸುವ ಕುರಿತು, ಸರ್ಕಾರದಿಂದ ಯಾವುದೇ ಮಾರ್ಗಸೂಚಿಗಳನ್ನು ಹೊರಡಿಸಿರುವುದಿಲ್ಲ. ಸೋಂಕು ನಿವಾರಣ ದ್ರವ ಸಿಂಪಡಣೆ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಒದಗಿಸುವ ಕುರಿತು ಸೋಂಕಿತರಿಗೆ ದುಂಬಾಲು ಬೀಳುವ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಮಾನ್ಯ ಸಭಾಪತಿಯವರೇ, ಯಾರೇ ಕೋವಿಡ್ ಟೆಸ್ಟ್ ಮಾಡಿಸಿಕೊಂಡಾಗ ಅವರಿಗೆ ಪಾಸಿಟಿವ್ ಇದ್ದರೌ ವಿಷಯ ಸರ್ಕಾರಿ ಏಜೆನ್ಸಿಗಳಿರಬಹುದು ಅಥವಾ ಖಾಸಗಿ ಏಜೆನ್ಸಿಗಳಿರಬಹುದು ಅವರಿಗೆ ತಿಳಿದಾಗ ಅವರು ಕೋವಿಡ್ ಟೆಸ್ಟ್ ಮಾಡಿಸಿಕೊಂಡ ಮನೆಗಳ ಹತ್ತಿರ ಬರುತ್ತಾರೆ. ನಂತರ ಆ ರಸ್ತೆಯನ್ನೇ ಸೀಲ್‌ಡೌನ್ ಮಾಡುತ್ತಾರೆ. ತಗಡುಗಳನ್ನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹೊಡೆದು ರಸ್ತೆಯನ್ನೇ ಬಂದ್ ಮಾಡುವ ರೀತಿಯಲ್ಲಿ ಮಾಡುತ್ತಾರೆ. ಆಗ, ಯಾರಿಗೆ ಸೋಂಕು ತಗುಲಿದೆ ಎಂದು ಇಡೀ ಏರಿಯಾದವರಿಗೆ ಗೊತ್ತಾಗುತ್ತದೆ. ಆದರೆ ಮಾನ್ಯ ಸಚಿವರು ಇಂಥದ್ದು ತಮ್ಮ ಗಮನಕ್ಕೆ ಬಂದಿಲ್ಲ; ನಮಗೆ ಮಾಹಿತಿ ಇಲ್ಲ ಎಂದು ಹೇಳುತ್ತಿದ್ದಾರೆ. ಆ ಮಾಹಿತಿ ಇಡೀ ಊರಿಗೆ ಗೊತ್ತಾಗಿರುತ್ತದೆ. ರೋಗಿಗಳು ಮನೆಯಲ್ಲಿ ಟ್ರೀಟ್‌ಮೆಂಟ್ ತೆಗೆದುಕೊಳ್ಳುತ್ತಿದ್ದಾರೆ ಎಂದು ಖಾಸಗಿ ಏಜೆನ್ಸಿಗಳಿಗೆ ಗೊತ್ತಾದಾಗ ಅವರು, ಅಕ್ಕ-ಪಕ್ಕದ ಬೇರೆ ಮನೆಗಳಿಗೆ ಸೋಂಕು ತಗಲಬಾರದು, ನಾವು ಸ್ಯಾನಿಟೈಸ್ ಮಾಡಬೇಕು ಎಂದು ದುಂಬಾಲು ಬಿದ್ದು ಆ ಮನೆಗಳನ್ನು ಸ್ಯಾನಿಟೈಸ್ ಮಾಡಿಸುವಂತಹ ಪ್ರಯತ್ನ ಮಾಡುತ್ತಾರೆ. ಇದು ಪ್ರ್ಯಾಕ್ಟಿಕಲ್ ಆಗಿ ಇವತ್ತಿನ ದಿವಸ ನಡೆಯುತ್ತಿದೆ. ಯಾರು ಸೋಂಕಿತರು ಇರುತ್ತಾರೋ ಅವರನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡ ಹೋದಂಥ ಸಂದರ್ಭದಲ್ಲಿ, ನಮಗೆ ಇಲ್ಲಿ ಸರಿಯಾದ ಸೌಲಭ್ಯಗಳಿಲ್ಲ, ವೈದ್ಯರು ಸಮರ್ಪಕವಾಗಿ ಟ್ರೀಟ್‌ಮೆಂಟ್ ಕೊಡುತ್ತಿಲ್ಲ, ನಮ್ಮನ್ನು ಇಲ್ಲಿಗೆ ಕರೆದುಕೊಂಡು ಬಂದು ನಾಯಿಗಳಿಗಿಂತ ಕಡೆಯಾಗಿ ನೋಡಿಕೊಳ್ಳುತ್ತಿದ್ದಾರೆ ಎಂದು ಹೇಳಿರುವಂತಹ ವಾಟ್ಸ್‌ಅಪ್‌ಗಳನ್ನು ಅಥವಾ ಹೇಳಿಕೆಗಳನ್ನು ನಾವು ಗಮನಿಸಿದ್ದೇವೆ. ಆಗ ಖಾಸಗಿ ಏಜೆನ್ಸಿಗಳು, ನಾವು ಬೇರೆ ಖಾಸಗಿ ಆಸ್ಪತ್ರೆಗಳಿಗೆ ಕರೆದುಕೊಂಡು ಹೋಗಿ ಉತ್ತಮ ಟ್ರೀಟ್‌ಮೆಂಟ್ ಕೊಡುತ್ತೇವೆ, ಸ್ಯಾನಿಟೈಸ್ ಮಾಡುತ್ತೇವೆ, ಇನ್ನೊಂದು ಮಾಡುತ್ತೇವೆ ಎಂದು ಹೇಳುತ್ತಾರೆ. ಮಾನ್ಯ ಸಭಾಪತಿಯವರೇ, ಅಂಬ್ಯುಲೆನ್ಸನ್ನೂ ಕೂಡ ಸರ್ಕಾರದವರು ಸರಿಯಾದ ಸಮಯಕ್ಕೆ ಒದಗಿಸುವುದಿಲ್ಲ. ದೂರವಾಣಿ ಮಾಡಿದ ನಂತರ ಅದು ಬರುವುದಕ್ಕೆ ದಿನಗಟ್ಟಲೆ ಆಗುತ್ತದೆ. ಆದರೆ ಖಾಸಗಿಯವರು ಎಲ್ಲ ರೀತಿಯ ಸೌಕರ್ಯಗಳನ್ನು ಕೊಡುತ್ತೇವೆ ಎಂದು ಹೇಳಿ, ದುಂಬಾಲು ಬಿದ್ದು, ಹೆಚ್ಚಿನ ದರವನ್ನು ಫಿಕ್ಸ್ ಮಾಡಿ, ಚಾರ್ಜ್ ಮಾಡಿ ಇನ್ನಿಲ್ಲದ ತೊಂದರೆಗಳನ್ನು ಕೊಡುತ್ತಿರುವುದು ಕಣ್ಣ ಮುಂದೆ ಕಾಣುತ್ತಿದ್ದೇವೆ. ನಾನು ಸರ್ಕಾರವನ್ನು ದೂಷಣೆ ಮಾಡುತ್ತಿಲ್ಲ. ಆದರೆ ಏನು ಅನಾಹುತ ಆಗುತ್ತಿದೆ ಎಂಬುದನ್ನು ಹೇಳುತ್ತಿದ್ದೇನೆ. ಈ ಮಾರಕ ರೋಗಕ್ಕೆ ತುತ್ತಾಗಿರುವ ಜನರು ಎಷ್ಟು ಕಷ್ಟದಲ್ಲಿದ್ದಾರೆ ಎನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕು ಎಂದು ನಿಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಡಾ॥ ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇವತ್ತು ಹೇಳುತ್ತಿರುವ ಅಂಶಗಳೇನಿವೆ ಅವು ಕೆಲವು ತಿಂಗಳು ಹಿಂದೆ ಇತ್ತು. ಕ್ವಾರಂಟೈನ್ ಮಾಡುವ ಸಂದರ್ಭದಲ್ಲಿ, ಕಂಟೈನ್ಮೆಂಟ್ ಜೋನ್ ಎಂದು ಮಾಡುವ ಸಂದರ್ಭದಲ್ಲಿ ಆ ಪರಿಸ್ಥಿತಿ ಇತ್ತು. ಇದು ಸುಮಾರು 6 ತಿಂಗಳ ಹಿಂದೆ ಆಗುತ್ತಿತ್ತು. ಆದರೆ 6 ತಿಂಗಳಿಂದ ಈಚೆ, ಮನೆಗಳಿಗೆ ಲೇಬಲ್ ಹಾಕುವುದಾಗಲಿ, ಬಹಿರಂಗವಾಗಿ ಅವರ ಹೆಸರನ್ನು, ಅವರ ವಿಳಾಸವನ್ನು ಖಾಸಗಿ ವ್ಯಕ್ತಿಗಳಿಗಾಗಲಿ ಅಥವಾ ಖಾಸಗಿ ಕಂಪನಿಗಳಿಗೆ ಕೊಟ್ಟಿರುವ ಸಂಭವವೇ ಇಲ್ಲ. ಸರ್ಕಾರಿ ವಲಯಗಳಲ್ಲಿ ಯಾರು ಇದರ ಮೇಲುಸ್ತುವಾರಿಯನ್ನು ವಹಿಸಿದ್ದಾರೋ ಅವರಿಗೆ ಗೌಪ್ಯತೆಯನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ವಿಶೇಷ ಕಾನೂನು ಮೂಲಕ ಕ್ರಮವನ್ನು ವಹಿಸುವುದಕ್ಕೆ ಕೊಟ್ಟಿದ್ದೇವೆ. ಮಾನ್ಯ ಸಭಾಪತಿಯವರೇ, ಕೆಲವು ವೈದ್ಯಕೀಯ ಸಂಶೋಧನಾ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವುದೂ ಕೂಡ ಕೇವಲ ಸಂಶೋಧನೆಯ ದೃಷ್ಟಿಯಿಂದ ಎನ್ನುವುದು ಬಿಟ್ಟರೆ, ಯಾವುದೇ ವೈಯಕ್ತಿಕ ಲಾಭ ಗಳಿಕೆಯ ಉದ್ದೇಶವಿಲ್ಲ. ಗೌಪ್ಯತೆಯನ್ನು ಕಾಪಾಡದೆ ಖಾಸಗಿ ಕಂಪನಿಗಳ ಜೊತೆ ಮಾಹಿತಿಯನ್ನು ಸೋರಿಕೆ ಮಾಡುವುದಾಗಲಿ, ಹಂಚಿಕೆ ಮಾಡಿಕೊಳ್ಳುವಂಥದ್ದಾಗಲಿ ಅದು ಅಪರಾಧವಾಗುತ್ತದೆ. ಆ ಅಪರಾಧಕ್ಕೆ ಖಂಡಿತವಾಗಿ ಕ್ರಮ ವಹಿಸುತ್ತೇವೆ. ಮಾನ್ಯ ಸದಸ್ಯರ ಹತ್ತಿರ ಇಂತಹ ನಿಖರವಾದ ದೂರುಗಳಿದ್ದು ಅದನ್ನು ನಮ್ಮ ಗಮನಕ್ಕೆ ತಂದರೆ ಖಂಡಿತವಾಗಿ ಇಲಾಖೆಯಿಂದ ಸೂಕ್ತ ಕ್ರಮ ಕೈಗೊಳ್ಳುತ್ತೇವೆ. ಇಲ್ಲಿಯವರೆಗೂ ಕೂಡ ಈ ವಿಷಯದಲ್ಲಿ ನಮಗೆ ಲಿಖಿತ ದೂರು ಬಂದಿಲ್ಲ. ಇಂತಹ ಪ್ರಕರಣಗಳು ನಡೆದಿರಬಹುದು; ಆದರೆ ಲಿಖಿತ ಮೂಲಕ ನಮಗೆ ದೂರು ಬರದೇ ಇರುವುದರಿಂದ ಉತ್ತರದಲ್ಲಿ 'ಇದು ನಮ್ಮ ಗಮನಕ್ಕೆ ಬಂದಿಲ್ಲ' ಎಂದು ಹೇಳಿದ್ದೇವೆ. ಲಿಖಿತವಾದ ದೂರು ಬರುವವರೆಗೂ ನಾವು ಕ್ರಮ ತೆಗೆದುಕೊಳ್ಳುವುದು ಅಸಾಧ್ಯವಾಗುತ್ತದೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳುವುದನ್ನು ನಾನು ಒಪ್ಪುತ್ತೇನೆ. Memorandum of Understanding ಮಾಡಿಕೊಂಡಿರುವ ಉದ್ದೇಶವನ್ನು ಹೇಳಿದರು. ಮಾನ್ಯ ಸಭಾಪತಿಯವರೇ, ರೋಗಿಗಳಿಗೆ ಸರ್ಕಾರಿ ಆಸ್ಪತ್ರೆಗಳ ಮೇಲೆ ಇನ್ನೂ ನಂಬಿಕೆ ಬಂದಿಲ್ಲ. ಜನಪ್ರತಿನಿಧಿಗಳು ನಾವು ಮೊದಲು ಸರ್ಕಾರಿ ಆಸ್ಪತ್ರೆಗೆ ಹೋಗುವಂತಹ ಪರಿಸ್ಥಿತಿ ನಿರ್ಮಾಣ ಆಗಬೇಕು. ಸಾರ್ವಜನಿಕರಿಗೆ ಸರ್ಕಾರಿ ಆಸ್ಪತ್ರೆಗಳ ಮೇಲೆ ನಂಬಿಕೆ ಇಲ್ಲ. ಖಾಸಗಿ ಆಸ್ಪತ್ರೆಗೆ ರೋಗಿಗಳು ಹೋಗುವಂತಹ ಸಂದರ್ಭದಲ್ಲಿ ಅವರು ಯಾವರೀತಿ ದುಡ್ಡು ವಸೂಲಿ ಮಾಡಿದ್ದಾರೆ ಎಂದರೆ, ಒಬ್ಬ ರೋಗಿಯಿಂದ ರೂ. 5 ಲಕ್ಷದಿಂದ 15 ಲಕ್ಷದವರೆಗೆ ದುಡ್ಡು ತೆಗೆದುಕೊಂಡು ಹಗಲು ದರೋಡೆ ಮಾಡಿರುವಂತಹ ಉದಾಹರಣೆಗಳು ಕೂಡ ಇದೆ. ಮಾನ್ಯ ಸಚಿವರು ಹೋದ ಸಲ ಸದನದಲ್ಲಿ ಉತ್ತರ ಕೊಡಬೇಕಾದರೆ, ಯಾರು ಆ ರೀತಿ ಹೆಚ್ಚಿಗೆ ಚಾರ್ಜ್ ಮಾಡಿದ್ದರೋ ಅದನ್ನು ವಾಪಸ್ಸು ಕೊಡಿಸಿರುವಂತಹ ನಿದರ್ಶನ ಕೂಡ ನಮ್ಮಲ್ಲಿ ಇದೆ ಎಂದು ಹೇಳಿದ್ದರು. ಇದು ಸತ್ಯಕ್ಕೆ ದೂರವಾದ ಮಾತು. ಒಂದೆರಡು ಪ್ರಕರಣಗಳಲ್ಲಿ ಕೊಟ್ಟಿರಬಹುದು, ಇಲ್ಲ ಎಂದು ಹೇಳುವುದಿಲ್ಲ. ಖಾಸಗಿ ಆಸ್ಪತ್ರೆಯವರು ಕೋವಿಡ್ ಬಂದ ಸಂದರ್ಭವನ್ನು ಉಪಯೋಗಿಸಿಕೊಂಡು ನೂರಾರು ಜನರಿಂದ ಲಕ್ಷಾಂತರ ರೂಪಾಯಿಗಳನ್ನು ತೆಗೆದುಕೊಂಡಿರುವುದು ಇದೆ. ಕೋವಿಡ್ ರೋಗ ಖಾಸಗಿ ಆಸ್ಪತ್ರೆಗಳಿಗೆ ವರದಾನ ಆಗಿಬಿಟ್ಟಿದೆ. ಇಂಥದ್ದಕ್ಕೆ ಕಡಿವಾಣ ಹಾಕಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಡಾ|| ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಆ ರೀತಿಯ ದೂರುಗಳು ಮಾನ್ಯ ಸದಸ್ಯರ ಹತ್ತಿರ ಇದ್ದು, ಅದನ್ನು ನಮ್ಮ ಗಮನಕ್ಕೆ ತಂದರೆ ಖಂಡಿತವಾಗಿ ಅಂಥವರ ಮೇಲೆ ಕ್ರಮ ಕೈಗೊಳ್ಳುತ್ತೇವೆ. ಈ ನಿಟ್ಟಿನಲ್ಲಿ ಎಚ್ಚರ ವಹಿಸುವುದಕ್ಕೆ ನಮ್ಮ ಸರ್ಕಾರಿ ಭಾಗದ ಎಲ್ಲಾ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಗುಣಮಟ್ಟದ ಚಿಕಿತ್ಸೆ ಆಗಲಿಲ್ಲ ಎಂದು ನಾವುಗಳು ಈ ಸದನದಿಂದ ಹೇಳುವುದು ಬೇಡ. ರಾಜ್ಯದಲ್ಲಿ ಲಕ್ಷಾಂತರ ಜನ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ; ಗುಣಮುಖರಾಗಿದ್ದಾರೆ. ಪ್ರಾರಂಭದಲ್ಲಿ, ಪಾಸಿಟಿವ್ ಬಂದಂಥ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗರ್ಭಿಣಿಯವರಿಗೆ ಹೆರಿಗೆ ಮಾಡುವುದಕ್ಕೆ ಯಾರು ಮುಂದೆ ಬಂದಿರಲಿಲ್ಲ. ಉದಾಹರಣೆಗೆ ಹೇಳುವುದಾದರೆ, ವಿಕ್ಟೋರಿಯಾ ಮತ್ತು ವಾಣಿವಿಲಾಸ ಆಸ್ಪತ್ರೆಗಳೇನಿವೆ, ಅಲ್ಲಿ ಸುಮಾರು 200 ರಿಂದ 300 ಕೋವಿಡ್ ಪಾಸಿಟಿವ್ ಬಂದ ಗರ್ಭಿಣಿಯರಿಗೆ ಹೆರಿಗೆ ಮಾಡಿ, ಅದರಲ್ಲಿ ಎಲ್ಲಾ ಮಕ್ಕಳಿಗೂ ಕೋವಿಡ್ ನೆಗೆಟಿವ್ ಬಂದಿರುವಂಥದ್ದೂ ಇದೆ. ಹಾಗಾಗಿ, ನಾವು ಅವರ ಆತ್ಮಸ್ಥೈರ್ಯವನ್ನು ಕುಗ್ಗಿಸುವಂತಹ ಕೆಲಸ ಮಾಡುವುದು ಬೇಡ. ಈ ನಿಟ್ಟಿನಲ್ಲಿ ಏನಾದರೂ ನ್ಯೂನತೆಗಳಿದ್ದರೆ ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ವ್ಯವಸ್ಥೆಯನ್ನು ಸರಿ ಮಾಡುವಂತಹ ದಾರಿಯಲ್ಲಿ ನಾವಿದ್ದೇವೆ.

(ಮುಂದು)

**(980) 7-12-2020 5.00 ಡಿಎಸ್-ಜಿಆರ್**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಯಾವುದಾದರು ನಿರ್ದಿಷ್ಟ ಪ್ರಕರಣವಿದ್ದರೆ ಕೊಡಿ ಎಂದು ಮಾನ್ಯ ಸಚಿವರು ಹೇಳಿದರು. ಉದಾಹರಣೆಗೆ ಹಳೇ ಏರ್‌ಪೋರ್ಟ್ ರಸ್ತೆಯಲ್ಲಿರುವಂತಹ ಮಣಿಪಾಲ್ ಆಸ್ಪತ್ರೆಯಲ್ಲಿ ಸುಮಾರು ರೋಗಿಗಳು ಅಡ್ಮಿಟ್ ಆಗಿ ಲಕ್ಷಾಂತರ ರೂಪಾಯಿ ಬಿಲ್ ಕಟ್ಟಿರುವುದನ್ನು ತಂದು ಕೊಟ್ಟರೆ ಸರ್ಕಾರ ಹಣವನ್ನು ವಾಪಸ್ ಕೊಡುತ್ತದೆಯೇ? Guarantee ನಾ ಇದು? ನಾನೇ ಈ ರೀತಿಯ ಪ್ರಕರಣಗಳನ್ನು ತಂದುಕೊಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಸಚಿವರು ತಲೆಯನ್ನಾಡಿಸಿದರು)

**Sri M.NARAYANASWAMY:-** Thank you Sir.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇಂತಹ thousands and thousands of cases ಇವೆ. ಮಾನ್ಯ ಸಚಿವರು ಸದನದಲ್ಲಿ ಉತ್ತರವನ್ನು ಕೊಡುತ್ತಿದ್ದಾರೆ.

**ಡಾ||ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ನಾವು mistakes ಏನು ಮಾಡುತ್ತಿದ್ದೇವೆಂದರೆ, ಸರ್ಕಾರದ ವ್ಯವಸ್ಥೆಯಿಂದ ನೋಂದಣಿ ಮಾಡಿಸಿಕೊಂಡು ಹೋದರೆ ಅಂಥವರಿಗೆ ಯಾವುದೇ ರೀತಿಯ ದರವನ್ನು ನಿಗದಿ ಮಾಡುವಾಗಿಲ್ಲ, ಹಣವನ್ನು ತೆಗೆದುಕೊಳ್ಳುವ ಹಾಗಿಲ್ಲ. ಅದು ಸರ್ಕಾರಿ ಇರಲಿ, ಖಾಸಗಿ ಇರಲಿ. ಆದರೆ, ನೇರವಾಗಿ ಅವರೇ ಹೋಗಿ ದಾಖಲಾದರೆ ಅದಕ್ಕೂ ಕೂಡ ಪರಿಷ್ಕೃತವಾದ ದರವನ್ನು ನಾವು ನಿಗದಿ ಮಾಡಿದ್ದೇವೆ. ಅದನ್ನು ಮೀರಿ ತೆಗೆದುಕೊಂಡರೆ ಅದು ತಪ್ಪಾಗುತ್ತದೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ KPML Act ಪ್ರಕಾರ ನಮಗೆ ಕಾನೂನಿನಲ್ಲಿ ಅವಕಾಶ ಇದೆ. ನಾವೇನು ನಿಗದಿ ಮಾಡಿದ್ದೇವೆ ಅದಕ್ಕಿಂತ ಹೆಚ್ಚಿಗೆ ನಿಗದಿ ಮಾಡಿದ್ದರೆ ಖಂಡಿತವಾಗಿಯೂ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಅವರು ಸ್ವಾಭಾವಿಕವಾಗಿ ಹಣ ವಾಪಸ್ ಮಾಡಲೇಬೇಕು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ:-** ನನ್ನ ಹತ್ತಿರ ಈ ರೀತಿಯ ಪ್ರಕರಣಗಳಿವೆ, ನಾನು ತಮಗೆ ತಂದುಕೊಡುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಕೋವಿಡ್ ರೋಗಿಯಾಗಿ ಅಡ್ಮಿಟ್ ಆಗಿದ್ದೆ. ನಾನು ಮಾನ್ಯ ಸಚಿವರಿಗೆ ಫೋನ್ ಮಾಡಿದ್ದೆ. ಆ ಸಮಯದಲ್ಲಿ ಮಾನ್ಯ ಸಚಿವರು ನನಗೆ ಧೈರ್ಯ ತುಂಬಿದರು. ನಾನು ಕೂಡ ಲಕ್ಷಾಂತರ ರೂಪಾಯಿ ಆಸ್ಪತ್ರೆಗೆ ಕಟ್ಟಿದ್ದೇನೆ. ಒಂದು ತಿಂಗಳಾದ ಮೇಲೆ ಟಿ.ವಿ. ಯಲ್ಲಿ ಎಂ.ಎಲ್.ಎ., ಎಂ.ಎಲ್.ಸಿ.,ಗಳ ಫೋಟೋವನ್ನು ಹಾಕಿ ಇವರೆಲ್ಲಾ ಕೋವಿಡ್ ಸಂತ್ರಸ್ಥರು ಎಂದು ಹೇಳುತ್ತಿದ್ದರು. ಹಣ ಮರುಪಾವತಿ ಮಾಡಿ ಎಂದು ನಾನು ಇಲ್ಲಿಗೆ ಅರ್ಜಿಯನ್ನೇ ಕೊಡಲಿಲ್ಲ. In thousands and thousands of cases, ಖಾಸಗಿ ಆಸ್ಪತ್ರೆಯಲ್ಲಿ ಹಣ ವಸೂಲಿ ಮಾಡಿದ್ದಾರೆ. ಮಾನ್ಯ ಸಚಿವರು ಸದನದಲ್ಲಿ ಮಾತು ಕೊಡುತ್ತಿದ್ದಾರೆ. ನಮ್ಮ ಊರ ಆಸ್ಪತ್ರೆಯಲ್ಲೇ ನೂರು ಪ್ರಕರಣವನ್ನು ತಂದುಕೊಡುತ್ತೇನೆ. ಅವರಿಗೆ ಹಣ ವಾಪಸ್ ಕೊಡುವಂತಹ ಕೆಲಸ ಆಗಬೇಕು. ಶ್ರೀಮತಿ ಪದ್ಮಾಕ್ಷಿಯವರ ಪ್ರಕರಣದಲ್ಲಿ ಹತ್ತೂವರೆ ಲಕ್ಷ ರೂಪಾಯಿ ಬಿಲ್ ಆಗಿತ್ತು. ಆ ಮಹಿಳೆ ಆರೂವರೆ ಲಕ್ಷ ರೂಪಾಯಿ ಬಿಲ್ ಕಟ್ಟಿದ್ದಾರೆ. ಆ ಮಹಿಳೆಗೆ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಸಚಿವರು ಹಣ ವಾಪಸ್ ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಈಗ ಸದನದಲ್ಲೂ ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ದಯಮಾಡಿ ಆ ರೀತಿಯ ಕಮಿಟ್ ಆಗಬೇಡಿ. ನಿರ್ದಿಷ್ಟವಾಗಿ ಅವರು ದೂರನ್ನು ಕೊಡಲಿ. Under which circumstance ಇಷ್ಟೊಂದು ಬಿಲ್ ಆಗಿದೆ ಎಂದು ನಾವು ಪರಾಮರ್ಶೆ ಮಾಡಬೇಕಲ್ಲವೇ? ಚಿಕಿತ್ಸೆ ಕೊಡುವುದಕ್ಕೆ ಅಷ್ಟು ಬಿಲ್ ಆಗಿರಬಹುದು, ಆಗಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಚಿಕಿತ್ಸೆ ಕೊಡದೆ ಬಿಲ್ ಮಾಡಿರುವಂತಹ ಉದಾಹರಣೆಗಳಿವೆ. ಕೆಲವೊಂದು ಸಲ ಚಿಕಿತ್ಸೆ ಕೊಟ್ಟು ಬಿಲ್ ಆಗಿರುವಂಥದ್ದು ಇದೆ. ಅದನ್ನು ಪರಾಮರ್ಶಿಸಬೇಕಾಗುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, enrolment ಮಾಡಿಸಿ ಖಾಸಗಿ ಆಸ್ಪತ್ರೆಗೆ ಹೋಗಬೇಕೆನ್ನುವ ಷರತ್ತು ಇದೆ. ಅದನ್ನು ತೆಗೆಯಿರಿ. ಬಹಳ ಜನರಿಗೆ enrolment ಮಾಡಿಸಬೇಕೆನ್ನುವುದು ಗೊತ್ತೇ ಇಲ್ಲ. ಎಲ್ಲಾದರೂ ಹೋಗಲಿ, ಅವರಿಗೆ ಒಂದು ಮಾರ್ಗಸೂಚಿಯನ್ನು ಕೊಟ್ಟು ದರವನ್ನು ನಿಗದಿ ಮಾಡಿ. Enrolment ಮಾಡಿಸಿದವರಿಗೆ ಒಂದು ಬೆಲೆ, ಮಾಡಿಸದಿದ್ದವರಿಗೆ ಒಂದು ಬೆಲೆ ಏಕೆ? ಆ ರೀತಿಯ ತಾರತಮ್ಯ ಏಕೆ? ಎಲ್ಲಾದರೂ ಹೋಗಲಿ ಒಂದು ಬೆಲೆಯನ್ನು ನಿಗದಿ ಮಾಡಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ॥ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಇವತ್ತು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಅಡಿಯಲ್ಲಿ ಬಿಲ್‌ಗಳನ್ನು ಕೊಡುವುದಕ್ಕಿಂತ ಮುಂಚೆ, ಈಗ ನಾನು ಆರೋಗ್ಯ ಇಲಾಖೆಯನ್ನು ವಹಿಸಿಕೊಂಡ ಮೇಲೆ ವಿಶೇಷವಾಗಿ ಕಾನೂನಿನಲ್ಲಿ ಬದಲಾವಣೆಯನ್ನು ತಂದಿದ್ದೇವೆ. ಮೊದಲು ಬಿಲ್‌ಗಳನ್ನು ಹಾಗೆ ಕೊಡುತ್ತಿದ್ದೆವು. ಈಗ ಏನು ಮಾಡಿದ್ದೇವೆಂದರೆ, ಅಲ್ಲಿ ಗುಣಮುಖವಾಗಿರುವಂತಹ ರೋಗಿಯ ಜೊತೆಯಲ್ಲೇ ಮಾತನಾಡಿಕೊಂಡು ಅವರ endorsement ತೆಗೆದುಕೊಂಡಾದ ಮೇಲೆ ಬಿಲ್‌ನ್ನು ಕ್ಲಿಯರ್ ಮಾಡುವಂತಹ ಪದ್ಧತಿಯನ್ನು ತಂದಿದ್ದೇವೆ. ಕಳೆದ ಎರಡು ತಿಂಗಳುಗಳಿಂದ ಇದನ್ನು ಮಾಡುತ್ತಾ ಬಂದಿದ್ದೇವೆ. ಏಕೆ ನೋಂದಣಿ ಮಾಡದಿರುವಂಥವರಿಗೆ ಆ ಅವಕಾಶವಿಲ್ಲವೆಂದರೆ ಇವತ್ತು ಆರ್ಥಿಕವಾಗಿ ಚೆನ್ನಾಗಿರುವಂಥವರು ಅವರು ನಮಗೆ ಸರ್ಕಾರದ ಯಾವುದೇ ಸಹಕಾರ ಬೇಕಾಗಿಲ್ಲವೆಂದು ನೇರವಾಗಿ ದಾಖಲಾಗುತ್ತಾರೆ. ಅಂಥವರಿಗೆ S.A.S.T., ನಿಂದ ನಾವು ಕೊಡಬೇಕಾಗಿಲ್ಲ. ಯಾರು ಬಡತನ ರೇಖೆಗಿಂತ ಕೆಳಗಡೆ ಇರುತ್ತಾರೆ, ಅಂಥವರು ಮೊದಲು ಸರ್ಕಾರಿ ಆಸ್ಪತ್ರೆಗೆ ಬರುತ್ತಾರೆ, ನಮ್ಮಲ್ಲಿ ವ್ಯವಸ್ಥೆ ಏನಾದರೂ ತುಂಬಿದ್ದರೆ ಅಂಥವರಿಗೆ ನಾವೇ referral ಮಾಡಿ ಹತ್ತಿರ ಇರತಕ್ಕಂಥ ಖಾಸಗಿ ಆಸ್ಪತ್ರೆಗಳಲ್ಲಿ ನಾವು ದಾಖಲು ಮಾಡುತ್ತೇವೆ. ಎ.ಪಿ.ಎಲ್., ನವರು ಯಾರು ಸರ್ಕಾರದ ವ್ಯವಸ್ಥೆಯಿಂದ ಅಥವಾ ಸರ್ಕಾರದ ಸಹಕಾರದಿಂದ ಚಿಕಿತ್ಸೆ ತೆಗೆದುಕೊಳ್ಳಬೇಕೆನ್ನುವಂಥವರಿಗೂ ಕೂಡ ಇವತ್ತು ನಾವು referral ಅನ್ನು ಮಾಡುತ್ತೇವೆ. ಇಡೀ ದೇಶದಲ್ಲಿ ಕರ್ನಾಟಕ ರಾಜ್ಯ ಒಂದೇ ಎಪಿಎಲ್ ನವರಿಗೂ ಶೇಕಡ 30 ರಷ್ಟು ವಿಮೆಯನ್ನು ಇವತ್ತು ರಾಜ್ಯ ಸರ್ಕಾರ ನೂರು ಪರ್ಸೆಂಟ್ ಭರಿಸುತ್ತಿದೆ. 1 ಕೋಟಿ 15 ಲಕ್ಷ ಕುಟುಂಬಗಳಿಗೆ ಈ ರಾಜ್ಯದಲ್ಲಿ 'ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ' ಅಡಿಯಲ್ಲಿ ವಿಮೆಯನ್ನು ಕೊಟ್ಟಿದ್ದರೆ ಅದು ರಾಜ್ಯ ಸರ್ಕಾರವೆಂದು ನಮಗೆಲ್ಲರಿಗೂ ಹೆಮ್ಮೆ ಇರಬೇಕಾಗುತ್ತದೆ. ಕೆಲವು ನ್ಯೂನತೆಗಳಾಗಿವೆ. ಕೆಲವು ಖಾಸಗಿ ಆಸ್ಪತ್ರೆಯವರು ಉದ್ದೇಶ ಪೂರ್ವಕವಾಗಿ ಅಕ್ರಮವಾಗಿ ಹಣ ಗಳಿಸುವುದಕ್ಕೆ ಮಾಡಿದ್ದಾರೆ. 121 ಜನರ ವಿರುದ್ಧ ದೂರು ಬಂದಿದೆ. 121 ಜನರ ಮೇಲೂ ಕೂಡ ಕ್ರಮವನ್ನು ತೆಗೆದುಕೊಂಡಿದ್ದೇವೆ. ಈಗಾಗಲೇ ಅವರಿಗೆ ನೋಟಿಸ್‌ನ್ನು ಕೊಟ್ಟಿದ್ದೇವೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸರ್ಕಾರದಲ್ಲಿ ನೋಂದಣಿ ಮಾಡಿಕೊಂಡರೆ ಅದರ ಮುಖಾಂತರವಾಗಿ ಹತ್ತಿರ ಇರತಕ್ಕಂಥ ಖಾಸಗಿ ಆಸ್ಪತ್ರೆಗಳಿಗೆ ರೆಫರ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ನಮ್ಮ ಗಮನಕ್ಕೆ ಬಂದಿರುವ ಪ್ರಕಾರ ಈಗ ಎರಡು ತಿಂಗಳುಗಳಿಂದ ನಿಲ್ಲಿಸಿದ್ದಾರೆ. ಯಾರು ಸರ್ಕಾರದ ಮುಖಾಂತರ ನೋಂದಣಿ ಮಾಡಿಸಿಕೊಳ್ಳುತ್ತಾರೆ ಅವರಿಗೆ ಸರ್ಕಾರಿ ಆಸ್ಪತ್ರೆಗಳಿಗೆ ಕಳುಹಿಸುತ್ತಿದ್ದಾರೆ. ಖಾಸಗಿ ಆಸ್ಪತ್ರೆಗೆ ಕಳುಹಿಸುವುದನ್ನು ಈಗ ನಿಲ್ಲಿಸಿದ್ದಾರೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ||ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಮಾನ್ಯ ನಾರಾಯಣಸ್ವಾಮಿಯವರು ಹೇಳಿದ ಹಾಗೆ ಎರಡು ತಿಂಗಳಿಗಳಿಂದ ನಮ್ಮ positivity ಏನಿದೆ ಎರಡು ತಿಂಗಳ ಹಿಂದೆ 14-19 ಪರ್ಸೆಂಟ್ ಇದ್ದದ್ದು ಈಗ ಹದಿನೈದು ದಿವಸಗಳಿಂದ ಕೇವಲ 1.2 ಪರ್ಸೆಂಟ್‌ಗೆ ಬಂದಿದೆ. ಹಾಗಾಗಿ ಟೆಸ್ಟಿಂಗ್ ಮಾಡುವುದು ಯಾವ ರಾಜ್ಯದಲ್ಲಾದರೂ ಕಡಿಮೆಯಾಗಿರಬಹುದು, ಆದರೆ ಕರ್ನಾಟಕ ರಾಜ್ಯದಲ್ಲಿ ಟೆಸ್ಟಿಂಗ್ ಮಾಡುವುದು ಹೆಚ್ಚಾಗುತ್ತಿದೆ. ಇವತ್ತಿಗೂ ಕೂಡ 1,25,000 ಜನರಿಗೆ ಪ್ರತಿ ದಿನ ಟೆಸ್ಟಿಂಗ್ ಮಾಡುತ್ತಿದ್ದೇವೆ. ಅದರಲ್ಲಿ ಶೇಕಡ 80 ರಿಂದ 90 ರಷ್ಟು RTPCR ಟೆಸ್ಟ್ ಮಾಡುತ್ತಿದ್ದೇವೆ. ನಮ್ಮ ಮಾರ್ಗಸೂಚಿಯಲ್ಲಾಗಲಿ, ನಿಯಂತ್ರಣ ಸಾಧನೆಗಳಲ್ಲಿ ಯಾರಿಗೂ ಶಂಕೆ ವ್ಯಕ್ತಪಡಿಸುವ ಅವಶ್ಯಕತೆ ಇಲ್ಲ. ಏಕೆಂದರೆ, ನಾವು ಬಹಳಷ್ಟು ಕಠಿಣವಾಗಿ ನಿರ್ವಹಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆ ಕಾರಣಕ್ಕಾಗಿ ಇಡೀ ದೇಶದಲ್ಲೇ ಕಳೆದ ಎರಡು ತಿಂಗಳನ್ನು ಗಮನಿಸಿದರೆ ಕರ್ನಾಟಕದಲ್ಲಿ positivity rate ಇರಬಹುದು, case fatality rate ಇರಬಹುದು, ಎಲ್ಲಾ ರಾಜ್ಯಕ್ಕಿಂತ ಇವತ್ತು ಕಡಿಮೆಯಾಗಿದೆ. ಇವತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಏಕೆ ದಾಖಲಿಸುತ್ತಿದ್ದೇವೆಂದರೆ, ನಮ್ಮ ವ್ಯವಸ್ಥೆಯಲ್ಲಿ ಅನೇಕ ಹಾಸಿಗೆಗಳು ಇವತ್ತು ಖಾಲಿ ಇವೆ. ಅಂತಹ ಸಂದರ್ಭದಲ್ಲಿ ಖಾಸಗಿ ಆಸ್ಪತ್ರೆಗಳಿಗೆ ದಾಖಲಿಸಿ ಹಣ ಕೊಡುವಂತಹ ಅವಶ್ಯಕತೆ ಇಲ್ಲ. ನಮ್ಮಲ್ಲೂ ಒಳ್ಳೆಯ ಪರಿಣಿತರಿದ್ದಾರೆ, ವ್ಯವಸ್ಥೆ ಇದೆ, ಉಪಕರಣಗಳನ್ನು ಸುಸಜ್ಜಿತಗೊಳಿಸಿದ್ದೇವೆ. ಸುಮಾರು 30,000 ದಿಂದ 35,000 ಹಾಸಿಗೆಗಳಿಗೆ ಆಕ್ಸಿಜನ್ ಅನ್ನು ಜೋಡಿಸಿದ್ದೇವೆ. ಹಾಗಾಗಿ ಈ ತಕ್ಷಣಕ್ಕೆ ಯಾವುದೇ ಕೊರತೆ ಇಲ್ಲ. ಇವತ್ತೇನಾದರೂ ಎರಡನೇ ಅಲೆ ಬಂದರೆ ಅದಕ್ಕೆ ಯಾವ ರೀತಿ ಸಿದ್ಧತೆಗೊಳಿಸಬೇಕೆನ್ನುವ ಪ್ರಕಾರ ನಾವು ಅದಕ್ಕೂ ಸಿದ್ಧತೆಯನ್ನು ಮಾಡಿಕೊಂಡಿದ್ದೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ:84**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅರವಿಂದ ಕುಮಾರ ಅರಳಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇದಕ್ಕೆ ಕಾರಣವೇನೆಂದರೆ, ನಾನು ಕಳೆದ ಅಧಿವೇಶನದಲ್ಲಿ ಅವರ ಗಮನ ಸೆಳೆದಾಗ ಅದಕ್ಕೆ ಸ್ಪಂದಿಸಿ ಮಾನ್ಯ ಸಚಿವರು ಅಲ್ಲಿಗೆ ಬಂದು ಇನ್ಸ್‌ಪೆಕ್ಷನ್ ಮಾಡಿದರು. ಆದರೆ ಅವರು ಯಾವ್ಯಾವ ಶಾಲೆಗೆ ಹೋಗ್ಗಿದ್ದರೋ ಆ ತಗಡಿನ ಶಾಲೆಗಳಲ್ಲಿ ಮೂಲ ಸೌಕರ್ಯಗಳಿಲ್ಲ ಎಂದು ಅವರು ಕೂಡ ಗಮನ ಹರಿಸಿದ್ದರು. ಅದಕ್ಕೆ ಅವರು ದುಃಖ ಕೂಡ ವ್ಯಕ್ತಪಡಿಸಿದ್ದರು. ಆದರೆ, ಇವತ್ತು ನಾನು ಕೇಳಿದಂತಹ ಪ್ರಶ್ನೆಗೆ ನಮ್ಮ ಜಿಲ್ಲೆಯಲ್ಲಿ ಸುಮಾರು 800 ಖಾಸಗಿ ಶಾಲೆಗಳಿವೆ. ಅದರಲ್ಲಿ ಮೂಲಭೂತ ಸೌಕರ್ಯಗಳಿಲ್ಲದ್ದಂತಹ ಶಾಲೆಗಳು ಕೇವಲ 127 ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಆದರೆ, ನನ್ನ ಮಾಹಿತಿ ಪ್ರಕಾರ 230 ಕ್ಕಿಂತ ಹೆಚ್ಚು ಶಾಲೆಗಳು ಇವೆ. ಅದಕ್ಕೆ ಅವರು ಸರಿಯಾದ ಉತ್ತರ ಕೊಟ್ಟಿಲ್ಲ. ಅಧಿಕಾರಿಗಳು ಮಾನ್ಯ ಸಚಿವರ ಕೈಯಲ್ಲಿ ತಪ್ಪು ಮಾಹಿತಿಯನ್ನು ಕೊಡಿಸಿದ್ದಾರೆಂದು ನಾನು ಭಾವಿಸಿದ್ದೇನೆ. ಈ ಶಾಲೆಗಳಿಗೆ ಮೂಲಭೂತ ಸೌಕರ್ಯಗಳಿಲ್ಲದಿದ್ದರೆ ಯಾವ ರೀತಿ ಕ್ರಮ ಕೈಗೊಳ್ಳುತ್ತಾರೆಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು 2018, 2019 ರ ಸುತ್ತೋಲೆಯನ್ನು ಉತ್ತರದಲ್ಲಿ ಕೊಟ್ಟಿದ್ದಾರೆ. ಇದು ಹಾರಿಕೆಯ ಉತ್ತರವೆಂದು ಕಾಣುತ್ತಿದೆ. ಈ ಸುತ್ತೋಲೆಗಳ ಪ್ರಕಾರ ಏನು ಶಾಲೆಗಳನ್ನು ನಿರ್ಮಾಣ ಮಾಡಿ ಮೂಲ ಸೌಕರ್ಯ ಕೊಟ್ಟಿದ್ದಾರೆ ಆ ಬಗ್ಗೆ ಅವರಿಗೆ ಗೊತ್ತಿದ್ದರೂ ಕೂಡ ಏನು ಕ್ರಮ ತೆಗೆದುಕೊಂಡಿಲ್ಲ. ನನ್ನ ಮೂರನೇ ಪ್ರಶ್ನೆ, ಖಾಸಗಿ ಶಾಲೆಯಲ್ಲಿ ಆರ್.ಟಿ.ಇ., ವಿದ್ಯಾರ್ಥಿಗಳಿಗೆ 1 ರಿಂದ 5ನೇ ತರಗತಿಯವರೆಗೆ ಪರವಾನಿಗೆ ಇರುತ್ತದೆಯೋ ಅಲ್ಲಿ 6, 7ನೇ ತರಗತಿಗೆ ಆರ್.ಟಿ.ಇ., ವಿದ್ಯಾರ್ಥಿಗಳಿಂದ ಶುಲ್ಕವನ್ನು ತೆಗೆದುಕೊಂಡಿದ್ದಾರೆ. ಅದರ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಂಡಿದ್ದಾರೆಂದು ಪ್ರಶ್ನೆಯನ್ನು ಕೇಳಿದ್ದೆ.

(ಮುಂದು)

**(981)/07.12.2020/5.10/ಬಿ.ಕೆ.ಪಿ-ಜಿ.ಆರ್**
**ಶ್ರೀ ಅರವಿಂದ ಕುಮಾರ ಅರಳಿ(ಮುಂದುವರೆದುದು)**

ಸನ್ಮಾನ್ಯ ಸಭಾಪತಿಯವರೇ, ಇದರಲ್ಲಿ ಒಬ್ಬ ಬಿ.ಇ.ಓ. ಅವರನ್ನು ಮಾತ್ರ ತನಿಖೆಗೆ ಒಳಪಡಿಸಲಾಗಿದೆ ಎನ್ನುವ ಉತ್ತರವನ್ನು ಮಾನ್ಯ ಸಚಿವರು ನೀಡಿದ್ದಾರೆ. ಆದರೆ, ಎಲ್ಲಾ ತಾಲ್ಲೂಕುಗಳಲ್ಲಿ ಆರ್.ಟಿ.ಇ., ಶುಲ್ಕವನ್ನು ಕೊಟ್ಟಿದ್ದಾರೆ. ನನ್ನ ಹತ್ತಿರ ಬೀದರ್ ಜಿಲ್ಲೆಗೆ ಸಂಬಂಧಪಟ್ಟಂತೆ ಬಿ.ಇ.ಓ., ಮತ್ತು ಡಿ.ಡಿ.ಪಿ.ಐ., ಅವರು ಕೊಟ್ಟಿರುವಂತಹ ದಾಖಲೆ ನನ್ನ ಹತ್ತಿರ ಇದೆ. 6ನೇ ತರಗತಿಯಲ್ಲಿರುವ 171 ವಿದ್ಯಾರ್ಥಿಗಳು ಮತ್ತು 7ನೇ ತರಗತಿಯಲ್ಲಿರುವ ಸುಮಾರು 274 ಜನ ವಿದ್ಯಾರ್ಥಿಗಳು ಶುಲ್ಕ ಪಾವತಿ ಮಾಡಿದ್ದಾರೆ. ಇಂತಹ ಅಧಿಕಾರಿಗಳ ಮೇಲೆ ಏತಕ್ಕೋಸ್ಕರ ಕ್ರಮ ತೆಗೆದುಕೊಳ್ಳಲಿಲ್ಲವೆನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಎಸ್.ಸುರೇಶ್ ಕುಮಾರ್:–** ಸನ್ಮಾನ್ಯ ಸಭಾಪತಿಯವರೇ, ನನಗೆ ಲಭ್ಯವಿರುವ ವರದಿಯ ಪ್ರಕಾರ ಸುಮಾರು 127 ಶಾಲೆಗಳಲ್ಲಿ ಮೂಲಸೌಲಭ್ಯಗಳು ಇಲ್ಲ. ಪ್ರತಿ ಶಾಲೆಗಳ ನೋಂದಣಿ ನವೀಕರಣ ಮಾಡುವಂತಹ ಸಂದರ್ಭದಲ್ಲಿ ಮೂಲಸೌಲಭ್ಯಗಳಿಗೆ ಸಂಬಂಧಪಟ್ಟಂತೆ ಮಾಹಿತಿಯನ್ನು ಒದಗಿಸಬೇಕಾಗುತ್ತದೆ. ಪ್ರತಿ ವರ್ಷ ಏಪ್ರಿಲ್–ಮೇ ತಿಂಗಳೊಳಗಾಗಿ ಮೂಲ ಸೌಲಭ್ಯಗಳನ್ನು ಒದಗಿಸದೇ ಇರುವಂತಹ ಶಾಲೆಗಳನ್ನು ಮುಚ್ಚಿಸುತ್ತೇವೆ. ಮೂಲಸೌಲಭ್ಯವಿಲ್ಲವೆಂದು ಶಾಲೆಗಳನ್ನು ಕ್ಲೋಸ್ ಮಾಡಿದಾಗ, ಮಾನ್ಯ ಶಾಸಕರುಗಳೇ ಬಂದು 'ಮಕ್ಕಳಿಗೆ ತೊಂದರೆಯಾಗುತ್ತಿದೆ' ಎನ್ನುವ ಆರೋಪವನ್ನು ಮಾಡುತ್ತಾರೆ. ಈ 127 ಶಾಲೆಗಳಲ್ಲಿ ಯಾವ ಶಾಲೆಯವರು ಮೂಲಸೌಲಭ್ಯಗಳನ್ನು ಒದಗಿಸುವುದಿಲ್ಲ ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಆರ್.ಟಿ.ಇ., ಗೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರ ಬಳಿ ಇರುವಂತಹ ದಾಖಲೆಯನ್ನು ನನಗೆ ಕೊಟ್ಟರೆ, ತಕ್ಷಣ ನಾನು ತನಿಖೆ ಮಾಡಿಸುತ್ತೇನೆ.

**ಶ್ರೀ ಅರವಿಂದ ಕುಮಾರ್ಅರಳಿ(ವಿಧಾನಸಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಎಸ್.ಎಸ್.ಎಲ್.ಸಿ., ಫಲಿತಾಂಶದಲ್ಲಿ ನಾವು ರಾಜ್ಯದಲ್ಲಿ ಬಹಳ ಹಿಂದುಳಿದಿದ್ದೇವೆ ಎನ್ನುವ ಕೆಟ್ಟ ಹಣೆ ಪಟ್ಟಿಯಿದೆ. ಈ ರೀತಿಯಾಗುವುದಕ್ಕೆ ಕಾರಣವೇನೆಂದರೆ, ಮೂಲಸೌಲಭ್ಯಗಳು ಇಲ್ಲದ ಶಾಲೆಗಳಲ್ಲಿ ವಿದ್ಯಾರ್ಥಿಗಳು ಓದುವುದರಿಂದ ಅವರಿಗೆ ಸರಿಯಾದಂತಹ ಶಿಕ್ಷಣ ದೊರೆಯುವುದಿಲ್ಲ. ಈ ಕಾರಣದಿಂದಾಗಿ ಫಲಿತಾಂಶ ಸರಿಯಾಗಿ ಬರುವುದಿಲ್ಲ. ಈ ಹಿನ್ನೆಲೆಯಲ್ಲಿ ಮಾನ್ಯ ಸಚಿವರಲ್ಲಿ ನನ್ನ ಕಳಕಳಿಯಾದ ಮನವಿ ಏನೆಂದರೆ, ಇಂತಹ ಶಾಲೆಗಳಿಗೆ, 'ಉತ್ತಮ ಕಟ್ಟಡಗಳನ್ನು ಕಟ್ಟಿ ಉತ್ತಮ ಮೂಲಸೌಲಭ್ಯಗಳನ್ನು ಒದಗಿಸಿಕೊಡಬೇಕು' ಎಂದು ಸರ್ಕಾರ ಗಂಭೀರವಾಗಿ ಸೂಚನೆಯನ್ನು ನೀಡಬೇಕಾಗುತ್ತದೆ. ಮೂಲಸೌಲಭ್ಯಗಳಿಲ್ಲದ ಖಾಸಗಿ ಶಾಲೆಗಳು ಇರುವಂತಹ ಸ್ಥಳದಲ್ಲಿ ಸರ್ಕಾರಿ ಶಾಲೆಗಳಿವೆ ಅವು ಕ್ಲೋಸ್ ಆಗುತ್ತಿವೆ ಅಥವಾ 3–5 ಜನ ವಿದ್ಯಾರ್ಥಿಗಳು ಮಾತ್ರ ಇರುತ್ತಾರೆ. ಶಿಕ್ಷಕರು ಮಾತ್ರ 4–5 ಜನ ಇರುತ್ತಾರೆ. ಇಂತಹ ಶಾಲೆಗಳಲ್ಲಿ ಇರುವಂತಹ ಶಿಕ್ಷಕರನ್ನು ಬೇರೆ ಶಾಲೆಗಳಿಗೆ ಯಾಕೆ ಶಿಫ್ಟ್ ಮಾಡಬಾರದೆನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಎಸ್.ಸುರೇಶ್ಕುಮಾರ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ವಿಚಾರವನ್ನು ನಾನು ಸಂಪೂರ್ಣ ಒಪ್ಪುತ್ತಿದ್ದೇನೆ. ಈ ಕುರಿತು ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಶಿಕ್ಷಣ ಮಕ್ಕಳ ಮೂಲಭೂತ ಹಕ್ಕಾಗಿರುವ ರೀತಿಯಲ್ಲಿಯೇ ಮೂಲಸೌಲಭ್ಯಗಳಿಂದ ಕೂಡಿರುವ ಶಾಲೆಗಳು ಸಹ ಮಕ್ಕಳ ಹಕ್ಕಾಗಿದೆ. ಅದು ಅವರಿಗೆ ದೊರಕಲೇ ಬೇಕಾಗಿದೆ. ಈ ನಿಟ್ಟಿನಲ್ಲಿ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಆರ್.ಟಿ.ಇ., ಗೆ ಸಂಬಂಧಪಟ್ಟ ಮಾಹಿತಿಯನ್ನು ಮಾನ್ಯ ಸದಸ್ಯರು ನನಗೆ ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ಮಾನ್ಯ ಅರುಣ ಶಹಾಪುರ್ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:11(01)ಕ್ಕೆ ಸರ್ಕಾರ ಕಾಲಾವಕಾಶವನ್ನು ಕೇಳಿದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ: 42**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್.ಅಪ್ಪಾಜಿಗೌಡ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಕೇಳಿರುವ ಪ್ರಶ್ನೆ ನೇರವಾಗಿದೆ. ಆದರೆ, ಅಧಿಕಾರಿಗಳು ಮಾನ್ಯ ಮಂತ್ರಿಗಳಿಗೆ ಯಾವ ರೀತಿಯಲ್ಲಿ ತಿರುಚಿ ಉತ್ತರ ಕೊಟ್ಟಿದ್ದಾರೆ ಎನ್ನುವುದಕ್ಕೆ ಇದೊಂದು ಉದಾಹರಣೆಯಾಗಿದೆ. ಅರಣ್ಯ ಇಲಾಖೆಯ ವಿವಿಧ ವೃಂದಗಳ ಜ್ಯೇಷ್ಠತಾ ಪಟ್ಟಿಯನ್ನು ಸರ್ಕಾರ ರಚಿಸಿದ ಸಮಿತಿಯ ವರದಿಯಂತೆ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಿದ್ದೆಯೇ ಎನ್ನುವ ನನ್ನ ಮೊದಲನೆಯ ಪ್ರಶ್ನೆಗೆ , 'ಸರ್ಕಾರ ರಚಿಸಿರುವ ಸಮಿತಿಯ ವರದಿಯನ್ನು ನೌಕರರ ಜೇಷ್ಠತಾ ಪಟ್ಟಿಯನ್ನು ತಯಾರಿಸುವಾಗ ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಸಂಬಂಧಿಸಿದ ಸಕ್ಷಮ ಪ್ರಾಧಿಕಾರಿಗಳಿಗೆ ಸೂಚಿಸಲಾಗಿತ್ತು. ಅದರಂತೆ ಎಲ್ಲಾ ಸಕ್ಷಮ ಪ್ರಾಧಿಕಾರಿಗಳು ವಿಧಿ ವಿಧಾನಗಳಂತೆ ಜೇಷ್ಠತಾ ಪಟ್ಟಿಗಳನ್ನು ಅಧಿಸೂಚಿಸಿದ್ದಾರೆ' ಎನ್ನುವ ಉತ್ತರವನ್ನು ನೀಡಿದ್ದಾರೆ. ಈ ರೀತಿ ಆಗಿದ್ದರೆ, ವೃತ್ತ ಮತ್ತು ಜಿಲ್ಲೆಯ ನ್ಯಾಯಾಲಯಗಳಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಅನೇಕ ಪ್ರಕರಣಗಳು ಏಕೆ ದಾಖಲಾಗಿವೆ? ಉದಾಹರಣೆಗೆ ಹೇಳಬೇಕಾದರೆ, ಚಿಕ್ಕಮಗಳೂರು, ಬೆಂಗಳೂರು, ಬಳ್ಳಾರಿ, ಮಂಗಳೂರು, ಕೊಡಗು ಇನ್ನಿತರ ವೃತ್ತಗಳ ಬಾಧಿತ ನೌಕರರುಗಳು ಸಮಿತಿಯ ವರದಿಯ ಪ್ರಕಾರ ಜ್ಯೇಷ್ಠತಾ ಪಟ್ಟಿ ಪ್ರಕಟವಾಗಿಲ್ಲವೆಂದು ಅವರೆಲ್ಲರೂ ಕೋರ್ಟಿಗೆ ಹೋಗಿದ್ದಾರೆ. ನನ್ನ ಎರಡನೆಯ ಪ್ರಶ್ನೆ ಉಪ ವಲಯ ಅರಣ್ಯಾಧಿಕಾರಿ ವೃಂದದ ರಾಜ್ಯ ಮಟ್ಟದ ಸಂಯೋಜಿತ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸದಿರಲು ಕಾರಣವೇನು ಎನ್ನುವ ನನ್ನ ಪ್ರಶ್ನೆಗೆ, 'ಉಪ ವಲಯ ಅರಣ್ಯಾಧಿಕಾರಿ ವೃಂದದ ಜೇಷ್ಠತಾ ಪಟ್ಟಿಯನ್ನು ತಯಾರಿಸಲು ವೃತ್ತ ಮಟ್ಟದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ ಅರಣ್ಯ ಸಂರಕ್ಷಣಾಧಿಕಾರಿಗಳು ನೇಮಕಾತಿ ಪ್ರಾಧಿಕಾರಿಯಾಗಿದ್ದು, ಜೇಷ್ಠತಾ ಪಟ್ಟಿಗಳನ್ನು ಪ್ರಕಟಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ. ಅದರಂತೆ, ಸಕ್ಷಮ ಪ್ರಾಧಿಕಾರಿಗಳಾದ ಆಯಾ ವೃತ್ತಗಳ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು/ಅರಣ್ಯ ಸಂರಕ್ಷಣಾಧಿಕಾರಿಗಳು ಜೇಷ್ಠತಾ ಪಟ್ಟಿಗಳನ್ನು ಅನುಸೂಚಿಸಿರುವುದರಿಂದ ರಾಜ್ಯ ಮಟ್ಟದ ಸಂಯೋಜಿತ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಪ್ರಮೇಯ ಉದ್ಭವಿಸುವುದಿಲ್ಲ' ಎಂದು ಲಿಖಿತ ಉತ್ತರದಲ್ಲಿ ನೀಡಿದ್ದಾರೆ. ಆದರೆ, ಕರ್ನಾಟಕ ಆಡಳಿತ ಮಂಡಳಿಯ ಮುಂದೆ ದಾಖಲಿಸಿರುವ 3270/1996, 846/1996, 847/1996 ಮತ್ತು 1253 ರಿಂದ 1280/1996 2259 ಮತ್ತು 2262/1996 ಪ್ರಕರಣಗಳಲ್ಲಿ ದಿನಾಂಕ:01.08.2016ರಂದು ನೀಡಿರುವ ಆದೇಶದಲ್ಲಿ ಇಲಾಖೆಗಳ ಮುಖ್ಯಸ್ಥರು ಮತ್ತು ಉಪ ವಲಯ ಅರಣ್ಯ ಆಧಿಕಾರಿಗಳು ಸಂಯೋಜಿತ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಬೇಕೆಂದು ಇದೆ. ಈ ಮಟ್ಟದಲ್ಲಿ ಪ್ರಕಟಿಸಿದ ಸಂಯೋಜಿಸಿದ ಜೇಷ್ಠತಾ ಪಟ್ಟಿಯ ಆಧಾರದ ಮೇಲೆ ಇಲ್ಲಿಯವರೆಗೆ ವಲಯ ಅರಣ್ಯಾಧಿಕಾರಿ ವೃಂದಕ್ಕೆ ಮುಂಬಡ್ತಿ ನೀಡುತ್ತಿರುವುದು ಸತ್ಯ ಅಲ್ಲವೇ? ಹೀಗಿದ್ದರೂ ಸಹ ಉಪ ವಲಯ ಅರಣ್ಯ ಅಧಿಕಾರಿ ವೃಂದಕ್ಕೆ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸದೇ ಇರುವುದಕ್ಕೆ ನ್ಯಾಯಾಲಯದ ಆದೇಶವಿದೆಯೇ ಅಥವಾ ಸರ್ಕಾರದ ನಿರ್ದೇಶನವಿದೆಯೇ ಎನ್ನುವುದು ನನ್ನ ಉಪ ಪ್ರಶ್ನೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನು ಮೂರನೆಯದಾಗಿ, ವಲಯ ಅರಣಾಧಿಕಾರಿಗಳ ವೃಂದದ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಿ ಪ್ರಕಟಿಸುವಾಗ ಮುಂಬಡ್ತಿ ನೌಕರರ ಅಂತರ ಜೇಷ್ಠತೆಯನ್ನು ಪೋಷಕ ವೃಂದವಾದ ರಾಜ್ಯ ಮಟ್ಟದ ಸಂಯೋಜಿತ ಜೇಷ್ಠತಾ ಪಟ್ಟಿಯನ್ನು ಪರಿಗಣಿಸದೇ ಪಟ್ಟಿಯನ್ನು ತಯಾರಿಸಿರುವುದು ನಿಜವೇ; ಇದರಿಂದಾಗಿ ಅರಣ್ಯಾಧಿಕಾರಿಗಳು ಸೇವಾ ಸೌಲಭ್ಯಗಳಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವ ಪ್ರಶ್ನೆಗೆ, ' ಆಯಾ ವೃತ್ತಗಳ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು/ಅರಣ್ಯ ಸಂರಕ್ಷಣಾಧಿಕಾರಿಗಳು, ಅಧಿಸೂಚಿಸಿದ ಉಪ ವಲಯ ಅರಣ್ಯಾಧಿಕಾರಿಗಳ ಜೇಷ್ಠತಾ ಪಟ್ಟಿಗಳನ್ನು ಆಧರಿಸಿ ರಾಜ್ಯ ಮಟ್ಟದ ವಲಯ ಅರಣ್ಯಾಧಿಕಾರಿಗಳ ಜೇಷ್ಠತಾ ಪಟ್ಟಿಗಳನ್ನು ನಿಯಮಗಳಂತೆ ಸಿದ್ಧಪಡಿಸಲಾಗಿದೆ. ಅದರಂತೆ ಸಂಬಂಧಿಸಿದ ಅರಣ್ಯಾಧಿಕಾರಿಗಳಿಗೆ ಸೇವಾ ಸೌಲಭ್ಯಗಳನ್ನು ನೀಡಲಾಗಿದೆ.' ಎನ್ನುವ ಉತ್ತರವನ್ನು ನೀಡಲಾಗಿದೆ. 2020-21ನೇ ಸಾಲಿನಲ್ಲಿ ಅಖಿಲ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಧಿಕಾರಿಗಳು ಸಹ ಇದರ ಬಗ್ಗೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಹಿಂದೆ ಸದನದಲ್ಲಿ ನಾನು ಇದೇ ಪ್ರಶ್ನೆಯನ್ನು ಕೇಳಿದ್ದೆ. ಆಗ ಮಾನ್ಯ ಸಚಿವರು, 'ಇದನ್ನು ಸಿ.ಓ.ಡಿ. ತನಿಖೆಗೆ ವಹಿಸಲಾಗುತ್ತದೆ' ಎನ್ನುವ ಮಾತನ್ನು ಹೇಳಿದ್ದರು. ಇದರ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಬೆಳಕು ಚೆಲ್ಲಬೇಕು.

**ಶ್ರೀ ಆನಂದ್‌ಸಿಂಗ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹಿಂದಿನ ಅಧಿವೇಶನದಲ್ಲಿ ನಾನು ಇದೇ ಪ್ರಶ್ನೆಯನ್ನು ಕೇಳಿದ್ದೆ ಎನ್ನುವ ಮಾತನ್ನು ಹೇಳಿದ್ದಾರೆ. ಪವಿತ್ರ ಕೇಸ್ ಆದ ನಂತರ ಸುಮಾರು ವರ್ಷಗಳಿಂದ ಮುಂಬಡ್ತಿಯ ಪಟ್ಟಿ ನೆನಗುದಿಗೆ ಬಿದಿತ್ತು. ಆದರೆ, ಇದಕ್ಕೊಂದು ಸಮಿತಿಯನ್ನು ರಚನೆ ಮಾಡಲಾಗಿತ್ತು. ಆ ಸಮಿತಿಯಲ್ಲಿ ಕರ್ನಾಟಕ ರಾಜ್ಯದ ಅರಣ್ಯ ವೀಕ್ಷಕರ ಸಂಘದ ಅಧ್ಯಕ್ಷರು, ಉಪ ವಲಯ ಅರಣ್ಯ ಉಪ ಸಂರಕ್ಷಣಾಧಿಕಾರಿಗಳ ಸಂಘದ ಅಧ್ಯಕ್ಷರು, ವಲಯ ಅರಣ್ಯ ಅಧಿಕಾರಿಗಳ ಸಂಘದ ಅಧ್ಯಕ್ಷರು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ನಿವೃತ್ತ ಉಪ ಕಾರ್ಯದರ್ಶಿಗಳು ಮತ್ತು ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷರುಗಳನ್ನು ಒಳಗೊಂಡ ಒಂದು ಸಮಿತಿಯನ್ನು ರಚನೆ ಮಾಡಲಾಯಿತು. ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆ ಬಹಳ ಪ್ರಸ್ತುತವಾಗಿದೆ. ಏಕೆಂದರೆ, amalgamation ನಲ್ಲಿ ಸ್ಪಷ್ಟೀಕರಣ ಇಲ್ಲ ಎನ್ನುವುದು ಅವರ ಪ್ರಶ್ನೆಯಾಗಿದೆ. ಈ ಬಗ್ಗೆ ನಾನು ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿದ್ದೇನೆ. ಅಧಿಕಾರಿಗಳೊಂದಿಗೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರು ಹೇಳಿದಂತೆ ಸ್ಪಷ್ಟೀಕರಣ ಕಾಣಿಸಲಿಲ್ಲ. ಈ ಸಮಿತಿಯಲ್ಲಿ ಸುಮಾರು ನಾಲ್ಕು ತಿಂಗಳುಗಳ ಕಾಲ ಸುಮಾರು 540 ಆಕ್ಷೇಪಣೆಗಳು ಬಂದಾಗ, ಎಲ್ಲ ಸಂಘದ ಅಧ್ಯಕ್ಷರು ಮತ್ತು ಸರ್ಕಾರಿ ನೌಕರರ ಸಂಘದ ಅಧ್ಯಕ್ಷರನ್ನು ಸೇರಿಸಿಕೊಂಡು, ನಮ್ಮ ಕರ್ನಾಟಕ ರಾಜ್ಯದಲ್ಲಿರುವ 13 ವೃತ್ತಗಳಿಂದ ಡಿ.ಆರ್.ಎಫ್., ಆರ್.ಎಫ್.ಓ. ಮತ್ತು ಗಾರ್ಡ್‌ಗಳಿಗೆ ಸಂಬಂಧಪಟ್ಟಂತೆ ಬಂದಂತಹ ಆಕ್ಷೇಪಣೆಗಳ ಬಗ್ಗೆ ಸಮಿತಿಯಲ್ಲಿ ಚರ್ಚೆ ಮಾಡಿ, ಆ ಆಕ್ಷೇಪಣೆಗಳಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವ ರೀತಿಯಲ್ಲಿ ಆ ವೃತ್ತದಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಸಿ.ಸಿ.ಎಫ್., ಗಳಿಗೆ ನಮ್ಮ ಸರ್ಕಾರದ ವತಿಯಿಂದ ಆದೇಶವನ್ನು ಹೊರಡಿಸಿದ್ದೇವೆ. ಸಮಿತಿ ಹೊರಡಿಸಿರುವ ಆದೇಶದ ಪ್ರಕಾರ ನಡೆದುಕೊಂಡಿಲ್ಲ ಎನ್ನುವ ಮಾಹಿತಿ ನನಗೂ ಬಂದಿದೆ.

(ಮುಂದು)

**(982) 07.12.2020 05.20 ಎಸ್‌ವಿ-ಎಂಡಿ**

**ಶ್ರೀ ಆನಂದ್‌ಸಿಂಗ್(ಮುಂದುವರೆದುದು)**

ನಾನು ತಮ್ಮಲ್ಲಿ ಒಂದು ಮನವಿ ಮಾಡಿಕೊಳ್ಳುತ್ತೇನೆ. ಸುಮಾರು ವರ್ಷಗಳಿಂದ ಇದು ನೆನೆಗುದಿಗೆ ಬಿದ್ದಿತ್ತು. ಸುಮಾರು ಮೂರ್ನಾಲ್ಕು ವರ್ಷಗಳಿಂದ ಮುಂಬಡ್ತಿ ಆಗುತ್ತಲೇ ಇರಲಿಲ್ಲ. ಈ ಹಿಂದೆ ನಾನು ನನ್ನ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ ರಾಜ್ಯ ಮಟ್ಟದ ಜ್ಯೇಷ್ಠತಾ ಪಟ್ಟಿಯನ್ನು amalgamation ಪ್ರಕಾರ single list ಮಾಡಿ, ಅದನ್ನು announce ಮಾಡಿ ಎನ್ನುವುದು ತಮ್ಮ ಆಗ್ರಹವಾಗಿದೆ. ಸಮಯ ಕಡಿಮೆ ಇದ್ದು, ಇದರ ಬಗ್ಗೆ ಇಂದು ಮಧ್ಯಾಹ್ನ ಮಾಹಿತಿಯನ್ನು ಪಡೆದುಕೊಂಡಿದ್ದೇನೆ. ನೀವು ಕೇಳಿರುವ ಪ್ರಶ್ನೆಗೆ ಇದರಲ್ಲಿ ಸರಿಯಾಗಿ ಉತ್ತರವನ್ನು ತೋರಿಸಿರುವುದಿಲ್ಲ. ಅಧಿಕಾರಿಗಳು ನಮ್ಮನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ ಎಂದು ತಾವು ಹೇಳುತ್ತಿರುವ ಅಂಶವು ಖಂಡಿತವಾಗಿ ನನ್ನ ಗಮನದಲ್ಲಿದೆ. ಹಾಗಾಗಿ amalgamation ಸಲುವಾಗಿ single list ಮಾಡಿ ಇದರ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಈ ಸಭೆಯಲ್ಲಿ ಹೇಳಬಿಚ್ಚಿಸುತ್ತೇನೆ.

**ಶ್ರೀ ಎಸ್.ಅಪ್ಪಾಜಿಗೌಡ:-** ಮಾನ್ಯ ಸಚಿವರೇ, Amalgamation ಆದ ನಂತರ ತಾವು ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸಬೇಕೆಂಬುದು ನಮ್ಮ ಆಗ್ರಹವಾಗಿದೆ.

**ಶ್ರೀ ಆನಂದ ಸಿಂಗ್:-** ಖಂಡಿತ. ನನಗೆ ತಮ್ಮ ಪ್ರಶ್ನೆ ಅರ್ಥವಾಯಿತು. ತಮ್ಮೊಂದಿಗೆ ಚರ್ಚೆ ಮಾಡಿ ನಾನು ಇದರ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ. ಏಕೆಂದರೆ, what you are questioning is very right and genuine point.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ: 77**
**(ಉತ್ತರವನ್ನು ಲಗತ್ತಿಸಲಾಗಿದೆ.)**

**ಶ್ರೀ ಶಶಿಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿರುವ ಸರ್ಕಾರಿ ಪ್ರೌಢಶಾಲೆಗಳಲ್ಲಿ 4251 ಅತಿಥಿ ಶಿಕ್ಷಕರು ಹಾಗೂ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಸುಮಾರು 2819 ಅತಿಥಿ ಉಪನ್ಯಾಸಕರ ಅವಶ್ಯಕತೆಯಿರುತ್ತದೆ ಎಂದು ಉತ್ತರವನ್ನು ನೀಡಿದ್ದಾರೆ. ನಮ್ಮ ರಾಜ್ಯದಲ್ಲಿ ಅತಿಥಿ ಉಪನ್ಯಾಸಕರು ಮತ್ತು ಅತಿಥಿ ಶಿಕ್ಷಕರು ಬಹಳ ದೊಡ್ಡ ಸಂಖ್ಯೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಬಹುಪಾಲು ಹುದ್ದೆಗಳು ಖಾಲಿಯಿದೆ. ಇತ್ತೀಚೆಗೆ ನಡೆದ ಸದನದಲ್ಲಿ ಡಿಗ್ರಿ ಕಾಲೇಜುಗಳ ಉಪನ್ಯಾಸಕರ ಸಂಖ್ಯೆ ಎಷ್ಟು? ಅವರಿಗೆ ಸಂಬಳವನ್ನು ನೀಡಲಾಗಿದೆಯೇ? ಎನ್ನುವ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟು ಐದು ತಿಂಗಳುಗಳ ಸಂಬಳವನ್ನು ನೀಡಲಾಗಿದೆ ಎಂದು ಹೇಳಿದ್ದಾರೆ. ನನಗೆ ತಿಳಿದಿರುವಂತೆ ಮಾರ್ಚ್ ನಿಂದ ಆಗಸ್ಟ್ ತಿಂಗಳವರೆಗೆ ಐದು ತಿಂಗಳ ಸಂಬಳವನ್ನು ನೀಡಿದ್ದಾರೆ. ಪ್ರೌಢಶಾಲೆ ಮತ್ತು ಪಿಯು ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಐದು ತಿಂಗಳ ಸಂಬಳವನ್ನು ಏಕೆ ನೀಡಿರುವುದಿಲ್ಲ? ಏಕೆಂದರೆ ಅವರಿಗೆ ಬೇರೆ ಯಾವುದೇ ಉದ್ಯೋಗ ಇರುವುದಿಲ್ಲ. ಸರ್ಕಾರ ಆದೇಶವನ್ನು ನೀಡಿಯೇ ಇರುವುದಿಲ್ಲ, ಅವರ ಸೇವೆಯನ್ನು ನಾವು ತೆಗೆದುಕೊಂಡಿರುವುದಿಲ್ಲ ಎಂದು ಅವರು ಹೇಳಬಹುದು. ಮಾರ್ಚ್ ತಿಂಗಳಲ್ಲಿ ಕೋವಿಡ್ ಬಂದಂತಹ ವಿಷಯ ಎಲ್ಲರಿಗೂ ತಿಳಿದಿದೆ. ಮಾರ್ಚ್‌ನಿಂದ ಜುಲೈವರೆಗೆ ಕೋವಿಡ್‌ನ ಪ್ರಮಾಣ ಹೆಚ್ಚು ಇದ್ದ ಕಾರಣ ಪ್ರೌಢಶಾಲೆ ಮತ್ತು ಪಿಯು ಕಾಲೇಜುಗಳಲ್ಲಿ ಆನ್‌ಲೈನ್ ತರಗತಿಗಳನ್ನು ತೆಗೆದುಕೊಳ್ಳಲಾಗಿದೆ. ಇವರ ಸೇವೆ ಅಗತ್ಯವಿದ್ದರೂ ಏಕೆ ಇವರನ್ನು ಮುಂದುವರೆಸಿರುವುದಿಲ್ಲ? ಡಿಗ್ರಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಸೇವೆಯನ್ನು ಮುಂದುವರೆಸಲಾಗಿದೆ. ಇವರ ಸೇವೆ ಅವಶ್ಯಕತೆಯಿಲ್ಲ ಎಂದು ಹೇಳುವುದಾದರೆ ನಮ್ಮ ಭಾಗದ ಅನೇಕ ಶಾಲೆಗಳಲ್ಲಿ ಒಬ್ಬರಿಬ್ಬರು ಖಾಯಂ ಶಿಕ್ಷಕರಿದ್ದು, ಉಳಿದ ಹುದ್ದೆಗಳು ಖಾಲಿ ಇವೆ. ಹೀಗಾಗಿ ಅತಿಥಿ ಶಿಕ್ಷಕರ ಸೇವೆಯನ್ನು ಈ ವರ್ಷ ಮುಂದುವರೆಸಿ, ಅವರಿಗೂ ಸಂಬಳವನ್ನು ನೀಡಬೇಕಾಗಿತ್ತು ಎಂಬುದು ನನ್ನ ಕಳಕಳಿಯಾಗಿದೆ.

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಸಾಮಾನ್ಯವಾಗಿ ನಮ್ಮ ಪ್ರೌಢಶಾಲೆ ಮತ್ತು ಪಿಯು ಕಾಲೇಜುಗಳಲ್ಲಿ ಸೆಪ್ಟೆಂಬರ್ – ಅಕ್ಟೋಬರ್ ತಿಂಗಳಿನಲ್ಲಿ ಸಂಖ್ಯೆಯ ಆಧಾರದಲ್ಲಿ ಅತಿಥಿ ಶಿಕ್ಷಕರನ್ನು ತೆಗೆದುಕೊಳ್ಳುತ್ತೇವೆ. ಈ ವರ್ಷ ಕಾಲೇಜು, ಪ್ರೌಢಶಾಲೆ, ಪ್ರಾಥಮಿಕ ಶಾಲೆಗಳು ಪ್ರಾರಂಭವಾಗಿರುವುದಿಲ್ಲ. ಡಿಗ್ರಿ ಕಾಲೇಜು ಉಪನ್ಯಾಸಕರ ಬಾಕಿಯಿದ್ದ ವೇತನವನ್ನು ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದಾರೆ. ನಮ್ಮ calendar of activity ಬೇರೆಯಾಗಿದೆ, ಅವರದ್ದೇ ಬೇರೆಯಿದೆ. ಈ ವರ್ಷ ಎಷ್ಟು ಸಂಖ್ಯೆ ಸಿಗುತ್ತದೆ? ಮಕ್ಕಳು ಎಷ್ಟು ಜನ ಇದ್ದಾರೆ ಎನ್ನುವುದರ ಆಧಾರದಲ್ಲಿ ಅವರನ್ನು ತೆಗೆದುಕೊಳ್ಳಲಾಗುವುದು. ನಂತರ ಅವರಿಗೆ ಸಂಬಳ ನೀಡಲು ಪ್ರಾರಂಭಿಸಲಾಗುವುದು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ : 50**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಯು ಬಹಳ specific ಆಗಿದೆ. "ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳೆರಡೂ ಸೇರಿ ಕೋವಿಡ್ ರೋಗಿಗಳನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಿದ ಪ್ರಕರಣಗಳ ಸಂಖ್ಯೆ ಎಷ್ಟು? ಯಾವ ಆಸ್ಪತ್ರೆಗಳಲ್ಲಿ ರೋಗಿಗಳನ್ನು ದಾಖಲಿಸಲಾಗಿದೆ? ಈ ಪೈಕಿ ಗುಣಲಕ್ಷಣವಿರುವ ಮತ್ತು ಇಲ್ಲದಿರುವ ರೋಗಿಗಳ ಸಂಖ್ಯೆ ಎಷ್ಟು? ಇದಕ್ಕೆ ತಗಲುವ ವೆಚ್ಚವೆಷ್ಟು?" – ಎನ್ನುವ ಪ್ರಶ್ನೆಗಳನ್ನು ನಾನು ಕೇಳಿದ್ದೆನು. ಆದರೆ ಮರಣ ಹೊಂದಿದಂತಹ ರೋಗಿಗಳ ಸಂಖ್ಯೆಯ ಆಧಾರದಲ್ಲಿ ವೆಚ್ಚವನ್ನು ತಿಳಿಸಲಾಗಿದೆ. ಒಟ್ಟು ಆಸ್ಪತ್ರೆಯ ವೆಚ್ಚವನ್ನು ನಾನು ಕೇಳಿರುತ್ತೇನೆ. 'ಮೇಲಿನ ಎಲ್ಲಾ ಪ್ರಶ್ನೆಗಳಿಂದ ಸರ್ಕಾರಕ್ಕೆ ತಗಲುವ ವೆಚ್ಚವೆಷ್ಟು? ಪ್ರತ್ಯೇಕವಾಗಿ ವಿವರವನ್ನು ನೀಡುವುದು' ಎಂದು ಕೇಳಿದ್ದೇನೆ. ಆದರೆ ಎಷ್ಟು ಜನ ಮರಣ ಹೊಂದಿದ್ದಾರೆ ಎನ್ನುವ ಮಾಹಿತಿಯನ್ನು ನೀಡಿ ಅದಕ್ಕೆ ಎಷ್ಟು ಖರ್ಚುವೆಚ್ಚ ಆಗಿದೆ ಎನ್ನುವ ಮಾಹಿತಿಯನ್ನು ಉತ್ತರದಲ್ಲಿ ನೀಡಲಾಗಿದೆ.

ಎರಡನೆಯದಾಗಿ symptomatic ಇರುವುದರ ಬಗ್ಗೆ ನಮ್ಮ ಬಳಿ data ಗಳಿವೆ. Asymptomatic ನಮ್ಮಲ್ಲಿ data ಇಲ್ಲ ಎಂದು ಹೇಳಿದ್ದೀರಿ. Symptomatic ಅನ್ನು ತಿಳಿಯಲು ಪರೀಕ್ಷೆ ಆಗಲೇಬೇಕು. Asymptomatic ಎಷ್ಟು ಜನ ಇದ್ದಾರೆ ಎನ್ನುವುದರ ಜಚಿಣಚಿ ಅನ್ನು ಇಟ್ಟಿರುವುದಿಲ್ಲ ಎಂದರೆ they are distributors of the covid. ಅವರು ಹಂಚಿಕೆದಾರರಾಗುತ್ತಾರೆ. ಅವರನ್ನು Asymptomatic ಎಂದು ಹೇಳಿ ಆಚೆ ಬಿಟ್ಟಾಗ ಅವರ ದೇಹದಲ್ಲಿರುವ ಕೊರೊನಾ ವೈರಸ್ ಅನ್ನು ಆರೋಗ್ಯವಾಗಿರುವವರಿಗೆ ಹಂಚುವಂತಹ distributors ಆಗುತ್ತಾರೆ. Asymptomatic ಇರುವವರ ಬಗ್ಗೆ ಮಾಹಿತಿಯಿಲ್ಲ ಎಂದು ಹೇಳಿದರೆ you have not controlled it. Data ಇಲ್ಲ ಎಂದು ಹೇಳಿದರೆ ಎಲ್ಲಿಯೋ ಒಂದು ಕಡೆ ಕೋವಿಡ್ ರೋಗವನ್ನು ಹರಡಲು you have blasted and open the gates. ಮರಣ ಹೊಂದಿದವರ ಸಂಖ್ಯೆಯನ್ನು ಕೊಡಲಾಗಿದೆ. ಸರ್ಕಾರ ಯಾವರೀತಿಯ ವೆಚ್ಚ ಮಾಡಲಾಗಿದೆ ಎಂಬುದನ್ನು ಸ್ವಲ್ಪ ಹೇಳಬೇಕು. General ಆಗಿ ಆರೋಗ್ಯ ಇಲಾಖೆಯಿಂದ ದರಪಟ್ಟಿಯನ್ನು ಮಾಡಲಾಗಿದೆ. ಸಾಮಾನ್ಯ ವಾರ್ಡ್‌ಗೆಷ್ಟು, ಊಆಗ (High Dependency Unit) ಈ ರೀತಿ ನೀಡಲಾಗಿದೆ. ಆದರೆ ರಜಟಿಜಡಿಚಿಟ ಬಿಟ್ಟು ಖಾಸಗಿಯವರಿಗೂ ನೀಡಲಾಗಿದೆ. ಕಳೆದ ಬಾರಿಯ ಸದನದಲ್ಲಿ ನಾನು ರೂ.16 ಲಕ್ಷ ಬಿಲ್ ಮಾಡಿರುವ ಬಗ್ಗೆ ಕೆಲವು ಮಾಹಿತಿಯನ್ನು ನೀಡಿದ್ದೆನು. ಅವರ ಮೇಲೆ ಏನು ಕ್ರಮವನ್ನು ಕೈಗೊಳ್ಳಲಾಗಿದೆ ಎಂದು ಇದುವರೆವಿಗೂ ತಿಳಿದು ಬಂದಿಲ್ಲ. ಈ ರೀತಿಯಾಗಿ ಹಲವಾರು ಆಸ್ಪತ್ರೆಗಳಲ್ಲಿ ಯಥೇಚ್ಛವಾಗಿ ಹಣವನ್ನು ಲೂಟಿ ಹೊಡೆಯತಕ್ಕಂತಹ ದಂಧೆಯನ್ನು ಮಾಡಿಕೊಳ್ಳಲಾಗಿದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(983) 07.12.2020 5.30 ಕೆಜಿ-ಎಂಡಿ**

**ಶ್ರೀ ಪಿ.ಆರ್.ರಮೇಶ್(ಮುಂದುವರೆದುದು)**

ಕೋವಿಡ್-19 ಸಾಂಕ್ರಮಿಕ ರೋಗ ಬಂದು ಸ್ವಲ್ಪ ಜನರು ನರಳುವಂತಹವರಿದ್ದರೆ, ಅದರಿಂದ ಸಂತೋಷಪಟ್ಟು ಲೂಟಿ ಮಾಡುವಂತಹ ಇನ್ನಷ್ಟು ಜನರಿದ್ದಾರೆ. ಇದು ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯದ್ದು ಮಾತ್ರವಲ್ಲ. ಇಡೀ ನಮ್ಮ ರಾಜ್ಯದ್ದು ಮಾತ್ರವಲ್ಲ. ಇಡೀ ನಮ್ಮ ದೇಶದಲ್ಲಿಯೇ ಆಗಿರುವಂಥದ್ದು ಆಗಿಹೋಗಿದೆ. ನಮಗೆ ಅವರ ವೆಬ್‌ಸೈಟ್‌ನಲ್ಲಿ Bengaluru Urban ಎಂದು ಸಿಗುವುದಿಲ್ಲ. Bengaluru Urban ಎಂದು ಸಿಕ್ಕಿದರೆ ಬೆಂಗಳೂರು ಮಹಾನಗರ ಪಾಲಿಕೆ ಜೊತೆಗೆ ಸಿಗುತ್ತದೆ. ಯಾವುದು Urban District ಎಂದು ಪ್ರತ್ಯೇಕ ಮಾಡಿಲ್ಲ. ಹಾಗಾಗಿ, ಕಳೆದ ತಿಂಗಳು ಅಥವಾ ಈ ತಿಂಗಳು covid positive rate ಬಹಳ ಕಡಿಮೆ ಆಗಿದೆ. ಆದರೆ, ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳಿನಲ್ಲಿ it has reached to the peak, 24% ಇತ್ತು. ಅವರು test ಮಾಡಿದ್ದರಲ್ಲಿ. ಮೊದಲನೆಯದಾಗಿ, ಕೋವಿಡ್ ಪರೀಕ್ಷೆ ಮಾಡುವಂತಹ ಸಂದರ್ಭದಲ್ಲಿ Asymptomatic data ಅನ್ನು ಇಡದಿರುವುದೇ ಬಹಳ ದೊಡ್ಡ ತಪ್ಪು.

ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು 122 ದೂರುಗಳು ಬಂದಿವೆ ಎಂದು ಹೇಳಿದ್ದಾರೆ. ಮಾನ್ಯ ಸಚಿವರು ಈ ದೂರುಗಳ ಮೇಲೆ ಯಾವ ರೀತಿ ಕೆಲಸ ಮಾಡಿದ್ದಾರೆ, ಏನು ಕ್ರಮ ತೆಗೆದುಕೊಂಡಿದ್ದಾರೆ, ಅಲ್ಲದೇ ಯಾರಿಗೆ ಏನು punishment ಆಗಿದೆ ಎನ್ನುವುದರ ಬಗ್ಗೆ ಉತ್ತರ ಕೊಡಬೇಕು. ಇದು ಒಂದು ರೀತಿಯಲ್ಲಿ ದಂಧೆಯಾಗಿದೆ. ನಾನು ಸಹ ಕೋವಿಡ್ ಸಂಕ್ರಾಮಿಕ ರೋಗಕ್ಕೆ ತುತ್ತಾಗಿ ಆಸ್ಪತ್ರೆಗೆ ಸೇರಿದ್ದೆ. ಆರು ದಿವಸಗಳಿಗೆ ಸುಮಾರು ಮೂರು ಲಕ್ಷ ರೂಪಾಯಿಗಳು ಬಿಲ್ ಮಾಡಿದ್ದರು. ಅದನ್ನು Asymptomatic ಎಂದು ಆಸ್ಪತ್ರೆಯವರು ಹೇಳಿದರು. ಅವರು Asymptomatic ಎಂದು ಹೇಳಿದ ಮೇಲೆ ಇವರಿಗೆ data ಇರಬೇಕು ಅಲ್ಲವೇ; ಆಸ್ಪತ್ರೆಯವರೆ Asymptomatic ಎಂದು ಹೇಳಿದ ಮೇಲೆ ನಿಮಗೆ data ಕೊಡಲೇಬೇಕಾಗುತ್ತದೆ. Data ಕೊಡಲಿಲ್ಲ ಎಂದಾಗ, ನಿಮ್ಮಲ್ಲಿ data ತೆಗೆದುಕೊಳ್ಳಲಿಲ್ಲ ಎಂದಾಗ ಎಲ್ಲೋ ಒಂದು ಕಡೆ ಇವರು data maintain ಮಾಡುವುದಕ್ಕೆ complete failure ಆಗಿದ್ದಾರೆ.

ಮಾನ್ಯ ಸಭಾಪತಿಯವರೇ, ನನ್ನ ಕಡೆಯ ಪ್ರಶ್ನೆ ಏನೆಂದರೆ, ನಾವೀಗ ಈ ಕೋವಿಡ್ ಸಂಕ್ರಾಮಿಕ ರೋಗದ ಜೊತೆಗೆ ಜೀವನ ಮಾಡುವಂತಹ ಪರಿಸ್ಥಿತಿ ಇದೆ. ಈ ದೇಶದಿಂದ ಕೋವಿಡ್ ಹೋಗುವುದಿಲ್ಲ. ಇದು ಇದ್ದೇ ಇರುತ್ತದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಾಗಾಗಿ, ನಾವು ಅದರ ಜೊತೆಗೆ ಇರಬೇಕಾದರೆ, ಅದಕ್ಕೆ ಲಸಿಕೆ ಕಂಡುಹಿಡಿಯುವುದು ಬಹಳ ಮುಖ್ಯ. ಮಾನ್ಯ ಸಚಿವರು ಲಸಿಕೆ ಬಗ್ಗೆ ಹೇಳಿದ್ದಾರೆ. ಸರ್ಕಾರ ಮೊದಲು ವೈದ್ಯರಿಗೆ ಮತ್ತು ಅವರ ಸಿಬ್ಬಂದಿಯವರಿಗೆ ಲಸಿಕೆ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತಿದೆ ಎಂದು ಹೇಳಿದೆ. ಹಾಗಾಗಿ, ಲಸಿಕೆ ಯಾವಾಗ ಬರುತ್ತದೆ, ಅದನ್ನು ಜನರಿಗೆ ಯಾವಾಗ ಕೊಡುತ್ತಾರೆ ಎಂಬುದರ ಬಗ್ಗೆ ಸಭೆಗೆ ದಯವಿಟ್ಟು ಮಾನ್ಯ ಸಚಿವರು ಬೆಳಕು ಚೆಲ್ಲಬೇಕು.

**ಡಾ॥ ಕೆ.ಸುಧಾಕರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಗೌರವಾನ್ವಿತ ಸದಸ್ಯರ ಕೆಲವು ಸಂದೇಹಗಳು ಮತ್ತು ವಿಶೇಷವಾಗಿ ಮಾಹಿತಿಯ ಸಂಗ್ರಹಣೆಯಲ್ಲಿ ಸರ್ಕಾರ ರೋಗದ ಗುಣಲಕ್ಷಣಗಳು ಇಲ್ಲದೇ ಇರುವಂತಹ ಸಂಖ್ಯೆಯನ್ನು ಮತ್ತು ಅವರ ಮಾಹಿತಿಯನ್ನು ಕಲೆಹಾಕುವುದರಲ್ಲಿ ವಿಫಲವಾಗಿದೆ ಎಂದು ಹೇಳಿದಾರೆ. ಇದು ಸತ್ಯಕ್ಕೆ ದೂರವಾಗಿದೆ. ಏಕೆಂದರೆ, ಪ್ರತಿಯೊಬ್ಬ positive symptoms ಅಂದರೆ, ಸೋಂಕಿತ ವ್ಯಕ್ತಿಯ ಸಂಪೂರ್ಣ ವಿವರ ನಮ್ಮಲ್ಲಿದೆ. ಮಾನ್ಯ ಸದಸ್ಯರು Symptomatic and Asymptomatic ರೋಗಿಗಳ ಸಂಖ್ಯೆ ಎಷ್ಟಿದೆ, ಅದರಲ್ಲಿ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ, ಇದರಿಂದ ಸರ್ಕಾರಕ್ಕೆ ತಗಲಿರುವಂತಹ ವೆಚ್ಚವೆಷ್ಟು ಎಂದು ಪ್ರಶ್ನೆ ಕೇಳಿರುವುದರಿಂದ ಅದಕ್ಕೆ ಸೀಮಿತವಾಗಿ ಉತ್ತರವನ್ನು ಕೊಟ್ಟಿರುವುದನ್ನು ಬಿಟ್ಟರೆ, ಇವತ್ತು ನಮ್ಮ ರಾಜ್ಯದಲ್ಲಿ Asymptomatic ನವರು ಎಷ್ಟು ಜನರಿದ್ದಾರೆಂದು ನಮ್ಮಲ್ಲಿ ದಾಖಲೆ ಇದೆ. ಆ ದಾಖಲೆ ಇಲ್ಲದಿದ್ದರೆ ನಿಯಂತ್ರಣ ಮಾಡುವುದಕ್ಕೆ ಮಾನ್ಯ ಸದಸ್ಯರು ಹೇಳಿದಂತೆ ಸಾಧ್ಯವಿಲ್ಲ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಿಸಿದ ಎಂಬುದಾಗಿ ಇದೆ. ನಾನು ಬರಿ Symptomatic ಬಗ್ಗೆ ಹೇಳಿಲ್ಲ.

**ಡಾ॥ ಕೆ.ಸುಧಾಕರ್:–** ಮಾನ್ಯ ಸಭಾಪತಿಯವರೇ, ಇದಕ್ಕೆ ಕಾರಣವೇನೆಂದರೆ, Asymptomatic ರೋಗಿಗಳು ಅಥವಾ ಸೋಂಕಿತರು 80% ರಷ್ಟು ಅದರಲ್ಲಿ COVID Care Centres ಗೆ ಹೋಗುತ್ತಾರೆ. ಅದನ್ನು ಬಿಟ್ಟರೆ ಅವರು ಆಸ್ಪತ್ರೆಗಳಿಗೆ ದಾಖಲಾಗುವುದಿಲ್ಲ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅದನ್ನು ಲೆಕ್ಕ ಕೊಡಬೇಕು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, COVID Care Centres ಗಳಲ್ಲಿ ದಾಖಲಾಗಿರುವಂತಹರ ಸಂಖ್ಯೆ ಮತ್ತು ಅವರನ್ನು ಮೇಲ್ವಿಚಾರಣೆ ಮಾಡುವುದು ನಮ್ಮ ಇಲಾಖೆ ಬಿಟ್ಟರೆ, SAST (Suvarna Arogya Suraksha Trust) ರವರಲ್ಲ. ಆಸ್ಪತ್ರೆಗಳಲ್ಲಿ ದಾಖಲಾಗಿರುವಂತಹವರಿಗೆ ನಾವು ಚಿಕಿತ್ಸೆಯ ವೆಚ್ಚವನ್ನು ಭರಿಸುತ್ತೇವೆ ಅದನ್ನು ಮಾತ್ರ SAST ರವರು ನೋಡುತ್ತಾರೆ. ಮಾನ್ಯ ಸದಸ್ಯರಿಗೆ SAST ರವರು ಇಲ್ಲಿಯವರೆಗೆ ಕೊಟ್ಟಿರುವಂತಹ ಮಾಹಿತಿ. ಮಾನ್ಯ ಸದಸ್ಯರಿಗೆ ಆ ಮಾಹಿತಿಯು ಸಹ ಬೇಕೆಂದರೆ, ಆ ಮಾಹಿತಿಯನ್ನು ಕಲೆ ಹಾಕಿ ಆದಷ್ಟು ಶೀಘ್ರವಾಗಿ ಕೊಡಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಲಸಿಕೆ ಬಗ್ಗೆ ಎರಡನೆ ಪ್ರಶ್ನೆಯನ್ನು ಕೇಳಿದ್ದಾರೆ. ಇವತ್ತಿನ ದಿವಸ ಎಲ್ಲರೂ ಸಹ ಲಸಿಕೆ ಬಗ್ಗೆ ಎದುರು ನೋಡುತ್ತಿದ್ದಾರೆ. ಆದರೆ, ನಮ್ಮ ಕರ್ನಾಟಕ ರಾಜ್ಯ ಭಾರತ ದೇಶದಲ್ಲಿಯೇ ವಿಶೇಷವಾಗಿ ಅನೇಕ ದೇಶೀಯ ಲಸಿಕೆಯನ್ನು ಉತ್ಪಾದನೆ ಮಾಡುವುದರಲ್ಲಿಯೂ ಸಹ ಅಂತಹ ಒಂದು ಕಂಪನಿಗಳು ಸಹ 3ನೇ ಹಂತದ clinical trials ಅನ್ನು ಮಾಡುತ್ತಿವೆ. ನಮ್ಮ ರಾಜ್ಯದಲ್ಲಿಯೂ 3ನೇ ಹಂತದ clinical trials ನಡೆಯುತ್ತಿದೆ. ಕಳೆದ ವಾರ ನಾವೇ Covaxin ಗೆ ಉದ್ಘಾಟನೆ ಮಾಡಿ ಅವಕಾಶ ಮಾಡಿಕೊಟ್ಟಿದ್ದೇವೆ. ಹಾಗಾಗಿ, ಯಾವಾಗ ವಿಶ್ವ ಆರೋಗ್ಯ ಸಂಸ್ಥೆಯವರು ಈ ಲಸಿಕೆ ಪೂರ್ಣ ಪ್ರಮಾಣದಲ್ಲಿ ಅಂದರೆ, ನೂರಕ್ಕೆ ನೂರರಷ್ಟು ಯಶ್ವಸಿಯಾಗಿದೆ ಅದನ್ನು ಬಳಸಬಹುದು ಎಂದು ಅವರು ಪರವಾನಿಗೆಯನ್ನು ಕೊಡುವವರೆಗೂ ಸಹ ಲಸಿಕೆ ಇದೆ ಎಂದು ನಾವು ಭಾವಿಸುವುದಕ್ಕೆ ಆಗುವುದಿಲ್ಲ. ವೈಜ್ಞಾನಿಕವಾಗಿ ಹೇಳುವುದಾದರೆ, ಲಸಿಕೆ ಆದಷ್ಟು ಶೀಘ್ರದಲ್ಲಿ ಬರುತ್ತದೆಂಬ ಮನೋಭೂಮಿಕೆಯಲ್ಲಿ ಅದಕ್ಕೆ ಸಿದ್ಧತೆಗಳನ್ನು ಮಾಡಿಕೊಂಡಿದ್ದೇವೆ. ಲಸಿಕೆ ಬಂದಾಗ ಅದನ್ನು ಮೊದಲು ಯಾರಿಗೆ ಕೊಡಬೇಕೆಂದು ಈಗಾಗಲೇ ಕೇಂದ್ರ ಸರ್ಕಾರದ ಮಾರ್ಗಸೂಚನೆಯಂತೆ, ಆರೋಗ್ಯ ಸೇವೆಯಲ್ಲಿ ಕೆಲಸ ಮಾಡುತ್ತಿರುವಂತಹ ಕೊರೋನಾ ಯೋಧರು ಇರಬಹುದು ಅಥವಾ ಬೇರೆ ಬೇರೆ ಆರೋಗ್ಯ ಸಿಬ್ಬಂದಿಯವರು ಇರಬಹುದು, ಅವರ ಜೊತೆಗೆ ವೈಯೋವೃದ್ದರು, ವೈಯೋವೃದ್ದರ ಜೊತೆಗೆ ಯಾರಿಗೆ ಇತರೆ ರೋಗದ ಲಕ್ಷಣಗಳು ಇರುತ್ತವೆ, ರೋಗಗಳು ಇರುತ್ತವೆ ಅಂತಹ comorbidity ಲಕ್ಷಣಗಳು ಇರುವಂತಹ ವ್ಯಕ್ತಿಗಳನ್ನು ಆಯ್ಕೆ ಮಾಡಿ ಈ ಲಸಿಕೆಯನ್ನು ಕೊಡಬೇಕೆಂದು ಹಂತ ಹಂತವಾಗಿ ಯಾರೆಲ್ಲಾ vulnerable groups ಇರುತ್ತಾರೆ ಅಂತಹವರಿಗೆಲ್ಲ ಕೊಡಬೇಕೆಂದು ಇದೆ. ಮೊದಲನೆ ಹಂತದಲ್ಲಿ ಸರ್ಕಾರಿ 2,24,083 ಜನರಿಗೆ ಕೊಡಬೇಕೆಂದು ಇದ್ದೇವೆ. ಅದೇ ಖಾಸಗಿಯಲ್ಲಿ 2,45,733 ಜನರಿಗೆ ಕೊಡಬೇಕೆಂದು ಇದ್ದೇವೆ. ಜನರಿಗೆ ಲಸಿಕೆಯನ್ನು ನೀಡುವುದಕ್ಕೆ ಸಿಬ್ಬಂದಿಯನ್ನು ಸಹ ಈಗಾಗಲೇ ಸಿದ್ದತೆಗಳನ್ನು ಮಾಡಿದ್ದೇವೆ. ಸುಮಾರು 68,317 ಜನ ಸರ್ಕಾರಿ ವ್ಯವಸ್ಥೆಯಲ್ಲಿ ಕೆಲಸ ಮಾಡುವಂತಹವರು ಲಸಿಕೆಯನ್ನು ಕೊಡುವುದಕ್ಕೆ ತಯಾರಾಗಿದ್ದಾರೆ. ಅದೇರೀತಿ ಖಾಸಗಿ ವಲಯಗಳಲ್ಲಿ 35,310

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜನರು ಒಟ್ಟಾರೆಯಾಗಿ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಸಿಬ್ಬಂದಿಯನ್ನು ಸಿದ್ದ ಮಾಡಿದ್ದೇವೆ. ಅದೇರೀತಿ ಅದಕ್ಕೆ ಬೇಕಾದಂತಹ ಉಪಕರಣಗಳು, Cold Storage, Cold Logistics, Walk-in Freezers, Walk-in Refrigerators ಈ ರೀತಿಯಲ್ಲಿ ಅದಕ್ಕೆ ಏನೇನು ವ್ಯವಸ್ಥೆ ಬೇಕು ಅದನ್ನೆಲ್ಲ ಮಾಡಿದ್ದೇವೆ. ಏಕೆಂದರೆ, ಒಂದೊಂದು ಕಂಪನಿಗಳು ಒಂದೊಂದು degrees, temperature ನಲ್ಲಿ ತರಬೇಕೆಂದು ಮಾಡುತ್ತಿದ್ದಾರೆ. ಕೆಲವು ಕಂಪನಿಗಳು minus fifty degree ಅಲ್ಲಿಯೂ ಬರಲಿಕ್ಕೆ ಸಾಧ್ಯವಿದೆ ಎಂದು ಹೇಳುತ್ತಿದ್ದಾರೆ. ಕೆಲವರು, minus seventy degree ಅಲ್ಲಿ ಇರಬೇಕೆಂದು ಹೇಳುತ್ತಾರೆ. ಕೆಲವರು positive ಅಂದರೆ ಒಂದು ಡಿಗ್ರಿ (+1°) 5 ಡಿಗ್ರಿ (+5°) ನಲ್ಲಿಯೂ ಇಟ್ಟುಕೊಳ್ಳಬಹುದೆಂದು ಹೇಳುತ್ತಾರೆ. ಹಾಗಾಗಿ, ಇದೆಲ್ಲವೂ ಸಹ ಇನ್ನೂ ಅಂತಿಮವಾಗಿಲ್ಲ. ಆದ್ದರಿಂದ ಜನರಿಗೆ ತಪ್ಪು ಮಾಹಿತಿಯನ್ನು ಕೊಡುವ ಬದಲು ವೈಜ್ಞಾನಿಕವಾಗಿ ವಿಶ್ವ ಆರೋಗ್ಯ ಸಂಸ್ಥೆಯವರು, ಕೇಂದ್ರ ಸರ್ಕಾರದ ICMR (*Indian Council of Medical Research)* ನವರು ಅಂತಿಮ ಮಾಡಿದ ಮೇಲೆ, ಅಲ್ಲಿಂದ ನಿಖರವಾಗಿ ಇಂತಹ ತಿಂಗಳಿನಲ್ಲಿ ಬರುತ್ತದೆ, ಮೊದಲು ಇಂತಹ ಜನರಿಗೆ ಕೊಡಬಹುದು ಎಂದು ಹೇಳುವುದು ಸೂಕ್ತವೆಂದು ನನ್ನ ಅಭಿಪ್ರಾಯ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಲಸಿಕೆ ಬಂದ ನಂತರ ಯಾವ ರೀತಿ ವ್ಯವಸ್ಥೆ ಮಾಡಿಕೊಳ್ಳಬೇಕು ಎನ್ನುವುದರ ಬಗ್ಗೆ ಬಹಳ ವಿವರವಾಗಿ ಹೇಳಿದ್ದಾರೆ. ಈ ಲಸಿಕೆ ಯಾವಾಗ ಬರುತ್ತದೆ ಎಂದು ಇಡೀ ರಾಜ್ಯದ ಜನತೆ ಮತ್ತು ದೇಶದ ಜನತೆ ಕಾತುರದಿಂದ ಕಾಯುತ್ತಿದ್ದಾರೆ. ಮುಂದಿನ ತಯಾರಿ ಆಯಿತು. ಅನೇಕ ವೈರಸ್‌ಗಳಿಗೆ ಸುಮಾರು 10/15 ವರ್ಷಗಳಿಂದ ಲಸಿಕೆ ಬಂದಿಲ್ಲ. ಈಗ ಉದಾಹರಣೆಗೆ ಹೆಚ್‌ಐವಿ ಸೊಂಕಿಗೆ ಲಸಿಕೆ ಬಂದಿಲ್ಲ. ಲಸಿಕೆ ಬಂದ ನಂತರ ನಾವು ಆ ತಯಾರಿ ಮಾಡಿದ್ದೇವೆ, ಈ ತಯಾರಿ ಮಾಡಿದ್ದೇವೆ, ಸಿಬ್ಬಂದಿಯನ್ನು ತಯಾರು ಮಾಡಿದ್ದೇವೆ, equipment and cold storage ಗಳನ್ನು ಮಾಡಿದ್ದೇವೆಂದು ಮಾನ್ಯ ಸಚಿವರು ಬಹಳ ಅರ್ಥಪೂರ್ಣವಾದ ಮಾತುಗಳಿಂದ ಹೇಳಿದ್ದಾರೆ. ಇಲ್ಲಿ ಲಸಿಕೆ ಯಾವಾಗ ಬರುತ್ತದೆ ಎಂಬುದು ಮುಖ್ಯವಾಗಿದೆ. That is very important. ಇದರ ಮೇಲೆ ಬೆಳಕು ಚೆಲ್ಲುವಂತಹ ಮಾತುಗಳನ್ನು ಮಾನ್ಯ ಸಚಿವರು ಹೇಳುತ್ತಾರೆಂದು ನಾನು ನಿರೀಕ್ಷೆ ಮಾಡುತ್ತೇನೆ.

**ಡಾ||ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಇದರ ಬಗ್ಗೆ ಬಹಳ ಕಾಳಜಿ ಮತ್ತು ಬದ್ದತೆ ಇದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) :–** ಮಾನ್ಯ ಸಭಾಪತಿಯವರೇ, ನಮಗೆ ಕೋವಿಡ್ ಸೋಂಕು ಮಾರಕವಾಗಿದೆ. ಆದರೆ, ಅದು ಖಾಸಗಿ ಆಸ್ಪತ್ರೆಗಳಿಗೆ ವರವಾಗಿದೆ. ಇದು ಸತ್ಯವಾಗಿರುವಂತಹ ಮಾತು. ಎಲ್ಲರ ಬಾಯಿಯಲ್ಲಿ ಇರುವಂತಹ ಮಾತು. ಮೊದಲನೆಯದಾಗಿ, ಸರ್ಕಾರದ ಕೈಯಲ್ಲಿ ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಣ ಮಾಡುವುದಕ್ಕೆ ಆಗುತ್ತದೆಯೋ ಅಥವಾ ಇಲ್ಲವೋ? ಎರಡನೆಯದಾಗಿ, ಲಸಿಕೆ ಬರುತ್ತಿದೆ ಎಂದು ಹೇಳುತ್ತಿದ್ದಾರೆ. ಆದರೆ, ಬಹಳ ಜನರ ಮನಸ್ಸಿನಲ್ಲಿ ಸೊಂಕು ಬಂದವರಿಗೆ ವಾಸಿಯಾಗುವುದಕ್ಕೆ ಲಸಿಕೆ ಎಂದು ಹೇಳುತ್ತಿದ್ದಾರೆ. ಈ ರೋಗ ಬರದಂತೆಯೇ ಲಸಿಕೆ ಬರುತ್ತಿದೆಯೇ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಈ ಲಸಿಕೆ ಬಂದು 3ನೇ trial ಅನ್ನು ಹರಿಯಾಣದಲ್ಲಿ ಒಬ್ಬ ಸಚಿವರಿಗೆ ಕೊಟ್ಟರು. ಆದರೆ, ಅವರು ಮತ್ತೆ ಕೋವಿಡ್ positive ಆಗಿದ್ದಾರೆ. ಅದಕ್ಕೆ ಯಾವ ರೀತಿ ಕೊಡುತ್ತೀರಿ ಎಂಬುದನ್ನು ನೋಡಬೇಕಾಗುತ್ತದೆ.

**ಡಾ॥ ಕೆ.ಸುಧಾಕರ್:–** ಮಾನ್ಯ ಸಭಾಪತಿಯವರೇ, ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು ವ್ಯಕ್ತಪಡಿಸಿರುವಂತಹ ಕಳಕಳಿ ಬಹಳ ಸಮಂಜಸವಾಗಿದೆ. ವಿಶ್ವದಲ್ಲಿ ಎಲ್ಲರಿಗೂ ಮತ್ತು ಎಲ್ಲಾ ದೇಶಗಳಲ್ಲಿಯೂ ಸಹ ಇದೇ ಯಕ್ಷ ಪ್ರಶ್ನೆಯಾಗಿದೆ.

**(ಮುಂದು)**

**(984)07–12–2020(5–40)ಎಂವಿ–ಎಕೆ**
**ಡಾ॥ ಕೆ.ಸುಧಾಕರ್(ಮುಂದುವರೆದುದು)**

ವಿಶ್ವದಲ್ಲಿ ಎಲ್ಲರಿಗೂ ಮತ್ತು ಎಲ್ಲಾ ದೇಶಗಳಲ್ಲೂ ಕೂಡ ಇದೇ ಯಕ್ಷ ಪ್ರಶ್ನೆಯಾಗಿದೆ. ಇವತ್ತು ಇದಕ್ಕೆ ರಾಜಕೀಯ ಹೇಳಿಕೆ ಕೊಡುವಂತಹ ವಿಷಯವಲ್ಲ. ಸಂಶೋಧನಕಾರರು ಸಂಶೋಧನೆ ಮಾಡಿ, ಇದನ್ನು ಯಶಸ್ವಿ ಮಾಡಿದಾಗ, ರಾಜಕೀಯ ವ್ಯವಸ್ಥೆಗಳು ಇರಲಿ, ಸರ್ಕಾರದ ವ್ಯವಸ್ಥೆಗಳು ಇರಲಿ, ಅದನ್ನು ತರುವಂಥದ್ದು ಮತ್ತು ಜನಸಾಮಾನ್ಯರಿಗೆ ಸರಬರಾಜು ಮಾಡುವಂಥದ್ದು ನಮ್ಮ ಕರ್ತವ್ಯವಾಗಿದೆ. ಅಲ್ಲಿಯವರೆಗೂ ಕೂಡ ರಾಜಕೀಯ ಹೇಳಿಕೆ ಕೊಡುವಂಥದ್ದು ಬಹಳ ಸುಲಭ. ಆದರೆ, ಇವತ್ತು ಮಾನ್ಯ ಸದಸ್ಯರೆ ಹೇಳಿರುವಂತಹ ಮಾತುಗಳಲ್ಲಿ, ರೋಟ ವೈರಸ್‌ಗೆ ಸಂಬಂಧಪಟ್ಟಂತೆ ಸಂಶೋಧನೆ ಮಾಡುವುದಕ್ಕೆ ಸುಮಾರು 29 ವರ್ಷ ಬೇಕಾಯಿತು. ಹಾಗಾಗಿ ಕೆಲವು ವೈರಾಣುಗಳಿಗೆ ಇನ್ನೂ ಲಸಿಕೆ ಬಂದಿಲ್ಲ. ಅಂತಹದ್ದರಲ್ಲಿ ಇಂತಹ ಭೀಕರವಾದಂತಹ ಕಾಯಿಲೆ ಅಥವಾ ಈ ತರಹದ ಸೋಂಕಿಗೆ ರೆಕಾರ್ಡ್ ಟೈಮ್‌ನಲ್ಲಿ ಒಂದು ವರ್ಷದ ಒಳಗಡೆಯೇ ಲಸಿಕೆ ಬರುತ್ತಿದೆ. ಇಡೀ ವಿಶ್ವದಲ್ಲೇ ಸುಮಾರು 50 ಕಂಪನಿಗಳು ಇದರ ಬಗ್ಗೆ ಸಂಶೋಧನೆ ಮಾಡಿವೆ. ಅದರಲ್ಲಿ ಸುಮಾರು 25 ಕಂಪನಿಗಳ ಕ್ಲಿನಿಕಲ್ ಟ್ರಯಲ್‌ನ ಮೂರನೇ ಹಂತವನ್ನು ಮುಟ್ಟಿದೆ ಎಂದರೆ, ನಾನು ಅದೇ ಒಂದು ಪವಾಡ ಮತ್ತು ಸಾಧನೆ ಎಂದು ಅಭಿಪ್ರಾಯಪಡುತ್ತೇನೆ. ಹಾಗಾಗಿ

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಾವೆಲ್ಲರೂ ಕೂಡ ಆಶಾಭಾವನೆಯಿಂದ ಅದನ್ನು ಎದುರು ನೋಡುತ್ತಿದ್ದೇವೆ. ಆದಷ್ಟು ಶೀಘ್ರದಲ್ಲಿ ಇದು ಮಾರುಕಟ್ಟೆಗೆ ಬರುತ್ತದೆ. ಇದು ಜನರಿಗೆ ಉಪಯೋಗವಾಗುತ್ತದೆಂದು ನಾನು ನಂಬಿದ್ದೇನೆ. ಈಗಾಗಲೇ ಸದಸ್ಯರಾದ ಮಾನ್ಯ ಯು.ಬಿ.ವೆಂಕಟೇಶ್‌ರವರು ಮತ್ತು ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಹೇಳಿದ ಹಾಗೆ, ಈ ವ್ಯಾಕ್ಸಿನ್‌ನಲ್ಲಿ ಮೂರನೇ ಹಂತದ ಕ್ಲಿನಿಕಲ್ ಟ್ರಯಲ್ ಆಗಿರುವಂತಹ ಸಂದರ್ಭದಲ್ಲಿ ಒಬ್ಬ ಮಾನ್ಯ ಮಂತ್ರಿಗಳಿಗೆ ಕ್ಲಿನಿಕಲ್ ಟ್ರಯಲ್ ತೆಗೆದುಕೊಂಡ ಮೇಲೆ ಮತ್ತೆ ಅವರಿಗೆ ಕೋವಿಡ್-19 ಬಂದಿದೆ ಎಂದು ಹೇಳಿದ್ದಾರೆ. ಅದು ವರದಿ ಕೂಡ ಆಗಿದೆ. ಇವತ್ತು ಆ ಕಂಪನಿಯವರು ಏನೆಂದು ಹೇಳಿದ್ದಾರೆಂದರೆ, ಅದು ಒಂದೇ ಡೋಸ್‌ಗೆ ಆಗುವುದಿಲ್ಲ. ಒಬ್ಬ ವ್ಯಕ್ತಿ ಅದನ್ನು ಎರಡು ಡೋಸ್ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಹಾಗಾಗಿ ಇದು ಇನ್ನು ಅಪೂರ್ಣವಾಗಿರುವಂತಹ ಡೋಸ್. ಇದನ್ನು ಆರೋಗ್ಯವಾಗಿರತಕ್ಕಂಥ ಒಬ್ಬ ವ್ಯಕ್ತಿ ಕೋವಿಡ್-19 ಬರದೇ ಇರತಕ್ಕಂಥವರಿಗೆ ಒಂದು ಡೋಸ್ ತೆಗೆದುಕೊಳ್ಳಬೇಕೆ? ಎರಡು ಡೋಸ್ ತೆಗೆದುಕೊಳ್ಳಬೇಕೆ ಮತ್ತು ಎಷ್ಟು ದಿನಗಳ ಮಧ್ಯೆ ಎರಡನೇ booster dose ಅನ್ನು ತೆಗೆದುಕೊಳ್ಳಬೇಕು? ಎಂದು ಇವೆಲ್ಲವೂ ಕೂಡ ಅಂತಿಮವಾಗಬೇಕು.

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವುದು ಅದನ್ನು ರೋಗಿಗಳಿಗೆ ಕೊಡುತ್ತೀರಾ ಎಂದು. ಮಾನ್ಯ ಸಚಿವರು ಅದರ ಬಗ್ಗೆ ಹೇಳಲಿ.

**ಡಾ||ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ನಾನು ಅದರ ಬಗ್ಗೆ ಹೇಳುತ್ತೇನೆ. ನಾನು ಮಾನ್ಯ ಯು.ಬಿ.ವೆಂಕಟೇಶ್‌ರವರು ಕೇಳಿರುವುದಕ್ಕೆ ಹೇಳುತ್ತಿದ್ದೇನೆ. ಈಗ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಕೇಳಿರುವಂತಹ ಪ್ರಶ್ನೆ ಎಂದರೆ, ಇದನ್ನು ಆರೋಗ್ಯವಂತ ವ್ಯಕ್ತಿ ತೆಗೆದುಕೊಳ್ಳುವಂತಹ ಲಸಿಕೆಯೆ ಅಥವಾ ಕೋವಿಡ್-19 ಬಂದ ಮೇಲೂ ಕೂಡ ಲಸಿಕೆಯನ್ನು ತೆಗೆದುಕೊಳ್ಳಬಹುದೇ ಎಂದು ಕೇಳಿದ್ದಾರೆ. ಇವತ್ತು ಸಾಮಾನ್ಯವಾಗಿ ವ್ಯಾಕ್ಸಿನ್ ಎಂದರೆ, ಕೋವಿಡ್-19 ಬರದೇ ಇರುವಂಥದ್ದಕ್ಕೆ ನಾವೆಲ್ಲರೂ ಕೂಡ ಆ ಲಸಿಕೆಯನ್ನು ಹಾಕಿಸಿಕೊಳ್ಳುವುದು. ಅದನ್ನು ಹಾಕಿಸಿಕೊಂಡ ಮೇಲೆ ಆ ವ್ಯಕ್ತಿಯಲ್ಲಿ ರೋಗ ನಿರೋಧಕ ಶಕ್ತಿ ಸ್ವಾಭಾವಿಕವಾಗಿ ಉತ್ಪತ್ತಿಯಾಗಿರುತ್ತದೆ. ಅದು ಎಷ್ಟು ತಿಂಗಳು ಉತ್ಪತ್ತಿಯಾಗುತ್ತದೆ ಎಂಬುದರ ಬಗ್ಗೆ ಇನ್ನು ಅಧ್ಯಯನ ನಡೆಯುತ್ತಿದೆ. ಕೆಲವರು ಮೂರು ತಿಂಗಳು ಎನ್ನುತ್ತಾರೆ ಮತ್ತೆ ಕೆಲವರು ಆರು ತಿಂಗಳು ಎಂದು ಹೇಳುತ್ತಿದ್ದಾರೆ. ಹಾಗಾಗಿ ಇವೆಲ್ಲವೂ ಕೂಡ ಅಂತಿಮವಾಗುವವರೆಗೂ ಕೂಡ ವೈಜ್ಞಾನಿಕವಾಗಿ ಇದಕ್ಕೆ ಇನ್ನೂ ಸ್ಪಷ್ಟತೆ ಇಲ್ಲ. ಹಾಗಾಗಿ ನಾವೆಲ್ಲರೂ ಕೂಡ ವಿಶ್ವ ಆರೋಗ್ಯ ಸಂಸ್ಥೆ ಮತ್ತು I.C.M.R (Indian Council of Medical Research) ನವರು ಅದನ್ನು ಅಂತಿಮ ಮಾಡುವವರೆಗೂ ಕೂಡ ಹಾಗೂ ಲಸಿಕೆ ಬಂದಾಗ ನಾವು ಏನು ಸಿದ್ಧತೆಯನ್ನು ಮಾಡಿಕೊಳ್ಳಬೇಕು ಅಂದರೆ ಸರ್ಕಾರದ ಇತಿಮಿತಿಯಲ್ಲಿ ಏನು ಮಾಡಿಕೊಳ್ಳಬಹುದು ಅದನ್ನು ಮಾಡೋಣ. ಲಸಿಕೆ ಬಂದ ಕೂಡಲೇ ಆದಷ್ಟು ಶೀಘ್ರವಾಗಿ ಮತ್ತು ಸಮಗ್ರವಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಗೂ ವೇಗವಾಗಿ ಎಷ್ಟು ಜನರಿಗೆ ತಲುಪಿಸುವುದಕ್ಕೆ ಸಾಧ್ಯವಾಗುತ್ತದೆ ಅದನ್ನು ಮಾಡುವಂತಹ ಕೆಲಸವನ್ನು ನಾವು ಮಾಡುತ್ತೇವೆ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಲಸಿಕೆಯನ್ನು ಏನಾದರೂ ಖಾಸಗಿ ವ್ಯಕ್ತಿಗಳಿಗೆ ಕೊಡುತ್ತಿದ್ದಾರೆಯೇ?

**ಡಾ||ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಮುಂದಿನ ದಿನಗಳಲ್ಲಿ ಅವರನ್ನು ಸಹ ಇದರಲ್ಲಿ ಸೇರಿಸಿಕೊಂಡು ಕೊಡಬೇಕಾಗುತ್ತದೆ. ಏಕೆಂದರೆ, ಇದನ್ನು ದೊಡ್ಡ ಸಂಖ್ಯೆಯಲ್ಲಿ ಕೊಡಬೇಕಾದರೆ, ಅದು ಸರ್ಕಾರಿ ವ್ಯವಸ್ಥೆಯಲ್ಲಿ ಖಂಡಿತವಾಗಿ ಆಗುವುದಿಲ್ಲ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಇದನ್ನು ಸರ್ಕಾರ ಕೊಡುವುದರ ಬದಲು ಖಾಸಗಿಯವರಿಗೆ ಕೊಟ್ಟರೆ, ಇದು ಒಂದು ದೊಡ್ಡ ದಂಧೆಯಾಗುತ್ತದೆ.

**ಡಾ||ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಮೊದಲು ಇದನ್ನು ಸರ್ಕಾರಿ ವ್ಯವಸ್ಥೆಯಲ್ಲೇ ಪ್ರಾರಂಭ ಮಾಡುತ್ತೇವೆ. ಬಹಳ ಹೆಚ್ಚು ಜನರಿಗೆ ತಲುಪಿಸಬೇಕು ಎಂದಾಗ ಅವರನ್ನು ಕೂಡ ಇದಕ್ಕೆ ಸೇರ್ಪಡೆ ಮಾಡಿಕೊಳ್ಳಬೇಕಾಗುತ್ತದೆ. ಇವತ್ತು ಅವರನ್ನು ಹೇಗೆ ಚಿಕಿತ್ಸೆಗೆ ಸೇರ್ಪಡೆ ಮಾಡಿಕೊಂಡಿದ್ದೇವೆಯೋ ಆ ರೀತಿಯಲ್ಲಿ collective effort ಆಗಬೇಕಾಗುತ್ತದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಪ್ರಶ್ನೆ ಸಂಖ್ಯೆ: 167)**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ||ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಗೌರವ ಡಾಕ್ಟರೇಟ್ ನೀಡಲು ಇರುವ ಮಾನದಂಡಗಳೇನು ಎಂಬುದು ಒಂದು ಪ್ರಶ್ನೆ. ಅದಕ್ಕೆ ಅವರ ಉತ್ತರವೆಂದರೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 69ರಲ್ಲಿ ನಿಗದಿಪಡಿಸಿರುವ ಮಾನದಂಡ ಹಾಗೂ ರಾಜ್ಯಪಾಲರ ಸಚಿವಾಲಯದ ಸುತ್ತೋಲೆಯನ್ನು ಉಲ್ಲೇಖ ಮಾಡಿ, ಆ ಪ್ರಕ್ರಿಯೆಯನ್ನು ಅನುಸರಿಸಿ ಗೌರವ ಡಾಕ್ಟರೇಟ್ ಕೊಡಲಾಗುತ್ತಿದೆ ಎಂದು ಅನುಬಂಧ-1 ಅನ್ನು ಒದಗಿಸಿದ್ದಾರೆ. ಎರಡನೆಯದಾಗಿ, ಕರ್ನಾಟಕದಲ್ಲಿ ಗೌರವ ಡಾಕ್ಟರೇಟ್ ಪಡೆದಿರುವವರ ಸಂಖ್ಯೆ ಎಷ್ಟು? ಅವರ ಹೆಸರು, ಸಾಧನೆ ಮತ್ತು ಅವರ ಕ್ಷೇತ್ರದ ಪೂರ್ಣ ಮಾಹಿತಿಯನ್ನು ಕೇಳಿದ್ದೇನೆ. ಅದರ ಮಾಹಿತಿಯನ್ನು ಸಹ ಸರ್ಕಾರ ಒದಗಿಸಿದೆ. ಇದು ತುಂಬಾ ಅದ್ಭುತವಾದ ಮಾಹಿತಿಗಳಿಂದ ಕೂಡಿದೆ. ಬಹುಶಃ ಸದನಕ್ಕೆ ಇದೊಂದು ಅದ್ಭುತವಾದ ದಾಖಲೆ ಸಿಕ್ಕಿದಂತಾಗಿದೆ. ಅದರ ಮೇಲೆಯೆ ಬೇಕಾದಷ್ಟು ಪಿ.ಹೆಚ್‌ಡಿ ಮಾಡಬಹುದಾದಂತಹ ಹೆಸರುಗಳನ್ನು ಈ ಪ್ರಶ್ನೆಗೆ ಒದಗಿಸಿದ್ದಾರೆ. ಅದಕ್ಕೆ ನಾನು ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈಗ ಅನುಬಂಧ-2ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಮೊಟ್ಟ ಮೊದಲ ಬಾರಿಗೆ 1965ರಲ್ಲಿ ಶ್ರೀಮತಿ ಇಂದಿರಾಗಾಂಧಿಯವರಿಗೆ ಗೌರವ ಡಾಕ್ಟರೇಟ್ ಅನ್ನು ಕೊಡುವುದಕ್ಕೆ ಶುರು ಮಾಡಿ, 1991ನೇ ಇಸವಿಯವರೆಗೆ ಅನೇಕ ಸಾಧಕರಿಗೆ ಗೌರವ ಡಾಕ್ಟರೇಟ್ ಅನ್ನು ನೀಡಿದೆ. ಅದರಲ್ಲಿ ಶ್ರೀ ಕೆ.ವಿ.ಪುಟ್ಟಪ್ಪನವರು, ಶ್ರೀ ದ.ರಾ.ಬೇಂದ್ರೆಯವರು, ಡಾ||ಕೆ.ಶಿವರಾಮ ಕಾರಂತರು, ವಿಜ್ಞಾನಿಯಾದ ಡಾ||ರಾಜಾರಾಮಣ್ಣ ಮತ್ತು ಮಾಜಿ ಮಾನ್ಯ ಮುಖ್ಯಮಂತ್ರಿಗಳಾದ ಡಿ.ದೇವರಾಜ ಅರಸುರವರು. ಹೀಗೆ ವಿವಿಧ ಕ್ಷೇತ್ರಗಳ ದಿಗ್ಗಜರಿಗೆ ಮತ್ತು ಗಣ್ಯರಿಗೆ ನಾಡು ನುಡಿ ಮತ್ತು ಯಾವೊತ್ತು ಮರೆಯಲಾರದಂತಹವರಿಗೆ ಗೌರವ ಡಾಕ್ಟರೇಟ್ ಅನ್ನು ಕೊಡುವ ಮೂಲಕ, ನಮ್ಮ ನಾಡಿನ ಮತ್ತು ವಿಶ್ವವಿದ್ಯಾಲಯದ ಘನತೆಯನ್ನು ಹೆಚ್ಚಿಸಿದ್ದಾರೆ. ನಾನು ಇದಕ್ಕಾಗಿಯೇ ಇವತ್ತು ಈ ಪ್ರಶ್ನೆಯನ್ನು ಕೇಳಿದ್ದೇನೆ. ಯೂನಿವರ್ಸಿಟಿ ಒಂದು ಡಾಕ್ಟರೇಟ್ ಅನ್ನು ಕೊಡುವುದಕ್ಕೆ ಸರ್ಕಾರ ಬೇಕಾದಷ್ಟು ಹಣವನ್ನು ವ್ಯಯ ಮಾಡುತ್ತದೆ. ಹಾಗೆಯೇ ತಜ್ಞರು ಹಾಗೂ ಪ್ರಾಧ್ಯಾಪಕರು ತಮ್ಮ ಇಡೀ ಜೀವನವನ್ನು ಒಂದು ತಪಸ್ಸು ಎಂದು ತಿಳಿದುಕೊಂಡು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಾರೆ. ಈಗ ವಿದ್ಯಾರ್ಥಿಗಳು ಸಂಶೋಧನೆ ಮಾಡಿದಾಗ ಅವರಿಗೆ ಈ ಒಂದು ಡಾಕ್ಟರೇಟ್ ಅನ್ನು ಪ್ರಧಾನ ಮಾಡುತ್ತಾರೆ. ಈ ಗೌರವ ಡಾಕ್ಟರೇಟ್ ಅನ್ನು ಕೊಡುವುದು ಅಂದರೆ, ಡಾ||ರಾಜ್‌ಕುಮಾರ್ ಮತ್ತು ಶ್ರೀ ಕೆ.ವಿ.ಪುಟ್ಟಪ್ಪ ಇಂತಹವರಿಗೆ ಅದನ್ನು ಕೊಡುವುದರ ಮೂಲಕ ನಮ್ಮನ್ನು ನಾವು ಗೌರವಿಸಿಕೊಳ್ಳಬೇಕು ಎನ್ನುವಂತಹ ಸದ್ಭಾವನೆಯಿಂದ ಕೊಡಲು ಶುರು ಮಾಡಿದಂತಹ ಸಂಸ್ಕೃತಿ ಇದು.

ಮಾನ್ಯ ಸಭಾಪತಿಯವರೇ, ಮೈಸೂರು ವಿಶ್ವವಿದ್ಯಾಲಯದ ಡಾಕ್ಟರೇಟ್‌ನ ಪಟ್ಟಿಯನ್ನು ನೋಡಿದರೆ, H.H. The Right Hon. Edward Frederic Lindley-Irwin of Kirby Underdale, P.C., G.M.S.I., BMIE., Viceroy and Governor General of India ದಿಂದ ಹಿಡಿದು Rajasabhabhushana Dewan Bahadur Sir K.P.Puttana Chetty K.T., C.U.I.E., Retd. Member of the Council, ಇವರೆಲ್ಲರೂ ಇದ್ದಾರೆ. ನಾವು ಏನು ಸರ್ ಪುಟ್ಟಣ ಚೆಟ್ಟಿ ಟೌನ್‌ಹಾಲ್ ಅನ್ನು ನೋಡುತ್ತೇವೆ. ಮಾನ್ಯ ಬಿ.ಕೆ.ಹರಿಪ್ರಸಾದ್‌ಜೀ ಯವರೆ, ಇವತ್ತಿನವರು ಅವರನ್ನು ಮರೆತೇ ಹೋಗಿದ್ದಾರೆ. ನಮಗೆ ಅದನ್ನು ನೋಡಿದರೆ ನೆನಪು ಬರುತ್ತದೆ. ಅದರ ಜೊತೆಗೆ ಎಂಥೆಂಥ ಮಹನೀಯರು ಎಂದರೆ, ಸರ್ ಎಂ.ವಿಶ್ವೇಶ್ವರಯ್ಯನವರು, ಸರ್ ಮಿರ್ಜಾ ಇಸ್ಮಾಯಿಲ್‌ರವರು, ಜನಾಬ್ ಮೌಲಾನಾ ಅಬ್ದುಲ್ ಕಲಾಂ ಅಜಾದ್‌ರವರು, ಡಾ||ರಾಜೇಂದ್ರ ಪ್ರಸಾದ್, ಶ್ರೀ ವಿ.ಕೆ.ಕೃಷ್ಣಮೆನನ್, ಭಾರತದ ಪ್ರಥಮ ಮಾನ್ಯ ಪ್ರಧಾನ ಮಂತ್ರಿಗಳಾದ ಜವಾಹರಲಾಲ್ ನೆಹರುರವರಿಗೆ ಹೀಗೆ ಅದ್ಭುತವಾದಂತಹ ಪಟ್ಟಿಯನ್ನು ಕೊಡುವುದರ ಮೂಲಕ ಮೈಸೂರು ವಿಶ್ವವಿದ್ಯಾಲಯ ಒಂದು ದೊಡ್ಡ ಸಾಧನೆಯನ್ನು ಮಾಡಿದೆ. ಹಾಗೆಯೇ ಶ್ರೀ ದಲೈಲಾಮ್‌ರವರಿಗೆ ಕೊಡುವುದರ ಮೂಲಕ ಒಂದು ಸಾಧನೆಯನ್ನು ಮಾಡಿದೆ.

ಈಗ ನನ್ನ ಮೂರನೆ ಪ್ರಶ್ನೆ ಇರುವಂಥದ್ದು, ಹೊರ ರಾಜ್ಯಗಳಿಂದ ಮತ್ತು ಹೊರ ದೇಶಗಳಿಂದ ಅಲ್ಲಿನ ವಿಶ್ವವಿದ್ಯಾಲಯಗಳಿಂದ ಅರ್ಹತೆ ಇಲ್ಲದವರಿಗೂ ಕರ್ನಾಟಕದಲ್ಲಿ ಡಾಕ್ಟರೇಟ್ ಪಡೆದಿರುವವರ ಮಾಹಿತಿ ಲಭ್ಯವಿದೆಯೇ ಎಂದು ಕೇಳಿದ್ದೇನೆ. ಅದಕ್ಕೆ ಉತ್ತರ ಏನೆಂದರೆ, ಈ ಬಗ್ಗೆ ಉನ್ನತ ಶಿಕ್ಷಣ ಇಲಾಖೆಗೆ ಯಾವುದೇ ದೂರು ಬಂದಿರುವುದಿಲ್ಲವೆಂದು ಸರ್ಕಾರ ಹೇಳಿದೆ. ಈಗ ನಾಲ್ಕನೆ ಪ್ರಶ್ನೆ ಏನೆಂದರೆ, ಯಾವುದೇ ಅರ್ಹ ಮಾನದಂಡವಿಲ್ಲದೆ ಡಾಕ್ಟರೇಟ್ ಖರೀದಿಸಿ ಅದರ ದುರ್ಬಳಕೆಯಿಂದ ಸಮಾಜದಲ್ಲಿ ಆಗುತ್ತಿರುವ ದುಷ್ಪರಿಣಾಮ ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು ಎಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಉತ್ತರವೆಂದರೆ, ಅಂತಹ ಡಾಕ್ಟರೇಟ್ ಪದವಿಗಳನ್ನು ಯಾವುದೇ ಉದ್ದೇಶಕ್ಕೆ ಸರ್ಕಾರವು ಪರಿಗಣಿಸುವುದಿಲ್ಲವೆಂದು ಹೇಳಿದ್ದಾರೆ. ಇಷ್ಟರ ಮಟ್ಟಿಗೆ ಕಾಳಜಿ ವಹಿಸಿದ್ದಕ್ಕೆ ನಮಗೆ ಖುಷಿಯಿದೆ. ಹೊರ ದೇಶಗಳ fake university ಗಳಿಂದ ಇವತ್ತು ನಿಜವಾದ ಡಾಕ್ಟರೇಟ್ ಮಾಡಿದಂತಹವರು ಪ್ರಾಧ್ಯಾಪಕರು University Doctorate ಎಂದು ಹೇಳಿಕೊಳ್ಳುವಂತಿಲ್ಲ. ಈಗ ಶಿರಾ ಒಂದರಲ್ಲೇ ಐದು ಡಾಕ್ಟರೇಟ್ ಪದವಿ ಇದೆಯಂತೆ. ಅದನ್ನು ಕೇಳುತ್ತಿದ್ದರೆ ನನಗೆ ತಲೆ ಸುತ್ತು ಬರುತ್ತದೆ. ಕ್ರಿಮಿನಲ್‌ಗಳಿಗೆ ಡಾಕ್ಟರೇಟ್ ಪದವಿ. ಇವತ್ತು ಈ ಸದನ ಇದರ ಬಗ್ಗೆ ಎಚ್ಚೆತ್ತುಕೊಳ್ಳಬೇಕು. ನಾವು ಇವತ್ತು ಒಂದು ಸಂತೋಷಪಡುವಂತಹ ಸುದ್ದಿಯೂ ಇದೆ. ಸದಸ್ಯರಾದ ಮಾನ್ಯ ಕೆ.ಗೋವಿಂದರಾಜ್‌ರವರು ಕ್ರೀಡಾ ಕ್ಷೇತ್ರದಲ್ಲಿ ಸಾಧನೆಯನ್ನು ಮಾಡಿ. ಕ್ರೀಡಾ ಕ್ಷೇತ್ರವನ್ನು ಒಲಂಪಿಕ್‌ವರೆಗೆ ತೆಗೆದುಕೊಂಡು ಹೋಗಿ, ಸದನದಲ್ಲೂ ಸಹ ಒಂದು ಗೌರವ ಡಾಕ್ಟರೇಟ್ ಅನ್ನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಾಧಿಸಿದವರು ಇದ್ದಾರೆ. ಅದಕ್ಕೆ ನಮಗೆ ಖುಷಿ ಇದೆ. At the same time, ಈ ತರಹ ಒಂದು ದುರ್ಬಳಕೆ ಮಾಡಿಕೊಂಡು ಉನ್ನತ ಪದವಿಗಳಿಗೆ ಹೋಗುವಂತಹ ಏನು ಒಂದು ದಂಧೆ ನಡೆಯುತ್ತಿದೆ ಅಂತಹ ಒಂದು ದಂಧೆಗಳಿಗೆ ನಮ್ಮ ಯೂನಿವರ್ಸಿಟಿಗಳಲ್ಲಿ ಒಂದು checkmate ಇರಬೇಕು. ಭಾರತ ದೇಶ ಮತ್ತು ಸರ್ಕಾರದ ಗಮನಕ್ಕೆ ಬಾರದೆ ಹಾಗೂ Ministry of Externals Affairs ರವರ ಗಮನಕ್ಕೆ ಬಾರದೆ ಈ ರೀತಿ ಡಾಕ್ಟರೇಟ್‌ಗಳನ್ನು ಕೊಡುವಂತಹ ಈ ದಂಧೆಗಳಿಗೆ ಕಡಿವಾಣ ಹಾಕುವುದಕ್ಕೆ ಕರ್ನಾಟಕ ರಾಜ್ಯ ಮೊದಲ ಹೆಜ್ಜೆ ಇಡಬೇಕು ಎನ್ನುವ ನಿಟ್ಟಿನಲ್ಲಿ, ನಾನು ಈ ಒಂದು ಉತ್ತರವನ್ನು ಬಯಸಿ ಈ ಪ್ರಶ್ನೆಯನ್ನು ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ಕೇಳುತ್ತಿದ್ದೇನೆ.

**ಡಾ॥ ಸಿ.ಎನ್.ಅಶ್ವಥ್ ನಾರಾಯಣ:–** ಮಾನ್ಯ ಸಭಾಪತಿಯವರೇ, ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ಇಂತಹ ಯಾವುದೇ ಸಮಸ್ಯೆಗಳನ್ನು ನಮ್ಮ ವಿಶ್ವವಿದ್ಯಾಲಯಗಳಲ್ಲಿ ಎದುರಿಸುತ್ತಿಲ್ಲ. ಇವತ್ತು ಏನು ಗೌರವ ಡಾಕ್ಟರೇಟ್‌ಗಳನ್ನು ಬೇರೆ ಬೇರೆ ಹೊರದೇಶ ಮತ್ತು ಹೊರ ರಾಜ್ಯಗಳಲ್ಲಿ ಕೆಲವು ವ್ಯಕ್ತಿಗಳಿಗೆ confer ಆಗುತ್ತಿರುವಂಥದ್ದು ಎಲ್ಲೋ ಒಂದು ಕಡೆ ಸಮಾಜದಲ್ಲಿ ಒಂದು ತರಹದ ದುರ್ವ್ಯವ ಇರುವಂಥದ್ದು ಮತ್ತು ಎಲ್ಲೋ ಒಂದು ಕಡೆ ಸಮಾಜದಲ್ಲಿ ಇದನ್ನು ಒಪ್ಪುವುದಕ್ಕೆ ಆಗುತ್ತಿಲ್ಲ.

**(ಮುಂದು...)**

**(985) 07.12.2020 05.50 ಎಲ್‌ಎಲ್/ಎಕೆ**
**ಡಾ॥ ಸಿ.ಎನ್.ಅಶ್ವಥ್ ನಾರಾಯಣ(ಮುಂದುವರೆದುದು)**

ಈ ಡಾಕ್ಟರೇಟ್ ಅನ್ನು ಯಾರೂ ಕೂಡ ತಮ್ಮ ಹೆಸರಿನ ಮುಂದೆ ಬಳಕೆ ಮಾಡುವಂತಿಲ್ಲ. Prefix and Suffix use ಆಗಿ ಮಾಡುವ ಹಾಗಿಲ್ಲ. ಯಾರು ಪಿ.ಹೆಚ್‌ಡಿ. ಮಾಡದೇ ಇರುವಂತಹವರು ಮತ್ತು honorary doctorate ಪಡೆದಿರುವವರು 'Dr.' ಎಂದು ಬಳಕೆ ಮಾಡುವಂತಿಲ್ಲ. ಇವೊತ್ತಿನ ದಿವಸ ಏನಿದ್ದರೂ earned doctorates, ಪಿ.ಹೆಚ್‌ಡಿ. ಮಾಡಿರುವವರು ಬಳಕೆ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಆದರೆ, ಇವೊತ್ತಿನ ದಿವಸ ಒಂದು ಟ್ರೆಂಡ್ ರೀತಿಯಲ್ಲಿ ಬೇರೆ ಬೇರೆ ದೇಶದಲ್ಲಿ ಇದೊಂದು ವ್ಯವಸ್ಥಿತ ಜಾಲವಾಗಿದೆ. ಇದು ಬೇರೆ ಬೇರೆ ಕಡೆಯಿಂದ ಆಗಿರುವುದರಿಂದ, ನಾವು ಈ ಬಗ್ಗೆ ಒಂದು ಪ್ರಯತ್ನ ಮಾಡುತ್ತೇವೆ ಮತ್ತು ಪರಿಶೀಲನೆ ಮಾಡಿ ಇದನ್ನು ತಡೆಗಟ್ಟುವುದಕ್ಕೆ ಏನೇನು ಮಾಡಬಹುದು ಆ ಪ್ರಯತ್ನಗಳನ್ನು ಮಾಡುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಆರ್. ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಅದನ್ನು ಆದಷ್ಟು ಬೇಗ ಮಾಡಬೇಕು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ...

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ನನ್ನ ಎರಡನೇ ಪ್ರಶ್ನೆಗೆ ನೀಡಿರುವ ಉತ್ತರದಲ್ಲಿ ರೆಗ್ಯುಲರ್ ಡಾಕ್ಟರೇಟ್ ಕೊಡುವುದಕ್ಕೆ ಮತ್ತು ನಮ್ಮ ರಾಜ್ಯದಲ್ಲಿ ಗೌರವ ಡಾಕ್ಟರೇಟ್ ಕೊಡುವುದಕ್ಕೆ ಏನು ಮಾನದಂಡ ಅನುಸರಿಸುತ್ತಿದ್ದಾರೆ, ಆ ಮಾನದಂಡಗಳು ಕಡ್ಡಾಯ ಎನ್ನುವಂತಹ ನಿಬಂಧನೆಯನ್ನು ವಿಧಿಸಿದರೆ ಸರಿ ಹೋಗುತ್ತದೆ. ಇಲ್ಲದೇ ಹೋದರೆ, ಮಾನ್ಯ ಮಾಡುವುದಿಲ್ಲ. ಅಂತಹವರ ವಿರುದ್ಧ ಕಾನೂನು ಕ್ರಮ ಜರುಗಿಸುತ್ತೇವೆ ಎನ್ನುವ ಕಠಿಣ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಡಾ: ವೈ.ಎ. ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, **XXX** ಪಾಪ, ಏನು ಸಣ್ಣ–ಸಣ್ಣ ಕೆಲಸ ಮಾಡುತ್ತಾರೋ, ಆಮೇಲೆ ರಿಯಲ್ ಎಸ್ಟೇಟ್ ಏಜೆಂಟ್‌ಗಳು ಅವರೆಲ್ಲರೂ ಗೌರವ ಡಾಕ್ಟರೇಟ್‌ಗಳನ್ನು ಎಲ್ಲಿಂದ ತರುತ್ತಾರೋ ಗೊತ್ತಿಲ್ಲ. ಅವರ ಹೆಸರಿನ ಮುಂದೆ ‘Dr.’ ಎಂದು ಹಾಕಿಕೊಳ್ಳುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಹಾಗಾದರೆ **XXX** ತೆಗೆದುಕೊಳ್ಳಬಾರದೇ?

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ಓದಿ ತೆಗೆದುಕೊಳ್ಳಲಿ ನಮಗೆ ಸಮಸ್ಯೆ ಇರುವುದಿಲ್ಲ. But it is become joke of the day. ಯಾರು ಬೇಕಾದರೂ ಡಾಕ್ಟರೇಟ್ ತೆಗೆದುಕೊಳ್ಳುತ್ತಾರೆ. 50 ಸಾವಿರ ಹಣ ನೀಡಿ ಡಾಕ್ಟರೇಟ್ ತೆಗೆದುಕೊಳ್ಳುತ್ತಾರೆ. ಅದಕ್ಕೆ ಬೆಲೆ ಬೇಡವೇ?

**ಶ್ರೀ ಬಿ.ಕೆ. ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾಫಿಯಾ ಡಾನ್‌ಗಳು ಕೂಡ ಡಾಕ್ಟರೇಟ್ ತೆಗೆದುಕೊಳ್ಳುತ್ತಾರೆ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಹೌದು. ಮಾಫಿಯಾ ಡಾನ್‌ಗಳು ಕೂಡ ತೆಗೆದುಕೊಳ್ಳುತ್ತಾರೆ. ಅಂಡರ್‌ವರ್ಲ್ಡ್‌ನವರು ಕೂಡ ಡಾಕ್ಟರೇಟ್ ತೆಗೆದುಕೊಂಡು ಬರುತ್ತಾರೆ. ಅದಕ್ಕೋಸ್ಕರ ನಮ್ಮ ಸಹೋದರಿ ತೇಜಸ್ವಿನಿ ಗೌಡರವರು ಹೇಳಿದ್ದಾರೆ. ಅದಕ್ಕೆ ನಾವು ಕೂಡ ಆಗ್ರಹ ಮಾಡುವುದೇನೆಂದರೆ, ಇದಕ್ಕೆ ಒಂದು ಕಡಿವಾಣ ಹಾಕಬೇಕು. ಅದನ್ನು ಬಳಕೆ ಮಾಡಿದವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಬೇಕು ಮತ್ತು ಅವರ ವಿರುದ್ಧ ಎಫ್.ಐ.ಆರ್. ಹಾಕಬೇಕು.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಏನು ಹೇಳುತ್ತೇನೆಂದರೆ...

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈಗ ಅಂಡರ್‌ವರ್ಲ್ಡ್ ಡಾನ್‌ಗಳು ಮತ್ತು ಕ್ರಿಮಿನಲ್‌ಗಳಿಗೆ ಗೌರವ ಡಾಕ್ಟರೇಟ್ ಕೊಟ್ಟಿದ್ದಾರೆ. **XXX** ಗೌರವ ಡಾಕ್ಟರೇಟ್ ಪಡೆದುಕೊಂಡರೆ ಅವರಿಗೆ ನಾವು honour ಮಾಡಬೇಕು. ಅವರು ಏನಾದರೂ ಅಂತಹ ವಿಶೇಷವಾದಂತಹ ಸಾಧನೆ ಮಾಡಿದರೆಂದರೆ ಅವರಿಗೆ ಗೌರವ ಡಾಕ್ಟರೇಟ್ ಕೊಡಬಹುದು. It is dignity of labour. ಇದು ವೃತ್ತಿ ಘನತೆ. ಯಾವುದೇ ವೃತ್ತಿಯನ್ನು ಕನಿಷ್ಠ ವೃತ್ತಿ ಎಂದು ನಾವು ಭಾವಿಸಬಾರದು. ಇದರಿಂದಾಗಿ, ಸಮಾಜಕ್ಕೆ ತಪ್ಪು ಸಂದೇಶ ಹೋಗುತ್ತದೆ.

**ಶ್ರೀ ಆರ್. ಧರ್ಮಸೇನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 2-3 ವರ್ಷದ ಹಿಂದೆ ಮೈಸೂರಿನಲ್ಲಿ ಕೆಲವು ವ್ಯಕ್ತಿಗಳು ನನ್ನ ಬಳಿ ಬಂದು, "ಸರ್, ತಮಗೆ ಡಾಕ್ಟರೇಟ್ ಕೊಡುತ್ತಿದ್ದೇವೆ ದಯಮಾಡಿ ತಾವು ತೆಗೆದುಕೊಳ್ಳಬೇಕೆಂದು" ಹೇಳಿದರು.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, **XXX** ಎನ್ನುವುದನ್ನು ಕಡತದಿಂದ ತೆಗೆದುಬಿಡಿ. It will not give a good signal. **XXX** ಡಾಕ್ಟರೇಟ್ ತೆಗೆದುಕೊಂಡಿದ್ದಾರೆಂದರೆ, ಆ ವೃತ್ತಿಗೆ ಅಗೌರವ ಮಾಡಿದಂತಾಯಿತು.

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ...

**ಸಭಾಪತಿಯವರು:-** ನಾನು ಅದನ್ನು ಪರಿಶೀಲನೆ ಮಾಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು **XXX** ಗಳಿಂದ ಹಿಡಿದು ಯಾವುದೇ ವ್ಯಕ್ತಿಗಳು ಲೀಗಲ್ ಆಗಿ ಡಾಕ್ಟರೇಟ್ ತೆಗೆದುಕೊಂಡಿದ್ದರೆ ಅದಕ್ಕೆ ವ್ಯಾಲಿಡಿಟಿ ಇದೆ. Illegal ಆಗಿ ಯಾರೇ ಡಾಕ್ಟರೇಟ್ ತೆಗೆದುಕೊಂಡಿದ್ದರೆ ಅದಕ್ಕೆ ವ್ಯಾಲಿಡ್ ಇರಬಾರದು. ಆ ಅರ್ಥದಲ್ಲಿ ನಾನು ಹೇಳಿದ್ದೇನೆಯೇ ಹೊರತು, ನಾನು ಅವರಿಗೆ ಅವಮಾನ ಮಾಡುವ ಅರ್ಥದಲ್ಲಿ ಹೇಳಿರುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಮ್ಮ ಸ್ನೇಹಿತರಾಗಿದ್ದು, ಸಮಾಜದಲ್ಲಿ ಅವರದ್ದೇ ಘನತೆ–ಗೌರವ ಇದೆ.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ...

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವರು ಮೇಲ್ಮನೆ ಸದಸ್ಯರಾಗಿದ್ದಾರೆ. **XXX** ತಮ್ಮ ವೃತ್ತಿಯಲ್ಲಿ ಅಗಾಧವಾದಂತಹ ಸಾಧನೆ ಮಾಡಿದ್ದರೆ ಅಥವಾ ಜನ ಮೆಚ್ಚುವಂತಹ ಕಾರ್ಯ ಮಾಡಿದ್ದರೆ, ಅವರಿಗೆ ಮೊದಲು ಕೊಡಬೇಕೆಂದು ನಾನು ಹೇಳುತ್ತೇನೆ.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, dignity of labour ಎಲ್ಲರಿಗೂ ಇದೆ. ಅವರಲ್ಲಿಯೂ ಸಾಧನೆ ಮಾಡಿ, ಕ್ರಮಬದ್ಧವಾಗಿ ಡಾಕ್ಟರೇಟ್ ತೆಗೆದುಕೊಂಡಿದ್ದರೆ ಅದನ್ನು honour ಮಾಡೋಣ. ಆದರೆ, illegal ಆಗಿ ಯಾರು ತೆಗೆದುಕೊಂಡಿದ್ದಾರೋ ಅದನ್ನು ಮಾನ್ಯ ಮಾಡಬಾರದೆಂಬ ಅರ್ಥದಲ್ಲಿ ಮಾತ್ರ ಹೇಳಿದ್ದೇನೆ. ಹಾಗಾಗಿ, ಇದನ್ನು ಅನ್ಯಥಾ ಭಾವಿಸಬಾರದು.

**(ಗೊಂದಲ)**

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳಲ್ಲಿ ನಾನು ಮನವಿ ಮಾಡುವುದೇನೆಂದರೆ, ಕಳೆದ 3 ವರ್ಷಗಳ ಹಿಂದೆ...

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, **XXX** ಎನ್ನುವುದನ್ನು ಕಡತದಿಂದ ತೆಗೆಯಬೇಕು.

**ಸಭಾಪತಿಯವರು:- XXX** ಎನ್ನುವುದನ್ನು ಕಡತದಿಂದ ತೆಗೆದುಹಾಕಿ.

**(ಗೊಂದಲ)**

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೇ, ನನ್ನ ಹತ್ತಿರ ಒಬ್ಬರು ಬಂದು, "ಸರ್, ನಿಮಗೆ ಡಾಕ್ಟರೇಟ್ ಕೊಡುತ್ತಿದ್ದೇವೆ, ತಾವು ತೆಗೆದುಕೊಳ್ಳಬೇಕೆಂದು" ಹೇಳಿದರು. ಅದಕ್ಕೆ ನಾನು, "ನನಗೆ ಏನೆಂದರೆ, ಏನೂ ಗೊತ್ತಿಲ್ಲ. ರಾಜಕಾರಣಿಗಳು ಡಾಕ್ಟರೇಟ್ ತೆಗೆದುಕೊಂಡರೆ ಅದಕ್ಕೆ ಮರ್ಯಾದೆ ಇರುವುದಿಲ್ಲ ಬೇಡವೆಂದು" ಹೇಳಿದೆನು. ನನಗೆ ಅವರು ಹೇಗೋ ಮನವೊಲಿಸಿ, "ಇರಲಿ ಸರ್, ಚೆನ್ನಾಗಿರುತ್ತದೆ, ಡಾ: ಧರ್ಮಸೇನ ಎಂದು ಹಾಕಬಹುದೆಂದು" ನನ್ನನ್ನು ಒಪ್ಪಿಸಿದರು. ಆ ನಂತರ ಅದಕ್ಕಾಗಿ ಒಂದೂ ಮುಕ್ಕಾಲು ಲಕ್ಷ ರೂಪಾಯಿ ಹಣ ಕೇಳಿದರು. ನಾನು, "ಬೇಡಪ್ಪ ಖಂಡಿತ ಬೇಡ. ನಾನು ದುಡ್ಡು ಕೊಟ್ಟು ಡಾಕ್ಟರೇಟ್ ತೆಗೆದುಕೊಂಡರೆ ಅದಕ್ಕೆ ಮರ್ಯಾದೆ ಇರುವುದಿಲ್ಲ, ನನಗಲ್ಲ. ಆ ರೀತಿ ಮಾಡಬೇಡಿ. ಸಾಧನೆ ಮಾಡಿದವರಿಗೆ ಡಾಕ್ಟರೇಟ್ ಕೊಡಿ" ಎನ್ನುವ ಮಾತನ್ನು ಹೇಳಿದೆನು. ಆ ನಂತರ, ಅವರು ಆ ಹಣವನ್ನು ಕೊನೆಯದಾಗಿ 25 ಸಾವಿರ ರೂಪಾಯಿಗೆ ಕಡಿಮೆ ಮಾಡಿದರು. ಕೊನೆಯದಾಗಿ ಅವರು, "50 ಸಾವಿರ ರೂಪಾಯಿ ಕೊಡಿ ಸರ್, 3 ಜನಕ್ಕೆ ಡಾಕ್ಟರೇಟ್ ಕೊಡುತ್ತೇವೆಂದು" ಹೇಳಿದರು. ಅದರಂತೆ, ನಾನು ಇನ್ನೂ ಇಬ್ಬರು ಡಾಕ್ಟರೇಟ್ ತೆಗೆದುಕೊಳ್ಳುವವರನ್ನು ಅಡ್ಜಸ್ಟ್ ಮಾಡಿಕೊಳ್ಳಬೇಕಾಗಿತ್ತು. ಅದಕ್ಕಾಗಿ, "ನಾನು ನಮಗೂ ಯಾರೋ ಸ್ನೇಹಿತರಿದ್ದು, ಬೇಕಾದರೆ ಅವರಿಗೆ ಕೊಡಬಹುದು" ಎಂದು ನಾನು ಹೇಳಿದೆನು. ಇದು ಯಾವ ರೀತಿ ಆಗಿದೆಯೆಂದರೆ, ಬೇರೆ ಬೇರೆಯವರು ಈ ರೀತಿ... ಈ ಬಗ್ಗೆ ಮಾನ್ಯ ನಾರಾಯಣಸ್ವಾಮಿಯವರು ಸರಿಯಾಗಿಯೇ ಹೇಳಿದರು. ಅದರಲ್ಲಿ ಏನೂ ತಪ್ಪಿಲ್ಲ. ಆದರೆ, ಪದ ಪ್ರಯೋಗದಲ್ಲಿ ವ್ಯತ್ಯಾಸ ಆಗಿರಬಹುದು. ಇದರಲ್ಲಿ ಓರಿಜಿನಲ್ ಡಾಕ್ಟರೇಟ್ ಯಾರು ತೆಗೆದುಕೊಂಡಿದ್ದಾರೆಂಬ ಬಗ್ಗೆ ಮಾನ್ಯ ತೇಜಸ್ವಿನಿಯವರು ಕೇಳಿರುವ ಪ್ರಶ್ನೆ ಎಂದು ನಾನು ತಿಳಿದುಕೊಂಡಿದ್ದೇನೆ. ದಯಮಾಡಿ ಇದನ್ನು bifurcate ಮಾಡಿ ಮಾನ್ಯ ಮಂತ್ರಿಗಳು ಅವುಗಳನ್ನು ವಿತ್‌ಡ್ರಾ ಮಾಡಬೇಕು. ಇಲ್ಲವಾದರೆ, ಯಾರಿಗೆ ಡಾಕ್ಟರೇಟ್ ಕೊಟ್ಟಿದ್ದಾರೆ, ಅವರ ಜೊತೆ ಇವರು ಸೇರಿಕೊಂಡು ಎಲ್ಲರೂ ಒಂದೇ ರೀತಿಯಾಗುತ್ತಾರೆ. ಇದರಲ್ಲಿ ಲಾಬಿ ಎನ್ನುವುದು ಶೇಕಡ 100 ರಷ್ಟು ಇದೆ. ಇದು ಸಾಲದೆಂಬಂತೆ ವಿಪರ್ಯಾಸ ಏನೆಂದರೆ, ಇಂತಹ ಡಾಕ್ಟರೇಟ್‌ಗಳನ್ನು ನೀಡುವುದಕ್ಕೆ ಬಹಳ ದೊಡ್ಡ ದೊಡ್ಡ ಗಣ್ಯವ್ಯಕ್ತಿಗಳು ಹೋಗುತ್ತಾರೆ. ಅವರು ಏತಕ್ಕೆ ಹೋಗುತ್ತಾರೆ

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಥವಾ ಯಾವರೀತಿ ಹೋಗುತ್ತಾರೆ ಎನ್ನುವುದೇ ನನಗೆ ಒಂದು ಆಶ್ಚರ್ಯ. ಇದು ದೆಹಲಿಯಿಂದ ಪ್ರಾರಂಭವಾಗಿ, ಪ್ರತಿಯೊಂದು ಜಿಲ್ಲೆಗಳ ಮಟ್ಟಕ್ಕೆ ಬಂದುಬಿಟ್ಟಿದೆ. ತಮಿಳುನಾಡು ರಾಜ್ಯದಲ್ಲಿರಬಹುದು ಅಥವಾ ಬೇರೆ ಬೇರೆ ಜಿಲ್ಲೆಗಳ ಮಟ್ಟದಲ್ಲಿ ಮಾಡುವುದಕ್ಕೆ ಆಗುತ್ತಿದೆ. ಹಾಗಾಗಿ, ಮಾನ್ಯ ಮಂತ್ರಿಗಳು ದಯಮಾಡಿ ಇದರ ಬಗ್ಗೆ ಸೂಕ್ತ ಗಮನ ಹರಿಸಬೇಕೆಂದು ನಾನು ಮನವಿ ಮಾಡುತ್ತೇನೆ.

**ಡಾ: ಅಶ್ವತ್ಥ್ ನಾರಾಯಣ್:-** ಮಾನ್ಯ ಸಭಾಪತಿಯವರೇ, ನಾನು ಒಂದು ವಿಷಯವನ್ನು ಸ್ಪಷ್ಟಪಡಿಸುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಬಗ್ಗೆ ನಾನು ಒಂದು ಸಲಹೆ ನೀಡುತ್ತೇನೆ. ಮಾನ್ಯ ಸಚಿವರು ಈ ವಿಷಯವನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ರಾಜ್ಯ ಸರ್ಕಾರದಿಂದ ಮತ್ತು ಕೇಂದ್ರ ಸರ್ಕಾರದಿಂದ ಸ್ಥಾಪಿಸಲ್ಪಟ್ಟಂತಹ ಅಂದರೆ, ಅನುಮೋದಿತವಾದಂತಹ ವಿ.ವಿ.ಗಳನ್ನು ಹೊರತುಪಡಿಸಿ, ಬೇರೆ ಯಾರೂ ಕೂಡ ಇಂತಹ ಸಮಾರಂಭಗಳನ್ನು ನಮ್ಮ ರಾಜ್ಯದಲ್ಲಿ ಮಾಡಬಾರದು. ಅದು ಹೊರರಾಜ್ಯದ ಹೆಸರಿನಲ್ಲಿರಬಹುದು, ಹೊರ ರಾಷ್ಟ್ರದ ಹೆಸರಿನಲ್ಲಿರಬಹುದು, ಬೇರೆ ಯಾವುದೇ ವಿಶ್ವವಿದ್ಯಾಲಯಗಳ ಹೆಸರಿನಲ್ಲಿ ನಮ್ಮ ರಾಜ್ಯದಲ್ಲಿ ಡಾಕ್ಟರೇಟ್ ಅವಾರ್ಡ್ ಮಾಡಿದರೆ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಬೇಕು. ಆಗ ಮಾತ್ರ ಇದಕ್ಕೆ ಕಡಿವಾಣ ಹಾಕುವುದಕ್ಕೆ ಸಾಧ್ಯವಿದೆ. ಇಲ್ಲವಾದರೆ, ನಮ್ಮ ರಾಜ್ಯದಿಂದ ಅನುಮೋದಿತವಾಗಿರುವಂತಹ ಶಿಕ್ಷಣ ಸಂಸ್ಥೆಗಳಲ್ಲಿ/ವಿ.ವಿ.ಗಳಲ್ಲಿ ಡಾಕ್ಟರೇಟ್ ಕೊಡುವುದಕ್ಕೆ ಅವಕಾಶವಿದೆ. ಹಾಗಾಗಿ, ದಯಮಾಡಿ ಅಂತಹ ಡಾಕ್ಟರೇಟ್‌ಗಳನ್ನು ವಿತ್‌ಡ್ರಾ ಮಾಡಬೇಕು ಮತ್ತು ಅಂತಹವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಬೇಕೆಂದು ನಾನು ಮನವಿ ಮಾಡುತ್ತೇನೆ.

**ಡಾ: ತಳವಾರ್ ಸಾಬಣ್ಣ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಗೌರವ ಡಾಕ್ಟರೇಟ್ ಕೊಡಬೇಕೆಂದು ಮತ್ತು ಈ ಸದನದಲ್ಲಿ ನಕಲಿ ಮತ್ತು ಅಸಲಿ ಎಂಬ ವಿಷಯ ಚರ್ಚೆಗೆ ಬಂದಾಗ, ನಾನು ಓರಿಜಿನಲ್ ಡಾಕ್ಟರೇಟ್ ಯುನಿವರ್ಸಿಟಿಯಿಂದ ಮಾತನಾಡುತ್ತೇನೆ. ತಾವು ನನಗೆ ಮಾತನಾಡಲು ಅವಕಾಶ ನೀಡಬೇಕೆಂದು ಕೇಳುತ್ತಾ, ಈ ಉತ್ತರದಲ್ಲಿ ಗೌರವ ಡಾಕ್ಟರೇಟ್ ನೀಡಿರುವ ಸಂಖ್ಯೆಯನ್ನು ನೋಡುತ್ತಾ ಹೋದಾಗ, 1970 ಅಥವಾ 1980 ಶತಕದಲ್ಲಿ ಸಾಮಾನ್ಯವಾಗಿ 2 ರಿಂದ 3 ಗಣ್ಯವ್ಯಕ್ತಿಗಳಿಗೆ ಗೌರವ ಡಾಕ್ಟರೇಟ್ ನೀಡಿದ್ದು ಇಲಾಖೆ ಎಂದು ನಮೂದು ಇದೆ. ಆದರೆ, ಇತ್ತೀಚಿನ ದಿನಗಳಲ್ಲಿ ಅಂದರೆ 2000-2010 ರ ನಂತರ 5 ರಿಂದ 10 ಜನರಿಗೆ ಗೌರವ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಡಾಕ್ಟರೇಟ್ ನೀಡುತ್ತಿದ್ದಾರೆ. ಇದರಿಂದ ಅಭಾಸವಾಗುತ್ತಿದೆ. ಹಾಗಾಗಿ, ಮಾನ್ಯ ಮಂತ್ರಿಗಳು ಈ ಬಗ್ಗೆ ಗಮನಹರಿಸಬೇಕೆಂದು ಮತ್ತು ಪರಿಶೀಲಿಸಬೇಕೆಂದು ತಮ್ಮ ಮೂಲಕ ಮನವಿ ಮಾಡುತ್ತೇನೆ.

**ಡಾ: ಸಿ.ಎನ್.ಅಶ್ವತ್ಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಬಹಳಷ್ಟು ವಿಚಾರಗಳನ್ನು ಬೆಳಕಿಗೆ ತಂದಿದ್ದಾರೆ. ಅದರಲ್ಲಿ ಮುಖ್ಯವಾಗಿ ಬಹಳ ಸ್ಪಷ್ಟವಾಗಿ ತಿಳಿಯಪಡಿಸುವುದೇನೆಂದರೆ, ಮಾನ್ಯತೆ ಪಡೆದಂತಹ ಯಾವುದೇ ವಿಶ್ವವಿದ್ಯಾಲಯಗಳು ಇಂತಹ ಕಾರ್ಯದಲ್ಲಿ ತೊಡಗಿರುವುದಿಲ್ಲ. ಅಂದರೆ, ಯು.ಜಿ.ಸಿ. ಮಾನ್ಯತೆಯನ್ನು ಪಡೆದಿರುವಂತಹದ್ದು, ಯು.ಜಿ.ಸಿ. ಪಟ್ಟಿಯಲ್ಲಿರುವಂತಹ ಯಾವುದೇ ವಿಶ್ವವಿದ್ಯಾಲಯಗಳು ಇಂತಹ ಡಾಕ್ಟರೇಟ್ ಕೊಡುವಂತಹ ಕಾರ್ಯದಲ್ಲಿ ತೊಡಗಿರುವುದಿಲ್ಲ. ಅದರಲ್ಲಿಯೂ ನಮ್ಮ ಕರ್ನಾಟಕ ರಾಜ್ಯದಲ್ಲಂತೂ ಇಲ್ಲವೇ ಇಲ್ಲ. ಇವು ಏನೇ ಇದ್ದರೂ ಬೇರೆ ಬೇರೆ illegal ಆಗಿರುವಂತಹ universities ಅಂದರೆ, ಅವುಗಳಿಗೆ legality ನೇ ಇರುವುದಿಲ್ಲ. ಯು.ಜಿ.ಸಿ. ಪಟ್ಟಿಯಲ್ಲಿ ಇಡೀ ವಿಶ್ವದಲ್ಲಿ ಯಾವ್ಯಾವ ಯುನಿವರ್ಸಿಟಿಗಳಿಗೆ ಮಾನ್ಯತೆ ಇದೆ ಎಂಬ ಪಟ್ಟಿ ನಮ್ಮಲ್ಲಿದೆ. ಇಡೀ ವಿಶ್ವವ್ಯಾಪ್ತಿಯಲ್ಲಿ ಎಲ್ಲಾ ದೇಶದಲ್ಲಿ ಯಾವ್ಯಾವ ವಿಶ್ವವಿದ್ಯಾಲಯಗಳಿಗೆ ಮಾನ್ಯತೆ ಇದೆ ಎನ್ನುವಂತಹದ್ದು Official List ನಲ್ಲಿದೆ. ಹಾಗಾಗಿ, ಇಂತಹ ಯಾವುದೇ ಲಿಸ್ಟ್‌ನಲ್ಲಿ ಇಲ್ಲದೇ ಇರುವಂತಹ ವಿಶ್ವವಿದ್ಯಾಲಯಗಳು ಕೆಲವು ಇವೆ. ಇವುಗಳು illegal ಆಗಿದ್ದು, ಇವುಗಳಿಗೆ ಯಾವುದೇ ಮಾನ್ಯತೆ ಆಗಲಿ ಅಥವಾ legality ಆಗಲಿ ಇರುವುದಿಲ್ಲ. ಇಂತಹ ವಿಶ್ವವಿದ್ಯಾಲಯಗಳಲ್ಲಿ ಸುಮ್ಮನೆ ಯಾರೋ ಕುಳಿತುಕೊಂಡು ಯಾರಿಗೆ ಬೇಕಾದರೂ ಕೊಡಬಹುದು ಎನ್ನುವಂತಹ ಡಾಕ್ಟರೇಟ್ ಇದಾಗಿದೆ. ಇದಕ್ಕೆ ಒಂದು ಕಾರ್ಯಕ್ರಮ ಮಾಡಿ, ಒಂದು ಸರ್ಟಿಫಿಕೇಟ್ ಪ್ರಿಂಟ್ ಮಾಡಿ ಕೊಡುತ್ತಾರೆ ಅಷ್ಟೇ. ಯಾವುದೋ ಒಂದು ಸೊಸೈಟಿ ಅಥವಾ ಟ್ರಸ್ಟ್ ರೀತಿಯಲ್ಲಿ ಎನ್.ಜಿ.ಓ. ಮಾಡಿಕೊಂಡು ಇಂತಹ ಡಾಕ್ಟರೇಟ್ ಕೊಡುವಂತಹ ಕೆಲಸ ಆಗುತ್ತಿದೆ. ಹಾಗಾಗಿ, ಇಂತಹ ವಿಶ್ವವಿದ್ಯಾಲಯಗಳು ಯಾವುವೂ ಲೀಗಲ್ ಆಗಿರುವುದಿಲ್ಲ ಮತ್ತು ಇದಕ್ಕೆ ಯಾವುದೇ ಮಾನ್ಯತೆ ಇರುವುದಿಲ್ಲ.

**(ಮುಂದು)**

**(986)07.12.2020/6.00/ವೈಎಲ್-ವಿಕೆ**

**ಡಾ: ಸಿ.ಎನ್.ಅಶ್ವತ್ಥ್ ನಾರಾಯಣ(ಮುಂದುವರೆದುದು)**

ಹೆಸರಿನ ಹಿಂದೆ ಡಾಕ್ಟರೇಟ್ ಎಂದು ಹಾಕಿಕೊಳ್ಳುವವರಿಗೆ ಹಾಗೂ ಸುಳ್ಳು ಪ್ರಮಾಣಪತ್ರ ಪಡೆದುಕೊಳ್ಳುವವರ ಮೇಲೆ ಯಾವ ರೀತಿ ಕ್ರಮವಹಿಸಬೇಕೆಂಬುದರ ಬಗ್ಗೆ ಪರಿಶೀಲನೆ ಮಾಡುತ್ತೇವೆ. ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ನಮ್ಮ ಗವರ್ನರ್‌ರವರು 2016ನೇ ಸಾಲಿನಲ್ಲಿ ನೀಡಿರುವ ಸುತ್ತೋಲೆಯ ಪ್ರಕಾರ ಒಂದು ವರ್ಷದಲ್ಲಿ, ಒಂದು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ವಿಶ್ವವಿದ್ಯಾಲಯದಲ್ಲಿ ಗರಿಷ್ಠ ಪ್ರಮಾಣದಲ್ಲಿ ಎಂದರೆ, 3 ಜನರಿಗೆ ಮಾತ್ರ ಡಾಕ್ಟರೇಟ್ ಪ್ರಮಾಣಪತ್ರ ವಿತರಿಸಲು ಸಾಧ್ಯವಿದೆ. ಈಗ ಸಾಮಾನ್ಯವಾಗಿ ರೆಗ್ಯೂಲರ್ ವಿಶ್ವವಿದ್ಯಾಲಯದಲ್ಲಿ ಒಬ್ಬರಿಗೆ ಮಾತ್ರ ಡಾಕ್ಟರೇಟ್ ಪ್ರಮಾಣಪತ್ರ ನೀಡಲಾಗುತ್ತಿದೆ. ಕೆಲವು ಸಲ ಗರಿಷ್ಠ ಪ್ರಮಾಣದಲ್ಲಿ ಎಂದರೆ 3 ಜನರಿಗೆ ಮಾತ್ರ ಪ್ರಮಾಣಪತ್ರ ನೀಡಲು ಸಾಧ್ಯವಿದೆ. ಹಿಂದಿನ ಕಾಲದವರು ಮಾತ್ರ ಒಳ್ಳೆಯ ಸಾಧನೆಯನ್ನು ಮಾಡಿಲ್ಲ. ಇಂದಿಗೂ ಅದ್ಭುತವಾಗಿ ಸಾಧನೆ ಮಾಡುವವರು ನಮ್ಮ ಕಣ್ಣ ಮುಂದೆ ಇದ್ದಾರೆ. ಹಾಗಾಗಿ ಸಾಧನೆ ಮಾಡಿದವರನ್ನು ಗೌರವಿಸುವ ಕೆಲಸವಾಗಬೇಕು. ಯಾರು Honorary Doctorate ತೆಗೆದುಕೊಳ್ಳುವವರಿದ್ದಾರೆ, ಅವರನ್ನು ಗುರುತಿಸುವ ಕೆಲಸ ಮಾಡುತ್ತೇವೆ. ಡಾಕ್ಟರೇಟ್ ಪ್ರಮಾಣಪತ್ರ ಪಡೆಯದೇ ಇರುವವರು ಮೊದಲೇ ಹೆಸರಿನ ಹಿಂದೆ ಡಾಕ್ಟರೇಟ್ ಎಂದು ಹಾಕಿಕೊಳ್ಳುವ ಹಾಗಿಲ್ಲ. ಮಾನ್ಯ ಸದಸ್ಯರಾದ ಧರ್ಮಸೇನರವರೆ, ಇವತ್ತಿನ ದಿವಸ ನಾವು ಏನು ಹೇಳುತ್ತಿದ್ದೇವೆ ಹಾಗೂ ಕೇಳುತ್ತಿದ್ದೇವೆ ಅದಕ್ಕೆ ಸಂಬಂಧಿಸಿದಂತೆ ನಮ್ಮ ಭಾಗದಲ್ಲಿಯೇ, ...

**ಡಾ॥ ವೈ.ಎ.ನಾರಾಯಣಸ್ವಾಮಿ:–** ಡಾಕ್ಟರೇಟ್ ಪ್ರಮಾಣಪತ್ರ ಪಡೆಯದೇ ಇರುವವರು ಮೊದಲೇ ಹೆಸರಿನ ಹಿಂದೆ ಡಾಕ್ಟರೇಟ್ ಎಂದು ಹಾಕಿಕೊಳ್ಳುವವರ ಮೇಲೆ ಯಾವ ರೀತಿ ಕ್ರಮ ಕೈಗೊಳ್ಳುತ್ತೀರಿ ಎಂಬುದನ್ನು ದಯವಿಟ್ಟು ತಿಳಿಸಬೇಕು.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮುತ್ತಪ್ಪ ರೈ ಗೆ ಡಾಕ್ಟರೇಟ್ ನೀಡಿದಾಗ ಯಾರೂ ಸಹ ಏರು ಧ್ವನಿ ಎತ್ತಲಿಲ್ಲ. ಈಗ ಏತಕ್ಕೆ ಮಾತನಾಡುತ್ತಿದ್ದಾರೆ. ಇಂತಹ ವಿಚಾರಗಳು ನಡೆದಾಗಲೇ ಮಾತನಾಡಲಿಲ್ಲ.

**ಡಾ॥ ಸಿ.ಎನ್.ಅಶ್ವಥ್‌ನಾರಾಯಣ:–** ಮಾನ್ಯ ಸಭಾಪತಿಯವರೇ, ಈಗ ಅವರು ಬದುಕಿಲ್ಲ ಬಿಡಿ. ಅವರ ಹೆಸರನ್ನು ಏತಕ್ಕೆ ತೆಗೆದುಕೊಳ್ಳುತ್ತಾರೆ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಚಿವರೇ, ಕಾನೂನುಬಾಹಿರವಾಗಿ ಡಾಕ್ಟರೇಟ್ ಪ್ರಮಾಣಪತ್ರ ಪಡೆಯದೇ ಇರುವವರು ಮೊದಲೇ ಹೆಸರಿನ ಹಿಂದೆ ಡಾಕ್ಟರೇಟ್ ಎಂದು ಹಾಕಿಕೊಳ್ಳುವವರ ಮೇಲೆ ಯಾವ ರೀತಿ ಕ್ರಮ ಕೈಗೊಳ್ಳುತ್ತೀರಿ ಎಂಬುದನ್ನು ತಿಳಿಸಿ. ಅಂಥವರ ಮೇಲೆ ಕೇಸ್ ಬುಕ್ ಮಾಡಿ.

**ಡಾ॥ ಸಿ.ಎನ್.ಅಶ್ವಥ್‌ನಾರಾಯಣ:–** ಮಾನ್ಯ ಸಭಾಪತಿಯವರೇ, ಎಲ್ಲೆಲ್ಲಿ ಇಂತಹ ದೂರು ಬರುತ್ತದೆ, ಎಲ್ಲೆಲ್ಲಿ ಇಂತಹ ಪದ ಬಳಕೆಯಾಗುತ್ತದೆ, ಅಂಥವರ ಮೇಲೆ ಕಾನೂನಾತ್ಮಕವಾಗಿ ಏನು ಕ್ರಮ ಕೈಗೊಳ್ಳಬಹುದು ಅಂತಹ ಕ್ರಮ ಕೈಗೊಳ್ಳುತ್ತೇವೆ ಎಂದು ತಿಳಿಸಲು ಇಚ್ಛಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ: 07.12.2020ರ ಸಮೂಹ–1ರ ಚುಕ್ಕೆ ಗುರುತಿಲ್ಲದ 98 ಪ್ರಶ್ನೆಗಳ ಪೈಕಿ 68 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಪ್ರಶ್ನೋತ್ತರ ಅವಧಿಗೆ 01 ಗಂಟೆಗಳು ಮಾತ್ರ ಅವಕಾಶ ಇರುತ್ತದೆ. ಆದರೆ, ಇವತ್ತಿನ ದಿವಸ ಮಧ್ಯಾಹ್ನ 3.20 ರಿಂದ ಭೋಜನಕ್ಕಾಗಿ ಸದನವನ್ನು ಮುಂದೂಡಲಾಗಿದ್ದು, ಈಗ ಮತ್ತೆ ಪ್ರಶ್ನೋತ್ತರ ಅವಧಿಯನ್ನು ಕೈಗೊಳ್ಳಲಾಗಿದೆ. ಆದ್ದರಿಂದ ಇನ್ನು ಮುಂದೆ ಪ್ರಶ್ನೋತ್ತರ ಅವಧಿಯ ವೇಳೆಯಲ್ಲಿ ಭೋಜನಕ್ಕೆ ಎಂದೂ ಸದನವನ್ನು ಮುಂದೂಡಲಾಗುವುದಿಲ್ಲ.

## 08. <u>ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು</u>

**(ಅ) ವಿಷಯ:– ಶಿಕ್ಷಕರ ಮತ್ತು ಶಿಕ್ಷಣ ಕ್ಷೇತ್ರದ ಜ್ವಲಂತ ಸಮಸ್ಯೆಗಳ ಬಗ್ಗೆ ಧಾರವಾಡ ಜಿಲ್ಲಾಧಿಕಾರಿಗಳ ಕಛೇರಿ ಎದುರು ಉಪವಾಸ ಸತ್ಯಾಗ್ರಹ ಪ್ರಾರಂಭಿಸಿರುವ ಬಗ್ಗೆ.**

– – – –

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘ(ರಿ) ಹುಬ್ಬಳ್ಳಿ ಇವರು ಶಿಕ್ಷಕರ ಹಾಗೂ ಶಿಕ್ಷಣ ಕ್ಷೇತ್ರದ ಜ್ವಲಂತ ಸಮಸ್ಯೆಗಳ ಪರಿಹಾರಕ್ಕಾಗಿ ಹಿರಿಯ ವಿಧಾನ ಪರಿಷತ್ ಸದಸ್ಯರಾದ ಮಾನ್ಯ ಬಸವರಾಜ ಹೊರಟ್ಟಿಯವರ ನೇತೃತ್ವದಲ್ಲಿ ಇದೇ ಶನಿವಾರ ದಿನಾಂಕ: 05.12.2020 ರಿಂದ ಧಾರವಾಡ ಜಿಲ್ಲಾಧಿಕಾರಿಗಳ ಕಛೇರಿ ಎದುರಿಗೆ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿರುವರು.

ಸಂಘಟನೆಯವರು ಪ್ರಮುಖವಾಗಿ 15 ಬೇಡಿಕೆಗಳನ್ನು ಈಡೇರಿಸುವ ಕುರಿತು ಸರ್ಕಾರಕ್ಕೆ ಮನವಿ ಸಲ್ಲಿಸಿ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿರುವರು. ಸಂಘದ ಪ್ರಮುಖ ಬೇಡಿಕೆಗಳಾದ 1995ರ ನಂತರ ಪ್ರಾರಂಭವಾದ ಅನುದಾನ ರಹಿತ ಶಾಲೆ, ಕಾಲೇಜುಗಳಿಗೆ ಅನುದಾನ ನೀಡುವುದು, ಶ್ರೀ ಬಸವರಾಜ ಹೊರಟ್ಟಿಯವರ ನೇತೃತ್ವದ ಕಾಲ್ಪನಿಕ ವೇತನ ಸಮಿತಿ ವರದಿ ಜಾರಿಗೊಳಿಸುವುದು, ನೂತನ ಪಿಂಚಣಿ ಪದ್ಧತಿ ರದ್ದುಗೊಳಿಸಿ ಹಳೆ ಪಿಂಚಣಿ ವ್ಯವಸ್ಥೆ ಜಾರಿಗೊಳಿಸುವುದು, ಜ್ಯೋತಿ ಸಂಜೀವಿನಿ ಯೋಜನೆಯನ್ನು ಅನುದಾನಿತ ಶಾಲೆಗಳ ಸಿಬ್ಬಂದಿಗೆ ವಿಸ್ತರಿಸುವುದು, ಶ್ರೀ ಎನ್.ಎ.ಮುತ್ತಣ್ಣ ಸ್ಮಾರಕ ಪೊಲೀಸ್ ಮಕ್ಕಳ ವಸತಿ ಶಾಲೆಯ ಶಿಕ್ಷಕರ ವೇತನ ಬಿಡುಗಡೆ ಮತ್ತು ಶಾಲೆ ಆರಂಭಕ್ಕೆ ಅನುಮತಿ ನೀಡುವುದು. ವೈದ್ಯನಾಥ ವರದಿ ಸಂಪೂರ್ಣ ಜಾರಿಗೊಳಿಸುವುದು, ತರಗತಿಯ ಶಿಕ್ಷಕ ಮತ್ತು ವಿದ್ಯಾರ್ಥಿ ಅನುಪಾತ 1:50 ಗೆ ಸೀಮಿತಗೊಳಿಸುವುದು, ಅನುದಾನರಹಿತ ಶಾಲಾ ಶಿಕ್ಷಕ ಹಾಗೂ ಸಿಬ್ಬಂದಿಗೆ ಕನಿಷ್ಠ ವೇತನ ಹಾಗೂ ಸೇವಾ ಭದ್ರತೆ ಒದಗಿಸುವುದು. ಹಾಗೂ ಸರ್ಕಾರಿ ನೌಕರರಿಗೆ ಅನ್ವಯಿಸುವ ಎಲ್ಲಾ ಸವಲತ್ತುಗಳನ್ನು ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೂ ದೊರೆಯುವಂತೆ ಮಾಡುವುದು. ಮುಂತಾದ ಬೇಡಿಕೆಗಳನ್ನು ಈಡೇರಿಸಲು ಹೋರಾಟ ಪ್ರಾರಂಭಿಸಿ 3 ದಿನಗಳಾಗಿವೆ. ಈ ಕುರಿತು ಎಲ್ಲಾ ಪತ್ರಿಕೆಗಳಲ್ಲಿ ವರದಿಯಾಗಿರುವುದರ ಹಿನ್ನೆಲೆಯಲ್ಲಿ ಸರ್ಕಾರ ಕೂಡಲೇ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಂಘಟನೆಯ ಪದಾಧಿಕಾರಿಗಳನ್ನು ಚರ್ಚೆಗೆ ಆಹ್ವಾನಿಸಿ ಬೇಡಿಕೆಗಳನ್ನು ಬೇಗನೆ ಈಡೇರಿಸಲು ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಶಿಕ್ಷಣ ಕ್ಷೇತ್ರದ ಜ್ವಲಂತ ಸಮಸ್ಯೆ ಕುರಿತು ಮಾನ್ಯ ಸದಸ್ಯರು ಮಂಡಿಸಿರುವ ಶೂನ್ಯ ವೇಳೆ ಪ್ರಶ್ನೆಗೆ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಿಂದ ಉತ್ತರ ಪಡೆದು ಮಂಡಿಸುತ್ತೇನೆ.

**(ಆ) ವಿಷಯ:– ಮೂಡುಬಿದರೆಯ ಶಿರ್ತಾಡಿಮಕ್ಕಿ ಜವಾಹರಲಾಲ್ ನೆಹರು ಅನುದಾನಿತ ಪ್ರೌಢ ಶಾಲಾ ಶಿಕ್ಷಕಿ ಎನ್.ಪದ್ಮಾಕ್ಷಿ ಇವರು ಕೊರೋನಾಗೆ ತುತ್ತಾಗಿ ಮೃತರಾಗಿದ್ದು, ಪರಿಹಾರ ನೀಡದಿರುವ ಕುರಿತು.**

– – – –

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕೊರೊನಾ ವಾರಿಯರ್ಸ್‌ಗಳು ಕರ್ತವ್ಯ ನಿರತರಾಗಿದ್ದಾಗ ಒಂದು ವೇಳೆ ಮೃತಪಟ್ಟರೆ ಸರ್ಕಾರದ ವತಿಯಿಂದ ಪರಿಹಾರ ಧನ ಕೊಡುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಅದರಂತೆ ಇತ್ತೀಚೆಗೆ ವಿದ್ಯಾಗಮ ಕಾರ್ಯಕ್ರಮವನ್ನು ಸರ್ಕಾರವೇ ಆಯೋಜಿಸಿದ್ದು, ಈ ಸಂದರ್ಭದಲ್ಲಿ ಮೂಡುಬಿದಿರೆ ಶಿರ್ತಾಡಿಮಕ್ಕಿಯ ಜವಾಹರಲಾಲ್ ನೆಹರು ಅನುದಾನಿತ ಪ್ರೌಢಶಾಲೆಯಲ್ಲಿ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಪದ್ಮಾಕ್ಷಿ ಎನ್ ರವರು ಕೊರೊನಾಗೆ ತುತ್ತಾಗಿ ಮೃತ್ತಪಟ್ಟಿರುವುದು ಸರಿಯಷ್ಟೇ. ನಂತರದಲ್ಲಿ ಸರ್ಕಾರವು ತಾನಾಗಿಯೇ ನುಡಿದಂತೆ ಪರಿಹಾರ ಧನವಾಗಲಿ, ಚಿಕಿತ್ಸಾ ವೆಚ್ಚವಾಗಲಿ ಇನ್ನೂ ಸಹ ಮೃತರ ಕುಟುಂಬದ ಕೈ ಸೇರಿರದೇ ಇರುವುದು ನಿಜಕ್ಕೂ ದೌರ್ಭಾಗ್ಯವೇ ಸರಿ. ಶಿಕ್ಷಕಿಯ ಸಂಪೂರ್ಣ ಚಿಕಿತ್ಸಾ ವೆಚ್ಚವನ್ನು ಸರ್ಕಾರ ಭರಿಸಲಿದೆ ಎಂದು ಸರ್ಕಾರವು ತಾನೇ ಘೋಷಣೆ ಮಾಡಿದ್ದರೂ, ಅದು ಪೇಪರ್ ಮೇಲಿನ ಹೇಳಿಕೆಯಾಗಿ ಉಳಿದಿದೆಯೇ ಹೊರತು, ಘೋಷಿಸಿದ ಪರಿಹಾರ ಧನವು ಮಾತ್ರ ಇನ್ನೂ ತಲುಪದಿರುವುದು ಸರ್ಕಾರದ ಬೇಜವಾಬ್ದಾರಿ ನಡೆಗೆ ಹಿಡಿದ ಕನ್ನಡಿಯಾಗಿದೆ.

ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಪ್ರಶ್ನೋತ್ತರ ಅವಧಿಯಲ್ಲಿ ಆದಷ್ಟು ಬೇಗ ವ್ಯವಸ್ಥೆ ಮಾಡಿಕೊಡುತ್ತೇವೆ ಎಂದು ತಿಳಿಸಿದ್ದಾರೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಇ) ವಿಷಯ:– ಅಧಿವೇಶನ ನಡೆಯುತ್ತಿರುವ ಹಿನ್ನೆಲೆಯಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗ ಹರಡುವ ಭೀತಿಯಲ್ಲಿ ಇರುವುದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ಅಗತ್ಯ ಕ್ರಮ ಕೈಗೊಳ್ಳುವ ಕುರಿತು.**

– – – – –

**ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸಂಬಂಧಿಸಿದಂತೆ ಬೆಳಗ್ಗೆ ಮಾತನಾಡಿದ್ದು, ಸರ್ಕಾರದಿಂದ ಯಾವುದೇ ಉತ್ತರ ಬಂದಿರುವುದಿಲ್ಲ. ಆದರೂ ಶೂನ್ಯ ವೇಳೆಯಲ್ಲಿ ತಂದಿರುವುದರಿಂದ ಮತ್ತೊಮ್ಮೆ ಪ್ರಸ್ತಾಪ ಮಾಡುತ್ತೇನೆ. ಕಳೆದ ಅಧಿವೇಶನ ಸಮಯದಲ್ಲಿ ಶಾಸಕರು, ಅಧಿಕಾರಿಗಳು ಹಾಗೂ ಇತರೆ ಸಿಬ್ಬಂದಿಗಳಿಗೆ ಕೋವಿಡ್–19 ಸೋಂಕಿನ ಪರೀಕ್ಷೆಯನ್ನು ನಡೆಸಲಾಗಿದ್ದು, ಪ್ರಸ್ತುತ ಅಧಿವೇಶನ ನಡೆಯುತ್ತಿದ್ದು, ಕೋವಿಡ್–19 ಸಾಂಕ್ರಾಮಿಕ ರೋಗವು ಸಂಪೂರ್ಣವಾಗಿ ನಿಂತಿಲ್ಲವಾಗಿದ್ದರೂ, ಸರ್ಕಾರವು ಈ ಅಧಿವೇಶನದಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಯಾವುದೇ ಕೋವಿಡ್–19 ಪರೀಕ್ಷೆ ನಡೆಸದೇ ಇರುವುದರಿಂದ ಕರೋನಾ ಸಾಂಕ್ರಾಮಿಕ ರೋಗವು ಹರಡುವ ಭೀತಿಯಲ್ಲಿ ಶಾಸಕರು ಹಾಗೂ ಇತರೆ ಸಿಬ್ಬಂದಿ ಇರುವುದರ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಕೂಡಲೇ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಈ ಸದನದ ಮೂಲಕ ಪ್ರಸ್ತಾಪಿಸುತ್ತೇನೆ. ಈಗಾಗಲೇ ಇದರ ಬಗ್ಗೆ ಮಾತನಾಡಿದ್ದು, ಮಾನ್ಯ ಸಚಿವರು ಉತ್ತರ ನೀಡಲಿಲ್ಲ. ಇದರ ಬಗ್ಗೆ ನಾಳೆಯಾದರೂ ಏನಾದರೂ ವ್ಯವಸ್ಥೆ ಮಾಡಬೇಕು. ಕೋವಿಡ್–19 ಪರೀಕ್ಷೆ ಮಾಡಲಿಲ್ಲವೆಂದರೆ, ಯಾರಿಗಾದರೂ ಒಬ್ಬರಿಗೆ ಕೋವಿಡ್–19 ರೋಗವು ಬಂದರೆ, ಇಡೀ ಸದನದಲ್ಲಿ ಎಲ್ಲರಿಗೂ ಸಾಂಕ್ರಾಮಿಕ ರೋಗ ಬರುವಂಥ ಭೀತಿ ಇದೆ. ಸರ್ಕಾರ ಇದರ ನಿಲುವನ್ನು ಸ್ಪಷ್ಟಪಡಿಸಿ, ನಾಳೆಯಾದರೂ ಆರ್‌ಟಿ–ಪಿಸಿಆರ್ ಪರೀಕ್ಷೆ ಮಾಡುವುದಕ್ಕೆ ವ್ಯವಸ್ಥೆ ಕಲ್ಪಿಸಬೇಕೆಂದು ತಮ್ಮ ಮೂಲಕ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಬಹಳ ಸೂಕ್ತವಾದ ಪ್ರಶ್ನೆಯನ್ನು ಕೇಳಿದ್ದಾರೆ. ಯಾರಾದರೂ ಒಬ್ಬರಿಗೆ ಕೋವಿಡ್–19 ರೋಗ ಇದ್ದರೆ,... ಮೊದಲೇ ಇದು ಸೆಂಟ್ರಲಿ ಏರ್ ಕಂಡೀಷನ್ ವ್ಯವಸ್ಥೆಯುಳ್ಳ ಹಾಲ್ ಆಗಿದ್ದು, ಸಮಸ್ಯೆಯಾಗುತ್ತದೆ. ಏತಕ್ಕೆ ವಿಶೇಷವಾಗಿ ಈ ಸಲ ಸದನಕ್ಕೆ ಬರುವವರಿಗೆ ಕೋವಿಡ್–19 ಪರೀಕ್ಷೆ ಮಾಡಿಸಲಿಲ್ಲ. ಹಿಂದಿನ ಅಧಿವೇಶನದಲ್ಲಿ ಕೋವಿಡ್–19 ಪರೀಕ್ಷೆ ಮಾಡಿಸಿ, ನೆಗೆಟಿವ್ ಬಂದವರನ್ನು ಮಾತ್ರ ಸದನದ ಒಳಗೆ ಬಿಡಲಾಗಿತ್ತು. ಈ ಸಲ ಏತಕ್ಕೆ ಮಾಡಲಿಲ್ಲವೆಂದು ಆಶ್ಚರ್ಯವಾಗುತ್ತಿದೆ. ರೋಗ ಬಂದರೆ ಬರಲಿ, ಎಲ್ಲರಿಗೂ ಹರಡಲಿ ಎಂದು ಇದ್ದಾರೆಯೇ ಅಥವಾ ಕೋವಿಡ್–19 ರೋಗ ಇಲ್ಲದಂತಾಗಿದೆಯೇ ಏನೆಂಬುದು ನಮಗೆ ಅರ್ಥವಾಗುತ್ತಿಲ್ಲ. ಕೋವಿಡ್–19 ರೋಗ ಇಲ್ಲವೆಂದಾದರೆ, ಮತ್ತೆ ಏತಕ್ಕೆ ನಾವು ಮಾಸ್ಕ್ ಧರಿಸಬೇಕು?

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಕರೋನಾ ರೋಗ ಹರಡುವ ಭೀತಿಯಲ್ಲಿರುವುದರಿಂದ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವ ಬಗ್ಗೆ ಮಾನ್ಯ ಸದಸ್ಯರ ಕೇಳಿರುವಂಥ ವಿಚಾರವಾಗಿ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಲ್ಲಿ ಚರ್ಚೆ ಮಾಡಿ, ಸೂಕ್ತ ಕ್ರಮ ಕೈಗೊಂಡು ಉತ್ತರ ನೀಡುತ್ತೇವೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

## 09. ಶಾಸನ ರಚನೆ

### ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

**ಸಭಾಪತಿಯವರು:-** ವಿಧಾನ ಪರಿಷತ್ತಿನ 141ನೇ ಅಧಿವೇಶನ ದಿನಾಂಕ: 26.09.2020 ಮತ್ತು 27.09.2020 ರಂದು ನಡೆದ ಉಪವೇಶನದಲ್ಲಿ ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತ ರೂಪದಲ್ಲಿರುವ 'ಕರ್ನಾಟಕ ಭೂ ಸುಧಾರಣೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2020' ನ್ನು ಪರ್ಯಾಲೋಚಿಸಲು ಸೂಚಿಸಿದ ನಂತರ ಮಾನ್ಯ ಸಚಿವರು ವಿಧೇಯಕ ಕುರಿತು ವಿವರಣೆ ನೀಡಿದ್ದಾರೆ. ತದನಂತರ ಮಾನ್ಯ ಸದಸ್ಯರು ಸ್ಪಷ್ಟೀಕರಣ ಕೋರಿ ವಿಧೇಯಕದ ಮೇಲೆ ಚರ್ಚೆ ನಡೆಸಲಾಗಿರುತ್ತದೆ. ಅಂದು ಸದನವನ್ನು ಅನಿರ್ದಿಷ್ಟ ಕಾಲಾವಧಿಯವರೆಗೂ ಮುಂದೂಡಲಾಗಿರುವ ಹಿನ್ನೆಲೆಯಲ್ಲಿ ಪ್ರಸ್ತುತ 142ನೇ ಅಧಿವೇಶನದಲ್ಲಿ ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತ ರೂಪದಲ್ಲಿರುವ 'ಕರ್ನಾಟಕ ಭೂ ಸುಧಾರಣೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2020' ರ ಮೇಲಿನ ಚರ್ಚೆಯನ್ನು ಮುಂದುವರೆಸಲಾಗುವುದು.

**ಕರ್ನಾಟಕ ಭೂ ಸುಧಾರಣೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2020**(ಮುಂದುವರೆದ ಚರ್ಚೆ)

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಭೂ ಸುಧಾರಣೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2020ನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 13 ರವರೆಗೆ**

**ಸಭಾಪತಿಯವರು:-** "ಖಂಡ 2 ರಿಂದ 13 ರವರೆಗೆ ವಿಧೇಯಕದ ಭಾಗವಾಗಿರುತ್ತದೆ"

(ಮುಂದು)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(987)07.12.2020/6.10/ಎಸ್‌ಕೆ-ವಿಕೆ

**ಶ್ರೀ ಎಸ್. ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಅದರ ಮೇಲೆ ಚರ್ಚೆಯಾಗಬೇಕು.

**ಸಭಾಪತಿಯವರು:-** ಅದರ ಮೇಲೆ ಚರ್ಚೆ ಮಾಡುತ್ತಾರೆ.

**ಶ್ರೀ ಆರ್. ಆಶೋಕ್ (ಕಂದಾಯ ಸಚಿವರು):-** ಮಾನ್ಯ ವಿರೋಧ ಪಕ್ಷದ ನಾಯಕರು ಇದರ ಬಗ್ಗೆ ಮಾತನಾಡಬೇಕು. ತಾವು ಮಾತನಾಡಿದ ಮೇಲೆ ನಾನು ಉತ್ತರವನ್ನು ಕೊಡುತ್ತೇನೆ.

ಕರ್ನಾಟಕ ಭೂ ಸುಧಾರಣೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2020 ಈ ವಿಧೇಯಕವನ್ನು ಈಗಾಗಲೇ ಈ ಸದನದಲ್ಲಿ ಸಹ ಮಂಡಿಸಿ ಚರ್ಚೆಯಾಗಿತ್ತು. ಸದರಿ ವಿಧೇಯಕದಲ್ಲಿ ಎರಡು ಸಣ್ಣ ತಿದ್ದುಪಡಿ ತರಲು ಉದ್ದೇಶಿಸಲಾಗಿದೆ. 1, 12 ಮತ್ತು 13ನೇ ಖಂಡಗಳಿಗೆ ordinance ಮುಖಾಂತರ ಮೊದಲೇ ಅಂತಿಮವಾಗಿ ತೀರ್ಮಾನವಾದ ಪ್ರಕರಣದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. "ಯಾವುದೇ ನ್ಯಾಯಾಲಯ ಅಥವಾ tribunal ಮುಂದೆ ordinance ಹೊರಡಿಸಿದ ದಿನದಿಂದ ಬಾಕಿಯಿದ್ದ ಎಲ್ಲಾ ಪ್ರಕರಣಗಳು ಕೊನೆಯಾಗತಕ್ಕದ್ದು." ಎನ್ನುವಂತಹ ಅಂಶ ಹಿಂದಿನ ವಿಧೇಯಕದಲ್ಲೂ ಇತ್ತು. ಆದರೆ ಹೆಚ್ಚಿನ clarification ಅನ್ನು ತಿದ್ದುಪಡಿಯಲ್ಲಿ ನಾವು ತಂದಿದ್ದೇವೆ. ಕರ್ನಾಟಕ ಭೂ ಸುಧಾರಣೆ ಕಾಯಿದೆ (ಎರಡನೇ ತಿದ್ದುಪಡಿ) ordinance 2, 2020 ನ್ನು replace ಮಾಡಲಾಗುತ್ತದೆ. ಇದರ ಬಗ್ಗೆ ಚರ್ಚೆ ಮಾಡಬಹುದು.

**ಸಭಾಪತಿಯವರು:-** ಮಾನ್ಯ ಪಿ.ಆರ್. ರಮೇಶ್‌ರವರೇ ಮಾತನಾಡಿ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದರಲ್ಲಿ ನನ್ನ ಎರಡು-ಮೂರು ಪ್ರಶ್ನೆಗಳಿವೆ.

**(ಗೊಂದಲ)**

**ಶ್ರೀ ಎಸ್. ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಇದರ ಮೇಲೆ ಒಂಭತ್ತು ಜನ ಸದಸ್ಯರು ಮಾತನಾಡುವುದಾಗಿ ತಿಳಿಸಿ ಮಾನ್ಯ ಸಭಾಪತಿಯವರಿಗೆ ಪಟ್ಟಿ ಕೊಟ್ಟಿದ್ದಾರೆ. (ಗೊಂದಲ) ಆದರೆ ಇದರ ಬಗ್ಗೆ ಚರ್ಚೆ ಮಾಡುವುದು ಬೇಡ ಎನ್ನುತ್ತೀರಾ? ಇವತ್ತು ಸದನ ಪ್ರಾರಂಭವಾಗಿದೆ. ಇನ್ನೂ ಹದಿನೈದನೇ ತಾರೀಖಿನವರೆಗೂ ಅಧಿವೇಶನ ನಡೆಯುತ್ತದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಈ ದೇಶದಲ್ಲಿ ಚರ್ಚೆಯಾಗದೇ ವಿಷಯಗಳು ಆಚೆಗೆ ಬಂದರೆ, ನಾಳೆ ಬೆಳಗ್ಗೆ ಬೇರೆ ಬೇರೆ ಕಾರಣಗಳು ಬೇಕಾದಷ್ಟು ಆಗಿರುವುದು ಇದೆ. ಇದು ಚರ್ಚೆಯಾಗಿ ಹೊರಗೆ ಬರಲಿ ಬಿಡಿ. ಇದು ಚರ್ಚೆಯಾದರೆ ಒಳ್ಳೆಯದಲ್ಲವೇ? It should be a healthy discussion. ಇಲ್ಲಿ ಇರುವಂತಹ ಸದಸ್ಯರೆಲ್ಲರೂ ಒಂದಲ್ಲ ಒಂದು ಕೃಷಿಯಿಂದ ಬಂದಂತಹವರು ಮತ್ತು real estate ಮಾಡುವವರು ಸ್ವಲ್ಪ ಜನ ಸದಸ್ಯರು ಇದ್ದಾರೆ. ನಾನು ಇಲ್ಲವೆಂದು ಹೇಳುವುದಿಲ್ಲ. ನಾವು real estate ಅಲ್ಲ. ನನಗೆ ಮಾತನಾಡಲು ಅವಕಾಶ ಕೊಟ್ಟರೆ, ಮೂರು ನಿಮಿಷಗಳ ಕಾಲ ಮಾತನಾಡಿ ಮುಗಿಸುತ್ತೇನೆ. I will not take much time about this. Only I have to ask 2 to 3 questions to the Hon'ble Minister.

**ಸಭಾಪತಿಯವರು:-** ಮಾನ್ಯ ಸದಸ್ಯರು ಮಾತನಾಡಿದ ನಂತರ ತಾವು ಮಾತನಾಡಿ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಆಗಬಹುದು.

**ಸಭಾಪತಿಯವರು:-** ಮಾನ್ಯ ಪಿ.ಆರ್. ರಮೇಶ್‌ರವರೇ ಮಾತನಾಡಿ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನಮ್ಮ ದೇಶದಲ್ಲಿ ಅಥವಾ ನಮ್ಮ ರಾಜ್ಯದಲ್ಲಿ ಇರಬಹುದು. ರೈತರು ಜಮೀನುಗಳನ್ನು ಇಟ್ಟುಕೊಂಡಿದ್ದಾರೆ.

**ಸಭಾಪತಿಯವರು:-** ಮಾನ್ಯ ಪಿ.ಆರ್. ರಮೇಶ್‌ರವರೇ ಒಂದು ನಿಮಿಷ. ಮಾನ್ಯ ಮರಿತಿಬ್ಬೇಗೌಡರ ಕಳೆದ ಬಾರಿ ಅಧಿವೇಶನದಲ್ಲಿ ಅರ್ಧ ಮಾತನಾಡಿದ್ದರು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರನ್ನು ಸದನಕ್ಕೆ ಪರಿಚಯ ಮಾಡಿಕೊಡುತ್ತಿದ್ದೀರಾ?

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರ ಕಳೆದ ಅಧಿವೇಶನದಲ್ಲಿ ಅರ್ಧ ಮಾತನಾಡಿದ್ದರು. ಈಗ ತಾವು ಅದನ್ನು ಮುಂದುವರೆಸುತ್ತೀರಾ ಅಥವಾ ಆನಂತರ ಮಾತನಾಡುತ್ತೀರಾ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ನಾನು ಆನಂತರ ಮಾತನಾಡುತ್ತೇನೆ.

**ಸಭಾಪತಿಯವರು:-** ಆಯಿತು.

**ಶ್ರೀ ಪಿ.ಆರ್. ರಮೇಶ್ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನಮ್ಮ ದೇಶ ಅಥವಾ ನಮ್ಮ ರಾಜ್ಯದಲ್ಲಿ ಇರಬಹುದು. ರೈತರು ಏನು ಕೃಷಿ ಮತ್ತು ತೋಟಗಾರಿಕೆಗೆ ಭೂಮಿಯನ್ನು ಇಟ್ಟುಕೊಂಡಿದ್ದಾರೆ. ಅವರ ಜೀವನವನ್ನು ನಡೆಸಿಕೊಂಡು ಹೋಗುವುದಕ್ಕೆ ಭೂಮಿಯನ್ನು ಆಧಾರವಾಗಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಟ್ಟುಕೊಂಡಿರುತ್ತಾರೆ. ಶೇಕಡ 80 ರಿಂದ 85 ರಷ್ಟು ರೈತರು ಕೇವಲ ಎರಡು ಹೆಕ್ಟೇರ್‌ಗಿಂತ ಕಡಿಮೆ ಭೂಮಿಯನ್ನು ಹೊಂದಿರುವಂತಹವರು ಇದ್ದಾರೆ. ಅಂದರೆ ಐದು ಎಕರೆಗಿಂತ ಕಡಿಮೆ ಇರತಕ್ಕಂಥ ರೈತಾಪಿ ಜನರು ಶೇಕಡ 80 ರಿಂದ 85 ರಷ್ಟು ಇದ್ದಾರೆ ಮತ್ತು ಅದರಲ್ಲಿ ಶೇಕಡ 80 ರಷ್ಟು ರೈತರು ಕೇವಲ ಎರಡು ಎಕರೆ ಭೂಮಿಯನ್ನು ಇಟ್ಟುಕೊಂಡಿರುವಂತಹವರು ಮತ್ತು ಅದಕ್ಕಿಂತ ಕಡಿಮೆ ಜಮೀನಿರುವಂತಹ ರೈತರಿದ್ದಾರೆ. ಅದೇ ರೀತಿ ಕೇವಲ ದೊಡ್ಡ ದೊಡ್ಡ ರೈತರು ಅಥವಾ ತೋಟಗಾರಿಕೆಯನ್ನು ಇಟ್ಟುಕೊಂಡಿರುವಂತಹ ಜನ ಶೇಕಡ 10 ರಷ್ಟು ಇದ್ದಾರೆ. ಆದರೆ ಇವತ್ತು ಈ ಕಾಯಿದೆಗೆ ತಿದ್ದುಪಡಿ ತಂದಿರುವುದರಿಂದ ನಮ್ಮ ಸಮಾಜಿಕ ಜೀವನದ ಮೇಲೆ, ಇವತ್ತಿನವರೆಗೂ ನಮ್ಮ ದೇಶದಲ್ಲಿ ಸಾವಿರಾರು ವರ್ಷದಿಂದ ನಡೆದುಕೊಂಡು ಬಂದಂತಹ ರೈತರು ಯಾವ ದಿಕ್ಕಿಗೆ ಹೋಗುತ್ತಾರೆ ಎನ್ನುವುದಕ್ಕೆ ಈ ಕಾಯಿದೆ ಬಂದ ಮೇಲೆ ಗೊತ್ತಾಗುತ್ತದೆ. ಇವತ್ತು ಸುಗ್ರೀವಾಜ್ಞೆ ಹೊರಡಿಸಿದ್ದಾರೆ. ಆ ಸುಗ್ರೀವಾಜ್ಞೆಯ ಪ್ರಕಾರ ಇವತ್ತು ಅದನ್ನು ತಂದಿದ್ದಾರೆ. ಇವತ್ತು ಕೇರಳ ಗಡಿ ಪ್ರದೇಶ ಇರಬಹುದು, ಚಾಮರಾಜನಗರ ಇರಬಹುದು. ಈಗಾಗಲೇ ordinance ಮೇಲೆ ಸಾಕಷ್ಟು ಅವ್ಯವಹಾರ ನಡೆಯುತ್ತಿದೆ. ಇವತ್ತು especially ಗಡಿ ಪ್ರದೇಶದಲ್ಲಿ ಭೂಮಿಯನ್ನು ತೆಗೆದುಕೊಳ್ಳುವುದು, ಮಾರಾಟ ಮಾರುವುದು ಇಂತಹ ವ್ಯವಹಾರ ಸಣ್ಣ ಮತ್ತು ಅತಿ ಸಣ್ಣ ರೈತರ ಮೇಲೆ ಎಷ್ಟು ಗಂಭೀರವಾದ ಪರಿಣಾಮ ಉಂಟುಮಾಡುತ್ತದೆ ಎಂದರೆ, ಮುಂದಿನ ದಿನಗಳಲ್ಲಿ ಆ ರೈತರು ತಮ್ಮ ಜಮೀನನ್ನು ಕೊಂಡುಕೊಳ್ಳುವವರಿಗೆ ಕೊಟ್ಟು, ಕೊನೆಗೆ ಬೀದಿ ಪಾಲಾಗುವಂತಹ ಪರಿಸ್ಥಿತಿ ಈ ಕಾಯಿದೆಯಿಂದ ಆಗುತ್ತದೆ. ಕೃಷಿ ಮಾಡುವಂತಹ ರೈತಾಪಿ ಜನ ಯಾರಿದ್ದಾರೆ, ಅವರೆಲ್ಲಾ ಕೂಲಿ ಆಳುಗಳಾಗುವಂತಹ ರೀತಿಯಾಗುತ್ತದೆ. ಇದರ ಜೊತೆಗೆ ತಾವು Section 81 ಅಡಮಾನವಾಗಿ ಇಡುವಂತಹದ್ದು, ಕೃಷಿ ಮಾಡುವಂತಹ ಜಮೀನನ್ನು ಅಡಮಾನವಾಗಿ ಇಡುವಂತಹದ್ದು, Financial Institutions. ಈ Financial Institutions ಇಡುವಂತಹದ್ದಾದರೆ, ಸಾಲ ತೆಗೆದುಕೊಳ್ಳುವುದರಲ್ಲಿ, ವ್ಯವಹಾರ ಮಾಡುವುದರಲ್ಲಿ ರೈತರು ಬೇರೆ ಬೇರೆ ರೀತಿಯಲ್ಲಿ ಕೃಷಿಯೇತರರ ಇರುವಂತಹ ಉದ್ಯೋಗಿಗಳಿಗೆ ಅವರು ಜಾಸ್ತಿ mind ಅನ್ನು ಕೊಡುವಂತಹದ್ದಕ್ಕೆ, ರೈತರ ಜಮೀನುಗಳನ್ನು ಅಡಮಾನವಿಟ್ಟು ಹಣವನ್ನು ತೆಗೆದುಕೊಳ್ಳುವುದು ಜಾಸ್ತಿಯಾಗುತ್ತದೆ. ಈ ರೀತಿಯಾದಾಗ ಅವರ ಮನೆ–ಮಠ, ಮಕ್ಕಳು–ಮರಿ ಪೂರ್ತಿಯಾಗಿ ಬೀದಿ ಪಾಲಾಗುವಂತಹದ್ದಾಗುತ್ತದೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಮ್ಮ ರಾಜ್ಯ ಮತ್ತು ದೇಶವಿರಬಹುದು. ಸಣ್ಣ ಪುಟ್ಟ ಕೃಷಿ ಭೂಮಿ ಇರತಕ್ಕಂತಹ ಒಂದು ಸಮಾಜವನ್ನು ಸೃಷ್ಟಿ ಮಾಡಿರುವಂತಹದ್ದು, ಇವತ್ತೇ ಅಲ್ಲ ಸಾವಿರಾರು ವರ್ಷಗಳಿಂದ ಇರುವಂತಹದ್ದು. ಇವತ್ತು ಈ ಜಾಗಗಳೆಲ್ಲಾ ಯಾರೋ promoters ಬರುತ್ತಾರೆ. ಕೆಲವು ಪ್ರದೇಶಗಳನ್ನು ಸಾವಿರಾರು ಎಕರೆ ತೆಗೆದುಕೊಳ್ಳುವಂಥದ್ದಕ್ಕೆ ದಂಧೆ ಪ್ರಾರಂಭವಾಗುತ್ತದೆ. ಇದರಿಂದ ಪೂರ್ತಿಯಾಗಿ ನಮ್ಮ ರಾಜ್ಯ ಅಥವಾ ದೇಶವಿರಬಹುದು ಕೊನೆಗೆ ಇದೊಂದು ದಂಧೆಯಾಗಿ entire agriculture system ಏನಿದೆ, ಅದು ಸಂಪೂರ್ಣವಾಗಿ ಸರ್ವನಾಶವಾಗುತ್ತದೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೊನೆಗೆ ನಮ್ಮ ರೈತಾಪಿ ಜನ ಮತ್ತು ಮಕ್ಕಳು ಬೀದಿ ಪಾಲಾಗುವಂತಹ ಪರಿಸ್ಥಿತಿತಹೆ ಈ ವಿಧೇಯಕ ಅನುವು ಮಾಡಿಕೊಡುತ್ತದೆ. ಇವತ್ತು ಸುಗ್ರೀವಾಜ್ಞೆ ಮಾಡಿ ಹೊರಡಿಸಿಕೊಂಡು ಹೋಗುತ್ತಿದ್ದೀರಾ. ಇದು ಕೊನೆಗೆ ಎಲ್ಲಿಗೆ ಹೋಗುತ್ತದೆ ಎಂದರೆ, ದೊಡ್ಡ ದೊಡ್ಡ ಕಾರ್ಪೋರೇಟ್ ಅಫೀಸ್‌ಗಳು ಮತ್ತು ಕಾರ್ಪೋರೇಟ್ ಜನ ಜಾಸ್ತಿಯಾಗುತ್ತಾರೆ. ಅವರ ಹತ್ತಿರ landowners ಗಳು ವಾಚ್‌ಮ್ಯಾನ್ ಮತ್ತು ಕೂಲಿ ಆಳುಗಳಾಗಿ ಕೆಲಸ ಮಾಡುವಂತಹ ಪರಿಸ್ಥಿತಿ ಉಂಟಾಗುತ್ತದೆ. ಇದರ ಜೊತೆಗೆ ಎ.ಪಿ.ಎಂ.ಸಿ. ಕಾಯಿದೆ ತರುವುದರಿಂದ ಇದು ಮತ್ತು ಅದೆಲ್ಲಾ ಅಕ್ಕ–ತಂಗಿಯಿದ್ದಂತೆ. ಕೊನೆಗೆ ನಮ್ಮ ದೇಶದ social structure ಪೂರ್ತಿಯಾಗಿ ಸರ್ವನಾಶವಾಗುವಂತಹದ್ದಕ್ಕೆ ಈ ಕಾಯಿದೆ ನಾಂದಿಯಾಗುತ್ತದೆ. ಅದರಿಂದ ಮಾನ್ಯ ಸಚಿವರಿಗೆ ಹೇಳುವುದೇನೆಂದರೆ, ಇದನ್ನು ಮಾಡುವುದರಿಂದ ಯಾರಿಗೆ ಒಳ್ಳೆಯದಾಗುತ್ತದೆಯೋ ಗೊತ್ತಿಲ್ಲ. ಆದರೆ ರೈತರು ಮಾತ್ರ ಸಂಪೂರ್ಣವಾಗಿ ಸರ್ವನಾಶ ಆಗುವಂತಹದ್ದಕ್ಕೆ, ಈ ಒಂದು ಕಾಯಿದೆಯನ್ನು ತಂದಿದ್ದೀರಿ. ಈ ಕಾಯಿದೆಯಿಂದ ನಮ್ಮ ಇಡೀ ಜನ ಬಹಳ ನೋವು ಅನುಭವಿಸುವಂತಹ ರೀತಿಯಲ್ಲಿ ಆಗುವಂತಹದ್ದರಲ್ಲಿ ಎರಡು ಮಾತಿಲ್ಲ. ದಯವಿಟ್ಟು, ಇಂತಹ ಕಾಯಿದೆಯನ್ನು ತಾವು ವಾಪಸ್ಸು ತೆಗೆದುಕೊಳ್ಳಬೇಕು. ಕೃಷಿ ಮಾಡುವಂತಹ ರೈತರ ಜೊತೆಗೆ ನಿಜವಾಗಲೂ ನಾವಿದ್ದೇವೆ ಎನ್ನುವುದಾದರೆ, ಈ ತರಹ ಅವಕಾಶ ಕೊಡಬೇಡಿ. ಇವತ್ತು permission ತೆಗೆದುಕೊಳ್ಳುವುದು ಇದೆ. ಇವತ್ತು Tribunal ನಲ್ಲಿ ಸುಮಾರು ಎಂಟು ಅಥವಾ ಒಂಭತ್ತು ಸಾವಿರ ಕೇಸ್‌ಗಳಿವೆ ಎಂದು ಹೇಳುತ್ತೀರಿ. ಆ ಕೇಸ್‌ಗಳೆಲ್ಲಾ ಇವತ್ತು ತೆಗೆದುಕೊಳ್ಳುವುದೆಲ್ಲಾ ಹೋಯಿತು. ಇವತ್ತು ಎಲ್ಲರಿಗೂ gate open ಆಗುವ ತರಹ ಆಯಿತು. ಇವತ್ತು ಯಾರೂ ಏನು ಬೇಕಾದರೂ ಮಾಡಬಹುದು. ಕೊನೆಗೆ ಕೃಷಿ ಭೂಮಿಯನ್ನು ತೆಗೆದುಕೊಂಡ ಮೇಲೆ ಕೃಷಿಯನ್ನು ಮಾಡಬೇಕೆಂದು ಹೇಳಿದ್ದೀರಿ. ನಾಳೆ ದಿವಸ Fundamental Rights ಬರುತ್ತದೆ. ನಾನು ತೆಗೆದುಕೊಂಡಂತಹ ಜಾಗವನ್ನು ನಾನು conversion ಗೆ ಹಾಕಿಕೊಳ್ಳುತ್ತೇನೆ. Conversion ಮಾಡಿಕೊಡಲ್ಲ ಎಂದು ಯಾರೂ ಹೇಳುವುದಿಲ್ಲ. ನಮ್ಮಂಥವರು ನಿಮ್ಮಂತಹವರನ್ನು ಹಿಡಿದುಕೊಂಡು land use change ಮಾಡುತ್ತಾರೆ. Periodically land use ಬೇಕಾದಷ್ಟು ಬದಲಾವಣೆಯಾಗಿದೆ. ಇವತ್ತು land use ಗಳೆಲ್ಲಾ ತಾವು change ಮಾಡಿ ಅವರಿಗೆ ಯಾವ ರೀತಿಯಾಗುತ್ತದೆ ಎಂದರೆ ಆ ಜಾಗಗಳು ಎರಡೆರಡು ಎಕರೆ, ಹತ್ತು ಹತ್ತು ಎಕರೆಗಳನ್ನು ಜೋಡಿಸಿಕೊಂಡು ಜೋಡಿಸಿಕೊಂಡು ಸಾವಿರಾರು ಎಕರೆ ದಂಧೆಯಾಗುತ್ತದೆ. ಕೊನೆಗೆ social structure ಏನಿದೆ ದೇಶದಲ್ಲಿ Agriculture or Horticulture ಅದು ಸಂಪೂರ್ಣವಾಗಿ ಸರ್ವನಾಶವಾಗುತ್ತದೆ. ಯಾವ ರೈತರು ಬದುಕುವುದಕ್ಕೆ ಆಗುವುದಿಲ್ಲ. ಎಲ್ಲರೂ ಬೀದಿಗೆ ಬರುತ್ತಾರೆ. ಕೂಲಿ ಮಾಡುತ್ತಾರೆ. ಅವರ ಮಕ್ಕಳು–ಮರಿ ಬೀದಿಗೆ ಬರುವಂತಹ ರೀತಿಯಲ್ಲಿ ಈ ವಿಧೇಯಕವನ್ನು ತಂದಿರುವಂತಹದ್ದಾಗಿದೆ. ಹಾಗಾಗಿ ನಾನು ಈ ಒಂದು ವಿಧೇಯಕವನ್ನು ಸಂಪೂರ್ಣವಾಗಿ ಧಿಕ್ಕರಿಸುತ್ತೇನೆ. ಮತ್ತು ಇದನ್ನು ಖಂಡಿತವಾಗಿಯೂ ಮಾಡಬಾರದು ಎಂದು ನಾನು ವಿನಂತಿ ಮಾಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ ಮಾತನಾಡಿ.

**(ಮುಂದು)**

**(988) 07.12.2020 6.20 ಟಿಸಿಹೆಚ್–ಬಿ.ಎನ್.ಎಸ್.**

**ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶಿತರು)** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮಾನ್ಯ ಕಂದಾಯ ಸಚಿವರು ಏನು ಕರ್ನಾಟಕ ಭೂ ಸುಧಾರಣೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2020ರ ಪುಟಸಂಖ್ಯೆ4 ರಲ್ಲಿ ಏನು ಹೇಳಿದ್ದಾರೆಂದರೆ, "ನ್ಯಾಯಾಲಯದ ಮುಂದೆ ಹಾಜರಾದ ರಾಜ್ಯದ ಪ್ರಧಾನ ಕಾರ್ಯದರ್ಶಿಗೆ ಈ ಎಲ್ಲಾ ವಿಷಯಗಳ ಬಗ್ಗೆ ಗಮನಹರಿಸುವಂತೆ ಮತ್ತು ಈ ನ್ಯಾಯಾಲಯಕ್ಕೆ ಮೇಲಿನ ನಡವಳಿಕೆಗಳನ್ನು ನಿಯಂತ್ರಿಸಲು ಹಾಗೂ ಬಾಹ್ಯ ಪರಿಗಣನೆಗಾಗಿ ಸಿಬ್ಬಂದಿಯ ಹಸ್ತಕ್ಷೇಪವನ್ನು ತೆಗೆದುಹಾಕಲು, ಜನರ ಕುಂದುಕೊರತೆಗಳ ಕುರಿತು ವ್ಯವಸ್ಥಿತ ವಿಧಾನದಲ್ಲಿ ತಿಳಿಸುವುದನ್ನು ಖಚಿತಪಡಿಸಿಕೊಳ್ಳಲು ಸಹ ಆತನು ಕೈಗೊಳ್ಳುವ ಕ್ರಿಯಾಯೋಜನೆಯೊಂದಿಗೆ ನ್ಯಾಯಾಲಯಕ್ಕೆ ಮತ್ತೆ ಬರಲು ತಿಳಿಸಲಾಗಿತ್ತು" ಇದನ್ನು ತೆಗೆಯಬೇಕೆಂದು ನ್ಯಾಯಾಲಯದಿಂದ ಕೂಡ ಆದೇಶ ಬಂದಿದೆ ಎಂದು ಹೇಳುತ್ತೀರಿ. ಬಹುಶಃ ಈ ನ್ಯಾಯಾಲಯದಿಂದ ಆದೇಶ ಏಕೆ ಬಂತು? ಅಧಿಕಾರಿಗಳು ತಾವು ಮಾಡಿರತಕ್ಕಂಥ ನಿರ್ಣಯಗಳು ಏನಿವೆ ಅದನ್ನು ಚಾಲನೆಗೆ ತರಲಿಲ್ಲ ಮತ್ತು ಪಾಲನೆ ಮಾಡಲಿಲ್ಲ. ಆ ಭೂಮಿಯನ್ನು ವಶಪಡಿಸಿಕೊಳ್ಳಲಿಲ್ಲ. ಅದಕ್ಕೆ ಇವತ್ತಿನ ದಿವಸ 13,000 ಕೇಸ್‌ಗಳು ಕೋರ್ಟ್‌ನಲ್ಲಿವೆ. ಕೋರ್ಟ್, ನೀವು ಇದನ್ನು ನಿಯಂತ್ರಣ ಮಾಡಿ ಎಂದು ಹೇಳಿದರೆ, ನೀವು ಇದನ್ನು ರದ್ದುಪಡಿಸುತ್ತಿದ್ದೀರಿ. 1961 ರಲ್ಲಿ ಕಲಂ 79ಎ, 79ಬಿ ಮತ್ತು 79ಸಿಯನ್ನು ಬಡವರಿಗೆ ರೈತರಿಗೆ ಅನುಕೂಲವಾಗಲಿ ಎಂದು ಜಾರಿಗೆ ತಂದಿದ್ದರು. ಸನ್ಮಾನ್ಯ ಶ್ರೀ ದೇವರಾಜ ಅರಸು ರವರು ಮುಖ್ಯಮಂತ್ರಿಗಳಾಗಿದ್ದಾಗ 'ಉಳುವವನೇ ಭೂಮಿಯ ಒಡೆಯ' ಎಂಬ ಕಾಯ್ದೆಯನ್ನು ಬಡವರಿಗೆ ಮತ್ತು ರೈತರಿಗೆ ಹೆಚ್ಚು ಅನುಕೂಲವಾಗಲಿ ಎಂದು ಜಾರಿಗೆ ತಂದಿದ್ದರು. ಆದರೆ ತಾವೇನು ನ್ಯಾಯಾಲಯಕ್ಕೆ ಹೇಳುವುದಕ್ಕೆ ಹೊರಟಿದ್ದೀರಿ, ತಮ್ಮ ಅಧಿಕಾರಿಗಳು ಮಾಡಿರತಕ್ಕಂಥ ಲೋಪದಿಂದ ತಾವು ಇವತ್ತು ಈ ಬಿಲ್‌ನ್ನು ಜಾರಿಗೆ ತರುತ್ತಿದ್ದೀರಿ. ಈ ಬಿಲ್ ತಂದಿರುವುದು 'ರೈತರ ವಿರೋಧಿ ತಿದ್ದುಪಡಿ' ಎಂದು ನಾನು ಭಾವಿಸುತ್ತೇನೆ. ಮಾನ್ಯ ಸಭಾಪತಿಯವರೇ, ಇದರಲ್ಲಿ ನಾವು ಹಲವಾರು ವಿಷಯಗಳ ಬಗ್ಗೆ ಗಮನಹರಿಸಬೇಕಾಗುತ್ತದೆ. ಈ ಬಿಲ್ ಬಗ್ಗೆ ಹೇಳುವುದಾದರೆ, ಮೊದಲಿನ ತಿದ್ದುಪಡಿಯಲ್ಲಿ ಒಬ್ಬರಿಗೆ ನೀರಾವರಿ, ಅರೆ ನೀರಾವರಿ, ಮಳೆಯಾಶ್ರಿತ ಕೃಷಿ ಎಂಬ ವಿಭಾಗದಲ್ಲಿ ತಲಾ 20 ಎಕರೆ ಇರಬಹುದು ಎಂದು ಇತ್ತು. ಆದರೆ ಈಗ ಅದನ್ನು 216 ಎಕರೆ ಎಂದು ತಾವು ಮಾಡಿದ್ದೀರಿ. ಅದರ ಜೊತೆಗೆ ಗಣಿಗಾರರಿಗೆ 432 ಎಕರೆ ಬರುವಂತಹ ಈ ಹೊಸ ಕಾಯ್ದೆಯಲ್ಲಿ ಮಾಡಿದ್ದೀರಿ. ಇಲ್ಲಿ ಏನಾಗುತ್ತಿದೆಯೆಂದರೆ ಇವತ್ತಿನ ದಿವಸ ಬಹುಶಃ ನಮ್ಮ ಕರ್ನಾಟಕ ರಾಜ್ಯದಲ್ಲಿ ಬಡ ರೈತರ ಭೂಮಿಯು

ಉದ್ದಿಮೆದಾರರಿಗೆ, ಶ್ರೀಮಂತರಿಗೆ ಒಳಪಡಿಸಿ, ಅವರಿಗೆ ಅನುಕೂಲ ಮಾಡಿಕೊಡುವಂತಹ ಕಾಯ್ದೆಯಾಗಿದೆ. ಇದರಲ್ಲಿ ಬಹುಶಃ ನಮ್ಮ ರಾಜ್ಯದ ರೈತರು ಇನ್ನುಮುಂದೆ ಕೇವಲ ಕೂಲಿ ಮಾಡುವಂತಹ ಪರಿಸ್ಥಿತಿ ಬರುತ್ತದೆ ವಿನಃ ಇದು ಕೇವಲ ಉದ್ದಿಮೆದಾರರಿಗೆ, ಕಾರ್ಪೊರೇಟ್ ಸೆಕ್ಟರ್ಸ್‌ಗೆ, ರಿಯಲ್ ಎಸ್ಟೇಟ್‌ರವರಿಗೆ ಅನುಕೂಲವಾಗುಂತಹ ತಿದ್ದುಪಡಿಯಾಗಿದೆ. Actually, ಈ ತಿದ್ದುಪಡಿಯನ್ನು ವಾಪಸ್ಸು ಪಡೆದುಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇದು ಬಡವರ ಮತ್ತು ರೈತರ ವಿರೋಧಿ ಮಸೂದೆಯಾಗುತ್ತದೆ. ಇದರ ಜೊತೆಗೆ ಪರಿಸರವೆಲ್ಲಾ ಹಾನಿಯಾಗುತ್ತದೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಸಾಕಷ್ಟು ನಗರಗಳಿವೆ, ದೊಡ್ಡ ದೊಡ್ಡ ಉದ್ದಿಮೆದಾರರು ಈ ನಗರಗಳ ಸುತ್ತಮುತ್ತಲೂ ರೈತರಿಂದ ಜಮೀನನ್ನು ಖರೀದಿ ಮಾಡಿ ಒಂದು ಕಾಂಕ್ರೀಟ್ ಜಂಗಲ್ ಆಗುವಂತಹ ವ್ಯವಸ್ಥೆಯನ್ನು ಸೃಷ್ಟಿ ಮಾಡುತ್ತಿದ್ದೇವೆ. ಏಕೆ ಈ ತಿದ್ದುಪಡಿಯನ್ನು ತರುತ್ತಿದ್ದೀರೆಂದು ನನಗಂತೂ ಅರ್ಥವಾಗುತ್ತಿಲ್ಲ. ಇವತ್ತಿನ ದಿವಸ ನಮ್ಮ ದೇಶದಲ್ಲಿ ಪರಿಸರಕ್ಕೆ ಎಷ್ಟು ಹಾನಿಯಾಗಿದೆಯೆಂದರೆ, ಇದು ತಮಗೂ ಕೂಡ ಗೊತ್ತಿದೆ. ದೆಹಲಿ ಸೇರಿದಂತೆ ಎಲ್ಲಾ ನಗರಗಳಲ್ಲಿ ಪರಿಸರ ಹಾನಿಯಾಗಿದ್ದು pollution ಸಾಕಷ್ಟು ಹೆಚ್ಚಾಗಿದೆ. ಆದರೂ ಕೂಡ ಈ ತಿದ್ದುಪಡಿಯಿಂದ ಏನು ಆಗುತ್ತದೆಂದರೆ ಉದ್ದಿಮೆದಾರರು ಮತ್ತು ರಿಯಲ್ ಎಸ್ಟೇಟ್ ಏಜೆಂಟ್ಸ್ ಏನಿದ್ದಾರೆ, ಅವರು ನಗರ ಮತ್ತು ಸಣ್ಣ ಸಣ್ಣ ನಗರಗಳ ಅಕ್ಕಪಕ್ಕದ ಭೂಮಿಯನ್ನು ತೆಗೆದುಕೊಂಡು concrete jungle create ಮಾಡುತ್ತಿದ್ದಾರೆ. ಈ ತಿದ್ದುಪಡಿ ತರುವುದರಿಂದ ಭವಿಷ್ಯದಲ್ಲಿ ನಾವು ಮುಂದಿನ ಪೀಳಿಗೆಗೆ ಏನು ಅನುಕೂಲ ಮಾಡಬೇಕಾಗಿತ್ತು, ಈ ಒಂದು ತಿದ್ದುಪಡಿಯಲ್ಲಿ ಈ ಎಲ್ಲಾ ಅನುಕೂಲವನ್ನು ನಾವು ರೈತರ ವಿರೋಧಿ ಧೋರಣೆಯನ್ನು ನಾವು ವಹಿಸುತ್ತಿದ್ದೇವೆಂದು ನಾನು ಭಾವಿಸಿದ್ದೇನೆ. ರೈತರಿಗೆ ಅನುಕೂಲವಾಗುವಂತಹ ವಾತಾವರಣವನ್ನು ನಾವೇನು ಹಲವಾರು ವರ್ಷಗಳಿಂದ ಸೃಷ್ಟಿ ಮಾಡಿದ್ದೇವೆ. ಈ ಒಂದು ತಿದ್ದುಪಡಿಯಿಂದ ಅನುಕೂಲ ಆಗುವುದಿಲ್ಲವೆಂದು ನಾನು ಭಾವಿಸುತ್ತೇನೆ. ನಮ್ಮ ಕರ್ನಾಟಕದಲ್ಲಿ ಶೇ.80 ರಷ್ಟು ರೈತರು ಇವತ್ತಿಗೂ ಕೂಡ ಬಡತನದಲ್ಲೇ ಬದುಕುತ್ತಿದ್ದಾರೆ. ಇವತ್ತಿನ ದಿವಸ ಅವರ ಜಮೀನನ್ನು ಒಂದು ಎಕರೆಗೆ ಒಂದು ಲಕ್ಷ ಅಥವಾ 50 ಸಾವಿರ ರೂಪಾಯಿಗಳಿಗೆ ಕೊಂಡುಕೊಳ್ಳುತ್ತಾರೆ. ಅದನ್ನು ಉದ್ದಿಮೆದಾರರು ಕೋಟ್ಯಂತರ ರೂಪಾಯಿಗಳಿಗೆ ಉಪಯೋಗ ಮಾಡಿಕೊಳ್ಳುತ್ತಾರೆ. ಮತ್ತೆ ಸರ್ಕಾರ ತಿದ್ದುಪಡಿಗಳಲ್ಲಿ ಹಲವಾರು ರಿಯಾಯಿತಿಗಳನ್ನು ಕೊಟ್ಟಿದ್ದೀರಿ. ಮನೆಗಳನ್ನು ಕಟ್ಟಿ ಮಾರಾಟ ಮಾಡುಂತಹ ಕೆ.ಹೆಚ್.ಬಿ. ಮತ್ತು ಸರ್ಕಾರಿ ಸಂಸ್ಥೆಗಳಿಂದ ಜಮೀನನ್ನು ತೆಗೆದುಕೊಳ್ಳುವುದಕ್ಕೆ ಈ ತಿದ್ದುಪಡಿ ಲಾಘುವಾಗುವುದಿಲ್ಲವೆಂದು ತಾವು ಹೇಳಿದ್ದೀರಿ. ಒಂದು ಕಡೆ ರೈತರ ಭೂಮಿಯನ್ನು ತೆಗೆದುಕೊಳ್ಳುತ್ತಿದ್ದೀರಿ. ಉದ್ದಿಮೆದಾರರಿಗೆ ತೆಗೆದುಕೊಳ್ಳಲು ಹೇಳುತ್ತಿದ್ದೀರಿ. ಆದರೆ ಸರ್ಕಾರದಿಂದ ಏನು ವಶಪಡಿಸಿಕೊಂಡಿದ್ದೀರಿ, ಕೆ.ಐ.ಎ.ಡಿ.ಬಿ. ಗೆ ಆಗಲಿ ಮತ್ತು ಬೇರೆ ಬೇರೆ ಸಂಸ್ಥೆಗಳಾದ ಹೌಸಿಂಗ್ ಬೋರ್ಡ್‌ಗಾಗಲಿ ಲಾಭವಾಗುವುದಿಲ್ಲವೆಂದು ಹೇಳುತ್ತಿದ್ದೀರಿ. ಅಂದರೆ ಸರ್ಕಾರ ತಂದಿರತಕ್ಕಂಥ ತಿದ್ದುಪಡಿಯಲ್ಲಿ, there is no consistency. ಒಂದು ಕಡೆ ರೈತರ ವಿರುದ್ಧವಾಗಿದೆ ಮತ್ತೊಂದು ಕಡೆ ಏನು ತಾವು ತಿದ್ದುಪಡಿಯನ್ನು ತರುತ್ತಿದ್ದೀರಿ, ನಮ್ಮ ಸರ್ಕಾರಿ ಸಂಸ್ಥೆಗಳಿಂದ ತಾವೇನು ಸೌಲಭ್ಯಗಳನ್ನು ಕೊಡಲು ಮಾಡಿದ್ದೀರಿ,

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅದಕ್ಕೆ ತಾವು ರಿಯಾಯಿತಿಯನ್ನು ಕೊಟ್ಟಿದ್ದೀರಿ. ನನ್ನ ಪ್ರಕಾರ ಇದು ಒಂದು ಸಮಾನತೆಯ ವ್ಯವಸ್ಥೆ ಅಲ್ಲ. ಇದನ್ನೆಲ್ಲಾ ತಾವು ಗಮನದಲ್ಲಿಟ್ಟುಕೊಂಡು, ಪರಿಸರದಲ್ಲಿ ಉತ್ತಮವಾದ ವಾತಾವರಣವನ್ನು ಸೃಷ್ಟಿ ಮಾಡುವುದಕ್ಕೆ ಅನುಕೂಲ ಮಾಡುವುದಕ್ಕೆ ಸರ್ಕಾರ ಹಲವಾರು ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿತ್ತು. ರೈತರಿಗೆ ಹಲವಾರು ಅನುಕೂಲ ಮಾಡಬೇಕಾಗಿತ್ತು. ಇವತ್ತಿನ ದಿವಸ ತಾವು ರೈತರಿಗೆ ಕನಿಷ್ಠ ಬೆಂಬಲ ಬೆಲೆ ಕೊಡುವುದಕ್ಕೆ ತಾವು ವಿಫಲರಾಗಿದ್ದೀರಿ. ಎ.ಪಿ.ಎಂ.ಸಿ.,ಯನ್ನು ರದ್ದುಪಡಿಸಿದ್ದೀರಿ. ಅದರ ಜೊತೆಗೆ ಈ ಬಿಲ್‌ನ್ನು ಕೂಡ ತಾವು ತಂದು ರೈತರನ್ನು ಕೊಲೆ ಮಾಡುವಂತಹ ಪ್ರಯತ್ನವನ್ನು ಮಾಡುತ್ತಿದ್ದೀರಿ. ಈ ತಿದ್ದುಪಡಿಗೆ ನಾವು ವಿರೋಧ ಮಾಡುತ್ತೇವೆ. ಈ ತಿದ್ದುಪಡಿ ಬಿಲ್‌ನ್ನು ಹಿಂದಕ್ಕೆ ಪಡೆದುಕೊಳ್ಳಬೇಕೆಂದು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ವಿಶೇಷವಾಗಿ ಇದರಲ್ಲಿ ಸಣ್ಣ, ಅತಿ ಸಣ್ಣ ಹಾಗೂ ಭೂರಹಿತ ಕಾರ್ಮಿಕರು ಆಹಾರ ಭದ್ರತೆ ಇಲ್ಲದೇ ತೊಳಲಾಡುತ್ತಾರೆ. ಹಲವಾರು ಬಡ ರೈತರು ಇನ್ನುಮುಂದೆ ಕೂಲಿಗಾರರು ಆಗುತ್ತಾರೆ. ಮತ್ತೆ ಅವರಿಗೆ ಆಹಾರ ಭದ್ರತೆ ಏನು ಸಿಗುತ್ತಿತ್ತು. ಅವರೇನು ಕೃಷಿ ಉತ್ಪನ್ನಗಳನ್ನು ಉತ್ಪಾದನೆ ಮಾಡಿಕೊಂಡು ಎರಡು ಹೊತ್ತು ಊಟ ಮಾಡುತ್ತಿದ್ದರು. ಅದನ್ನು ಕಸಿದುಕೊಳ್ಳುವಂತಹ ಪ್ರಯತ್ನವನ್ನು ಮಾಡುತ್ತಿದ್ದೀರಿ. ಈ ರೈತ ವಿರೋಧಿಯಾಗಿರತಕ್ಕಂಥ ತಿದ್ದುಪಡಿಯನ್ನು ತಾವು ಹಿಂಪಡೆಯಬೇಕೆಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, 25 ಲಕ್ಷ ರೂಪಾಯಿಗಳು ಎಂದು ಯಾರು ಮಾಡಿದ್ದು? 50,000 ರೂಪಾಯಿಗಳು ಇದ್ದುದ್ದು, 2 ಲಕ್ಷ ಆಯಿತು. Section 79A and 79B . . . who made it Rs.25 Lakhs with an amendment. It is your Government. ಏನು ಮಾತನಾಡುತ್ತಿದ್ದೀರಿ? What is he talking? (Interruption)

**ಶ್ರೀ ಪ್ರಕಾಶ್ ಕೆ.ರಾಥೋಡ್:-** Hon'ble Member was also part of the Government at that time. ತಿದ್ದುಪಡಿ ತಂದಾಗ ನೀವು ಕೂಡ ನಮ್ಮ ಜೊತೆಗೆ ಇದ್ರಿ.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್:-** No, No. I am sorry Prakash Rathod. (Interruption) ಯಾರ ಸರ್ಕಾರ? ಯಾರು ಇದನ್ನು dilute ಮಾಡಿದ್ದು?

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಸರ್, ಕಾಲಕ್ಕೆ ತಕ್ಕಂತೆ ತಿದ್ದುಪಡಿಯನ್ನು ತಂದಿದ್ದೀರಿ. ಆದರೆ ಬಲವಂತವಾಗಿ ತಿದ್ದುಪಡಿ ತರುವುದು ಏನಿದೆ, ನೀವೇ ಆ ತಿದ್ದುಪಡಿಯನ್ನು ತಂದು, ನೀವೇ ಮಂತ್ರಿಗಳಾಗಿ ಮಾಡಿದ್ದೀರಿ, ಈಗ ಇದು



" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸರಿಯಿಲ್ಲವೆಂದು ಹೇಳಿದರೆ ಹೇಗೆ? ನೀವು ಆಡಳಿತ ಪಕ್ಷದಲ್ಲಿ ಇದ್ದರೆ ಇದೆಲ್ಲಾ ಸರಿಯಾಗುವುದಿಲ್ಲವೇ? ಇದು ಸರಿ ಇಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಈ ವಿಚಾರದಲ್ಲಿ ಮಾನ್ಯ ಕಂದಾಯ ಸಚಿವರಿಗೆ ಎರಡ್ಮೂರು ಪ್ರಶ್ನೆಗಳನ್ನು ಕೇಳುತ್ತಿದ್ದೇನೆ. ನಮ್ಮ ದೇಶ ಕೃಷಿ ಬದುಕನ್ನೇ ಅವಲಂಬಿಸಿದೆ. ವಿಷಯ ಆಧಾರಿತವಾಗಿರತಕ್ಕಂಥ ಜೀವನವನ್ನು ನಾವೆಲ್ಲರೂ ಕೂಡ ನಡೆಸಿಕೊಂಡು ಬಂದಿದ್ದೇವೆ. ಇವತ್ತಿನ ದಿವಸ ನಮ್ಮ ಹಿರಿಯರು ಕೂಡ ಜೀವನವನ್ನು ನಡೆಸಿಕೊಂಡು ಬಂದಿದ್ದಾರೆ ಕೃಷಿ ಆದಾಯದಿಂದಲೇ ನಮ್ಮನ್ನೆಲ್ಲಾ ಬೆಳೆಸಿರುವುದು ಕೃಷಿ ಲಾಭದಾಯಕ ಎನ್ನುವ ವಿಚಾರದಲ್ಲಿ, ಅದು ಲಾಭದಾಯಕ ಎಂದು ಮಾಡಿ ತೋರಿಸಬೇಕಾದಂತಹ ಕೆಲಸ ನಮ್ಮ ಹಿರಿಯರ ಜವಾಬ್ದಾರಿ. ಯುವಕರಿಗೆ ವಿಶೇಷವಾಗಿ ನಮ್ಮ ಮಕ್ಕಳಿಗೆ ಕೃಷಿ ಲಾಭದಾಯಕ ಎಂದು ತೋರಿಸುವುದರಲ್ಲಿ ನಾವು ವಿಫಲರಾಗಿದ್ದೇವೆ. ಹಾಗಾಗಿ, ಯುವಕರು ಯಾರೂ ಕೂಡ ಕೃಷಿ ಬಗ್ಗೆ ಆಸಕ್ತಿ ವಹಿಸದೇ ಇರುವಂಥದ್ದನ್ನು ನಾವೆಲ್ಲರೂ ಕೂಡ ಆತ್ಮಸಾಕ್ಷಿಯಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಯಾವ ಮಕ್ಕಳು ಇವತ್ತು ನಮ್ಮ ತಂದೆ ಕೃಷಿ ಮಾಡಿ ನಮ್ಮನ್ನು ಬೆಳೆಸಿದರು. ನಾವು ಅದರಲ್ಲಿ ...

**ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಅದಕ್ಕೆ connected ಆಗಿ ಹೇಳುತ್ತಿದ್ದೇನೆ. ಇತ್ತೀಚೆಗೆ ರೈತರು ಭತ್ತವನ್ನು ಬೆಳೆದಿದ್ದಾರೆ. ಸರ್ಕಾರ ಒಂದು ಎಕರೆ ಭತ್ತಕ್ಕೆ ರೂ.1600 ಕನಿಷ್ಠ ಬೆಂಬಲ ಕೊಡುತ್ತದೆ. ಆದರೆ ಭತ್ತ ಕಟಾವು ಮಾಡುವಂತಹ ಯಂತ್ರದ ಮಾಲೀಕರು 2400 ರೂಪಾಯಿಗಳನ್ನು ತೆಗೆದುಕೊಳ್ಳುತ್ತಾನೆ. ಇದನ್ನೆಲ್ಲಾ ಸರ್ಕಾರಗಳು ಗಮನವೇ ಹರಿಸುವುದಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಅದಕ್ಕೆ, that is what. ಈಗ ಏನಾಗಿದೆಯೆಂದರೆ, ನನ್ನ ತಂದೆಯವರು ಕೃಷಿ ಮಾಡಿ ಬೆಳೆ ಬೆಳೆಯುತ್ತಿದ್ದರು. ನನ್ನನ್ನೂ ಕೂಡ ಕೃಷಿಯಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಅಕಸ್ಮಾತ್ ನಾನೇನೋ ಅಲ್ಪ ಸ್ವಲ್ಪ ಮುಂದೆ ಬಂದೆನು. ಆದರೆ ನನ್ನ ಮಗನಿಗೆ ಕೃಷಿ ಬದುಕಿನಲ್ಲಿ ಲಾಭದಾಯಕವೆಂದು ತೋರಿಸುವುದಕ್ಕೆ ಆಗದೇ ವಿಫಲವಾಗಿದ್ದೇನೆ. ನಮ್ಮ ದೇಶದ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ಶ್ರೀ ನರೇಂದ್ರ ಮೋದಿ ಸಾಹೇಬರು ಇತ್ತೀಚೆಗೆ 2020ಕ್ಕೆ ನಮ್ಮ ಕೃಷಿ ಆದಾಯ ದುಪ್ಪಟ್ಟು ಮಾಡುತ್ತೇವೆಂದು ಘೋಷಣೆ ಮಾಡಿದ್ದಾರೆ. ಅದನ್ನೇ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಯಡಿಯೂರಪ್ಪನವರು ಕೂಡ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ. ಹಾಗಾಗಿ, ಕೃಷಿ ಲಾಭದಾಯಕ ಎನ್ನತಕ್ಕಂಥ ವಿಚಾರವನ್ನು ನಮ್ಮ ಮುಂದಿನ ಪೀಳಿಗೆಗೆ ನಾವು ತೋರಿಸಿಕೊಡಬೇಕಿದೆ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(989)7.12.2020/6.30/ಎಂ.ಎಂ-ಬಿ.ಎನ್.ಎಸ್**

**ಶ್ರೀ ಎಸ್.ಎಲ್.ಭೋಜೇಗೌಡ(ಮುಂದುವರೆದುದು)**

ಅನಿವಾರ್ಯವಾಗಿ ನಮ್ಮ ಯುವಕರು, ರೈತರ ಮಕ್ಕಳೆಲ್ಲರೂ ಕೆಲಸ ಅರಸಿ ಹಳ್ಳಿಗಳನ್ನು ಬಿಟ್ಟು ನಗರ ಪ್ರದೇಶಗಳಿಗೆ ಏತಕ್ಕೆ ವಲಸೆ ಬರುತ್ತಿದ್ದಾರೆಂದರೆ, ಕೃಷಿ ಲಾಭದಾಯಕವಲ್ಲ, ನಮ್ಮಪ್ಪ ಹಾಕಿದ ಆಲದ ಮರದಲ್ಲಿ ನಾನು ನೇತು ಹಾಕಿಕೊಂಡು ಸಾಯಬೇಕಾಗುತ್ತದೆ, ಏನಾದರೂ ಮಾಡಿ ತಾನು ಜೀವನ ಮಾಡಬೇಕೆಂದು ಇವತ್ತು ಹೊರಗಡೆ ಬಂದು ಮೆಟ್ರೋಪಾಲಿಟನ್ ಸಿಟಿಗಳನ್ನು ಸೇರುತ್ತಿದ್ದಾರೆ. ಫಾರಂ ನಂ.50, 51 ಮತ್ತು 53 ಗೆ ಸಂಬಂಧಪಟ್ಟ ಲಕ್ಷಾಂತರ ಅರ್ಜಿಗಳು ಇನ್ನೂ ಕೂಡ ಪೆಂಡಿಂಗ್ ಇದೆ. ಭೂಮಿಯಿಂದ ಕೋಟ್ಯಂತರ ಜನ ರೈತರು ಇವತ್ತು ನಮ್ಮ ರಾಜ್ಯದಲ್ಲಿದ್ದಾರೆ ಎನ್ನುವುದು ತಾಲ್ಲೂಕು ಆಫೀಸ್‌ನಲ್ಲಿರುವ ಎಂ.ಎಲ್.ಎ. ಗಳು ಕಮಿಟಿ ಅಧ್ಯಕ್ಷರಾಗಿರುತ್ತಾರೆ, ನಾವು ಉಪಾಧ್ಯಕ್ಷರಾಗಿರುತ್ತೇವೆ ನಮಗೆ ಅವಕಾಶ ಕೊಟ್ಟಂತಹ ಸಂದರ್ಭದಲ್ಲಿ ನಾವು ನೋಡಿದ್ದೇವೆ. ರೈತ ಇರುವಂತಹ ಕುಟುಂಬಗಳೇ ಜಾಸ್ತಿ ಇವೆ. ಅವರು ಕೃಷಿ ಕಾರ್ಮಿಕರು. ಆ ಕೃಷಿ ಕಾರ್ಮಿಕರ ಜೀವನ ನಡೆಯಬೇಕಾದರೆ ಕೃಷಿ ಬದುಕು ಅಚ್ಚುಕಟ್ಟಾಗಬೇಕಾಗುತ್ತದೆ. ಕೃಷಿ ಬದುಕು ಅಚ್ಚುಕಟ್ಟಾಗಬೇಕಾದರೆ ಏನಾಗಬೇಕು? ಕೃಷಿ ಜೋರಾಗಿ ನಡೆಯಬೇಕು, ಅದು ಹಳ್ಳಿಗಾಡಿನಲ್ಲಿ ನಡೆಯಬೇಕಾಗುತ್ತದೆ. Land Grabbing (Prohibition) Act ತಂದರು. Land grabbing ವಿಚಾರದಲ್ಲಿ ಬಹಳ ಸವಿಸ್ತಾರವಾಗಿ ಎಲ್ಲಾ ನೋಡಿ ತುಲನೆ ಮಾಡಿ ಸಂಪೂರ್ಣವಾಗಿ ಉದ್ದ, ಅಗಲ ಎಲ್ಲಾ ನೋಡಿಯಾದ ಮೇಲೆ land grabbing Metropolitan city ಗಳಲ್ಲಿ highest ಕಂಡಿತು. ಅದಕ್ಕೆ land grabbing ಬೆಂಗಳೂರಿನಲ್ಲಿ ಮೆಟ್ರೋಪಾಲಿಟನ್ ಸಿಟಿಯಲ್ಲಿ ಆದರೆ, same thing is applied for Taluk Head Quarters and Hobli Head Quarters. ಅಲ್ಲಿ ಮಾಡಿದರೆ ಅಲ್ಲೂ ಕೂಡ ಫಾರೆಸ್ಟ್‌ನವರು ಮತ್ತು ರೆವಿನ್ಯೂನವರು ಬಂದು ಹೇಳುತ್ತಾರೆ, ಬೆಂಗಳೂರಿನಲ್ಲಿ ಕೆರೆ ಕಟ್ಟೆಗಳನ್ನೆಲ್ಲಾ ನುಂಗಿ ನೀರು ಕುಡಿದಿದ್ದಾರೆ. land grabbing ನ್ನು ತಂದು ನಮ್ಮಲ್ಲಿ ಒಂದು ಎಕರೆ, ಎರಡು ಎಕರೆ ಜಮೀನು ಮಾಡಿಕೊಂಡು, ಕುರಿ, ಹಸು ಸಾಕಿಕೊಂಡು, ಮನೆ ಕಟ್ಟಿಕೊಂಡಿದ್ದವರಿಗೆ land grabbing prohibition Rules apply ಮಾಡಿ ಫಾರೆಸ್ಟ್‌ನವರು ಒಬ್ಬರನ್ನೂ ಮಲೆನಾಡಿನಲ್ಲಿ ಇರುವುದಕ್ಕೆ ಬಿಡುತ್ತಿಲ್ಲ. ಮೂಡಿಗೆರೆಯ ಮಾನ್ಯ ಸದಸ್ಯರಾದ ಪ್ರಾಣೇಶ್‌ರವರು ಈ ವಿಚಾರದ ಬಗ್ಗೆ ಮಾತನಾಡಬೇಕಾಗುತ್ತದೆ. ಕಲಂ 79ಎ, 79ಬಿ, 79ಸಿ ತಂದಿರುವ ವಿಚಾರ ಇಲ್ಲಿ ಏನು ನಡೆಯುತ್ತಿದೆ, ಬೆಂಗಳೂರಿನಲ್ಲಿ ಏನು ನಡೆಯುತ್ತಿದೆ, ಮೈಸೂರಿನಲ್ಲಿ ಏನು ನಡೆಯುತ್ತಿದೆ ಅಥವಾ ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಮಂಗಳೂರಿನಲ್ಲಿ ಸುತ್ತಮುತ್ತ ಏನು ನಡೆಯುತ್ತಿದೆ ಅದನ್ನು ಮನಗಂಡು ತಂದಿರುವುದು ಒಂದು ಕಡೆ ಸ್ವಾಗತಾರ್ಹವೆಂದು ಹೇಳಲಿಚ್ಛೆಪಡುತ್ತೇನೆ. ಏಕೆಂದರೆ, same thing should not be

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

applied for the villages. ಅಲ್ಲಿಗೇನಾದರೂ ತಂದರೆ ಹಳ್ಳಿಗಾಡಿನ ಬದುಕು ಸರ್ವನಾಶವಾಗಿಬಿಡುತ್ತದೆ. What is the purpose? ಯಾವ ಉದ್ದೇಶಕ್ಕೆ ನಾವು ಭೂಮಿಯನ್ನು ಕೊಡುತ್ತಿದ್ದೇವೆ ಆ ಭೂಮಿಯನ್ನು ಆ ಉದ್ದೇಶಕ್ಕಾಗಿಯೇ ಉಪಯೋಗ ಮಾಡಬೇಕೆಂದು ಒಂದು ಕಾನೂನಿದೆಯಲ್ಲಾ, change of land use ಯಾವ ಕಾರಣಕ್ಕೂ ಬರಬಾರದು. ನಮ್ಮ ಸ್ನೇಹಿತರಾದ ಮಾನ್ಯ ರಮೇಶ್‌ರವರು ಮಾತನಾಡುವಾಗ ನಾನು ಪ್ರಭಾವ ಬೀರಿ change of land use ಮಾಡಿಸಿಬಿಡುತ್ತೇನೆ, ಕೈಗಾರಿಕೆಗಳನ್ನು ಮಾಡುತ್ತೇವೆಂದು 100 ಎಕರೆ ಭೂಮಿಯನ್ನು ಇಂಡಸ್ಟ್ರಿಗೆ ತೆಗೆದುಕೊಂಡು ಇಂಡಸ್ಟ್ರಿಯನ್ನು 20 ಎಕರೆಯಲ್ಲಿ ಮಾಡಿ, ಉಳಿದ 80 ಎಕರೆಯಲ್ಲಿ ರಿಯಲ್ ಎಸ್ಟೇಟ್ ಮಾಡಿದರೆ ಏನು ಮಾಡಬೇಕು? ಈ ರೀತಿಯ ಕೆಲಸಗಳು 100ಕ್ಕೆ 100 ಆಗುತ್ತದೆ. ಇವತ್ತು 'ನೈಸ್' ರೋಡ್ ನಮ್ಮ ಕಣ್ಣೆದುರಿಗೇ ಇದೆ. ಏನು exact purpose ಗೆ ಭೂಮಿಯನ್ನು ತೆಗೆದುಕೊಂಡಿದ್ದರು ಅದನ್ನು 4–5 ಸಲ ಭೂಮಿಯನ್ನು ತೆಗೆದುಕೊಂಡು ರೈತರೆಲ್ಲರೂ ಆ ಕಡೆಗೆ ಈ ಕಡೆಗೆ ದಿಕ್ಕಾಪಾಲಾಗಿ ಹೋದರು. ಹಾಗಾಗಿ ನೀವು ತಂದಿರುವಂತಹ ಬಿಲ್ಲನ್ನು strict ಆಗಿ implement ಮಾಡಿ ಅದಕ್ಕೆ ಏನೇನು ಮಾನದಂಡ ಇದೆ ಅದು ಯಾವತ್ತು ಕೂಡ ಎಲ್ಲಿಯೂ ಕೂಡ ಚೇಂಜ್ ಆಗಬಾರದು. ಜೊತೆಯಲ್ಲಿ, retrospective, prospective. ಇವತ್ತು ಸಾವಿರಾರು ಕೇಸ್‌ಗಳು ಕೋರ್ಟ್ ಮುಂದೆ ಇವೆ. ಲಿಮಿಟೇಷನ್‌ನಲ್ಲಿ ಇಲ್ಲ, ಅದನ್ನು ತೆಗೆದುಕೊಂಡಿದ್ದಾರೆ, ಅದನ್ನು ಕೋರ್ಟ್‌ನಲ್ಲಿ ಕೇಸ್ ಹಾಕಿಕೊಂಡಿದ್ದಾರೆ. ಆ ಕೇಸ್‌ಗಳು ಹೋದವೇ? ಅವರೆಲ್ಲಾ Income Tax payers. ಅಂತಹವರೆಲ್ಲಾ ತೆಗೆದುಕೊಂಡಿದ್ದಾರೆ, ಆ ಭೂಮಿಯ ಕಥೆ ಏನಾಗಬೇಕು? ನೀವು ಇಲ್ಲಿ ನೋಡುವಂತಹ ಪರಿಸ್ಥಿತಿ ನಮ್ಮ ಊರಿನಲ್ಲಿ ಇಲ್ಲ. ನಮ್ಮ ಊರಿನಲ್ಲಿರುವಂತಹ ಪರಿಸ್ಥಿತಿ ಬೀದರ್ ಜಿಲ್ಲೆಯಲ್ಲಿ ಇಲ್ಲ. ದಯಮಾಡಿ ತಾವು ಇದನ್ನೆಲ್ಲಾ ಅವಲೋಕನ ಮಾಡಬೇಕಾಗುತ್ತದೆ. ಇದರ ಜೊತೆಗೆ, dry land and wet land. What is the ceiling limit for the wet land and dry land? ಇದೆರಡನ್ನೂ ತಾವು ಕ್ಲಿಯರ್ ಆಗಿ ತೋರಿಸಬೇಕಾಗುತ್ತದೆ. ಇದರ ಜೊತೆಗೆ ಎಸ್.ಸಿ., ಎಸ್.ಟಿ. ಲ್ಯಾಂಡ್‌ಗೆ ಯಾವ ಕಾರಣಕ್ಕೂ ತೊಂದರೆಯಾಗಬಾರದು ಅದನ್ನು ಸಹ ಗಮನಿಸಬೇಕಾಗುತ್ತದೆ. ಹಿಂದೆ ಏನಿತ್ತು ಅದನ್ನು ಉಳಿಸಬೇಕು. ಏಕೆಂದರೆ ಅವರೆಲ್ಲಾ ಕೃಷಿ ಬದುಕಿನಿಂದ ಬಂದಿರುವಂತಹವರು ಅದನ್ನು ಉಳಿಸಬೇಕು. ಮತ್ತೆ ಇದರಲ್ಲಿ ಮೂಗು ತೂರಿಸುವ ಕೆಲಸವಾಗಬಾರದು. ಯಾವ ಉದ್ದೇಶಕ್ಕಾಗಿ ಸರ್ಕಾರದಿಂದ ಉಚಿತವಾಗಿ ಭೂಮಿಯನ್ನು ಕೊಟ್ಟಿದ್ದಾರೆ ಅಥವಾ offset price ನಲ್ಲಿ ಕೊಟ್ಟಿದ್ದಾರೆ ಅದೇ ಉದ್ದೇಶಕ್ಕೆ, ಈಗ ಎಜುಕೇಷನ್‌ಗೆ ಕೊಟ್ಟಿದ್ದರೆ ಎಜುಕೇಷನ್‌ಗೆ ಆಗಬೇಕು, ಇಂಡಸ್ಟ್ರಿಗೆ ಕೊಟ್ಟಿದ್ದರೆ ಅಲ್ಲಿ ಇಂಡಸ್ಟ್ರಿ ಆಗಬೇಕು ಅಥವಾ ಧಾರ್ಮಿಕ ಕಾರ್ಯಕ್ಕೆ ಕೊಟ್ಟಿದ್ದರೆ ಅಲ್ಲಿ ಧಾರ್ಮಿಕ ಕಾರ್ಯವನ್ನೇ ಮಾಡಬೇಕಾಗುತ್ತದೆ. ಅದನ್ನು ಬಿಟ್ಟು ಬೆಂಗಳೂರಿನಲ್ಲಿ educational purpose ಗೆಂದು ಭೂಮಿ ತೆಗೆದುಕೊಂಡು ಕಲ್ಯಾಣ ಮಂಟಪಗಳನ್ನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಟ್ಟಿಕೊಂಡು enjoy ಮಾಡುತ್ತಿದ್ದಾರೆ. ಅವರ ಬಗ್ಗೆ ನಾವು ಯಾವ ಕ್ರಮವನ್ನೂ ಮಾಡುವುದಕ್ಕೆ ಆಗಿಲ್ಲ. ಅದರಲ್ಲಿ ದೊಡ್ಡ ದೊಡ್ಡವರೂ ಇದ್ದಾರೆ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನು ಎಸ್.ಸಿ., ಎಸ್.ಟಿ., ಜನಾಂಗದ ಜಮೀನುಗಳ ಬಗ್ಗೆ ಪ್ರಶ್ನೆ ಕೇಳಿದ್ದಾರೆ ಯಾವುದೇ ಕಾರಣಕ್ಕೂ ಕಲಂ 79ಎ, 79ಬಿ ಗೆ ಸಂಬಂಧಪಟ್ಟಂತೆ ಎಸ್.ಸಿ., ಎಸ್.ಟಿ., ಕಾಯಿದೆಗಳೇನಿದೆ ಅದಕ್ಕೂ ಇದಕ್ಕೂ ಏನೂ ಸಂಬಂಧ ಇಲ್ಲ. ಎಸ್.ಸಿ., ಎಸ್.ಟಿ., ಕಾಯಿದೆಗಳು ಹೇಗಿರುತ್ತದೋ ಹಾಗೇ ಇರುತ್ತದೆ. ಎರಡನೆಯದಾಗಿ ಅವರು purpose ಬಗ್ಗೆ ಹೇಳಿದ್ದಾರೆ. ಇಂಡಸ್ಟ್ರೀಸ್‌ಗೆ, educational purpose ಗೆ ತೆಗೆದುಕೊಳ್ಳುತ್ತಾರೆ ಅಥವಾ ಮೆಡಿಕಲ್ ಉದ್ದೇಶಕ್ಕೆ ಜಮೀನುಗಳನ್ನು ತೆಗೆದುಕೊಳ್ಳುತ್ತಾರೆ. Section 109 ಕುರಿತಂತೆ ನಾವು ಮೊನ್ನೆ Act ಬದಲಾವಣೆ ಮಾಡಿದ ಸಂದರ್ಭದಲ್ಲಿ ಹಿಂದೆ ಶ್ರೀ ಸಿದ್ದರಾಮಯ್ಯನವರ ಸರ್ಕಾರ ಇದ್ದಾಗ ಯಾವುದೇ ಇಂಡಸ್ಟ್ರಿ ನಷ್ಟವಾದಾಗ ಅದನ್ನು ರಿಯಲ್ ಎಸ್ಟೇಟ್‌ಗೆ ಕೊಡಬಹುದೆಂದು 2015ರಲ್ಲಿ ಒಂದು ಕಾಯಿದೆಯನ್ನು ತಂದಿದ್ದರು. ನಾನು ಕಂದಾಯ ಸಚಿವನಾದಾಗ ಅದನ್ನು ಬದಲಾವಣೆ ಮಾಡಿ Industrial purpose ಇದ್ದರೆ ಅವರು ಇಂಡಸ್ಟ್ರೀಸ್ ಅನ್ನೇ ಮಾಡಬೇಕೇ ಹೊರತು ಬೇರೆ ಉದ್ದೇಶಕ್ಕೆ ಯಾವುದೇ ಕಾರಣಕ್ಕೂ at any cost ಚೇಂಜ್ ಮಾಡುವುದಕ್ಕೆ ಆಗುವುದಿಲ್ಲ. Educational purpose ಗೆ ಏನಾದರೂ ಭೂಮಿ ಹಂಚಿಕೆಯಾಗಿದ್ದರೆ ಸರ್ಕಾರದಿಂದ ಆಗಿರಲಿ ಅಥವಾ ಪ್ರೈವೇಟ್‌ನಿಂದ ತೆಗೆದುಕೊಂಡಿರಲಿ, educational purpose ಗೆ ಮಾಡಬೇಕೆಂದು ಕಾಯಿದೆಯನ್ನು ಬದಲಾವಣೆ ಮಾಡಿದ್ದೇವೆ. ಆದ್ದರಿಂದ ಎಸ್.ಸಿ., ಎಸ್.ಟಿ., ಇರಬಹುದು, educational purpose ಇರಬಹುದು ಯಾವುದೇ ಕಾರಣಕ್ಕೂ ಬದಲಾವಣೆಗೆ ಅವಕಾಶ ಇಲ್ಲ, ಕಾಯಿದೆಯಲ್ಲಿ ಅದನ್ನು ತಂದಿದ್ದೇವೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಕೊನೆಯದಾಗಿ ಒಂದೆರಡು ಪ್ರಶ್ನೆ ಇದೆ. ಕಲಂ 109ರಲ್ಲಿ, exemption for industrial purpose upto 20 units ಎಂದು ಇದೆ. Again for educational purpose 4 ಯೂನಿಟ್ಸ್, ನಂತರ ದೇವಸ್ಥಾನ ಧಾರ್ಮಿಕ ಒಂದು ಯೂನಿಟ್ ಎಂದು ಇದೆ. ಅದನ್ನು ಈಗ ಏನು ಮಾಡಿದ್ದೀರಿ ಎಂಬುದು ಬೇಕು. ಲಿಮಿಟೇಷನ್ ಇಟ್ಟುಕೊಂಡು ಮಾಡಿದರೆ ಈಗಲೂ ಕೂಡ ಕಾಲ ಮಿಂಚಿಲ್ಲ. ದಯಮಾಡಿ ನೀವು ಇದನ್ನು ಮೆಟ್ರೋಪಾಲಿಟನ್ ಸಿಟಿಗಳಿಗೆ ಸೀಮಿತ ಮಾಡಿ, even District Head Quarters ನಲ್ಲಿ certain extent CDA limit ಎಂದು Town Planning limit ಬರುತ್ತದೆ, ಆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

Town Planning limit ಅನ್ನು ಮೀರಿ ಆಚೆ ಬಂದಿದ್ದಕ್ಕೆ ಸೆಕ್ಷನ್ 79ಎ, 79ಬಿ ಅನ್ನು ತೆರವು ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ತಾಲ್ಲೂಕು ಆಫೀಸ್, ಸಬ್ ರಿಜಿಸ್ಟ್ರಾರ್ ಆಫೀಸ್, ಸಹಾಯಕ ಆಯುಕ್ತರ ಕಛೇರಿ, ಬೆಂಗಳೂರಿನಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯನ್ನು ಮನದಲ್ಲಿಟ್ಟುಕೊಂಡು ಇವತ್ತು ಏನೇನು ಅಕ್ರಮಗಳು ನಡೆಯುತ್ತಿದೆ ಆ ಅಕ್ರಮಗಳಿಗೆ ಪೂರಕವಾಗಿ ರಿಯಲ್ ಎಸ್ಟೇಟ್ ಮಾಡುತ್ತಿರುವಂತಹವರು, ಒಳ್ಳೊಳ್ಳೆಯ ಇಂಡಸ್ಟ್ರೀಸ್ ಮಾಡುವಂತಹವರು, ದುಡ್ಡಿರುವವರು ಯಾರ್‍ಯಾರು ಈ land grabbing ಮಾಡುವುದಕ್ಕೆ ಹೊರಟಿದ್ದಾರೆ ಅದನ್ನು ನಿಯಂತ್ರಣ ಮಾಡುವುದಕ್ಕೋಸ್ಕರ ನೀವು ಈ ಬಿಲ್ಲನ್ನು ತರುತ್ತಿದ್ದೀರೆಂದು ನಾನು ಭಾವಿಸಿದ್ದೇನೆ. ಆ purpose serve ಆಗಬೇಕೆಂದರೆ, 100ಕ್ಕೆ 100 ಒಳ್ಳೆಯದಾಗಬೇಕೆಂದರೆ, ಜೊತೆಯಲ್ಲಿ ರೈತಾಪಿ ಕುಟುಂಬದ ಬದುಕು ಹಸನಾಗಬೇಕು ಮತ್ತು ಉಳಿಯಬೇಕು. ಇವತ್ತು ಕೃಷಿ ಬದುಕು ಇಲ್ಲದಿದ್ದರೆ ಮುಂದೊಂದು ದಿನ ಇಡೀ ನಾಡಿನ ಎಲ್ಲಾ ಜನ ಅನ್ನ, ನೀರಿಗೆ ಬಡಿದಾಡಬೇಕಾಗುತ್ತದೆ. ಇದನ್ನು ಬರೆದಿಟ್ಟುಕೊಳ್ಳಿ. ಹಾಗಾಗಿ ಆ ಬದುಕು ಉಳಿಯಬೇಕಾದರೆ ದಯಮಾಡಿ ಇದನ್ನು ಹಳ್ಳಿಗಾಡಿನವರೆಗೆ ತರಬಾರದೆಂದು ಅತ್ಯಂತ ಕಳಕಳಿಯಿಂದ ವಿನಂತಿ ಮಾಡಿ ಈ ವಿಧೇಯಕವನ್ನು ನಾವು partially ಒಪ್ಪಿದ್ದೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕರ್ನಾಟಕ ಭೂ ಸುಧಾರಣೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪ್ರಥಮವಾಗಿ ನಾನು ಖಂಡಿಸುತ್ತೇನೆ. ಕಾರಣಗಳೇನೆಂದರೆ, ನಾನು ಕೂಡ ಇವತ್ತಿನವರೆಗೆ 365 ದಿವಸಗಳಲ್ಲಿ ಸುಮಾರು 200 ದಿವಸಗಳು ಹಳ್ಳಿಯಲ್ಲೇ ಇರುತ್ತೇನೆ. ಅಸೆಂಬ್ಲಿಗೆ ಬಂದಾಗ ಅಥವಾ ಏನಾದರೂ ಕಾರ್ಯಕ್ರಮಗಳಿದ್ದಾಗ ಮಾತ್ರ ನಾನು ಬೇರೆ ಕಡೆಗೆ ಹೋಗುತ್ತೇನೆ. ನಿತ್ಯವೂ ಹಳ್ಳಿಯಲ್ಲೇ ಇರುತ್ತೇನೆ. ಹಿಂದೆ ಶ್ರೀ ದೇವರಾಜ ಅರಸುರವರ ಕಾಲದಲ್ಲಿ ಬಿಲ್ ತಂದಿದ್ದರು. ಕಾರಣವೇನೆಂದರೆ, ಸಣ್ಣ ಜಮೀನ್ದಾರರನ್ನು ದೊಡ್ಡ ಜಮೀನ್ದಾರರುಗಳು exploit ಮಾಡಬಾರದು ಎಂಬ ಉದ್ದೇಶಕ್ಕೆ ತಂದಿದ್ದರು. ಇದು ಬಹಳ ಅತ್ಯಂತ ಮುಖ್ಯವಾದುದು. ಇವತ್ತು ಹಳ್ಳಿಗಳಲ್ಲಿ ಇರಬೇಕಾದರೆ ಎಲ್ಲರಿಗೂ ಸ್ವಲ್ಪ ಸ್ವಲ್ಪ ಜಮೀನಿದ್ದು, ನಮಗೆ ಜಾಸ್ತಿ ಜಮೀನಿದ್ದರೂ ಕೂಡ ಎಲ್ಲರೂ ಚೆನ್ನಾಗಿ ಬದುಕುತ್ತೇವೆ. ಈಗ ಈ ಬಿಲ್‌ಗಳಿಂದ ಏನಾಗುತ್ತದೆ ಎಂದರೆ, ದೊಡ್ಡ ರೈತರು, corporate sector ನವರು ಬಂದು ಸಿಕ್ಕಾಪಟ್ಟೆ ಜಮೀನುಗಳನ್ನು ತೆಗೆದುಕೊಂಡು ಹೋಗುತ್ತಾರೆ. ಅವರು ಏನು ಮಾಡುತ್ತಾರೆ ಎಂದರೆ, ಎಲ್ಲಾ ಭೂಮಿಯನ್ನು ಖರೀದಿ ಮಾಡುವುದಿಲ್ಲ.

**(ಮುಂದು)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(990) 07–12–2020/ 06–40/ ಕೆಹೆಚ್–ಜಿಆರ್**

**ಶ್ರೀ ಬಸವರಾಜ ಪಾಟೀಲ್ ಇಟಗಿ(ಮುಂದುವರೆದುದು)**

ಅವರು ಸರಿಯಾಗಿ ಇಲ್ಲದೇ ಇರುವಂತಹ ಜಮೀನನ್ನು ಖರೀದಿ ಮಾಡುವುದಿಲ್ಲ. ಚೆನ್ನಾಗಿ ಇರುವಂತಹ ಜಮೀನನ್ನು ಖರೀದಿ ಮಾಡುವಂತಹ ಕೆಲಸ ಪ್ರಥಮವಾಗಿ ಆಗುತ್ತದೆ. ಉದಾಹರಣೆಗೆ Project Areas ಇದೆ. ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ಯಾದಗಿರಿ ಜಿಲ್ಲೆಯಲ್ಲಿ ವಡೆಗೇರು ಎಂದು ಒಂದು ತಾಲ್ಲೂಕು ಇದ್ದು, ಕೃಷ್ಣಾ ಮೇಲ್ದಂಡೆ ಕಾಲುವೆಯಿಂದ ಆ ತಾಲ್ಲೂಕಿಗೆ ನೀರು ಬರುವುದಕ್ಕೆ ಇನ್ನೂ ಸುಮಾರು 6 ರಿಂದ 8 ತಿಂಗಳು ಬಾಕಿ ಇತ್ತು. ಆಂಧ್ರಪ್ರದೇಶದವರು 100 ವರ್ಷಗಳಿಂದ ಕೃಷಿಯಲ್ಲಿ ಬಹಳ ಬುದ್ಧಿವಂತರಿದ್ದಾರೆ. ಅವರು ಬಂದು ಏನು ಮಾಡಿದ್ದಾರೆ ಎಂದರೆ, 4 ಊರುಗಳಲ್ಲಿ 200, 300 ಎಕರೆ ಜಮೀನನ್ನು ತೆಗೆದುಕೊಂಡರು. ಆಗ land limit ಇತ್ತು. ಆ land limit ನಲ್ಲಿ ಅವರವರ ಹೆಸರಿನಲ್ಲಿ ಜಮೀನನ್ನು ತೆಗೆದುಕೊಂಡರು. ಕೊನೆಗೆ ತುಮಕೂರಿನಂತಹ ಹಳ್ಳಿಯಲ್ಲಿ ದಿನ ಮುಂಜಾನೆ ಎದ್ದು, ಎಲ್ಲಾ ರೈತರು ತಮ್ಮ ಹಸು ಮತ್ತು ದನಗಳನ್ನು ಹುಲ್ಲನ್ನು ಮೇಯಿಸುವುದಕ್ಕೆ ಕಳುಹಿಸುತ್ತಿದ್ದರಲ್ಲವೇ, ಅವರು ಹೋಗುವುದಕ್ಕೆ ದಾರಿ ಇಲ್ಲದಂತೆ full fencing ಮಾಡಿಬಿಟ್ಟರು. ಇದರಿಂದ ಜಾನುವಾರುಗಳು ನೀರು ಕುಡಿಯುವುದಕ್ಕೆ ನದಿಗೆ ಹೋಗಬೇಕಾದರೆ ಸುಮಾರು 6 ಕಿ.ಮೀ. ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ಅವರು ಮೇವು ಮತ್ತು ನೀರಿಗಾಗಿ ಇನ್ನೆಲ್ಲಿಗೆ ಹೋಗಬೇಕು. ಮೊದಲೆಲ್ಲಾ ಮಾರ್ಗಗಳು ಇದ್ದವು. Garden ಗಳಿಗೆ ಹಾಕುವಂತಹ Barbed wire fencing ಅಂತಹದ್ದನ್ನು ಹಾಕಿ ಕುಳಿತುಬಿಟ್ಟರು. ಇದರ ಅರ್ಥ ಏನೆಂದರೆ, ಈ ಕಾರ್ಪೋರೇಟ್ ಕಂಪನಿಗಳು ಹಳ್ಳಿಗಳಿಗೆ ಬಂದು 200, 300, 400, 500 ಎಕರೆ ಜಮೀನನ್ನು ತೆಗೆದುಕೊಂಡ ಮೇಲೆ ಹಳ್ಳಿ ರೈತರಿಗೆ ಏನು ಕೆಲಸ ಇದೆ? ತಾವು ಈ ರೀತಿ ಅವಕಾಶ ಕೊಡುತ್ತಾ ಹೋದರೆ ಎಷ್ಟು ಜನರಿಗೆ ಉದ್ಯೋಗ ಕೊಡುತ್ತೀರಿ? ಹೀಗಾಗಿ ಅವರೆಲ್ಲರೂ ನಗರದ ಕಡೆಗೆ ವಲಸೆ ಬರುವಂತಹ ಕೆಲಸ ಆಗುತ್ತದೆ. ಅಲ್ಲಿ ಏನು ಇರುವುದಿಲ್ಲ. ಒಂದು ಕಾರ್ಪೋರೇಟ್ ಕಂಪನಿ ಇಡೀ ಊರಿನ ಜನ ಅವರ ಕಾರ್ಮಿಕರು ಇದ್ದ ಹಾಗೆ. ಮಾನ್ಯ ರಮೇಶ್‌ರವರು ಹೇಳಿದ ಹಾಗೆ ಶೇಕಡಾ 70 ರಿಂದ 80 ರಷ್ಟು ಒಂದು ಹಳ್ಳಿಯಲ್ಲಿ small and marginal farmers ಇದ್ದಾರೆ. Only 10 to 15% farmers of that village are big farmers. ಶ್ರೀ ದೇವರಾಜ ಅರಸ್‌ರವರು ಈ ವಿಧೇಯಕವನ್ನು ತಂದ ಮೇಲೆ ಅಲ್ಲಿಯೂ ಕೂಡ dryland ಗೆ 54 Acres limitation ಇತ್ತು. ಅಲ್ಲಿಗೆ ಅವರಿಗೆ 3–4 ಮಕ್ಕಳಾಗಿ, ಮೊಮ್ಮಕ್ಕಳಾಗಿ ಅಲ್ಲಿಯೂ ಕೂಡ 10 ರಿಂದ 12 ಎಕರೆ ಉಳಿಯುವಂತಹ ಕೆಲಸ ಆಗುತ್ತದೆ. ಬಹುಶಃ ಇನ್ನು 5 ರಿಂದ 10 ವರ್ಷದಲ್ಲಿ ಶೇಕಡಾ 90 ರಿಂದ 95 ರಷ್ಟು ಎಲ್ಲರೂ ಕೂಡ small and marginal farmers ಆಗುವಂತಹ ಪರಿಸ್ಥಿತಿ ಇದೆ. ಈ ಒಂದು ಸಂದರ್ಭದಲ್ಲಿ ಈ ವಿಧೇಯಕ ಬಂದಾಗ ಅಲ್ಲಿರುವಂತಹ ಬಲಾಢ್ಯ ರೈತರು ಮತ್ತು ಕಾರ್ಪೋರೇಟ್ ಕಂಪನಿಗಳು ಕೈಜೋಡಿಸಿ ಎಲ್ಲರ ಜಮೀನುಗಳನ್ನು

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತೆಗೆದುಕೊಳ್ಳುತ್ತಾರೆ. ಇವತ್ತಿನ ದಿವಸ ಒಂದು ಎಕರೆಗೆ 50 ಸಾವಿರ ರೂಪಾಯಿಗಳು ಇದ್ದರೆ, ಅವರು 75 ಸಾವಿರ ರೂಪಾಯಿಗಳು ಎಂದು ಹೇಳುತ್ತಾರೆ. ಏಕೆಂದರೆ, ಇದರಿಂದ ಅವರಿಗೇನೂ ವ್ಯತ್ಯಾಸ ಆಗುವುದಿಲ್ಲ. ಉದಾಹರಣೆಗೆ ಜೇವರ್ಗಿ ತಾಲ್ಲೂಕಿನಲ್ಲಿ 'ಶ್ರೀ ಸಿಮೆಂಟ್ಸ್' ಎಂದು ಒಂದು ಕಂಪನಿ ಇತ್ತು. ಆವತ್ತಿನ ದಿವಸ ಆ ಜಮೀನಿನ ಬೆಲೆ ಎಷ್ಟೆಂದರೆ, ಒಬ್ಬ ರೈತ ಇನ್ನೊಬ್ಬ ರೈತನಿಂದ ಖರೀದಿ ಮಾಡಬೇಕಾದರೆ ಸುಮಾರು 60 ರಿಂದ 80 ಸಾವಿರ ರೂಪಾಯಿಗಳಷ್ಟು ಬೆಲೆ ಇತ್ತು. 'ಶ್ರೀ ಸಿಮೆಂಟ್ಸ್' ಕಂಪನಿಯವನು ಬಂದು ಒಮ್ಮೆಲೆ Rs.2 lakhs per Acre ಕೊಟ್ಟಿದ್ದಾನೆ. Quote ಮಾಡಿದ ತಕ್ಷಣ ರೈತರಿಗೆ ತಾವು ಎಷ್ಟೇ ದೊಡ್ಡವರು ಇರಲಿ, ಬ್ಯಾಂಕ್‌ಗಳಲ್ಲಿ ಸಾಲ ಇದ್ದೇ ಇರುತ್ತದೆ. ಇದರ ಜೊತೆಗೆ ನೂರಾರು ಕಿರಿಕಿರಿ ಇದ್ದೇ ಇರುತ್ತದೆ. ನಮ್ಮ ಹತ್ತಿರ 50 ಎಕರೆ ಜಮೀನು ಇತ್ತೆಂದರೆ, 10 ಎಕರೆ ಜಮೀನನ್ನು ಮಾರಿದರೆ ನಮ್ಮ ಸಾಲ ತೀರುತ್ತದೆ. ಇದ್ದರಿಂದ ನಾವು ಆರಾಮಾಗಿ ಇರಬಹುದೆಂಬ ಉದ್ದೇಶದಿಂದ ಆತನಿಗೆ 2 ಲಕ್ಷ ರೂಪಾಯಿಗಳಿಗೆ ಜಮೀನನ್ನು ಮಾರುವುದಕ್ಕೆ ಪ್ರಾರಂಭ ಮಾಡುತ್ತಾನೆ. ಈ ಜಮೀನನ್ನು ಮಾರುವುದಕ್ಕೆ ಪ್ರಾರಂಭ ಮಾಡಿ ನಮ್ಮ ಪರಿಸ್ಥಿತಿ ಎಲ್ಲಿಗೆ ಬಂದಿದೆಯೆಂದರೆ, 3 ಎಕರೆ ಜಮೀನು ಇದ್ದವನು 1 1/2 ಎಕರೆ ಕೊಟ್ಟು, 1 1/2 ಎಕರೆಯಲ್ಲಿ ಉಳಿದುಕೊಂಡ. ಮತ್ತೆ ಈ ಕಾನೂನಿನಲ್ಲಿ ಜಳ ಜಳ ಆಗುವಂತಹದ್ದು ಆಗುತ್ತದೆ. ಸುಮ್ಮನೆ ಅಲ್ಲಿ ಪ್ರತಿ ಊರಿಗೆ labour colony ಹಾಗೂ ಒಂದು ದೊಡ್ಡ ಕಾರ್ಪೋರೇಟ್ ಕಂಪನಿ ನಿರ್ಮಾಣವಾಗುವಂತಹ ಸಂದರ್ಭ ಸೃಷ್ಟಿಯಾಗುವಂತಹದ್ದು ಈ ವಿಧೇಯಕದಲ್ಲಿ ಇದೆ. ಇದರಿಂದ, social justice ಅನ್ಯಾಯವಾಗುತ್ತದೆ. ಇವತ್ತಿನ ದಿವಸ ರೈತರಿಗೆ ಬಹಳ restriction ಇದ್ದು, ಇದನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಅವರು ಕೂಡ 3 ರಿಂದ 4 ಎಕರೆಯೊಳಗೆ ಬದುಕಲಿ. ನಮ್ಮಲ್ಲಿ Project Area ಬಂದಿದ್ದು, 4 ಎಕರೆ ಜಮೀನು ಇದ್ದರೆ, ಸುಮಾರು 150 ರಿಂದ 160 ಚೀಲಗಳಷ್ಟು ಭತ್ತ ಬೆಳೆಯುತ್ತಾನೆ. ಒಂದು ವರ್ಷಕ್ಕೆ 4 ರಿಂದ 5 ಚೀಲಗಳಷ್ಟು ಭತ್ತ ಅವರ ಮನೆಯ ಊಟಕ್ಕೆ ಖರ್ಚಾಗುತ್ತದೆ. ಉಳಿದ ಭತ್ತದ ಚೀಲಗಳನ್ನು ಮಾರಾಟ ಮಾಡುತ್ತಾನೆ. ಮಾನ್ಯ ಸಚಿವರಿಗೆ ಗೊತ್ತಿರುವ ಹಾಗೆ ಇವತ್ತಿನ ದಿವಸ ಪರಿಸ್ಥಿತಿ ಹೇಗಿದೆಯೆಂದರೆ, ಒಂದು ಚೀಲ ಭತ್ತಕ್ಕೆ 1400 ರೂಪಾಯಿಗಳು ಇದ್ದಂತಹದ್ದು, 1050 ರೂಪಾಯಿಗಳು ಆಗಿದೆ. ಇವತ್ತಿನ ದಿವಸ ಎಂ.ಎಸ್.ಪಿ., ಬೆಲೆ 1866 ರೂಪಾಯಿಗಳು ಇದೆ. ಆಡಳಿತ ಪಕ್ಷದ ಸರ್ಕಾರವು ಖರೀದಿ ಕೇಂದ್ರಗಳನ್ನು ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಇನ್ನು ಖರೀದಿ ಕೇಂದ್ರಗಳನ್ನು ಪ್ರಾರಂಭ ಮಾಡಿಲ್ಲ. ಇಂತಹ ಪರಿಸ್ಥಿತಿಯಲ್ಲಿಯೇ ರೈತರು ಬಹಳ ತೊಂದರೆಯಲ್ಲಿ ಇದ್ದಾರೆ. ಇಂತಹ ವಿಧೇಯಕವನ್ನು ತಂದ ಮೇಲೆ ಪೂರ್ಣವಾಗಿ ಪ್ರತಿ ಹಳ್ಳಿಯಲ್ಲಿ ಸತ್ಯನಾಶ ಆಗುವಂತಹ ಪರಿಸ್ಥಿತಿ ಉದ್ಭವಿಸುತ್ತದೆ.

ಮಾನ್ಯ ಸಭಾಪತಿಯವರೇ, ತಮ್ಮ ಗಮನಕ್ಕೆ ಇನ್ನೊಂದು ಅಂಶವನ್ನು ತರುವುದೇನೆಂದರೆ, ಕಳೆದ ಬಾರಿಯ ಅಧಿವೇಶನದಲ್ಲಿ ಸುಮಾರು ಎರಡು ವರ್ಷಗಳಿಂದ ಜಮೀನಿನ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದೆ. ಇದರ ಬಗ್ಗೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪತ್ರಿಕೆಯವರು ವರದಿಯನ್ನು ಮಾಡಿದ್ದರು. ಪ್ರತಿ ವರ್ಷ potable land ಸುಮಾರು 60 ಸಾವಿರ ಎಕರೆ ಜಮೀನು ನಮ್ಮ ರಾಜ್ಯದಲ್ಲಿ urbanisation ಆಗುತ್ತಿದೆ. ಪ್ರತಿ ವರ್ಷ ನಮ್ಮ ರಾಜ್ಯದಲ್ಲಿರುವಂತಹ ಹಳ್ಳಿಗಳಿರಬಹುದು. ಹಾಗೆಯೇ ನಾಗರೀಕರು ಇರಬಹುದು. 60 ಸಾವಿರ ಎಕರೆ ಕೃಷಿ ಭೂಮಿ ಜಮೀನನ್ನು urbanise ಮಾಡುತ್ತಿದ್ದೇವೆ. ಉದಾಹರಣೆಗೆ ಆಶ್ರಯ ಮನೆ ಕಟ್ಟಬಹುದು, ಗೋಡೌನ್‌ಗಳನ್ನು ಕಟ್ಟಬಹುದು, ರಸ್ತೆ ನಿರ್ಮಾಣ ಇರಬಹುದು, yards ಇರಬಹುದು, ಬಡಾವಣೆಗಳು ಇರಬಹುದು. ಇಂತಹ ಎಲ್ಲಾ ಅಂಶಗಳು ಸೇರಿ, ಮೊದಲನೆಯದಾಗಿ ಪ್ರತಿ ವರ್ಷ 60 ಸಾವಿರ ಎಕರೆ ಜಮೀನನ್ನು ನಾವು ಕಳೆಯುತ್ತಿದ್ದೇವೆ. ಈ ರೀತಿಯ ವಿಧೇಯಕವನ್ನು ತಂದು ಅವರಿಗೆ ಅವಕಾಶ ಕೊಟ್ಟಾಗ, ಇವತ್ತಿನ ದಿವಸ ಯಾವುದೇ ಹಳ್ಳಿಗಳಲ್ಲಿಯೂ ಯಾವುದೇ ರೈತರು ಇಲ್ಲದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಹಳ್ಳಿಯಲ್ಲಿ ಒಳ್ಳೆಯ ಒಬ್ಬ ರೈತ ಇದ್ದರೂ ಕೂಡ, ಕಾರ್ಪೋರೇಟ್ ಕಂಪನಿಗಳು ಬಂದರೆ, ನಾವು ಏನೇ ಮಾಡಿದರೂ ಕೂಡ ಅವನ ಒತ್ತೆಯಾಳಾಗಿ ಇರಬೇಕಾಗುತ್ತದೆ. ಆ ರೀತಿಯ ಒಂದು ಪರಿಸ್ಥಿತಿ ನಿರ್ಮಾಣವಾಗುತ್ತದೆ. ಈಗ ಒಬ್ಬ ಬಂದು 500 ಎಕರೆ ಜಮೀನನ್ನು ತೆಗೆದುಕೊಳ್ಳುತ್ತಾನೆ. ನಮ್ಮಲ್ಲಿ 40 ಎಕರೆ ಜಮೀನು ಇರುತ್ತದೆ. ಆತ ಹೇಳಿದ ಮಾತನ್ನು ನಾವು ಕೇಳಬೇಕಲ್ಲವೇ? ನೂರಾರು ವರ್ಷ ಇದ್ದು, ಎಲ್ಲರೂ ಕೂಡ ಅನ್ಯೋನ್ಯವಾಗಿದ್ದಂತಹವರು, ಇವತ್ತು ಯಾರೋ ಬಂದರೆ ಅವರಿಗೆ ಒತ್ತೆಯಾಳಾಗಿ ಇರುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಅವನು ಬಂದು ಅವನ ಸರ್ಕಾರಿ ನಿಯಮದ ಬಗ್ಗೆ ಹೇಳುತ್ತಾನೆ. ಅವನು ಬಾಂಬೆಯಲ್ಲಿ ಕುಳಿತಿದ್ದು, ಆತನ ಅಸಿಸ್ಟೆಂಟ್ ಒಬ್ಬ ಇರುತ್ತಾನೆ. ಅವನ ಅಸಿಸ್ಟೆಂಟ್ ನಮ್ಮ ಊರಿನಲ್ಲಿ ಇರುತ್ತಾನೆ. ಅವರಿಗೆ ನಮ್ಮ ಧ್ವನಿ ಮುಟ್ಟುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ವಿಚಾರಕ್ಕೆ ಪೂರಕವಾಗಿ ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಹೇಳುತ್ತಿರುವ ವಿಚಾರಗಳು ನೂರಕ್ಕೆ ನೂರು ಸತ್ಯವಾಗಿದೆ. Basically, I am an Horticulturist. ನಾನು ತೋಟಗಾರಿಕೆ ಬೆಳೆಗಳನ್ನು ಬೆಳೆಯುವಂತಹ ಒಬ್ಬ ರೈತ. ನಾನು ದಾಳಿಂಬೆ ಹಣ್ಣನ್ನು ಬೆಳೆಯುತ್ತಿದ್ದಾಗ ನನ್ನ ಜೊತೆ ಇನ್ನೊಬ್ಬರು ದಾಳಿಂಬೆ ಬೆಳೆಗಾರರು ಜವಳಗೆರೆ farm ನಲ್ಲಿ ಇರುವವರು ಕಲ್ಕತ್ತಾ ಮಾರುಕಟ್ಟೆಗೆ ಹೋಗಿದ್ದೆವು. ನಮ್ಮ produce ಹೇಗೆ ಮಾರಾಟವಾಗುತ್ತದೆ, ರೈತರನ್ನು ಹೇಗೆ exploit ಮಾಡುತ್ತಾರೆ ಎನ್ನುವುದರ ಬಗ್ಗೆ ನಾನು ನೋಡುವುದಕ್ಕೆ ಹೋಗಿದ್ದೆ, ಅದರ ಬಗ್ಗೆ ಸುದೀರ್ಘವಾಗಿ ಮಾತನಾಡಬೇಕಾಗುತ್ತದೆ. ಜವಳಗೆರೆಯವರು ಆಗ ನನ್ನ ಸ್ನೇಹಿತರಾದರು. ಅವರು 80 ಎಕರೆ ಜಮೀನಿನಲ್ಲಿ ದಾಳಿಂಬೆ ಬೆಳೆಯುತ್ತಾರೆ. ನಾವು 40 ಎಕರೆ ಜಮೀನಿನಲ್ಲಿ ದಾಳಿಂಬೆ ಬೆಳೆಯುತ್ತೇವೆ. ಒಂದು ಬಾರಿ ನಮ್ಮ ತೋಟಕ್ಕೆ ಬಂದು ನಮ್ಮ ತೋಟವನ್ನು ನೋಡಿಕೊಂಡು ಹೋಗಿ ಎಂದು ಹೇಳಿದಾಗ ನಾನು ಜವಳಗೆರೆಗೆ ಹೋದಾಗ ಆಂಧ್ರದಿಂದ ಬಂದವರು ಅಲ್ಲಿ 500 ಎಕರೆ ಜಮೀನನ್ನು ಖರೀದಿ ಮಾಡಿದ್ದಾರೆ. ಎಲ್ಲಾ ceiling limits ಎಲ್ಲಾ ಇದೆ. He had

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

purchased 500 Acres. ಇಲ್ಲಿಗೆ ಆಂಧ್ರದಿಂದ ಹೇಗೆ ಬಂದಿದ್ದೀರಿ ಎಂದು ನಾನು ಕೇಳಿದೆ. ಇಲ್ಲಿ ತುಂಗಾಭದ್ರ ಯೋಜನೆ ಆಗುವುದರ ಬಗ್ಗೆ ನಾನು ಮ್ಯಾಪ್‌ನಲ್ಲಿ ನೋಡಿದೆ. ಎಲ್ಲಿ 12 ತಿಂಗಳುಗಳ ಕಾಲ ನೀರು ಇರುತ್ತದೆ ಎಂದು ತಿಳಿದುಕೊಂಡು, ನಾನು ಇಲ್ಲಿ ಜಮೀನನ್ನು ಖರೀದಿ ಮಾಡಿದೆ ಎಂದು ಹೇಳಿದರು. ಆಗ 500 ರೂಪಾಯಿಗಳು ಜಮೀನಿನ ಬೆಲೆ ಇತ್ತು. 1000 ರೂಪಾಯಿಗೆ ಒಂದು ಎಕರೆ ಜಮೀನನ್ನು ಖರೀದಿ ಮಾಡಿದರು. ಇದನ್ನು ಕೇಳಿ ನನಗೆ ತಕ್ಷಣ ಆಶ್ಚರ್ಯವಾಯಿತು. Labour potentiality ಹೇಗಿದೆ, 500 ಎಕರೆ ಜಮೀನನ್ನು ಹೇಗೆ ನಿರ್ವಹಣೆ ಮಾಡುತ್ತೀರಿ ಎಂದು ಕೇಳಿದಾಗ ಆತ ಇಲ್ಲಿ ಇರುವವರೆಲ್ಲಾ labours ಗಳೇ ಎಂದು ಹೇಳಿದರು. ಅವರೆಲ್ಲಾ ದಾಳಿಂಬೆಯನ್ನು sort out ಮಾಡುತ್ತಿದ್ದರು, Packing ಮಾಡುತ್ತಿದ್ದರು. ಇನ್ನು ಕೆಲವು ಜನರು ಬೇರೆ ಬೇರೆ ಕೆಲಸಗಳನ್ನು ಮಾಡುತ್ತಿದ್ದರು. ಇನ್ನು ಕೆಲವು ಜನರು ನೀರು ಹಾಯಿಸುತ್ತಿದ್ದರು. ಹೀಗೆ ಎಲ್ಲರೂ ಕೃಷಿಯಲ್ಲಿ ತೊಡಗಿದ್ದರು. ಇವರೇ ಎಲ್ಲರೂ ಈ ಹೊಲದ ಮಾಲೀಕರು ಎಂದು ಹೇಳಿದರು. ಅವರು 10 ಎಕರೆ, 20 ಎಕರೆ, 30 ಎಕರೆ ಮತ್ತು 40 ಎಕರೆ ಜಮೀನ್ದಾರರು ದಾಳಿಂಬೆಯನ್ನು ಮಾರಾಟ ಮಾಡಿ, ಅವನು ಆಂಧ್ರದಲ್ಲಿ ಒಬ್ಬ ದೊಡ್ಡ ಶ್ರೀಮಂತ ರೈತನಾಗಿದ್ದಾನೆ. ಆತನ ಹೆಸರು ಗೊತ್ತಿದೆ, ಅವರ ಹೆಸರು ಇಲ್ಲಿ ಹೇಳಬೇಕೋ, ಹೇಳಬಾರದೋ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಅವರ ಹೆಸರನ್ನು ತಾವು ಹೇಳಿ ಎಂದರೆ ಹೇಳಬಹುದು. ಏಕೆಂದರೆ, ಆ ಒಬ್ಬ ರೈತ ಈ ಸದನದಲ್ಲಿ defend ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಒಬ್ಬ ರೈತ 500 ಎಕರೆ ಜಮೀನಿನ ಪೈಕಿ 80 ಎಕರೆ ಜಮೀನಿನಲ್ಲಿ ದಾಳಿಂಬೆಯನ್ನು ಬೆಳೆಯುತ್ತಿದ್ದರು.

ಇನ್ನೊಂದು ಅಂಶವನ್ನು ಅವರು ಹೇಳಿದರು. ಅದೇನೆಂದರೆ, ಒಬ್ಬ ಮಹಿಳೆಗೆ ಎಷ್ಟು ಬಡತನ ಇದೆಯೆಂದರೆ, ತನ್ನ ಸೀರೆಯನ್ನು 9 ದಿವಸ ತೊಳೆದುಕೊಳ್ಳುವುದಕ್ಕೆ ಆಗುವುದಿಲ್ಲವಂತೆ. ಒಂದೇ ಸೀರೆಯನ್ನು 2 ಬಾರಿ ತೊಳೆದುಕೊಳ್ಳುತ್ತಾಳಂತೆ. ಅವಳಿಗೆ ಇನ್ನೊಂದು ಸೀರೆ ಇರುವುದಿಲ್ಲ. ಒಂದು ಸೀರೆಯನ್ನು ಅರ್ಧ ಒಂದು ದಿವಸ ತೊಳೆಯುವುದು. ಮತ್ತೊಂದು ದಿವಸ ಇನ್ನು ಉಳಿದ ಅರ್ಧ ಸೀರೆ ತೊಳೆಯುತ್ತಾಳಂತೆ. ಇಷ್ಟು ಕಿತ್ತು ತಿನ್ನುವಂತಹ ಬಡತನ ಇದೆ. ಹೆಚ್ಚು–ಕಡಿಮೆ ಇವರೆಲ್ಲರೂ ಈ ಜಮೀನಿನ ಮಾಲೀಕರೇ ಆಗಿದ್ದಾರೆ. ಇವರಿಗೆ ಇಷ್ಟೆಲ್ಲಾ labour potentiality ಇದೆ ಎಂದು ಹೇಳಿದರು. ಇಂತಹ ಜಮೀನನ್ನು ನಾನು ಪಕ್ಕದ ರಾಜ್ಯದಲ್ಲಿ ಮಾಡಿದರೆ, ಕೃಷ್ಣಾ ಮೇಲ್ದಂಡೆ ಯೋಜನೆ ಪೂರ್ಣವಾದಾಗ, ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಹೇಳಿದ ಹಾಗೆ, 32 ಲಕ್ಷ ಎಕರೆ ಜಮೀನುಗಳಿಗೆ ನೀರಾವರಿಯಾಗುತ್ತದೆ. ಅಲ್ಲಿ ನೆರೆರಾಜ್ಯದ ಮಹಾರಾಷ್ಟ್ರದವರು ಬರುತ್ತಾರೆ. ಈ ತುಂಗಾಭದ್ರಾ ಯೋಜನೆಗೆ ಈ ಆಂಧ್ರದವರು ಹೇಗೆ ಬಂದಿದ್ದಾರೆಯೋ, ಹಾಗೆಯೇ ಇವರು ಬರುತ್ತಾರೆ. ಅಲ್ಲಿಯೂ ಸಹ ನಮ್ಮ ಭೂಮಿಯೂ ಹೋಯಿತು. ನಂತರ ಅವರು ನಮ್ಮ ಜಲಾಶಯದ ನೀರು ಉಪಯೋಗ ಮಾಡುತ್ತಾರೆ. ಕರ್ನಾಟಕ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ರಾಜ್ಯದ ನೆಲ–ಜಲದ ಪ್ರಶ್ನೆ ಬರುತ್ತದೆ. ಬಹುತರವಾಗಿ ಕರ್ನಾಟಕ ರಾಜ್ಯದಲ್ಲಿ ಯಾವಾಗಲೂ ನೆಲ–ಜಲದ ಪ್ರಶ್ನೆ ಬಂದಾಗ ಪಕ್ಷಾತೀತವಾಗಿ ಎಲ್ಲಾ ಪಕ್ಷದವರು, ಎಲ್ಲಾ ಜಾತಿ–ಜನಾಂಗದವರು ಒಂದಾಗಿ ಕನ್ನಡ ನಾಡಿನ ನೆಲ–ಜಲಕ್ಕಾಗಿ ಹೋರಾಟ ಮಾಡಿದಂತಹ ಅನೇಕ ಸತ್ಯಾಗ್ರಹಗಳನ್ನು ನಾವು ನೋಡಿದ್ದೇವೆ ಮತ್ತು ಭಾಗವಹಿಸಿದ್ದೇವೆ. ಇವತ್ತಿನ ದಿವಸ ಅವರು ಹೇಳಿರುವಂತಹ ಕಾನೂನು ಏನಿದೆ, ಕೃಷಿಕರಲ್ಲದವರು ಭೂಮಿ ಖರೀದಿ ಮಾಡಬಹುದು. ಅವರು ಹೇಳಿದ ಹಾಗೆ real estate ಧಣಿಗಳು ಬರಬಹುದು. Multi-national ಕಂಪನಿಯವರು ಬರಬಹುದು. ಕಾಳಧನಿಕರು ಬರಬಹುದು. ಭ್ರಷ್ಟಾಚಾರದಿಂದ ಗಳಿಸಿರುವಂತಹ ಹಣ ಇಟ್ಟುಕೊಂಡವರು ಇರುತ್ತಾರೆ. ನಮ್ಮಲ್ಲಿ ಗೈಡ್‌ಲೈನ್ಸ್ ಹೇಗಿದೆಯೆಂದರೆ, ಒಂದು ಎಕರೆ ಜಮೀನಿಗೆ 1 ಲಕ್ಷದಿಂದ 2 ಲಕ್ಷ ರೂಪಾಯಿಗಳ ಬೆಲೆ ಗೈಡ್‌ಲೈನ್ಸ್ ಪ್ರಕಾರ ಇದೆ. ಅಲ್ಲಿರುವ ಜಮೀನಿನ ಕಿಮ್ಮತ್ತು 20 ಲಕ್ಷ ರೂಪಾಯಿಗಳು ಇದ್ದರೆ, ಗೈಡ್‌ಲೈನ್ ಪ್ರಕಾರ ಒಂದು ಲಕ್ಷ ರೂಪಾಯಿಗಳಿಗೆ ನೋಂದಣಿಯಾಗುತ್ತದೆ. ಉಳಿದ 19 ಲಕ್ಷ ರೂಪಾಯಿಗಳಷ್ಟು black money will be pumped. ಅಂದರೆ ಕಪ್ಪು ಹಣವನ್ನು ಬಿಳಿ ಹಣವನ್ನಾಗಿ ಪರಿವರ್ತನೆ ಮಾಡುವುದಕ್ಕೆ ಇದೊಂದು ಕಾನೂನು ಸಹಕಾರಿ ಆಗುತ್ತದೆ.

**(ಮುಂದು)**

**(991) 6:50 ಎಸ್‌ಪಿಆರ್/ಜಿಆರ್ 07/12/2020**
**ಶ್ರೀ ಎಸ್.ಆರ್.ಪಾಟೀಲ್(ಮುಂದುವರೆದುದು)**

ನಮ್ಮ ಕನ್ನಡ ನಾಡಿನಲ್ಲಿ ನಮ್ಮ ಸರ್ಕಾರಗಳು ಲಕ್ಷಾಂತರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಈ ನಾಡಿನ ರೈತರ ಬದುಕನ್ನು ಶ್ರೀಮಂತಗೊಳಿಸಬೇಕೆಂದು ಜಲಾಶಯಗಳನ್ನು ನಿರ್ಮಿಸಿವೆ. ಇವತ್ತಿನ ದಿವಸ ಮಹಾದಾಯಿ ಯೋಜನೆಯು ಪೂರ್ಣಗೊಳ್ಳುತ್ತಿದ್ದು, 500 ಕೋಟಿ ರೂಪಾಯಿಗಳನ್ನು ಸರ್ಕಾರವು ಇದಕ್ಕಾಗಿ ಮೀಸಲಿಟ್ಟಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೇ ಹಂತವು ಮುಕ್ತಾಯದ ಹಂತದಲ್ಲಿದೆ. ತುಂಗಭದ್ರಾ ಯೋಜನೆಯ ಪೈಕಿ ಭದ್ರಾ ಯೋಜನೆಯ ಅನುಷ್ಠಾನದಲ್ಲಿ ನೆರೆ ಹೊರೆಯ ರಾಜ್ಯದವರು ಬಂದು ನಮ್ಮ ಜಮೀನು ಖರೀದಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ನಾವು, ನಮ್ಮ ಕುಟುಂಬದವರೆಲ್ಲರೂ ಅವರ ಕೈ ಆಳುಗಳಾಗಿ ದುಡಿಯುವ ದುಸ್ಥಿತಿ ಬರುತ್ತದೆ. ಇಲ್ಲಿ ಇಡೀ ಕರ್ನಾಟಕ ರಾಜ್ಯದ ನೆಲ, ಜಲದ ಪ್ರಶ್ನೆ ಬರುತ್ತದೆ. ಇದು ಬಹಳ ಆತಂಕಕಾರಿಯಾದ ಕಾನೂನು ಆಗಿದೆ ಎಂದು ಹೇಳುವುದಕ್ಕೆ ಮಾನ್ಯ ಸದಸ್ಯರನ್ನು ಧ್ವನಿಗೂಡಿಸುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬೇರೆ ರಾಜ್ಯದವರು ನಮ್ಮ ರಾಜ್ಯದ ಭೂಮಿಯನ್ನು ಖರೀದಿಸುವ ವಿಷಯದ ಬಗ್ಗೆ ಪ್ರಸ್ತಾಪಿಸಿದರು. 2003 ನೇ ವರ್ಷದಲ್ಲಿ ನಾನು ಪ್ರಥಮ ಬಾರಿ ವಿಧಾನ ಪರಿಷತ್ತಿನ ಸದಸ್ಯನಾಗಿ ಆಯ್ಕೆಗೊಂಡಾಗ land

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

alienation ಬಗ್ಗೆ ಒಂದು ವಿಧೇಯಕವನ್ನು ತರಲಾಗಿತ್ತು. ಅಂದು ಶ್ರೀ ಹೆಚ್.ಕೆ.ಪಾಟೀಲ್‌ರವರು ನೀರಾವರಿ ಸಚಿವರಾಗಿದ್ದರು. ನಮ್ಮ ದೇಶದಲ್ಲಿ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ, ಬೇರೆ ಎಲ್ಲಾದರೂ ಯಾರಾದರೂ ಭೂಮಿಯನ್ನು ಖರೀದಿಸಬಹುದು ಎಂದು ಇರುವ ಕಾನೂನು ನಮಗೆಲ್ಲರಿಗೂ ತಿಳಿದಿತ್ತು. ಆದಾಗ್ಯೂ ಸಹ ನಾವು ಸದರಿ ವಿಧೇಯಕವನ್ನು ಜಾರಿಗೆ ತಂದೆವು. ಇದಕ್ಕೆ ಕಾರಣವೇನೆಂದರೆ, ನಮ್ಮ ನೆರೆಯ ರಾಜ್ಯದವರು ನಮ್ಮ ರಾಜ್ಯಕ್ಕೆ ಬಂದು ನಮ್ಮ ರಾಜ್ಯದ ಯೋಜನೆಗಳ ಅನುಷ್ಠಾನಕ್ಕಾಗಿ ಉದಾಹರಣೆಗೆ ತುಂಗಾ ಮೇಲ್ದಂಡೆ ಯೋಜನೆಯ ಅನುಷ್ಠಾನಕ್ಕಾಗಿ ಭೂಮಿಯನ್ನು ಖರೀದಿಸುತ್ತಾರೆ. ಸದರಿ ಯೋಜನೆಯ ಅಡಿಯಲ್ಲಿ ಇನ್ನೂ ಕೆಲವು distributariesಗಳಿಗೆ ನೀರನ್ನು ಹಾಯಿಸಿಲ್ಲ. ನಮ್ಮ ರಾಜ್ಯದಲ್ಲಿ ಎಷ್ಟು ನೀರಾವರಿ ಯೋಜನೆಗಳಿವೆ, ಅವುಗಳ ವಿವರ, ಭೂಪಟ, ಎಲ್ಲಿ distributaries ಹೋಗುತ್ತವೆ, ಎಲ್ಲಿ tail end ವರೆಗೆ ನೀರು ತಲುಪುವುದಿಲ್ಲ ಎನ್ನುವ ಎಲ್ಲಾ ಮಾಹಿತಿಯು ಅವರ ಬಳಿ ಇರುತ್ತದೆ. ಒಂದು distributary ಯಲ್ಲಿ tail end ಎಲ್ಲಿ ಆಗುತ್ತದೆ, ಎಲ್ಲಿ ನೀರು ಚೆನ್ನಾಗಿ ಸಿಗುತ್ತದೆ ಇತ್ಯಾದಿಗಳ ಮಾಹಿತಿಯೂ ಸಹ ಅವರ ಬಳಿ ಲಭ್ಯವಿರುತ್ತದೆ. They are more advanced in agriculture for hundred years than us. ಅವರು ಬಹಳ ಚೆನ್ನಾಗಿ ವ್ಯವಸಾಯ ಮಾಡುತ್ತಾರೆ ಹಾಗೂ ಒಳ್ಳೆಯ ಫಲಸನ್ನು ಪಡೆಯುತ್ತಾರೆ. ಇದರ ಬಗ್ಗೆ ನಮಗೆ ಯಾವುದೇ ಅನುಮಾನವಿಲ್ಲ. ಒಂದೇ ಬಾರಿಗೆ ಹಲವಾರು ರೀತಿಯ ಬೆಳೆಗಳನ್ನು ಬೆಳೆಯುವ ಪ್ರಯತ್ನ ಮಾಡುತ್ತಾರೆ ಹಾಗೂ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾರೆ. ಇದರಿಂದಾಗಿ ನಮ್ಮ ರೈತಾಪಿ ವರ್ಗದವರನ್ನು ಶೋಷಣೆ ಮಾಡುವಂತಾಗುತ್ತದೆ. ಈ ಕಾರಣಕ್ಕಾಗಿ land alienation ಬಗ್ಗೆ ಒಂದು ಕಾನೂನನ್ನು ತಂದಿದ್ದೆವು. That Act was in force for only ten years. ಆ ಸಂದರ್ಭದಲ್ಲಿ ರಾಜ್ಯದ ಎಲ್ಲಾ ಉಪ ನೋಂದಣಾಧಿಕಾರಿಗಳನ್ನು ಮನವಿ ಮಾಡುತ್ತಾ, ಬೇರೆ ರಾಜ್ಯದವರಿಗೆ ನೋಂದಣಿ ಮಾಡಬಾರದು ಎಂಬ ಸೂಚನೆಗಳನ್ನು ನೀಡಲಾಯಿತು. ಆ ಸಂದರ್ಭದಲ್ಲಿ 2–3 ವರ್ಷ ಇದು ಬಹಳ ಕಟ್ಟುನಿಟ್ಟಾಗಿ ಜಾರಿಗೆ ಬಂದಿತು. ಒಂದು ವೇಳೆ ಯಾರಾದರೂ ಭೂಮಿಯನ್ನು ಖರೀದಿಸುವ ಸನ್ನಿವೇಶ ಉದ್ಭವವಾದರೆ, 'you have to take permission from the Competent Authority to purchase the land' ಎಂಬ ಷರತ್ತನ್ನು ವಿಧಿಸಲಾಯಿತು. ಆ 2–3 ವರ್ಷಗಳ ಅವಧಿಯಲ್ಲಿ ರಾಯಚೂರು ಜಿಲ್ಲೆಯ ಲಿಂಗಸೂಗೂರು, ದೇವದುರ್ಗ ಹಾಗೂ ರಾಯಚೂರು ತಾಲ್ಲೂಕುಗಳಲ್ಲಿ ನೀರು ಹರಿಯಿತು. ಈ ಹಿಂದೆ ಒಂದು ಎಕರೆಗೆ 60 ಸಾವಿರ ರೂಪಾಯಿಗಳಿಗೆ ಇದ್ದ ಜಮೀನಿನ ಮೊತ್ತವು ತಕ್ಷಣವೇ ನಾಲ್ಕು ಲಕ್ಷ ರೂಪಾಯಿಗಳಿಗೆ ಏರಿಕೆಯಾಯಿತು. ಒಂದು ದಶಕದ ನಂತರ ಇದರ ಮೊತ್ತವು 12–13 ಲಕ್ಷ ರೂಪಾಯಿಗಳಿಗೆ ಏರಿಕೆಯಾಯಿತು. ರೈತರಿಗೆ ಯಾವುದೇ ರೀತಿಯ ತೊಂದರೆ ಇದ್ದು, ಅವರ ಜಮೀನಿಗೆ ಸಮಂಜಸವಾದ ಮೊತ್ತ ದೊರಕಿದ್ದರೆ ಮಾತ್ರವೇ ಅದನ್ನು ಖಂಡಿತವಾಗಿ ಮಾರಾಟ ಮಾಡಬಹುದು ಯಾವುದೇ ಆಕ್ಷೇಪಣೆ ಇಲ್ಲ. ಆದರೆ ರೈತರು ಶೋಷಣೆಗೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಒಳಗಾಗುತ್ತಾರೆ ಎನ್ನುವ ಆತಂಕದಲ್ಲಿ ಅಂದಿನ ದಿನ ಈ ರೀತಿಯ ಷರತ್ತನ್ನು ವಿಧಿಸಲಾಗಿತ್ತು. ಇದರಿಂದಾಗಿ ಎಷ್ಟೋ ಜಮೀನುಗಳು ಉಳಿದವು. ಅಂದು ನೀರಾವರಿ ಯೋಜನೆಯ ಪ್ರದೇಶದಲ್ಲಿರುವ, 3-5 ಎಕರೆ ಭೂಮಿ ಹೊಂದಿದ ರೈತರು ಇವತ್ತಿನ ದಿವಸ ಭತ್ತ, ಹತ್ತಿ, ಮೆಣಸಿನ ಕಾಯಿಗಳನ್ನು ಬೆಳೆದು, ಆರ್ಥಿಕವಾಗಿ ಸದೃಢರಾಗಿರುವ ಸಾಕಷ್ಟು ಉದಾಹರಣೆಗಳು ನಮ್ಮ ಬಳಿ ಇವೆ. ರೈತರ ಬದುಕನ್ನು 2023 ನೇ ವರ್ಷದೊಳಗೆ ದ್ವಿಗುಣಗೊಳಿಸುವುದಾಗಿ ದೇಶದ ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ಅವರು ಹೇಳಿರುವುದು ಸರಿ ಇದೆ ಎಂದು ನನಗನ್ನಿಸುತ್ತದೆ. ಏಕೆಂದರೆ, ನನಗೆ ತಿಳಿದ ಮಟ್ಟಿಗೆ, ರೈತರು ತಮ್ಮ ಒಂದು ಎಕರೆ ಭೂಮಿಯನ್ನು ಒಂದು ಲಕ್ಷ ರೂಪಾಯಿಗಳಿಗೆ ಬದಲಾಗಿ, ಎರಡು ಲಕ್ಷ ರೂಪಾಯಿಗಳಿಗೆ ಮಾರಾಟ ಮಾಡಿದರೆ, ಅವರು ಚೆನ್ನಾಗಿ ಇರಬಹುದು. ರೈತರ ಜಮೀನನ್ನು ಕಾರ್ಪೋರೇಟ್ ಕಂಪೆನಿಗಳು ಖರೀದಿ ಮಾಡುತ್ತವೆ. ಉದಾಹರಣೆಗೆ ಹೇಳುವುದಾದರೆ, ಯಾವುದೇ ರೈತನ ಬಳಿ ಐದು ಎಕರೆ ಜಮೀನು ಇದ್ದರೆ, ಅವರಿಗೆ 10 ಲಕ್ಷ ರೂಪಾಯಿಗಳು ದೊರೆಯುತ್ತದೆ. ಪ್ರಧಾನ ಮಂತ್ರಿಗಳ ಪ್ರಕಾರ ಇದು ದ್ವಿಗುಣವಾದಂತೆ ಅಲ್ಲವೇ. ಒಂದು ವೇಳೆ ಪ್ರಸ್ತುತ ವಿಧೇಯಕವನ್ನು ಜಾರಿಗೆ ತಂದರೆ, ಇದರ ಕರಿ ನೆರಳು ರೈತರ ಮೇಲೆ ಬೀಳುತ್ತದೆ. ಹೀಗಾಗಿ ಇದು ಬಹಳ ಮಾರಕವಾಗಿದೆ. ಇದನ್ನು ಯಾವ ಕಾರಣಕ್ಕಾಗಿ ಮಂಡಿಸುತ್ತಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಅಡಗೂರ್ ಹೆಚ್.ವಿಶ್ವನಾಥ್‌ರವರು ಬಹಳ ಹಿರಿಯ ಸದಸ್ಯರಾಗಿದ್ದು, ಯಾವಾಗಲೂ ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುತ್ತಾರೆ. ಇದನ್ನು ನಾವು ಟಿ.ವಿ. ಮಾಧ್ಯಮಗಳಲ್ಲಿ ನೋಡಿದ್ದೇವೆ. ಅವರು ಸಾಹಿತಿ, ಸಂವೇದನಾಶೀಲ ವ್ಯಕ್ತಿಗಳೂ ಸಹ ಆಗಿದ್ದಾರೆ. ಹೀಗಾಗಿ ಈ ವಿಚಾರದಲ್ಲಿ ಅವರು ಉತ್ತರಿಸಬೇಕು. ಕೇವಲ ಸಾಮಾಜಿಕ ನ್ಯಾಯದ ಬಗ್ಗೆ ದಿನಂಪ್ರತಿಯಾಗಿ ಮಾತನಾಡಿದರೆ ಸಾಲದು; ಪ್ರಸ್ತುತ ಜಾರಿಗೆ ತರಲಿರುವ ವಿಧೇಯಕವು ಸಾಮಾಜಿಕ ನ್ಯಾಯಕ್ಕೆ ಅಡ್ಡವಾಗುತ್ತದೆಯೇ ಎನ್ನುವುದನ್ನು ಹಿರಿಯ ಸದಸ್ಯರುಗಳು ತಿಳಿಸಬೇಕು ಹಾಗೂ ಈ ವಿಚಾರದಲ್ಲಿ ಮಾರ್ಗದರ್ಶನಗಳನ್ನು ನೀಡಬೇಕು. ರೈತರ ಪೈಕಿ ಸಾಕಷ್ಟು ಜನರು ಬಡವರಾಗಿದ್ದು, ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಸೇರಿದವರಾಗಿದ್ದರು. ಅವರಿಗೆ ಯಾವುದೇ ರೀತಿಯಾದ ನಷ್ಟವುಂಟಾಗಬಾರದು. ಇವತ್ತಿನ ದಿವಸ ಹಳ್ಳಿಯಲ್ಲಿ ನಾನೊಬ್ಬ ಶ್ರೀಮಂತ ರೈತನಾಗಿದ್ದರೆ, ಬೇರೆ ರೈತರನ್ನು ಶೋಷಣೆ ಮಾಡುತ್ತೇನೆ. ಇದಕ್ಕೂ ಸಹ ನಿರ್ಬಂಧವನ್ನು ವಿಧಿಸಲಾಗಿತ್ತು. 54 ಎಕರೆ ಒಣ ಭೂಮಿ, 27 ಎಕರೆ ಅರ್ಧ ನೀರಾವರಿ ಮತ್ತು 13 ಎಕರೆ ಬಹಳ ನೀರಾವರಿ ಜಮೀನುಗಳಿಗಿಂತ ಹೆಚ್ಚಿನ ಭೂಮಿಯನ್ನು ಯಾರೂ ಸಹ ಹೊಂದಬಾರದು ಎಂದು ತಿಳಿಸಲಾಗಿತ್ತು. ಇಂತಹ ಕಾನೂನಿನಿಂದಾಗಿ ನಾನು ಮತ್ತು ನನ್ನ ಕುಟುಂಬದವರು ಸುಮಾರು 50-60 ಎಕರೆಗಳಷ್ಟು ಜಮೀನನ್ನು ಸರ್ಕಾರಕ್ಕೆ ಬಿಟ್ಟುಕೊಟ್ಟಿದ್ದೇವೆ. ಇದನ್ನು ದಿವಂಗತ ದೇವರಾಜು ಅರಸು ಅವರ ಕಾಲದಲ್ಲಿ ಜಾರಿಗೆ ತರಲಾಗಿತ್ತು. ಅದು ಸಮಂಜಸವಾದುದು ಎಂದು ನಮಗೆ ಅನ್ನಿಸಿತ್ತು. ಎಲ್ಲರೂ ಸಮವಾಗಿ ಹಂಚಿಕೊಂಡು ತಿನ್ನಬೇಕು ಎನ್ನುವ ವಿಚಾರವನ್ನು ಅವರು ಪ್ರತಿಪಾದಿಸುತ್ತಿದ್ದರು. ಇದಕ್ಕೆ ನಾವುಗಳೆಲ್ಲರೂ ಸಹ ನಮ್ಮ ಒಪ್ಪಿಗೆಯನ್ನು ನೀಡಿದ್ದೇವೆ. ಇವತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿ ಸಾಕಷ್ಟು ಜಮೀನುದಾರರು ಸಂತೋಷವಾಗಿ ತಮ್ಮ ಜಮೀನನ್ನು ಬಿಟ್ಟುಕೊಟ್ಟಿದ್ದಾರೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆದರೆ ಕೆಲವೊಂದು ಈ ರೀತಿಯ ಪ್ರಕರಣಗಳು ಬಾಕಿ ಇವೆ. 90% of farmers have left. ನಾವು ನಮ್ಮ ಬಳಿ ಹಲವಾರು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿರುವವರಿಗೆ 4-5 ಎಕರೆಗಳಷ್ಟು ಜಮೀನನ್ನು ನೀಡಿದ್ದೇವೆ. ಇದರಿಂದ ನಮಗೂ ಹಾಗೂ ಅವರಿಗೂ ಸಂತೋಷವಾಗಿದೆ. ನಾವು ನಮ್ಮ ಜಮೀನನ್ನು ಕಳೆದುಕೊಂಡಿದ್ದರೂ ಸಹ ಅದರಲ್ಲಿ ಸಂತೋಷವಿತ್ತು. ಆದರೆ ಪ್ರಸ್ತುತ ವಿಧೇಯಕವನ್ನು ಜಾರಿಗೆ ತಂದರೆ, ಈ ರೀತಿಯಾಗಿ ಆಗುವುದಿಲ್ಲ. ಇವತ್ತಿನ ದಿವಸ ಈ ವಿಧೇಯಕದಿಂದಾಗಿ ನಮ್ಮ ರಾಜ್ಯದ ರೈತರು ನಾಶವಾಗುವ ಪರಿಸ್ಥಿತಿ ಉದ್ಭವಿಸಿದೆ. ನಮ್ಮ ರಾಜ್ಯದ ಜಮೀನನ್ನು ನಮ್ಮ ರಾಜ್ಯದವರಲ್ಲದ ಬೇರೆ ನಗರಗಳಿಂದ ಅಂದರೆ ಮುಂಬಯಿ, ಕೋಲ್ಕತ್ತಾ, ದೆಹಲಿ ಇಲ್ಲಿನ ದೊಡ್ಡ ದೊಡ್ಡ ಕಾರ್ಪೋರೇಟ್ ಕಂಪೆನಿಗಳು, Multi-national Companies ಖರೀದಿಸುತ್ತಿವೆ. ಜಮೀನು ಖರೀದಿಸುವವರ ಪೈಕಿ ಶೇಕಡಾ 90 ರಷ್ಟು M.N.C.ಗಳು ಬರುತ್ತವೆ ಹೊರತು, ಬೇರೆಯವರು ಖರೀದಿ ಮಾಡಲು ಮುಂದೆ ಬರುವುದಿಲ್ಲ. ಈ ಕಂಪೆನಿಗಳು ಮೊದಲು ಜಮೀನನ್ನು ಖರೀದಿಸುತ್ತಾರೆ, ನಿಯಮಾನುಸಾರ ವ್ಯವಸಾಯವನ್ನು ಅಂದರೆ ಕಾರ್ಪೋರೇಟ್ ಫಾರ್ಮಿಂಗ್‌ನ್ನು ಪ್ರಾರಂಭಿಸುತ್ತಾರೆ. ಮೊದಲಿನ ದಿನಗಳಲ್ಲಿ ಸೂರ್ಯಕಾಂತಿ ಬೆಳೆಗಳನ್ನು ಬೆಳೆಯುತ್ತಾರೆ. ಹೆಲಿಕ್ಯಾಪ್ಟರ್‌ಗಳ ಮೂಲಕ ಔಷಧಿಗಳನ್ನು ಸಿಂಪಡಿಸುತ್ತಾರೆ. ಇದರಿಂದ ಅವರು ಭಾರಿ ಪ್ರಮಾಣದಲ್ಲಿ ವ್ಯವಸಾಯ ಮಾಡುತ್ತಿರುವುದಾಗಿ ತೋರಿಸುತ್ತಾರೆ. One fine day they will turn out. ಮೊದಲಿಗೆ agriculture based industries ಗಳನ್ನು ಪ್ರಾರಂಭಿಸುತ್ತಾರೆ. ನಂತರದಲ್ಲಿ ಇದರಿಂದ ನಷ್ಟವಾಗಿದೆ ಎಂದು ತೋರಿಸುತ್ತಾರೆ. They will again convert it into commercial companies. ಇಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಒಟ್ಟಾರೆಯಾಗಿ ರೈತರು ಎಲ್ಲಿಗೆ ಹೋಗಬೇಕು ಎನ್ನುವುದರ ಬಗ್ಗೆ ಸರ್ಕಾರವು ಉತ್ತರಿಸಬೇಕು. ಇವತ್ತಿನ ದಿವಸ ನನ್ನ ಬಳಿ 10 ಎಕರೆ ಜಮೀನು ಇದೆ. ನಾಳೆಯ ದಿವಸ ಎಂ.ಎನ್.ಸಿ., ಕಂಪೆನಿಯು ಬರುತ್ತದೆ. ಅವರು ದಿನವೊಂದಕ್ಕೆ ಒಂದು ಗಂಡು ಆಳಿಗೆ 500 ರೂಪಾಯಿಗಳು ಹಾಗೂ ಹೆಣ್ಣಾಳಿಗೆ 300 ರೂಪಾಯಿಗಳ ಕೂಲಿಯನ್ನು ಕೊಡುತ್ತಾರೆ. ಆದರೆ ನಾವು ದಿನವೊಂದಕ್ಕೆ ಒಂದು ಗಂಡು ಆಳಿಗೆ 300 ರೂಪಾಯಿಗಳು ಹಾಗೂ ಹೆಣ್ಣಾಳಿಗೆ 150 ರೂಪಾಯಿಗಳಷ್ಟು ಕೂಲಿಯನ್ನು ಕೊಡಲು ಹರಸಾಹಸ ಪಡುತ್ತೇವೆ. ಇಷ್ಟು ಪ್ರಮಾಣದಲ್ಲಿ ಕೂಲಿಯನ್ನು ಕೊಡುವಷ್ಟು ಬೆಳೆಯು ಬರುತ್ತಿಲ್ಲ. ಇದರಿಂದ ಕಾರ್ಪೋರೇಟ್ ಕಂಪೆನಿಗಳಿಗೆ ಯಾವುದೇ ರೀತಿಯಾದ ವ್ಯತ್ಯಾಸವಾಗುವುದಿಲ್ಲ. ಈ ರೀತಿಯಾಗಿ ಹೆಚ್ಚಿನ ಕೂಲಿ ಕೊಡುತ್ತಿದ್ದರೆ, ವ್ಯವಸಾಯ ಮಾಡುತ್ತಿರುವವರು ನಾವು ಎಲ್ಲಿಗೆ ಹೋಗಬೇಕು? ಈ ವಿಚಾರದಲ್ಲಿ ನಮಗೆ ಸರ್ಕಾರವು ಯಾವುದೇ ರೀತಿಯಾದ ರಕ್ಷಣೆಯನ್ನು ನೀಡುತ್ತದೆಯೇ ಅಥವಾ ಕೂಲಿಯ ವ್ಯತ್ಯಾಸ ಮೊತ್ತ 200 ರೂಪಾಯಿಗಳನ್ನು ಸರ್ಕಾರವು ಭರಿಸುತ್ತದೆಯೇ? ಇಂತಹ ಕ್ಲಿಷ್ಟ ಸಂದರ್ಭದಲ್ಲಿ ನಾವು ಕೊನೆಯದಾಗಿ ನಮ್ಮ ಜಮೀನನ್ನು ಕಂಪೆನಿಯವರಿಗೆ ಮಾರಾಟ ಮಾಡಲೇ ಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ನಂತರದಲ್ಲಿ ಅನಿವಾರ್ಯವಾಗಿ ನಮ್ಮ ಹೆಂಡತಿ-ಮಕ್ಕಳೊಂದಿಗೆ ಪಟ್ಟಣವನ್ನು ಸೇರಬೇಕಾಗುತ್ತದೆ ಅಥವಾ ಗುಡಿ-ಗುಂಡಾರಗಳನ್ನು ಸುತ್ತಿಕೊಂಡು ಬೇಡಿಕೊಂಡು ತಿನ್ನಬೇಕಾದ ಪರಿಸ್ಥಿತಿ ಪ್ರಸ್ತುತ ವಿಧೇಯಕವನ್ನು ಜಾರಿಗೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ತರುವುದರಿಂದ ಉದ್ಭವಿಸುತ್ತದೆ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, ನಾನು ಮಾನ್ಯ ಸಚಿವರಲ್ಲಿ ಬೇಡಿಕೊಳ್ಳುವುದೇನೆಂದರೆ, ಪ್ರಸ್ತುತ ವಿಧೇಯಕವನ್ನು ಜಾರಿಗೆ ತರುವ ಮುನ್ನ, ಒಂದು ನೂರು ಬಾರಿ ಯೋಚನೆ ಮಾಡಿ, ನೂರು ಜನರೊಂದಿಗೆ ಚರ್ಚಿಸಿ, ಆ ನಂತರದಲ್ಲಿಯೂ ಸಹ ಇದು ಸರ್ಕಾರಕ್ಕೆ ಸಮಂಜಸವೆನಿಸಿದರೆ, ಆಗ ಮಾತ್ರವೇ ಜಾರಿಗೆ ತನ್ನಿ. ನನಗೆ ತಿಳಿದಂತೆ, ನೂರು ಜನರ ಪೈಕಿ 99 ರಷ್ಟು ಜನರು ಈ ವಿಧೇಯಕವನ್ನು ವಿರೋಧಿಸುತ್ತಾರೆ. ಇವತ್ತಿನ ದಿವಸ ಸರ್ಕಾರವು ಎ.ಪಿ.ಎಂ.ಸಿ., ಗಳನ್ನು ತೆರವುಗೊಳಿಸಲು ಹೊರಟಿದೆ. ಯಾವುದೇ ರೈತನಿಗೆ ತಾನು ಬೆಳೆದ ಬೆಳೆಗೆ ಒಂದು ನಿರ್ದಿಷವಾದ ಮೊತ್ತ ದೊರೆಯುತ್ತದೆ ಎನ್ನುವ ಖಾತರಿ ಇರುತ್ತದೆ. ಅದೇ ರೀತಿಯಾಗಿ ಸರ್ಕಾರವು ಎಂ.ಎಸ್.ಪಿ. ದರಗಳನ್ನು ಘೋಷಿಸುತ್ತದೆ. ಆದರೆ ಅದನ್ನು ತೆಗೆದುಕೊಳ್ಳಲು ಯಾರೂ ಸಹ ತಯಾರಿಲ್ಲ. ಇವತ್ತಿನ ದಿವಸ ಎಂ.ಎಸ್.ಪಿ. ದರದನ್ವಯ ಒಂದು ಚೀಲ ತೊಗರಿ ಬೇಳೆಗೆ 1,866 ರೂಪಾಯಿಗಳಷ್ಟು ಖರೀದಿ ಬೆಲೆಯನ್ನು ನಿಗದಿಪಡಿಸಿದೆ. ಆದರೆ, ಕೇವಲ 1,050 ರೂಪಾಯಿಗಳಿಗೆ ತೊಗರಿಯನ್ನು ಖರೀದಿಸುತ್ತಾರೆ. ಸರ್ಕಾರವು ಯಾವುದೇ ಖರೀದಿ ಕೇಂದ್ರಗಳನ್ನು ತೆರೆಯುತ್ತಿಲ್ಲ. 75 ಕೆ.ಜಿ. ತೊಗರಿಯ ಚೀಲವೊಂದಕ್ಕೆ 400–500 ರೂಪಾಯಿಗಳಷ್ಟು ಕಡಿಮೆ ಮೊತ್ತವು ದೊರೆಯುತ್ತಿದೆ. ಖರೀದಿಯ ಮೊತ್ತದಲ್ಲಿ ಈ ರೀತಿಯಾಗಿ ಹಣದ ವ್ಯತ್ಯಾಸವಾದರೆ, ರೈತರು ಎಲ್ಲಿಗೆ ಹೋಗಬೇಕು. ಅದೇ ರೀತಿಯಾಗಿ ಇವತ್ತಿನ ದಿವಸ ಒಂದು ಕ್ವಿಂಟಾಲ್ ಹತ್ತಿಗೆ 5,800 ರೂಪಾಯಿಗಳಷ್ಟು ಇದ್ದು, ಅದನ್ನು 5,100–5,200 ರೂಪಾಯಿಗಳಿಗೆ ಖರೀದಿಸುತ್ತಾರೆ. ಯಾವುದೋ ಒಂದು ತೆರೆದ ರಸ್ತೆಯಲ್ಲಿ ಕೇಂದ್ರವನ್ನು ತೆರೆದು, ಅದನ್ನೇ 'ಖರೀದಿ ಕೇಂದ್ರ' ಎಂದು ಹೇಳುತ್ತಾರೆ. ಯಾವುದೇ ಪಕ್ಷವು ಅಧಿಕಾರದಲ್ಲಿರಲಿ, ಪ್ರತಿ ಸಲ ಯಾರೇ ಮಾತನಾಡಿದರೂ ಸಹ, ಅವರು ರೈತರು ನಮ್ಮ ರಾಜ್ಯದ ಬೆನ್ನೆಲುಬು; ನಾವು ಅವರ ಪರವಾಗಿ ಬಹಳಷ್ಟು ಯೋಜನೆಗಳನ್ನು ಜಾರಿಗೆ ತರುವುದಾಗಿ, ಅವರ ಹಣವನ್ನು ದ್ವಿಗುಣಗೊಳಿಸುವುದಾಗಿ, ಅವರಿಗೆ ಸಾಕಷ್ಟು ಅನುಕೂಲಗಳನ್ನು ಮಾಡಿಕೊಡುವುದಾಗಿ ಹೇಳುತ್ತಾರೆ. We are exploiting the farmers. ಸರ್ಕಾರವು ಇದೇ ರೀತಿಯಾದ ಇನ್ನೂ ಹತ್ತು ವಿಧೇಯಕಗಳನ್ನು ತೆಗೆದುಕೊಂಡು ಬರಲಿ, ಆದರೆ, ನಾವು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ, ಇವತ್ತಿನ ದಿವಸ ಒಬ್ಬ ರೈತ ಸಾವಯವ ಭತ್ತವನ್ನು ಬೆಳೆಯುತ್ತಾನೆ. ಆದರೆ, ಅವನು ಕೇಳಿದಷ್ಟು ಹಣಕ್ಕೆ ಸರ್ಕಾರವು ಭತ್ತವನ್ನು ಖರೀದಿಸಬೇಕು ಹಾಗೂ ಅಷ್ಟು ಮೊತ್ತವನ್ನು ಖರೀದಿ ಮೊತ್ತವನ್ನಾಗಿ ನಿಗದಿಪಡಿಸಬೇಕು. ಉದಾಹರಣೆಗೆ ಹೇಳುವುದಾದರೆ, ಒಂದು ಮೈಸೂರು ಸ್ಯಾಂಡಲ್ ಸೋಪ್‌ಗೆ 50 ರೂಪಾಯಿಗಳನ್ನು ನಿಗದಿಪಡಿಸುತ್ತಾರೆ. ಅದಕ್ಕೆ ನಾವು ಯಾವುದೇ ರೀತಿಯಾದ ಆಕ್ಷೇಪಣೆ ವ್ಯಕ್ತಪಡಿಸದೇ, ಸುಮ್ಮನೆ ಖರೀದಿಸುತ್ತೇವೆ. ಆ 50 ರೂಪಾಯಿಗಳಲ್ಲಿ ಕಂಪೆನಿಯವರು ಕಚ್ಚಾ ವಸ್ತುಗಳು, ವಿದ್ಯುಚ್ಛಕ್ತಿ ಮತ್ತು ಬಾಡಿಗೆ ಇತ್ಯಾದಿ ಮೊತ್ತಗಳನ್ನು ಸೇರಿಸಿ, ಮಾರಾಟ ಮೊತ್ತವನ್ನು ನಿಗದಿಪಡಿಸುತ್ತಾರೆ. ಹೀಗೆ ಖರೀದಿ ಮೊತ್ತ ನಿಗದಿ ಪಡಿಸಿದ ವಸ್ತುಗಳನ್ನು ಮಾರಾಟ ಮಾಡಲು ಸರ್ಕಾರವು ಅವಕಾಶ ನೀಡುತ್ತದೆ. ಆದರೆ, ಇದೇ ರೀತಿಯಾಗಿ ರೈತರಿಗೆ ತಾವು ಬೆಳೆದ ಬೆಳಗೆ ಖರೀದಿ ಮೊತ್ತವನ್ನು ನಿಗದಿಪಡಿಸಲು ಏಕೆ ಅವಕಾಶವನ್ನು ನೀಡುವುದಿಲ್ಲ? ಇವತ್ತಿನ ದಿವಸ ರೈತ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಒಂದು ಬೆಳೆಯನ್ನು 50-80 ರೂಪಾಯಿಗಳವರೆಗೆ ಮಾರಾಟ ಮಾಡುತ್ತಾರೆ. ಈ ಖರೀದಿ ಮೊತ್ತ ನಿಗದಿ ಪಡಿಸುವಲ್ಲಿ ಸರ್ಕಾರವು ನಿರ್ದಿಷ್ಟ ಸೂಚನೆಗಳನ್ನು ನೀಡಬೇಕು. ರೈತರಿಗೆ ಯಾವುದೋ ಒಂದು ರೀತಿಯಾದ ಸೊಪ್ಪನ್ನು ಬೆಳೆಯಲು 50 ರೂಪಾಯಿಗಳವರೆಗೆ ಖರ್ಚಾಗುತ್ತದೆ. ಆಗ ಆ ಸೊಪ್ಪನ್ನು 100 ರೂಪಾಯಿಗಳಿಗೆ ಮಾರಾಟ ಮಾಡಲು ಸರ್ಕಾರವು ಅವಕಾಶವನ್ನು ನೀಡಬೇಕು. ಇಂತಹ ಮಾರಾಟಗಳಿಗೆ ಸರ್ಕಾರವು ನಿರ್ಬಂಧ ವಿಧಿಸುತ್ತದೆ ಇದಕ್ಕೆ ಕಾರಣವೇನು? ನಮ್ಮ ದೇಶದಲ್ಲಿನ ಮಧ್ಯಮ ವರ್ಗದವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸರ್ಕಾರವು ಈ ರೀತಿಯಾದ ನಿರ್ಬಂಧವನ್ನು ವಿಧಿಸುತ್ತದೆ. ಆದರೆ ಇದರಿಂದಾಗಿ ರೈತರ ಪರಿಸ್ಥಿತಿ ಏನಾಗುತ್ತದೆ, ಅವರುಗಳು ಎಲ್ಲಿಗೆ ಹೋಗಬೇಕು ಎನ್ನುವುದರ ಬಗ್ಗೆಯೂ ಸಹ ಸರ್ಕಾರವು ಯೋಚಿಸಬೇಕು.

ಇವತ್ತಿನ ದಿವಸ ನಗರ ಪ್ರದೇಶಗಳಲ್ಲಿ ಹಲವಾರು ಮೂಲಭೂತ ಸೌಕರ್ಯಗಳಿವೆ. ಆದರೆ, ಗ್ರಾಮೀಣ ಪ್ರದೇಶದಲ್ಲಿ ಓಡಾಡಲು ಸರಿಯಾದ ರಸ್ತೆಗಳಿಲ್ಲ, ಊರನ್ನು ಸಂಪರ್ಕಿಸುವ ರಸ್ತೆಗಳಿಲ್ಲ, ಆಸ್ಪತ್ರೆ ಸೌಕರ್ಯಗಳಿಲ್ಲ. ಇಂತಹ ಅನಾನುಕೂಲ ಪರಿಸ್ಥಿತಿಯಲ್ಲಿಯೂ ಸಹ ರೈತರು ಸ್ವಾಭಿಮಾನದ ಜೀವನ ನಡೆಸುತ್ತಿದ್ದಾರೆ ಹಾಗೂ ಕಷ್ಟದ ಪರಿಸ್ಥಿತಿಯಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಅವರುಗಳು ಬೇರೆ ಕಡೆಗೆ ಹೋಗಿ ದುಡಿಯುವುದಿಲ್ಲ. ಆದರೂ ಸಹ ಜನರು ಇಂದಿಗೂ ಸಹ ಹಳ್ಳಿ ಊರಿನಲ್ಲಿ ಇರಲು ಬಯಸುತ್ತಾರೆ.

(ಮುಂದು)

(992)/7-12-2020/7-00/ಎಲ್ಎಂ/ಎಂಡಿ

**ಶ್ರೀ ಬಸವರಾಜ ಪಾಟೀಲ್ ಇಟಗಿ(ಮುಂದು)**

ಇವತ್ತು ಜನರು ಹಳ್ಳಿಗಳಲ್ಲಿಯೇ ಇರಲು ಏಕೆ ಬಯಸುತ್ತಾರೆ ಎಂದರೆ, ನಗರದಲ್ಲಿ ದಿನಕ್ಕೆ 500 ರೂ.ಗಳು ಖರ್ಚಾದರೆ, ಹಳ್ಳಿಗಳಲ್ಲಿ ದಿನಕ್ಕೆ 50 ರೂ.ಗಳು ಖರ್ಚಾಗುವುದಿಲ್ಲ. ಹಳ್ಳಿಗಳಲ್ಲಿ ಮನೆಗಳಲ್ಲಿ ಅನ್ನ ಸಾರು ಮಾಡಿರುತ್ತಾರೆ ಅದನ್ನೇ ತಿಂದು ಇರುತ್ತೇವೆ. ಅಲ್ಲೇನು ದೊಡ್ಡ-ದೊಡ್ಡ ಹೊಟೇಲ್‌ಗಳು ಇರುವುದಿಲ್ಲ. ಆದ್ದರಿಂದ ಹಳ್ಳಿಗಳಲ್ಲಿ ಕನಿಷ್ಠ ಖರ್ಚು ಆಗುತ್ತದೆ. ಯಾವುದೇ ಖರ್ಚು ಇಲ್ಲದೆ ಆರಾಮಾಗಿ ಇರುತ್ತೇವೆ. ಆದರೆ Corporate Company ಗಳು ಬಂದರೆ, ಅವರು ಮೊದಲು ಮಾಡುವ ಕೆಲಸ ಎಂದರೆ, ದೊಡ್ಡ-ದೊಡ್ಡ ಹೊಟೇಲ್‌ಗಳನ್ನು ತೆರೆಯುವುದು. 'ಕಾಫಿ ಡೇ' ದವರನ್ನು ಕರೆದುಕೊಂಡು ಬಂದುಬಿಡುತ್ತಾರೆ. ಆಗ 100 ರೂ.ಗೆ ಒಂದು ಕಾಫಿಯನ್ನು ಕುಡಿಯಬೇಕಾಗುತ್ತದೆ. ಈ ಎಲ್ಲ ಸನ್ನಿವೇಶಗಳನ್ನು ನೋಡಿ ಸರ್ಕಾರ ಬಹಳ ಆಲೋಚನೆ ಮಾಡಬೇಕಾಗುತ್ತದೆ. ಕೃಷಿ ನೀತಿಗಾಗಿ ಇಡೀ ದೇಶದ ರೈತರು ಐದಾರು ದಿನಗಳಿಂದ ದೆಹಲಿಯಲ್ಲಿ ಹೋರಾಟ ಮಾಡುತ್ತಿದ್ದಾರೆ. ಈ ವಿಧೇಯಕವನ್ನು ತಂದಿರುವುದು, ರೈತರ ರುಂಡವನ್ನು ಕಡಿದು ಊರಿನ ಅಗಸಿ ಬಾಗಿಲಿಕ್ಕೆ ಕಟ್ಟಿದ ಹಾಗೆ ಆಗುತ್ತದೆ. ಈ ವಿಧೇಯಕ ನಗೆಪಾಟಲಿಗೆ ಒಳಗಾಗುತ್ತದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಮ್ಮ ರಾಜ್ಯದಲ್ಲಿ small and marginal farmers ಎಷ್ಟು ಸಾವಿರ ಜನ ಇದ್ದಾರೆ ಅವರಿಗೆ ಉತ್ತೇಜನವನ್ನು ಕೊಡಿ. ಅವರಿಗೆ free power tillers, free harvesting machines ಕೊಡಿಸಿ, ಬೀಜ, ಗೊಬ್ಬರ ಕೊಡಿ. ಅದನ್ನು ಬಿಟ್ಟು ರೈತನನ್ನು ಖಲಾಸ್ ಮಾಡುವಂತಹ ಕಾನೂನನ್ನು ತರುವುದಾದರೆ ಸರ್ಕಾರ ಏಕೆ ಬೇಕು? ನಾವು ಏಕೆ ಇರಬೇಕು? ಹಳ್ಳಿಗಳಿಗೆ ಹೋಗಿ ನಾವು ಏನು ಉತ್ತರ ಕೊಡಬೇಕು. ನಮ್ಮ ಊರುಗಳಿಗೆ ಹೋದರೆ 'ನೀವು ವಿಧಾನ ಪರಿಷತ್ತಿನಲ್ಲಿ ಕುಳಿತು ಇದೇ ಕೆಲಸವನ್ನು ಮಾಡುತ್ತೀರಾ' ಎಂದು ರೈತರು ನಮ್ಮನ್ನು ಕೇಳುತ್ತಾರೆ. Backward classes small and marginal farmers ಕೇಳುತ್ತಾರೆ. 'ಏನಪ್ಪಾ ಗೌಡ ನಾಳೆ ಎಲ್ಲಾ ಜಮೀನು ನೀನೆ ತೆಗೆದುಕೊಂಡು ಬಿಡುತ್ತೀರಾ ನಮ್ಮದೇನು ಗತಿ' ಎಂದು ಕೇಳುತ್ತಾರೆ. ನಾವು ಏನು ಉತ್ತರ ಕೊಡಬೇಕು. ಹಳ್ಳಿಗಳಲ್ಲಿ ನಾವು social justice ಬಗ್ಗೆ ಮಾತನಾಡುತ್ತೇವೆ. ಸರ್ಕಾರದಿಂದ ಸವಲತ್ತುಗಳನ್ನು ಕೊಡಿಸುತ್ತೇವೆ ಎಂದು ಬಹಳ ಮಾತನಾಡುತ್ತೇವೆ. ಇವತ್ತು ಸರ್ಕಾರ ರೈತರ ಬಗ್ಗೆ ಏನಾದರೂ ಕಾಯಿದೆ ತರಬೇಕಾದರೆ ಸಾವಿರ ಸಲ ಯೋಚನೆ ಮಾಡಬೇಕು. ಇಲ್ಲದಿದ್ದರೆ ಸರ್ಕಾರಕ್ಕೆ ಹಳ್ಳಿಗಳಲ್ಲಿ ಮೂರು ಕಾಸಿನ ಮರ್ಯಾದೆ ಇರುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಈ ಕಾಯ್ದೆಯಲ್ಲಿರುವಂಥ ಅಂಶ ಇಷ್ಟೆ. 2 ಲಕ್ಷ ಆದಾಯದ ಒಳಗಿರುವವರು ಮಾತ್ರ ಕೃಷಿ ಭೂಮಿಯನ್ನು ಖರೀದಿ ಮಾಡಬಹುದು ಎಂದು ಇದೆ. ಇವರ ಸರ್ಕಾರ ಬಂದ ಮೇಲೆ 25 ಲಕ್ಷ ರೂ.ಗಳಿಗೆ ಏರಿಸಲಾಗಿದೆ. ಆ 25 ಲಕ್ಷ ರೂ.ಗಳನ್ನು ವಿನಾಯಿತಿಗೊಳಿಸಲಾಗಿದೆ. ಇನ್ನು ಉಳಿದ ಅಂಶಗಳು ಇದರಲ್ಲಿ ಇವೆ.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:-** ಆದಾಯವಿದ್ದವರು ..

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಚರ್ಚೆಗಾಗಿ ವಾದ ಮಾಡಿ ನಮ್ಮದೇನು ಅಭ್ಯಂತರವಿಲ್ಲ. ನೀವು ಏನು ಹೇಳುತ್ತೀರಿ ಅದಕ್ಕೆ ನಮ್ಮ ಸಚಿವರು ಉತ್ತರ ನೀಡುತ್ತಾರೆ.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:-** ತಾವು ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿ ಬಂದವರು. ಈ ರೀತಿ ಮಾತನಾಡಬಾರದು. ಒಂದು ಮಾತನ್ನು ತಾವು ಒಪ್ಪಿಕೊಳ್ಳುತ್ತೀರಾ.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ತಾವು ಚೆನ್ನಾಗಿ ಮಾತನಾಡುತ್ತೀರಿ, ಅದಕ್ಕೆ ನನ್ನ ಅಭ್ಯಂತರವಿಲ್ಲ. ಆದರೆ 2 ಲಕ್ಷ ರೂ.ಗಳು ಇದ್ದದ್ದನ್ನು 25 ಲಕ್ಷ ರೂ.ಗಳಿಗೆ ಏರಿಸಿದವರು ನೀವೇ ಅದನ್ನು ಒಪ್ಪಿಕೊಳ್ಳುತ್ತೀರಾ? ಅದಕ್ಕೆ ಈಗ ಪೂರ್ಣ ವಿನಾಯಿತಿಯನ್ನು ಕೊಡಲಾಗಿದೆ ಅಷ್ಟೆ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, ಮೊದಲು 10,000 ರೂ.ಗಳ ವರಮಾನ ಮಿತಿ ಇತ್ತು. Other than agricultural income 10,000 ರೂ. ವರಮಾನವಿರುವವರು ಖರೀದಿ ಮಾಡಲು ಬರುತ್ತಿರಲಿಲ್ಲ. ಮೊದಲು ಎಕರೆಗೆ 2000 ರೂ.ಗಳು. 5000 ರೂ.ಗಳ ಬೆಲೆ ಇತ್ತು. ಇವತ್ತು ಒಂದು ಎಕರೆ ಭೂಮಿ ಬೆಲೆ 50 ಲಕ್ಷ ರೂ.ಗಳಾಗಿದೆ. Money value increase ಆಗಿದೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಗಳೆ, ರಾತ್ರಿ ಇಡೀ ಸದನ ನಡೆಸಲು ಸರ್ಕಾರಕ್ಕೆ ಬಹಳ ಖುಷಿಯಾಗುತ್ತದೆ ಅನ್ನಿಸುತ್ತಿದೆ. ಕಳೆದ ಸಲ ಅಧಿವೇಶನ ನಡೆದಾಗ ರಾತ್ರಿ 1 ಗಂಟೆವರೆಗೆ ನಮ್ಮನು ಕೂಡಿ ಹಾಕಲಾಗಿತ್ತು. ಇವತ್ತು ಮೊದಲನೆಯ ದಿನ ಈಗಾಗಲೇ 7 ಗಂಟೆಯಾಗುತ್ತಿದೆ, ಇವತ್ತೆ ಎಲ್ಲವನ್ನು ಮುಗಿಸಬೇಕು ಎನ್ನುವ ತುರ್ತು ಏನು ಇದೆ? ಇನ್ನು ಏಳೆಂಟು ದಿನಗಳವರೆಗೆ ಅಧಿವೇಶನ ನಡೆಯುತ್ತದೆ. ನಾಳೆ ಈ ವಿಧೇಯಕವನ್ನು ಮುಂದುವರೆಸಿ. ಇನ್ನು ಅನೇಕ ಸದಸ್ಯರು ಮಾತನಾಡುವವರಿದ್ದಾರೆ.

(ಗೊಂದಲ)

ದಯಮಾಡಿ ಈಗ ಸದನವನ್ನು ಮುಂದೂಡಬೇಕು. ನಾಳೆಗೆ ವಿಧೇಯಕವನ್ನು ಮುಂದುವರೆಸಬಹುದು.

(ಗೊಂದಲ)

**ಶ್ರೀ ಆರ್.ಅಶೋಕ(ಕಂದಾಯ ಸಚಿವರು):-** ಮಾನ್ಯ ಸಭಾಪತಿಗಳೆ, ನಾನು ಉತ್ತರ ಕೊಡುತ್ತೇನೆ. clarifications ಕೇಳಲಿ,

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಎಲ್ಲರೂ ಮಾತನಾಡಿ ಮುಗಿದ ಮೇಲೆ ಸಚಿವರು ಉತ್ತರ ಕೊಡಬೇಕು. ನಂತರ ನಾವು clarifications ಕೇಳುತ್ತೇವೆ. ಇನ್ನು ಅನೇಕ ಸದಸ್ಯರು ಮಾತನಾಡುವವರು ಇದ್ದಾರೆ. ಇಷ್ಟೊಂದು ಅವಸರ ಏಕೆ?

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:-** ನಾಳೆ ತೆಗೆದುಕೊಳ್ಳಲು ಏನು ಸಮಸ್ಯೆ ಇದೆ.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಇವತ್ತು ಸಚಿವ ಸಂಪುಟ ಸಭೆ ಇದ್ದರೂ ಕಂದಾಯ ಸಚಿವರು ಮತ್ತು ನಾನು ಸಭೆಗೆ ಹೋಗದೆ ಇಲ್ಲಿಗೆ ಬಂದಿದ್ದೇವೆ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಸಚಿವರ ಸಂಪುಟ ಸಭೆ ಅದು, ಇದು ಎಲ್ಲವು ನೆಪ ಮಾತ್ರ. ಒಟ್ಟಿನಲ್ಲಿ ಈ ಬಿಲ್‌ನ್ನು ಯಾವಾಗ ಪಾಸ್ ಮಾಡಿಕೊಂಡು ಈ ರಾಜ್ಯದ ರೈತನ ಕುತ್ತಿಗೆಯನ್ನು ಹಿಸುಕಬೇಕು ಎಂದು ಕಾಯುತ್ತಿದ್ದೀರಿ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಇದು ಸರಿಯಾದ ನಡೆಯಲ್ಲ. ಈ ವಿಧೇಯಕದಿಂದ ಒಳ್ಳೆಯದೆ ಆಗುತ್ತದೆ. ಇವತ್ತು ಎಷ್ಟೊತ್ತಾದರೂ ಆಗಲಿ ಎಲ್ಲರೂ ಮಾತನಾಡಿ, ಇವತ್ತೆ ಇದನ್ನು ಪಾಸ್ ಮಾಡಬೇಕು.

(ಗೊಂದಲ)

**ಸಭಾಪತಿಯವರು:-** ವಿಧೇಯಕದ ಮೇಲಿನ ಚರ್ಚೆಯನ್ನು restrict ಮಾಡಲು ಆಗುವುದಿಲ್ಲ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಕಳೆದ ಅಧಿವೇಶನದಲ್ಲಿ ರಾತ್ರಿ 1 ಗಂಟೆವರೆಗೆ ಈ ವಿಧೇಯಕದ ಮೇಲೆ ಮಾತನಾಡಿದ್ದಾರೆ. ಈಗ ಮತ್ತೆ ಮಾತನಾಡಿದ್ದಾರೆ. ಆದರೂ ಈ ರೀತಿ ನಡೆದುಕೊಳ್ಳುವುದು ಸರಿಯಲ್ಲ.

(ಗೊಂದಲ)

**ಶ್ರೀ ಆರ್.ಅಶೋಕ್:-** ಎಷ್ಟೊತ್ತು ಬೇಕಾದರೂ ಮಾತನಾಡಿ. ನಾವು ತಯಾರಿದ್ದೇವೆ.

(ಗೊಂದಲ)

**ಸಭಾಪತಿಯವರು:-** ಈ ವಿಧೇಯಕದ ಮೇಲೆ ನಾನು restrict ಮಾಡಲು ಆಗುವುದಿಲ್ಲ.

**(ಗೊಂದಲ)**

**ಶ್ರೀ ಆರ್.ಅಶೋಕ್:-** ಅವರು ಎಲ್ಲರೂ ಮಾತನಾಡಲಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ನಮ್ಮನು ಶಾಸಕರು ಎಂದು ಕರೆಯುತ್ತಾರೆ. ಶಾಸಕರು ಎಂದರೆ ಶಾಸನ ಮಾಡುವವರು. ಇವತ್ತು ಅಧಿವೇಶನ ಕರೆದಿರುವುದು ಶಾಸನ ಮಾಡುವ ಸಲುವಾಗಿ. ಶಾಸಕರು ಶಾಸನದ ಬಗ್ಗೆ ಮಾತನಾಡುವುದು ಬೇಡ, ನಾವು ಉತ್ತರ ಕೊಟ್ಟುಬಿಡುತ್ತೇವೆ clarifications ಕೇಳಲಿ ಎಂದರೆ (ಗೊಂದಲ) ದೇಶದ ಪರಿಸ್ಥಿತಿ ಎಲ್ಲಿಗೆ ಬರುತ್ತದೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಿಮಗೆ ಮಾತನಾಡಲು ಬೇಡ ಎಂದು ಹೇಳಿರುವುದಿಲ್ಲ. ಮಾತನಾಡಿ. ನಾವು ಸಚಿವ ಸಂಪುಟ ಸಭೆಯನ್ನು ಬಿಟ್ಟು ಬಂದಿದ್ದೇವೆ. ಯಾವುದೇ ಕಾರಣಕ್ಕೆ ಹಿಂದಕ್ಕೆ ಹೋಗಲು ಸಾಧ್ಯವಿಲ್ಲ. ನೀವು ಮಾತನಾಡಿ, ಉತ್ತರ ಕೊಡಲು ಸರ್ಕಾರ ಸಿದ್ಧವಿದೆ. (ಗೊಂದಲ) ಇದು ಸರಿಯಲ್ಲ.

(ಗೊಂದಲ)

**ಶ್ರೀ ಆರ್.ಅಶೋಕ್:–** ನಾಳೆ ವಿಧಾನಸಭೆಯಲ್ಲಿ ಪ್ರವಾಹದ ಬಗ್ಗೆ ಉತ್ತರ ಕೊಡುವುದಿದೆ. ಇವತ್ತು ಈ ವಿಧೇಯಕವನ್ನು ಪಾಸ್ ಮಾಡಿಕೊಟ್ಟುಬಿಡಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಗಳೆ, ನಮಗೂ ಬೇರೆ–ಬೇರೆ ಸಭೆಗಳು ಇವೆ. ಗ್ರಾಮ ಪಂಚಾಯಿತಿ ಚುನಾವಣೆಗಳು ಬರುತ್ತಿವೆ. ಜನರು ನಮ್ಮನ್ನು ಕಾಯುತ್ತಿದ್ದಾರೆ. ಈ ವಿಧೇಯಕವನ್ನು ತುರ್ತಾಗಿ ಪಾಸ್ ಮಾಡಿಕೊಳ್ಳುವ ಅವಶ್ಯಕತೆ ಏನು ಇದೆ.

(ಗೊಂದಲ)

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಗಳೆ, ಕಳೆದ ಅಧಿವೇಶನದಲ್ಲಿ ಈ ವಿಧೇಯಕದ ಮೇಲೆ ರಾತ್ರಿ 1 ಗಂಟೆವರೆಗೆ ಚರ್ಚೆಯನ್ನು ಮಾಡಲಾಗಿದೆ. ಆಗ ಕಾರಣಾಂತರಗಳಿಂದ ಮುಂದಕ್ಕೆ ಹೋಯಿತು ಅದು ಬೇರೆ ಪ್ರಶ್ನೆ. ಇವತ್ತು ಕ್ಯಾಬಿನೆಟ್ ಸಭೆ ಇದ್ದರೂ ಅದನ್ನು ಬಿಟ್ಟು ಇಲ್ಲಿಗೆ ಬಂದು ಈ ಬಿಲ್‌ನ್ನು ಮಂಡನೆ ಮಾಡಿದ್ದೇವೆ. ಇಷ್ಟೇ ಮಾತನಾಡಿ ಎಂದು ನಾವು ಕಡಿವಾಣ ಹಾಕುವುದಿಲ್ಲ. ನಾಳೆ ನಾನು ವಿಧಾನಸಭೆಯಲ್ಲಿ ಪ್ರವಾಹದ ಬಗ್ಗೆ ಉತ್ತರ ಕೊಡಬೇಕಾಗಿದೆ. ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರನ್ನು ಸೇರಿ ಎಲ್ಲರೂ ಪ್ರವಾಹದ ಬಗ್ಗೆ ಮಾತನಾಡಿ ಮುಗಿಸಿದ್ದಾರೆ. ನಾನು ವಿಧಾನಸಭೆಯ ವಿರೋಧ ಪಕ್ಷದ ನಾಯಕರಲ್ಲಿ ನಾಳೆ ಉತ್ತರವನ್ನು ಕೊಡುತ್ತೇನೆ ಎಂದು ವಿನಂತಿ ಮಾಡಿಕೊಂಡು ಇವತ್ತು ಇಲ್ಲಿಗೆ ಬಂದಿದ್ದೇನೆ. ನಾನು ತಮ್ಮ ಕಛೇರಿಗೆ ಬಂದಾಗ ಮೂರು ಜನರು ಮಾತನಾಡಿ ಮುಗಿಸುತ್ತಾರೆ ಎಂದು ಹೇಳಿದ್ದೀರಿ. ಆಗ ಅಲ್ಲಿ ಶ್ರೀ ಎಂ.ನಾರಾಯಣಸ್ವಾಮಿಯವರೂ ಇದ್ದರು, ಆದರೂ ಎಲ್ಲರೂ ಮಾತನಾಡಲಿ ನನ್ನದೇನೂ ಅಭ್ಯಂತರವಿಲ್ಲ.

**ಸಭಾಪತಿಯವರು:–** ಮೂರು ಜನರು ಎಂದು ನಾನು ಹೇಳಲಿಲ್ಲ.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಗಳೆ, ಕಳೆದ ಬಾರಿ ಆದ ಹಾಗೆ ಆಗುವುದು ಬೇಡ. ನಾನು ಎಲ್ಲರಲ್ಲಿಯೂ ವಿನಂತಿ ಮಾಡಿಕೊಳ್ಳುತ್ತೇನೆ, ದಯಮಾಡಿ ಎಲ್ಲರೂ ಮಾತನಾಡಿ, ಯಾರಿಗಾದರೂ ಕೆಲಸವಿದ್ದರೆ ಹೋಗಿ ಬರಲಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಯಾರಿಗೂ ನಾವು ಕಡಿವಾಣ ಹಾಕುವುದಿಲ್ಲ, ಆಕ್ಷೇಪಣೆ ಮಾಡುವುದಿಲ್ಲ. ಈಗ ಮಾನ್ಯ ಹರಿಪ್ರಸಾದ್‌ವರು ಮಾತನಾಡಲು ಅವಕಾಶ ಕೊಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಗಳೆ, ನಾನು ಮಾತನಾಡುವುದು ಮುಖ್ಯವಲ್ಲ. ದೇಶದಲ್ಲಿ ಯಾರ‍್ಯಾರು ಅನ್ನವನ್ನು ತಿನ್ನುತ್ತಾರೆ ಅವರೆಲ್ಲರೂ ಇಂದು ನಡೆಯುತ್ತಿರುವ ರೈತ ಚಳುವಳಿಗೆ ಬೆಂಬಲವನ್ನು ಕೊಡುತ್ತಿದ್ದಾರೆ. ತಾವು ಎಲ್ಲರೂ ಅನ್ನವನ್ನು ತಿನ್ನುತ್ತೀರಿ ಎಂದು ನಾನು ಭಾವಿಸಿದ್ದೇನೆ. ನಾಳೆ ಇಡೀ ದೇಶದ ರೈತರು ಇಡೀ ದೇಶದ ತುಂಬಾ ಪ್ರತಿಭಟನೆ ಮಾಡುತ್ತಿದ್ದಾರೆ. ಅವರ ವಿರುದ್ಧವಾಗಿರುವ ಈ ವಿಧೇಯಕವನ್ನು ಇಂದು ಪಾಸ್ ಮಾಡಿದರೆ ರೈತರ ಪ್ರತಿಭಟನೆಗೆ ಏನು ಉತ್ತರ ಕೊಡುವುದು?

**ಶ್ರೀ ಆರ್.ಅಶೋಕ್:–** ಪಾಸ್ ಮಾಡಿ ಎಂದು ಕೇಳುತ್ತಿಲ್ಲ. ವಿರೋಧ ಮಾಡುವುದಾದರೆ ಮಾಡಿ ಎಂದು ಹೇಳುತ್ತಿದ್ದೇವೆ.

**(ಮುಂದು)**

**(993)07–12–2020(07–10)ಬಿಎಸ್‌ಡಿ–ಎಂಡಿ**

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಮಾನ್ಯ ಸಭಾಪತಿಯವರೇ, ಸರ್ಕಾರವು ಉತ್ತರ ಕೊಡಲು ಸಿದ್ಧವಿದೆ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್ಃ–** ಮಾನ್ಯ ಸಭಾಪತಿಯವರೇ, ಕಳೆದ ಸಾರಿ ನಾವು ನಿಶಬ್ದವಾಗಿ ಕುಳಿತಿದ್ದೆವು. ನಾವು ಸದನದಲ್ಲಿ ಗಲಾಟೆ ಮಾಡುವುದಿಲ್ಲ, Treasury Bench ನವರು.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್ಃ–** ಅನ್ನ ಕೊಡುವಂತಹ ಅನ್ನದಾತ ಎಂದು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್ಃ–** ಅವರು ಅನ್ನ ತಿನ್ನುತ್ತಾರೆ ಎಂದು ಹೇಳಿದ್ದೇನೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಅವರು ಚರ್ಚೆ ಮಾಡಲಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್ಃ–** ಮಾನ್ಯ ಸದಸ್ಯರು ಹೇಳಿದ್ದರಲ್ಲಿ ಏನು ತಪ್ಪಿದೆ?

“ ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರಿಗೆ ಸಂಖ್ಯಾಬಲ ಇದೆ ಎಂದು ಬಲಾತ್ಕಾರ ಮಾಡುವುದಕ್ಕೆ ಆಗುವುದಿಲ್ಲ. ನಾಳೆ ವಿಧೇಯಕವನ್ನು ಮಾಡಿಕೊಳ್ಳಲಿ, ಯಾರೂ ಬೇಡ ಎನ್ನುವುದಿಲ್ಲ. ಭಯವೂ ಬೇಡ, ರೈತರಿಗೆ ಸ್ಪಂದಿಸಬೇಕು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸರ್ಕಾರವು ಉತ್ತರ ಕೊಡಲು ಸಿದ್ಧವಿದೆ, ಯಾರೂ ಭಯ ಪಡುತ್ತಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಭಯ ಬಿದ್ದು ಬೂಟು ನೆಕ್ಕಿಲ್ಲ,

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ನಾವೆಲ್ಲರೂ ರೈತರು ಬೆಳೆದ ಅನ್ನವನ್ನು ಊಟ ಮಾಡುತ್ತೇವೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಅವರು ಚರ್ಚೆ ಮಾಡಲಿ.

**(ಗೊಂದಲ)**

**ಶ್ರೀ ಆರ್. ಅಶೋಕ್ (ಕಂದಾಯ ಸಚಿವರು):-** ಸರ್ಕಾರವು ಉತ್ತರ ಕೊಡುತ್ತದೆ. ಸರ್ಕಾರದ ಉತ್ತರಕ್ಕೆ ಭಯ ಬೀಳಬೇಡಿ.

**(ಗೊಂದಲ)**

**ಶ್ರೀ ಅರುಣ ಶಹಾಪೂರ:-** ಸರ್ಕಾರವು ಉತ್ತರ ಕೊಡುತ್ತದೆ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ನಾವು ಭಯ ಬೀಳುವ ಪ್ರಶ್ನೆ ಇಲ್ಲ, ಭಯ ಬಿದ್ದು ಬೂಟು ನೆಕ್ಕಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಅವರು ಭಯ ಬಿದ್ದಿದ್ದಾರೆ ಎಂದು ನಾವು ಹೇಳಲಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ರೈತರ ಸಮಸ್ಯೆ ಬಹಳ ಗಂಭೀರವಾಗಿರುವುದರಿಂದ ಚರ್ಚೆ ಆಗಬೇಕಾಗಿದೆ, ನಾಳೆ ನಮಗೂ ಕಾರ್ಯಕ್ರಮ ಇದೆ, ನಾಳೆ ಮಾಡಿಕೊಳ್ಳಲಿ. ನಾವು ರೈತರಿಗೆ ಸ್ಪಂದಿಸಬೇಕು. ದಯವಿಟ್ಟು ಇವತ್ತು ಆಗುವುದಿಲ್ಲ. ನಾವು ಹೇಡಿಗಳಲ್ಲ! ಹೇಡಿತನದಿಂದ ಬೂಟು ನೆಕ್ಕಿಲ್ಲ. ಭಯ ಬೀಳುವುದಿಲ್ಲ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್:-** ಅನ್ನದಾತರು ನಮ್ಮೆಲ್ಲರಿಗೂ ಅನ್ನವನ್ನು ಕೊಡುತ್ತಾರೆ, ರೈತ ಕೊಟ್ಟ ಅನ್ನವನ್ನು ಊಟ ಮಾಡುತ್ತೇವೆ ಎಂದು ಹೇಳಿದ್ದೇನೆ.

**ಶ್ರೀಮತಿ ಭಾರತಿಶೆಟ್ಟಿ:-** ಸರ್ಕಾರ ಉತ್ತರ ಕೊಡುತ್ತದೆ.

**(ಗೊಂದಲ)**

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಅವರು ಎಷ್ಟೊತ್ತು ಬೇಕಾದರೂ ಮಾತನಾಡಲಿ, ಆದರೆ ಓಡಿಹೋಗುವುದು ಬೇಡ, ಯಾವುದೇ ಕಾರಣಕ್ಕೂ ಪಲಾಯನ ಬೇಡ. ಎಷ್ಟು ಬೇಕಾದರೂ ಮಾತನಾಡಲಿ, ನಾವು ಕೇಳಲು ತಯಾರಿದ್ದೇವೆ. ನಾವು ಮನವಿ ಮಾಡುತ್ತಿದ್ದೇವೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಬ್ರಿಟಿಷರ ವಿರುದ್ಧ ಮೆಟ್ಟಿ ನಿಂತು ಸ್ವಾತಂತ್ರ್ಯ ಕೊಡಿಸಿದೆವು,

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೆ, ...

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, 'ವಂದೇ ಮಾತರಂ' ಎಂದು ಹೇಳಿ ನೇಣುಗಂಭ ಏರಿದವರು ನಾವು. ಪಲಾಯನವಾದ ನಮ್ಮದಲ್ಲ, ಅವರದ್ದು ಪಲಾಯನ ವಾದ. ಇಡೀ ಪ್ರಪಂಚವನ್ನೇ conquer ಮಾಡಿದ ಬ್ರಿಟಿಷರ ವಿರುದ್ಧ ಮೆಟ್ಟಿ ನಿಂತು ಸ್ವಾತಂತ್ರ್ಯವನ್ನು ಕೊಡಿಸಿದವರು ನಾವು. ನಮ್ಮ ಪೂರ್ವಜರು ಬ್ರಿಟಿಷರ ಗುಂಡಿಗೆ ವಂದೆ ಮಾತರಂ ಎಂದು ಎದೆಯೊಡ್ಡಿದವರು. ಬ್ರಿಟಿಷರ ಲಾಠಿ ಮತ್ತು ಬೂಟಿನೇಟು ತಿಂದವರು ನಾವು. ಮಹಾತ್ಮ ಗಾಂಧಿಜೀಯವರ ನೇತೃತ್ವದಲ್ಲಿ ನಮ್ಮ ಪೂರ್ವಜರು ಈ ದೇಶಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟರು. ನಾವು ಏಕೆ ಪಲಾಯನ ವಾದ ಮಾಡುವುದು?

**(ಗೊಂದಲ)**

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಅವರು ಮಾತನಾಡದಿದ್ದರೆ ಜೆಡಿ(ಎಸ್) ಪಕ್ಷದ ಮಾನ್ಯ ರಮೇಶ್‌ಗೌಡರು ಮಾತನಾಡುತ್ತಾರೆ. ನಾನು ಹಿಂದೆಯೂ ಉತ್ತರ ಕೊಡಲು ತಯಾರಿರುವ ಬಗ್ಗೆ ಹೇಳಿದ್ದೇನೆ. ಅವರು ರೈತರ ಬಗ್ಗೆ ಕಳಕಳಿಯಿಂದ ಮಾತನಾಡಲಿ, ನಮ್ಮದೇನೂ objection ಇಲ್ಲ. ಆದರೆ ಯಾವುದೇ ಕಾರಣಕ್ಕೂ ಪಲಾಯನ ವಾದ ಬೇಡ. ಅವರು ಎಷ್ಟು ಸಮಯ ಬೇಕಾದರೂ ಮಾತನಾಡಲಿ, ಓಡಿಹೋಗುವುದು ಬೇಡ. ಇಲ್ಲದಿದ್ದರೆ ಬೇರೆಯವರು ಮಾತನಾಡುತ್ತಾರೆ, ಬಿಟ್ಟುಬಿಡಲಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೆಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಬಗ್ಗೆ ಅನೇಕ ಸದಸ್ಯರು ಮಾತನಾಡುವವರಿದ್ದಾರೆ. ಇದರ ಬಗ್ಗೆ ವಿಸ್ತೃತವಾದ ಚರ್ಚೆ ಆಗಬೇಕಾಗಿದೆ. ಭಾರತ ದೇಶದಲ್ಲಿ ಈ ಕಾಯ್ದೆಗೆ ಪೂರಕವಾಗಿ ಸಾಕಷ್ಟು ಚರ್ಚೆ ನಡೆಯುತ್ತಿದೆ, ಭಾರಿ ಪ್ರಮಾಣದ ಚಳುವಳಿ ನಡೆಯುತ್ತಿದ್ದು, ಬಹಳ ಗಂಭೀರವಾದ ವಿಷಯ. ಇದು ವಿಶ್ವಕ್ಕೆ ಅನ್ನ ಕೊಡುವ ರೈತರ ಸಮಸ್ಯೆಯಾಗಿದೆ. ಇದರ ಬಗ್ಗೆ ವಿಸ್ತೃತವಾಗಿ ಚರ್ಚೆ ಆಗಬೇಕು, ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ನಾಳೆ ಇದರ ಬಗ್ಗೆ ಇಡೀ ದಿನ ಚರ್ಚೆ ಮಾಡಿ ನಿರ್ಣಯ ಕೈಗೊಳ್ಳೋಣ. ದಯವಿಟ್ಟು ಮೊದಲನೆ ದಿನವಾದ ಇಂದು ಈಗಾಗಲೇ ಏಳು ಗಂಟೆಯಾಗಿದೆ, ಆದ್ದರಿಂದ ಇದನ್ನು ನಾಳೆಗೆ ತೆಗೆದುಕೊಳ್ಳಬೇಕು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಬೇರೆ ಸದಸ್ಯರಿಗೆ ಅವಕಾಶ ಮಾಡಿಕೊಡಿ, ಹಾಗೆ ಮಾಡಲು ಆಗುವುದಿಲ್ಲ. ಯಾವುದೇ ಕಾರಣಕ್ಕೂ ಆಗುವುದಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ನಮಗೂ ಕಾರ್ಯಕ್ರಮ ಇದೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಯಾವುದೇ ಕಾರಣಕ್ಕೂ ಮುಂದೆ ಹೋಗಬಾರದು, ಯಾವುದೇ ಸಂದರ್ಭದಲ್ಲಿ ಅವರು ವಾದ-ಚರ್ಚೆ ಮಾಡಿದರೆ ಗೌರವ ಕೊಡೋಣ. ಯಾವುದೇ ಕಾರಣಕ್ಕೂ ಪಲಾಯನ ಸೂತ್ರ ಮಾಡಬಾರದು ಎಂದು ವಿನಂತಿಸುತ್ತೇನೆ. ಚರ್ಚೆ ಮಾಡಲಿ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ. ಎಷ್ಟೇ ಸಮಯ ಆದರೂ ಚರ್ಚೆ ಮಾಡಲಿ, ಸರ್ಕಾರ ಉತ್ತರ ಕೊಡಲು ತಯಾರಿದೆ. ಕಳೆದ ಅಧಿವೇಶನದ ಕೊನೆಯ ದಿನ ರಾತ್ರಿ ಹಿಂದೂವರೆ ಗಂಟೆಯವರೆಗೂ ಮುಂದೆ ಹೋಯಿತು, ಬೇರೆ ಬೇರೆ ಕಾರಣದಿಂದ ಮುಂದೆ ಹೋಯಿತು. ಇವತ್ತು ನಾವು ತಯಾರಾಗಿ ಬಂದಿದ್ದೇವೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ನಾವು ಪಲಾಯನ ಮಾಡುವುದಿಲ್ಲ, ಪಲಾಯನವನ್ನು ಅವರು ಮಾಡುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸರ್ಕಾರ ಉತ್ತರ ಕೊಡಲು ಸಿದ್ಧವಿದೆ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಪಾರ್ಲಿಮೆಂಟ್‌ನಲ್ಲಿ ವಿಧೇಯಕವನ್ನು ....... ನಾವು ಚರ್ಚೆ ಮಾಡಲು ಸಿದ್ಧರಿದ್ದೇವೆ.

**(ಮುಂದು)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(994)/07.12.2020/7.20/ಹೆಚ್‌ವಿಃಎಕೆ**

**(ಗೊಂದಲ)**

**ಡಾಃ ತೇಜಸ್ವಿನಿಗೌಡಃ–** ಸನ್ಮಾನ್ಯ ಸಭಾಪತಿಯವರೇ, ಅನ್ನ ತಿನ್ನುವವರೆಲ್ಲ ವಿಧೇಯಕದ ಬಗ್ಗೆ ಚರ್ಚೆ ಮಾಡುವುದಕ್ಕೆ ತಯಾರಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)ಃ–** ಸನ್ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಮೇಲೆ ಎಷ್ಟು ಸಮಯಬೇಕಾದರು ಅವರುಗಳು ಮಾತನಾಡಲಿ, ಸರ್ಕಾರ ಉತ್ತರ ಕೊಡುವುದಕ್ಕೆ ತಯಾರಿದೆ. ಹಿಂದಿನ ಅಧಿವೇಶನದಲ್ಲಿ ತಡ ರಾತ್ರಿ 1 ಗಂಟೆ 30 ನಿಮಿಷಗಳವರೆಗೆ ಚರ್ಚೆ ಮಾಡಿದ್ದೇವೆ. ಬೇರೆಬೇರೆ ಕಾರಣಗಳ ಹಿನ್ನೆಲೆಯಲ್ಲಿ ಅಧಿವೇಶನವನ್ನು ಮುಂದೂಡಲಾಯಿತು. ಈ ದಿನ ಕರ್ನಾಟಕ ಭೂ ಸುಧಾರಣೆಗಳ ವಿಧೇಯಕದ ಮೇಲೆ ಚರ್ಚೆ ಮಾಡುವುದಕ್ಕೆ ಸರ್ಕಾರ ತಯಾರಾಗಿ ಬಂದಿದೆ. ಈ ದಿನ ಇಡೀ ರಾತ್ರಿ ಸದರಿ ವಿಧೇಯಕದ ಮೇಲೆ ಚರ್ಚೆ ಮಾಡುವುದಕ್ಕೆ ನಾವು ತಯಾರಿದ್ದೇವೆ. ಆದರೆ, ವಿರೋಧ ಪಕ್ಷದವರು ತಯಾರಿಲ್ಲವೆಂದರೆ ಏನರ್ಥ?

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)ಃ–** ಸನ್ಮಾನ್ಯ ಸಭಾಪತಿಯವರೇ, ನಾವು ಪಲಾಯನ ಮಾಡುತ್ತಿಲ್ಲ. ಪಲಾಯನ ಎನ್ನುವುದು ನಮ್ಮ ಶಬ್ದಕೋಶದಲ್ಲಿಯೇ ಇಲ್ಲ. ನಮ್ಮಲ್ಲಿರುವವರಲ್ಲಿ ಬಹಳಷ್ಟು ಜನರು ಕೃಷಿ ಹಿನ್ನೆಲೆಯಿಂದ ಬಂದಿರುವವರು, ಕೃಷಿಕರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಹೇಳುತ್ತಿದ್ದೇವೆ.

**(ಗೊಂದಲ)**

**ಶ್ರೀ ಹೆಚ್.ಎಂ.ರಮೇಶ್‌ಗೌಡ(ವಿಧಾನಸಭಾ ಕ್ಷೇತ್ರ)ಃ–** ನಾನು ಮಾತನಾಡುವುದಕ್ಕೆ ತಯಾರಿದ್ದೇನೆ. ಸುಮ್ಮನೆ ಏತಕ್ಕೋಸ್ಕರ ಸಮಯ ಹಾಳು ಮಾಡುವುದು.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ-** ಸನ್ಮಾನ್ಯ ಸಭಾಪತಿಯವರೇ, ಜೆ.ಡಿ.(ಎಸ್) ಪಕ್ಷದ ಸದಸ್ಯರಾಗಿರುವ ಮಾನ್ಯ ರಮೇಶ್‌ಗೌಡರು ಮಾತನಾಡುವುದಕ್ಕೆ ತಯಾರಿದ್ದಾರೆ. ಅವರಿಗೆ ತಾವು ಅವಕಾಶವನ್ನು ನೀಡಬೇಕೆನ್ನುವುದು ನನ್ನ ಮನವಿಯಾಗಿದೆ. ಚರ್ಚೆ ಮಾಡದೇ ಈ ರೀತಿ ವಿರೋಧ ಪಕ್ಷದವರು ಪಲಾಯನ ಮಾಡುವುದು ಸರಿಯಲ್ಲ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)ಃ-** ಸನ್ಮಾನ್ಯ ಸಭಾಪತಿಯವರೇ, ಈ ಸದನದಲ್ಲಿರುವ ಸದಸ್ಯರ ಪೈಕಿ ಶೇಕಡ 99ರಷ್ಟು ಜನರು ಕೃಷಿ ಕುಟುಂಬದಿಂದ ಬಂದಿರುವರು... (ಗೊಂದ®)... Everybody will participate. Everybody will debate.

**(ಗೊಂದಲ)**

**ಶ್ರೀ ಆರ್.ಅಶೋಕ(ಕಂದಾಯ ಸಚಿವರು)ಃ-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್‌ಗೌಡರು ಮಾತನಾಡುವುದಕ್ಕೆ ಎದ್ದು ನಿಂತಿದ್ದಾರೆ. ಅವರಿಗೆ ತಾವು ಅವಕಾಶವನ್ನು ನೀಡಬೇಕಾಗುತ್ತದೆ. ಚರ್ಚೆ ಮಾಡದೇ ವಿರೋಧ ಪಕ್ಷದವರು ಪಲಾಯನ ಮಾಡುವುದು ಸರಿಯಲ್ಲ.

(ಗೊಂದಲ)

**ಸಭಾಪತಿಯವರುಃ-** ಮಾನ್ಯ ಸಚಿವರೇ,........

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಮಾತನಾಡಿ ಮುಗಿಸಿದ್ದರೆ, ಮಾನ್ಯ ರಮೇಶ್‌ಗೌಡರು ಮಾತನಾಡುವುದಕ್ಕೆ ಸಿದ್ಧರಿದ್ದಾರೆ, ಅವರಿಗೆ ತಾವು ಅವಕಾಶ ಮಾಡಿಕೊಡಬೇಕು.

**(ಗೊಂದಲ)**

**ಶ್ರೀ ಬಸವರಾಜ ಪಾಟೀಲ್ ಇಟಗಿಃ-** ಸನ್ಮಾನ್ಯ ಸಭಾಪತಿಯವರೇ, ನಾನು ಇನ್ನೂ ನನ್ನ ಮಾತುಗಳನ್ನು ಮುಕ್ತಾಯಗೊಳಿಸಿಲ್ಲ. The House is not in order.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ-** ಸನ್ಮಾನ್ಯ ಸಭಾಪತಿಯವರೇ, ಜೆ.ಡಿ.(ಎಸ್) ಪಕ್ಷದ ಮಾನ್ಯ ರಮೇಶ್‌ಗೌಡರು ಮಾತನಾಡುವುದಕ್ಕೆ ಎದ್ದು ನಿಂತಿದ್ದಾರೆ. ಮಾತನಾಡಲು ಅವರಿಗೆ ತಾವು ಅವಕಾಶವನ್ನು ನೀಡಬೇಕು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(ಗೊಂದಲ)

**ಸಭಾಪತಿಯವರುಃ–** ಈಗ ಸಭೆಯು ಮುಕ್ತಾಯವಾಗಿ ಪುನಃ ನಾಳೆ ಬೆಳಗ್ಗೆ 11–00 ಗಂಟೆಗೆ ಸೇರುವುದು.

**(ಸದನವು ಸಂಜೆ 7 ಗಂಟೆ 22 ನಿಮಿಷಗಳಿಗೆ ಮುಕ್ತಾಯಗೊಂಡು, ಪುನಃ ದಿನಾಂಕ 08ನೇ ಡಿಸೆಂಬರ್ ಮಾಹೆ 2020ರ ಮಂಗಳವಾರದಂದು ಬೆಳಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

<><><>

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "